೮) ಅರಕಲಗೂಡು ರಾಮನಾಥಪುರವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವುದು

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು).— ಮಾನ್ಯ ಅಧ್ಯಕ್ಷರೇ, ಅರಕಲಗೂಡು ತಾಲ್ಲೂಕು ರಾಮನಾಥಪುರ ಪುರಾಣಪ್ರಸಿದ್ಧವಾದ ಸ್ಥಳವಾಗಿದ್ದು ಅದನ್ನು ದಕ್ಷಿಣಕಾಶಿ ಎಂದೂ ಕರೆಯಲಾಗುತ್ತಿದೆ. ೧೯೭೦ನೇ ಇಸವಿಯನ್ನು ಪ್ರವಾಸಿಗರ ವರ್ಷವೆಂದು ಹೆಸರಿಸಲಾಗಿದ್ದು ಸದರಿ ರಾಮನಾಥಪುರವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಮಾಡುವ ಅವಶ್ಯಕತೆ ಇದ್ದು ಈ ಬಗ್ಗೆ ಸರಕಾರದವರು ಅಲ್ಲಿಗೆ ಬರತಕ್ಕ ಪ್ರವಾಸಿಗಳಿಗೆ ಅವಶ್ಯಕವಾದ ಸೌಕರ್ಯಗಳನ್ನು ಕಲ್ಪಿಸುವ ಸಲುವಾಗಿ ಈ ವರ್ಷದ ಆಯವ್ಯಯದಲ್ಲಿ ಸೂಕ್ತವಾದಷ್ಟು ಹಣವನ್ನು ಒದಗಿಸುವ ಮೂಲಕ ರಾಮನಾಥಪುರವನ್ನು ಅಭಿವೃದ್ಧಿಗೊಳಿಸಬೇಕೆಂದು ಸರಕಾರವನ್ನು ವಿನಂತಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).— ಮಾನ್ಯ ಅಧ್ಯಕ್ಷರೇ, ಈಗ ಉತ್ತರವನ್ನು ಕೊಡಲಿಕ್ಕೆ ನನ್ನಲ್ಲಿ ವಿವರ ಇಲ್ಲ. ನಾಳೆ ಕೊಡುತ್ತೇನೆ.

೯) ಉದ್ಯೋಗದ ಸಲುವಾಗಿ ಡಿ ಮತ್ತು ಇ ಗುಂಪಿನ ಆರ್ಥಿಕವಾಗಿ ಹಿಂದುಳಿದ ಅಭ್ಯರ್ಥಿಗಳಿಗೆ ಆದಾಯದ ಮಿತಿಯನ್ನು ಹೆಚ್ಚಿಸುವುದು

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಮಾನ್ಯ ಅಧ್ಯಕ್ಷರೇ, ಉದ್ಯೋಗದ ಸಲುವಾಗಿ ಡಿ ಮತ್ತು ಇ ಗ್ರೂಪ್ ನ ಆರ್ಥಿಕವಾಗಿ ಹಿಂದುಳಿದ ಅಭ್ಯರ್ಥಿಗಳಿಗೆ, ಸರಕಾರವು ಈಗ ನಿಗದಿ ಮಾಡಿರುವ ಆದಾಯದ ಮಿತಿಯೆಷ್ಟು? ಈ ಆದಾಯದ ಮಿತಿಯು ಕಡಿಮೆಯಾಗಿದ್ದು, ಇದನ್ನು ಹೆಚ್ಚಿಸುವ ಬಗ್ಗೆ ಸರಕಾರವು ಆಲೋಚಿಸುತ್ತಿದೆಯೇ? ಹಾಗಿದ್ದಲ್ಲಿ ಎಂದಿನಿಂದ ಹೆಚ್ಚಿಸಲಾಗುವುದು ಹಾಗೂ ಎಷ್ಟಕ್ಕೆ ಹೆಚ್ಚಿಸಲಾಗುವುದು ಎಂಬ ಬಗ್ಗೆ ವಿವರಣೆ ನೀಡಬೇಕೆಂದು ಸರಕಾರವನ್ನು ಕೋರುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಇದರ ವಿವರ ಸಧ್ಯ ನನ್ನಲ್ಲಿ ಇಲ್ಲ. ನನಗೆ ಗೊತ್ತಿರುವ ಹಾಗೆ ಬಿ.ಸಿ.ಡಿ. ಗ್ರೂಪ್‌ನವರಿಗೆ ಹತ್ತು ಸಾವಿರ ರೂಪಾಯಿ ಮಿತಿ ಇದ್ದಂತೆ ಕಾಣುತ್ತದೆ. ಈ ಮಿತಿಯನ್ನು ಹೆಚ್ಚು ಮಾಡಬೇಕು. ಆದರೆ ಎಷ್ಟು ಹೆಚ್ಚು ಮಾಡಬೇಕು ಎನ್ನುವಂಥ ಈ ಪ್ರಶ್ನೆ ಬ್ಯಾಕ್‌ವರ್ಡ್ ಕ್ಲಾಸ್ ಕಮೀಷನ್ ವರದಿ ಬಂದ ಮೇಲೆ ಒಂದು ನಿರ್ಣಯವನ್ನು ತೆಗೆದುಕೊಳ್ಳಬಹುದೇ ಹೊರತಾಗಿ ಈಗ ಏನೂ ಹೇಳುವುದಕ್ಕಾಗುವುದಿಲ್ಲ. ಬ್ಯಾಕ್‌ವರ್ಡ್ ಕ್ಲಾಸ್ ಕಮೀಷನ್‌ನ ವರದಿ ಇಷ್ಟರಲ್ಲಿಯೇ ಬರುವ ನಿರೀಕ್ಷೆ ಇದೆ. ಅದಕ್ಕಾಗಿ ಆ ವರದಿಯಲ್ಲಿ ಅವರೇನಾದರೂ ಶಿಫಾರಸ್ಸು ಮಾಡಿರುತ್ತಾರೆಯೇ ಎನ್ನುವಂಥದ್ದನ್ನು ಕೂಡಾ ವಿಚಾರ ಮಾಡಬೇಕಾಗುತ್ತದೆ ಆ ವರದಿ ಬಂದ ಮೇಲೆ ಆದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಅಧ್ಯಕ್ಷರು.—ಈಗ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ.

ವಿತ್ತೀಯ ಕಾರ್ಯಕಲಾಪಗಳು

೧೯೭೦-೭೧ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ಮುಂದಿನ ವಿಷಯಕ್ಕೆ ಹೋಗುವುದಕ್ಕೆ ಮೊದಲು ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ. ಏನೆಂದರೆ, ೩೩೪ ನಿಯಮದ ಪ್ರಕಾರ ಯಾವ ಯಾವ ಸದಸ್ಯರು ಸೀಮಿತವಾದ ಪ್ರಶ್ನೆಗಳನ್ನು ಕೇಳುತ್ತಾರೋ ಅವು ರಾಜ್ಯ ವ್ಯಾಪ್ತಿಯಾಗಿ ಪರಿಣಾಮ ಬೀರತಕ್ಕಂಥದ್ದು. ಇವುಗಳಿಗೆ ಮಂತ್ರಿಗಳು ಉತ್ತರವನ್ನು ಕೊಟ್ಟಮೇಲೆ ನಾವು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಇಲ್ಲ ಎಂದು ನೀವು ಹೇಳಿಬಿಟ್ಟರೆ ಇದು ಹಾಗೆಯೇ ಸದನದ ಕಡತಕ್ಕೆ ಹೋಗಿಬಿಡುತ್ತದೆ. ಉದಾಹರಣೆಗೆ ಮಾನ್ಯ ಸದಸ್ಯರಾದ ಗುರುದೇವ್‌ರವರು ೩೩೪ರ ನಿಯಮದಲ್ಲಿ ಹಾಸನ ಜಿಲ್ಲೆಯ ಬಗ್ಗೆ ಮಾತ್ರ ಕೇಳಿಲ್ಲ. ಅವರು ಒಟ್ಟಾರೆ ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿಯ ಬಗ್ಗೆ ತಿದ್ದುಪಡಿ ತರತಕ್ಕಂಥ ವಿಚಾರದಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಹಾಸನ ಜಿಲ್ಲೆಗೆ ಸೀಮಿತವಾಗಿ ಅವರು ಹೇಳಬೇಕೇ ಹೊರತು ಇಲ್ಲಿ ಪಾಲಿಸಿ ಮ್ಯಾಟರ್ ಬಗ್ಗೆ ಕೇಳಿದರೆ ಹೇಗೆ ? ೩೩೪ಕ್ಕೆ ಏನೋ ತಿದ್ದುಪಡಿ ತರುತ್ತೇವೆ, ಎಂಬ ಉತ್ತರವನ್ನು ಹೇಳಿ

ಬಿಟ್ಟರೆ, ಅವು ರೆಕಾರ್ಡ್‌ಗೆ ಹೋಗಿಬಿಟ್ಟರೆ ಬೇಸಿಕ್ ಕಾನ್‌ಸೆಪ್ಟ್‌ಗೆ ವಿರುದ್ಧವಾದಂಥ ಒಂದು ಉತ್ತರ ವಾಗುತ್ತದೆ. ದಯಮಾಡಿ ಇದರ ಬಗ್ಗೆ ನೋಡಬೇಕು. ಇಳಿರ ನಿಯಮಂದ ಇತಿಮಿತಿಗಳನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಸದಸ್ಯರು ಕೇಳಿದ್ದು ಹಾಸನ ಜಿಲ್ಲೆಗೆ ಸೀಮಿತವಾಗಿತ್ತು. ಆದರೆ ಇಲ್ಲಿ ಉತ್ತರ ಏನು ಬರುತ್ತದೆ ಎಂದರೆ "ಕೆಲವೊಂದು ಜಿಲ್ಲಾ ಪರಿಷತ್‌ಗಳಲ್ಲಿ ಅಧ್ಯಕ್ಷರು ನಾಮ ನಿರ್ದೇಶನ ಮಾಡಿದ್ದು ಇದು ಕಾನೂನಿಗೆ ವಿರುದ್ಧವಾಗಿದ್ದರಿಂದ ಹಾಗೂ ಉಚ್ಚ ನ್ಯಾಯಾಲಯವು ಈ ಬಗ್ಗೆ ನೀಡಿದ ತೀರ್ಪಿನಂತೆ ಅಧ್ಯಕ್ಷರು ಮಾಡಿದ ನಾಮನಿರ್ದೇಶನವನ್ನು ರದ್ದುಪಡಿಸಿ'' ಜಿಲ್ಲಾ ಪರಿಷತ್ತಿನಿಂದ ನಾಮ ನಿರ್ದೇಶನ ಮಾಡಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದು ಈ ರೀತಿ ಹೇಳಿದ್ದಾರೆ. ಹೀಗೆ ಜನರಲ್ ಆಗಿ ಹೇಳಿಕೆ ನೀಡಿದ್ದಾರೆ. ಆ ಮೇಲೆ ತಿದ್ದುಪಡಿ ತರುವುದಕ್ಕೆ ಆಲೋಚನೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದ್ದರಿಂದ ಇಳಿ ನಿಯಮದ ಇತಿಮಿತಿ ಏನು ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ. ಅವರು ಏನು ಕೇಳಿದ್ದಾರೆ ಅಂದರೆ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಮಸೂದೆಗಳಿಗೆ ತಿದ್ದುಪಡಿ ತಂದು ಸದರಿ ಸ್ಥಳೀಯ ಸಂಸ್ಥೆಗಳು ಸಮರ್ಪಕ ಸೇವೆ ಸಲ್ಲಿಸುವಂತೆ ಮಾಡಬೇಕೆಂದು ಕೇಳಿದ್ದಾರೆ.

ಶ್ರೀ ಡಿ ಬಿ. ಚಂದ್ರೇಗೌಡ.—ಅದಕ್ಕೆ ಉತ್ತರವಾಗಿ ತಾವು ಹಾಸನ ಜಿಲ್ಲೆಗೆ ಸೀಮಿತವಾಗಿ ಏನು ಮಾಡುತ್ತೇವೆಂಬುದನ್ನು ಹೇಳಿ. Otherwise, it is going to be a policy statement of the Government for which I am taking objection. not under 334.........

Mr. Speaker.—If the notice is under 334, if it is with reference to a particular district, your statement also should be confined to that district. You cannot make a generalised statement.

Sri B. Basavalingappa.—Whatever statement I have made it is also applicable to Hassan district. I have not mentioned the district Hassan. The idea governs the entire system and it also governs the Hassan district.

Mr. Speaker.—What applies to Hassan also applies to every Zilla Parishat.

Sri D. B. Chandre Gowda —Rule No. 334 has limited purpose to serve. ಆದರೂ ಇಡೀ ರಾಜ್ಯದಲ್ಲಿರುವ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್‌ಗಳಿಗೆ ಮಾನ್ಯ ಸದಸ್ಯರು ಸೂಚಿಸಿರುವ ತಿದ್ದುಪಡಿಯನ್ನು ಪರಿಗಣಿಸಲಾಗುವುದು ಎಂದು ಸಚಿವರು ಹೇಳಿದ್ದಾರೆ. It is going to be a policy statement. Under 334, can a Minister make a policy statement is my basic question. Then, what are the limitations of Rule-334 ?

ಅಧ್ಯಕ್ಷರು.—ಅದನ್ನು ನಾನು ಪರಿಶೀಲಿಸುತ್ತೇನೆ, ನಂತರ ರೂಲಿಂಗ್ ಕೊಡುತ್ತೇನೆ. ಈಗ ಮಾನ್ಯ ಯಾಹ್ಯಾರವರು ಆಯವ್ಯಯದ ಮೇಲೆ ಮಾತನಾಡಲಿ.

ಶ್ರೀ ಎಸ್.ಎಂ. ಯಾಹ್ಯಾ.—ಮಾನ್ಯ ಅಧ್ಯಕ್ಷರೇ, ನನಗೆ ಈಗ ಗಂಟಲು ಸರಿಯಿಲ್ಲ, ಮಧ್ಯಾಹ್ನ ಮೂರು ಗಂಟೆಗೆ ಮಾತನಾಡುತ್ತೇನೆ.

ಅಧ್ಯಕ್ಷರು.—ಆಗಬಹುದು. ಈ ಬಿ.ಆರ್. ಪಾಟೀಲ್ ಅವರು ಮಾತನಾಡಲಿ.

† ಬಾಬಾಗೌಡ ರುದ್ರಗೌಡ ಪಾಟೀಲ್ (ಕಿತ್ತೂರು).—ಮಾನ್ಯ ಅಧ್ಯಕ್ಷರೇ, ಸಂಸದೀಯ ಕ್ಯಾಲೆಂಡರ್‌ನಲ್ಲಿ ಆಯವ್ಯಯ ಪತ್ರ ಬರುವ ದಿನ ಅಂದರೆ ಅದು ಅತ್ಯಂತ ಕುತೂಹಲದ ದಿವಸ. ನಮ್ಮ ಮಾನ್ಯ ಅರ್ಥ ಮಂತ್ರಿಗಳು ಈ ಬಜೆಟ್ ಅನ್ನು ಮಂಡಿಸುವಾಗ 'ಗ್ಲಾಸ್‌ನಾಸ್ಟ್' ಮತ್ತು 'ಪೆರಿಸ್ತ್ರೋಯಿಕ' ಎಂಬ ಪ್ರಖ್ಯಾತ ನಾವೆಲ್, ಪೊಲಿಟಿಕಲ್ ಡಾಕ್ಯುಮೆಂಟ್ಸ್ ಮುಖಾಂತರ ಪ್ರಾರಂಭ ಮಾಡಿದ್ದಾರೆ. ನಾವು ಸದಸ್ಯರುಗಳೂ ಅಷ್ಟೇ, ಒಂದು ಕುತೂಹಲದಿಂದ ಏನಾದರೂ ಚಮತ್ಕಾರವನ್ನು

ಮಾಡುವಂತಹ ಬಜೆಟ್ ಅನ್ನು ತರಬಹುದು ಎಂಬ ಆಸೆಯನ್ನು ಇಟ್ಟುಕೊಂಡಿದ್ದೆವು. ಆದರೆ ಬಜೆಟ್ ಅನ್ನು ಮಂಡಿಸಿದ ನಂತರ ೧೩೦ ವರ್ಷಗಳ ಬಜೆಟ್ ಮಂಡನೆ ಇತಿಹಾಸದಲ್ಲಿ ಇದು ಅತ್ಯಂತ ನಿರಾಶಾದಾಯಕವಾದ ಬಜೆಟ್ ಆಗಿದೆ. ನಮ್ಮ ಅನಿಸಿಕೆ ಅಂದರೆ ಗ್ರಾಮಾಂತರ ಪ್ರದೇಶದಿಂದ ನಾವು ಅನೇಕರು ಆರಿಸಿ ಬಂದಿದ್ದೇವೆ. ಬಜೆಟ್ ಅಂದರೆ ಸಾಮಾನ್ಯ ಜನರಿಗೆ ಒಂದು ತರಹ. ಸಾಮಾನ್ಯ ಮನುಷ್ಯನ ಸ್ವಂತ ಬದುಕಿಗೆ, ಖಾಸಗಿ ಬದುಕಿಗೆ ಈ ಬಜೆಟ್ ಎಷ್ಟು ಅನುಕೂಲ, ಎಷ್ಟು ಅನಾನುಕೂಲ ಎಂದು ನೋಡಬೇಕು. ಈ ಕುತೂಹಲದಿಂದ ಜನರು ಇದನ್ನು ಎದುರು ನೋಡುತ್ತಿರುತ್ತಾರೆ. ಯೋಜನೆಗಳ ಬಗ್ಗೆ ಮಾತನಾಡುವಾಗ ನಮ್ಮ ಅರ್ಥ ಮಂತ್ರಿಗಳು ೧೦೦ಕ್ಕೆ ೫೦ ರಷ್ಟು ಪಾಲು ಗ್ರಾಮಾಂತರ ಪ್ರದೇಶಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ. ಅದನ್ನು ಪ್ರತಿಷ್ಟೆ ಎಂದು ಅವರು ಮಾತ ಾಡಬಾರದು. ಏಕೆಂದರೆ ೧೦೦ಕ್ಕೆ ೭೫ರಷ್ಟು ಇರುವ ಗ್ರಾಮಾಂತರ ಪ್ರದೇಶಗಳಿಗೆ ೧೦೦ಕ್ಕೆ ೭೫ರಷ್ಟು ಭಾಗ ಬಜೆಟ್‌ನಲ್ಲಿ ಪ್ರಾಮುಖ್ಯ ಇರಬೇಕಾದ್ದು ನ್ಯಾಯಂ ಸಮ್ಮತ. ಆದರೆ ಈಗ ೧೦೦ಕ್ಕೆ ೫೦ರಷ್ಟು ಸಂಪನ್ಮೂಲಗಳಿಗೆ ನಾವು ಸಮಾಧಾನ ಪಟ್ಟುಕೊಳ್ಳಬೇಕಾಗಿದೆ. ಆಮೇಲೆ ಈ ವರ್ಷದ ಸಾಧನೆ ವಿದ್ಯುತ್ ಮತ್ತು ನೀರಾವರಿ ಎಂದು ಮಾನ್ಯ ಅರ್ಥ ಸಚಿವರು ಹೇಳಿದ್ದಾರೆ. ವಿದ್ಯುತ್ ಅಂದಾಗ ನಮ್ಮ ಗ್ರಾಮಾಂತರ ಪ್ರದೇಶದಲ್ಲಿರುವ ಜನರು ಫ್ಯಾನ್‌ಗಾಗಿ ಆಗಲಿ ಅಥವಾ ಫ್ರಿಜ್ಡ್‌ಗಾಗಿ ಆಗಲಿ ಎಲೆಕ್ಟ್ರಿಸಿಟಿ ಬೇಕು ಎಂದು ಕೇಳಲಿಲ್ಲ.

ಆದರೆ ರೈತರು ಬದುಕಲಿಕ್ಕೆ ಅವರ ಐ. ಪಿ. ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಬೇಕು ಎಂದು ರಾಜ್ಯಾದ್ಯಂತ ಎಲ್ಲಾ ಹಳ್ಳಿಗಳಲ್ಲಿರತಕ್ಕ ಜನರು ಹರತಾಳ ಮಾಡಿದರು, ಚಳುವಳಿ ಮಾಡಿದರು, ವಿದ್ಯುಚ್ಛಕ್ತಿ ಕಛೇರಿಗೆ ಹೋಗಿ ಪ್ರತಿಭಟನೆ ಮಾಡಿದರು, ಆದರೆ ಸರ್ಕಾರ ಏನೂ ಮಾಡಲಿಲ್ಲ. ಬಹಳ ಪ್ರತಿಷ್ಠೆ ಎಂದು ಹೇಳಿ ಕೊಳ್ಳುವಂಥ ಸರ್ಕಾರ ಈ ಬಗ್ಗೆ ಒಂದು ನಿಯಮ ಮಾಡಿದರೆ ಬಹಳ ಚೆನ್ನಾಗಿತ್ತು ಎಂದು ನಮ್ಮ ಅಭಿಪ್ರಾಯ. ಅದು ಏನೆಂದರೆ, ಅರ್ಜಿಕೊಟ್ಟ ಇಷ್ಟು ದಿವಸದಲ್ಲಿ ಪಂಪ್‌ಸೆಟ್‌ಗಳಿಗೆ ಎಲೆಕ್ಟ್ರಿಸಿಟಿ ಪೂರೈಕೆ ಮಾಡಬೇಕು ಎಂದು ನಿಯಮ ಮಾಡಿದ್ದರೆ ಇದಕ್ಕಿಂತ ಚೆನ್ನಾಗಿತ್ತು ಎಂದು ನಮ್ಮ ಅಭಿಪ್ರಾಯ. ಇನ್ನು ನೀರಾವರಿ, ಸಣ್ಣ ಸಣ್ಣ ನೀರಾವರಿ ಯೋಜನೆಗಳು ಈಗ ಬೇಕಾದಷ್ಟು ಇದ್ದರೂ ನಮ್ಮ ಸರ್ಕಾರದವರು ಬಹುತೇಕ ಅವು ಯಾವುದನ್ನೂ ಗಣನೆಗೆ ತೆಗೆದುಕೊಂಡಿಲ್ಲ. ನಮ್ಮ ಬೆಳಗಾಂ ಜಿಲ್ಲೆ ಯಲ್ಲಿ ಸಣ್ಣ ಸಣ್ಣ ನೀರಾವರಿ ಯೋಜನೆಗಳಿವೆ. ಹರಿನಾಲ ಯೋಜನೆ, ಹಿಡಕಲ್ ಜಲಾಶಯದ ಮೇಲ್ಮಟ್ಟದ ಕಾಲುವೆ ಯೋಜನೆ, ಮಾದಾಯಿ ಯೋಜನೆ ಇನ್ನೂ ಅನೇಕ ಯೋಜನೆಗಳ ಬಗ್ಗೆ ನಾವು ಸತತವಾಗಿ ೪-೫ ವರ್ಷಗಳಿಂದ ಅಂದರೆ ಮಳೆ ಎಲ್ಲಿಂದ ಕಡಿಮೆಯಾಗುವುದಕ್ಕೆ ಪ್ರಾರಂಭವಾಯಿತೊ ಅಲ್ಲಿಂದ ಇಲ್ಲಿಯತನಕ ಬೇಕಾದಷ್ಟು ಕೇಳಿದರೂ ಸರ್ಕಾರ ಲಕ್ಷ್ಯಕ್ಕೆ ತೆಗೆದುಕೊಂಡಿಲ್ಲ. ಕೆಲವು ಗ್ರಾಮಂ ಗಳಲ್ಲಿ ನಮ್ಮ ರೈತರು ಬೋರ್ ಹಾಕಿಸಿ ಮೂರು ಮೂರು ವರ್ಷವಾದರೂ ಇನ್ನೂ ತನಕ ವಿದ್ಯುಚ್ಛಕ್ತಿ ಪೂರೈಕೆ ಮಾಡಿಲ್ಲ. ಬೋರ್ ಹಾಕಿಸಿ ಪಂಪು ಕೊಡು ೪೦-೫೦ ಸಾವಿರ ಸಾಲ ಮಾಡಿಕೊಂಡು ಮೂರು ವರ್ಷಗಳವರೆಗೆ ಬಡ್ಡಿ ತುಂಬಿದರೂ ವಿದ್ಯುಚ್ಛಕ್ತಿ ಪೂರೈಕೆಯಾಗದೇ ಹೋದರೆ ರೈತರ ಗತಿ ಏನಾಗುತ್ತದೆ ಎನ್ನುವುದನ್ನು ಸರ್ಕಾರ ವಿಚಾರ ಮಾಡಿ ನೋಡಬೇಕು. ಪಂಪುಸೆಟ್ಟುಗಳಿಗೆ ಜಾಗ್ರತೆ ವಿದ್ಯುಚ್ಛಕ್ತಿ ಕೊಡುವಂಥ ನಿಯಮವನ್ನು ಸರ್ಕಾರ ಇನ್ನು ಮೇಲಾದರೂ ಮಾಡಿದರೆ ರೈತರಿಗೆ ಬಹಳ ಒಳ್ಳೆಯದಾಗುತ್ತದೆಂದು ನಮ್ಮ ಅಭಿಪ್ರಾಯ.

೧-ಪಿ.ಎಂ.

ಇನ್ನು ಪ್ರಾಥಮಿಕ ಶಿಕ್ಷಣದ ಬಗ್ಗೆ ಮಾತನಾಡುವುದಾದರೆ, ಇವತ್ತಿನದಿವಸ ಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ ಎಂಬುದು ಪೂರ್ತಿಯಾಗಿ ಹಾಳಾಗಿಹೋಗಿದೆ. ಕಾರಣವೇನೆಂದರೆ ಶಿಕ್ಷಕರು ಇದ್ದ ಊರಿನಲ್ಲೇ ಬೇರೆ ನೌಕರಿ ಮಾಡುತ್ತಾ ಇರುತ್ತಾರೆ ಎಲ್ಲರಿಗೂ ಗೊತ್ತಿದೆ. ಕೆಲವು ಹಳ್ಳಿಗಳಲ್ಲಿ ೨ ಸಾವಿರ ರೂಪಾಯಿ, ೩ ಸಾವಿರ ರೂಪಾಯಿ ಸಂಬಳ ಪಡೆದುಕೊಂಡು ಹೊಲ ಮನೆಗಳಲ್ಲಿ ಕೆಲಸ ಮಾಡಿ ಕೊಂಡು ಇರುತ್ತಾರೆಯೇ ವಿನಾ ಶಾಲೆಗಳಿಗೆ ಬರುವುದಿಲ್ಲ. ಇದನ್ನು ಯಾವರೀತಿ ಸುಧಾರಣೆ ಮಾಡ ಬೇಕು ಎನ್ನುವಂಥದ್ದನ್ನು ಸರ್ಕಾರ ಇದುವರೆಗೆ ವಿಚಾರ ಮಾಡಿಲ್ಲ. ಶಿಕ್ಷಕರು ಇದ್ದ ಊರಿನಲ್ಲೇ ಬೇರೆ ಬೇರೆ ನೌಕರಿ ಮಾಡುವುದರಿಂದ ಪ್ರಾಥಮಿಕ ಶಿಕ್ಷಣ ಸರಿಯಾಗಿ ಆಗಲಿಕ್ಕಿಲ್ಲ. ಇದನ್ನು ಸರ್ಕಾರ ವಿಚಾರ ಮಾಡಬೇಕು. ಅವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡುವುದರ ಬಗ್ಗೆ ಸರ್ಕಾರ ಯೋಚನೆ ಮಾಡ ಬೇಕು. ಆಮೇಲೆ ಯೋಜನೆಯನ್ನು ಮಾಡುವಾಗ ತಲಾ ಆದಾಯ ಎನ್ನುವುದು ಬಿಟ್ಟು ತಲಾ ಸಂಖಿದ ಆಧಾರದ ಮೇಲೆ ಯೋಜನೆಗಳನ್ನು ರೂಪಿಸಿದರೆ ಒಳ್ಳೆಯದು ಎನ್ನುವುದು ನಮ್ಮ ಅಭಿಪ್ರಾಯ. ಜೊತೆಗೆ ಮಾನ್ಯ ಅರ್ಥಮಂತ್ರಿಗಳು ನಗರ ಮತ್ತು ಗ್ರಾಮಗಳ ಅಂತರ ಹೆಚ್ಚುತ್ತಿದೆ, ಇದನ್ನು ತಡೆಯ ಬೇಕು ಎಂದು ಹೇಳಿದ್ದಾರೆ. ಇದು ನಮ್ಮ ಯೋಜನೆಯ ಪರಿಣಾಮ ಎಂದು ನನ್ನ ಅನಿಸಿಕೆ. ಕಳೆದ

೪೨ ವರ್ಷಗಳ ಕಾಲದಿಂದ ಗ್ರಾಮಾಂತರ ಪ್ರದೇಶಕ್ಕೆ ಒಂದು ಯೋಜನೆ ಮತ್ತು ನಗರ ಪ್ರದೇಶದ ಜನರು ಹೆಚ್ಚು ಸುಖ, ಸೌಕರ್ಯದಿಂದ ಬದುಕುವುದಕ್ಕೆ ಒಂದು ಯೋಜನೆ ಹಾಕಿಕೊಂಡಿರುವುದರಿಂದ ಈ ಅಂತರ ಹೆಚ್ಚುತ್ತಿದೆ ಎಂದು ನಮ್ಮ ಅಭಿಪ್ರಾಯ. ಉದಾಹರಣೆಗೆ ಹೇಳುವುದಾದರೆ, ಗ್ರಂಥಾಲಯ ಶುಲ್ಕ ಎಂದು ಹಳ್ಳಿಗಾಡಿನಲ್ಲಿ ಎಲ್ಲ ಜನರಿಂದ ವಸೂಲು ಮಾಡುತ್ತಾ ಇದ್ದಾರೆ. ಅಂದರೆ ರವಿನ್ಯೂ ಇಲಾಖೆಯ ತಲಾಟಿಗಳು ಕಂದಾಯ ವಸೂಲು ಮಾಡುವಾಗ ಈ ಗ್ರಂಥಾಲಯ ಶುಲ್ಕವನ್ನು ವಸೂಲು ಮಾಡುತ್ತಿದ್ದಾರೆ, ಮಂಡಲ ಪಂಚಾಯಿತಿಯವರು ಗ್ರಂಥಾಲಯ ಶುಲ್ಕ ಎಂದು ವಸೂಲು ಮಾಡುತ್ತಿದ್ದಾರೆ. ಆದರೆ ಹಳ್ಳಿಗಾಡಿನ ಪ್ರದೇಶದಲ್ಲಿ ಗ್ರಂಥಾಲಯಗಳನ್ನು ಇನ್ನೂ ತನಕ ಬಹುತೇಕ ಪ್ರಾರಂಭ ಮಾಡಿಲ್ಲ, ಈ ವರ್ಷ ಅಲ್ಪಸ್ವಲ್ಪ ಮಾಡಿರಬಹುದು. ಹೀಗೆ ಹಳ್ಳಿಗಾಡಿಗೆ ಒಂದು ನೀತಿ ಪಟ್ಟಣಕ್ಕೆ ಒಂದು ನೀತಿ ಏಕೆ ? ಎಲೆಕ್ಟ್ರಿಸಿಟಿ ಸಪ್ಲೈ ಮಾಡುವುದರಲ್ಲಿ ತಾರತಮ್ಯ ಇದೆ. ಹಳ್ಳಿಗಾಡಿನಲ್ಲಿ ೬ ತಾಸು ಪವರ್ ಕಟ್ ಆಗುತ್ತದೆ. ನಾವೂ ಈ ದೇಶದ ಪ್ರಜೆಗಳು. ಗ್ರಾಮಾಂತರ ಪ್ರದೇಶದ ಜನರೂ ಸಹ ಈ ದೇಶದ ಪ್ರಜೆಗಳು, ಪವರ್ ಕಟ್ ಆಗುವ ಬಗ್ಗೆ ನಾವು ಚಳುವಳಿ ಮಾಡಿದಾಗ ಪೋಲೀಸರಿಂದ ಓಡಿಸಿಬಿಟ್ಟರು. ಸಂವಿಧಾನದ ಆರ್ಟಿಕಲ್ ೩೮-೩೯ರ ಪ್ರಕಾರ ನಮ್ಮ ಸಂಪನ್ಮೂಲ ಗಳನ್ನು ದೇಶದಲ್ಲಿ ಸಮಾನವಾಗಿ ಹಂಚಿಕೆ ಮಾಡಬೇಕು ಎಂದು ಇದ್ದರೂ ಸಹ ಆರೀತಿ ಮಾಡಿಲ್ಲ. ಈಗ ಹಳ್ಳಿಗಾಡು ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿಯನ್ನು ೬ ತಾಸು, ೮ ತಾಸು ನಿಲ್ಲಿಸುತ್ತಾರೆ ಇನ್ನು ಮೇಲೆ ೧೨ ತಾಸು ನಿಲ್ಲಿಸಿದರೂ ಸಹ ಅದರಲ್ಲಿ ಆಶ್ಚರ್ಯವಿಲ್ಲ. ಕಬ್ಬು ಬೆಳೆಯುವಂಥ ರೈತ ಕುಟುಂಬಕ್ಕೆ ಎರಡು ಕಿಲೋ ಸಕ್ಕರೆ ಕೊಡುವುದು, ಕಬ್ಬುನೋಡದೇ ಇರತಕ್ಕ ಪಟ್ಟಣದ ಜನರಿಗೆ ೧೦ ಕಿಲೋ ಸಕ್ಕರೆ ಕೊಡುವುದು ಸರಿಯಲ್ಲ. ಹಳ್ಳಿಗೊಂದು ನೀತಿ, ಪಟ್ಟಣಕ್ಕೊಂದು ನೀತಿ ಏಕೆ ? ಇವತ್ತು ನಮ್ಮ ರಾಜ್ಯದ ಹಣಕಾಸಿನ ಮಂತ್ರಿಯವರು ತಮ್ಮ ಬಜೆಟ್ ಭಾಷಣದಲ್ಲಿ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಪ್ರಸ್ತಾಪ ಮಾಡುತ್ತಾ, ಸರ್ಕಾರಿ ನೌಕರರಿಗೆ ಖರ್ಚಾಗುತ್ತಿರುವ ಹಣದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸರ್ಕಾರಿ ನೌಕರರು ಚಳುವಳಿ ಮಾಡಿದಾಗಲೆಲ್ಲಾ ವೇತನವನ್ನು ಹೆಚ್ಚಿಸುವಂಥ ಪದ್ಧತಿಯನ್ನು ಮುಂಚಿನಿಂದಲೂ ನಾವು ಬೆಳಸಿಕೊಂಡು ಬಂದಿದ್ದೇವೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ನಾಲ್ಕೂವರೆ ಲಕ್ಷ ಸರ್ಕಾರಿ ನೌಕರರಿಗೆ ಏನು ವೇತನ ಕೊಡುತ್ತಿದ್ದೇವೆ. ಅಷ್ಟು ವೇತನವನ್ನು ಪಕ್ಕದ ಆಂಧ್ರದಲ್ಲಿರುವ ೧೧ ಲಕ್ಷ ಜನ ನೌಕರರಿಗೆ ಕೊಡುತ್ತಿಲ್ಲ. ರಾಜ್ಯದ ಬೊಕ್ಕಸದಲ್ಲಿರುವ ಹಣವನ್ನು ಬರೀ ಸರ್ಕಾರಿ ನೌಕರರಿಗೆ ಕೊಡುವುದರಿಂದ, ಉಳಿದ ಅಲ್ಪಸ್ವಲ್ಪ ಹಣದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಜನಗಳ ಮೇಲೆ ಹಾಕಿರತಕ್ಕ ತೆರಿಗೆ ವಿಪರೀತ ಜಾಸ್ತಿಯಾಗಿದೆ. ಚುನಾವಣೆ ಸಮಯದಲ್ಲಿ ರಾಜಕೀಯ ಪಕ್ಷಗಳು ಬಹುತೇಕ ವರ್ತಕರಿಂದ ಪಾರ್ಟಿಫಂಡಿಗಾಗಿ ಹಣ ಪಡೆಯುವುದರಿಂದ ತೆರಿಗೆಯನ್ನು ಸರಿಯಾದ ಪ್ರಮಾಣದಲ್ಲಿ ವಸೂಲು ಮಾಡುವುದಕ್ಕಾಗುವುದಿಲ್ಲ. ಎಷ್ಟು ಪ್ರಮಾಣದಲ್ಲಿ ತೆರಿಗೆ ಜಮಾ ಆಗುತ್ತದೆಯೋ ಅಷ್ಟೇ ಪ್ರಮಾಣದಲ್ಲಿ ತೆರಿಗೆ ಸೋರಿ ಹೋಗುತ್ತದೆ. ಕಟ್ಟುನಿಟ್ಟಾಗಿ ತೆರಿಗೆ ವಸೂಲು ಮಾಡುವ ವಿಚಾರದಲ್ಲಿ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲವೆಂದು ಹೇಳುತ್ತೇನೆ. ಇದರ ಜೊತೆಗೆ ನಿರ್ಮಲ ಗ್ರಾಮ ಯೋಜನೆ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ಹೇಳುವುದಾದರೆ, ಸಾಮೂಹಿಕ ಶೌಚಾಲಯಗಳ ಬದಲು ಕುಟುಂಬಕ್ಕೊಂದು ಶೌಚಾಲಯ ಕಟ್ಟಿಸಿಕೊಡುವಂತಾದ್ದು ಶ್ಲಾಘನೀಯವಾದುದು. ಇದಕ್ಕೆ ಇನ್ನೂ ಹೆಚ್ಚು ಹಣವನ್ನು ಕೊಡುವುದು ಒಳ್ಳೆಯದು, ಒಟ್ಟಾರೆ ರಾಜ್ಯದ ಆಯವ್ಯಯ ಪತ್ರ ಗ್ರಾಮೀಣ ಜನರಿಗೆ ಅಂಥ ಒಂದು ಅನುಕೂಲವಾಗಿಲ್ಲ. ದುಡಿದು ಬದುಕುವಂತ ಗ್ರಾಮೀಣ ಜನರ ಅಭಿವೃದ್ಧಿಗೆ ನೆರವಾಗುವಂತ ಬಜೆಟ್ ಅಲ್ಲವೆಂದು ಹೇಳುತ್ತೇನೆ. ರೈತರು ಬೆಳೆದ ಬೆಳೆಗೆ ಯೋಗ್ಯಬೆಲೆ ಕೊಡುವಂಥ ಪ್ರಯತ್ನ ಎಲ್ಲಿಯೂ ಮಾಡಿಲ್ಲ. ದುಡಿಯುವಂತಹ ಬಡಜನರಿಗೆ ಯಾವ ಅನುಕೂಲವನ್ನು ಇದರಲ್ಲಿ ಒದಗಿಸಿಲ್ಲ. ಇವತ್ತು ರಾಜ್ಯ ಎಲ್ಲಾ ತಾಲ್ಲೂಕುಗಳಲ್ಲಿಯೂ ಹತ್ತಿ ಬೆಳೆಯನ್ನು ಬೆಳೆಯನ್ನು ಬೆಳೆಯುತ್ತಾರೆ. ಈ ಹತ್ತಿ ಈ ಸಲ ಕ್ವಿಂಟಾಲ್ ಒಂದಕ್ಕೆ ೫೦೦ ರೂಪಾಯಿಗಳಿಂದ ೬೦೦ ರೂಪಾಯಿಗಳಿಗೆ ಮಾರಾಟ ಆಯಿತು.

(ಶ್ರೀಮತಿ ಚಂದ್ರಪ್ರಭ ಅರಸು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಆದರೆ ನಮ್ಮ ಸರ್ಕಾರ ಯೋಗ್ಯ ಬೆಲೆಯನ್ನು ಗೊತ್ತುಮಾಡುವುದಕ್ಕೆ ಏನೂ ಪ್ರಯತ್ನ ಮಾಡಿಲ್ಲ. ರಾಜ್ಯ ಸರ್ಕಾರ ಸಿ.ಸಿ.ಐ ಒತ್ತಾಯ ಮಾಡಿ ಎಕ್ಸ್‌ಪೋರ್ಟ್ ಮಾಡುವಂತಹ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಲಿಲ್ಲ. ಫೆಡರೇಷನ್ ಮೂಲಕ ಖರೀದಿ ಮಾಡಲು ಒತ್ತಾಯ ಮಾಡಲಿಲ್ಲ. ಈಗಲಾದರೂ ಸರ್ಕಾರ ಯೋಗ್ಯ ಬೆಲೆಯನ್ನು ಗೊತ್ತು ಮಾಡಿ ಹತ್ತಿಯನ್ನು ಖರೀದಿಸುವಂಥ ವ್ಯವಸ್ಥೆ ಮಾಡಿ, ರೈತರನ್ನು ರಕ್ಷಿಸಬೇಕೆಂದು ಹೇಳುತ್ತೇನೆ. ಈ ರೀತಿ ಮಾಡದಕಾರಣ ರೈತರು ವಿಧಿಯಿಲ್ಲದೆ, ತಾವು ಬೆಳೆದಂಥ ಹತ್ತಿಯನ್ನು ೫೦೦-೬೦೧ ರೂಪಾಯಿಗೆ ಒಂದು ಕ್ವಿಂಟಾಲ್‌ನಂತೆ ಮಾರಿಕೊಂಡಿದ್ದಾರೆ. ಇದರಿಂದ ಅವರ ಬಂಡವಾಳ ವಾಪಸ್ ಬಿರಲಿಲ್ಲ. ಅದೇರೀತಿ ಕಬ್ಬಿನ ದರವನ್ನು ಕೂಡ ಜಾಸ್ತಿ ಮಾಡ

ಬೇಕು. ಟನ್ನಿಗೆ ೧೦–೨೦ ರೂಪಾಯಿ ಜಾಸ್ತಿ ಮಾಡುವುದರಿಂದ ರೈತರಿಗೆ ಯಾವ ಉಪಯೋಗವೂ ಆಗುವುದಿಲ್ಲ, ರೈತರಿಗೆ ಪರಿಹಾರದಾಯಕವಾಗಿ ಬೆಲೆಗಳನ್ನು ಗೊತ್ತು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಬಿ. ಚಂದೇಗೌಡ.—ರಾಜ್ಯದ ರೈತ ಸಂಘದ ಮುಖ್ಯ ನೇತಾರರು ಈಗ ಮಾತನಾಡುತ್ತಿದ್ದಾರೆ. ಆದರೆ ಈಗ ಸಭೆಯಲ್ಲಿರತಕ್ಕ ಮಂತ್ರಿಗಳು ಶಾಸಕರ ಜೊತೆ ಚರ್ಚೆ ನಡೆಸಿದ್ದಾರೆ. ಅಂದರೆ ಯಾರು ನೋಟ್ ಮಾಡಿಕೊಳ್ಳುತ್ತಿದ್ದಾರೆನ್ನುವುದೇ ಗೊತ್ತಾಗುತ್ತಿಲ್ಲ. ಇಲ್ಲಿರುವ ಇಬ್ಬರು ಮಂತ್ರಿಗಳು ಶಾಸಕರ ಜೊತೆ ಮಾತನಾಡುತ್ತಿದ್ದರೆ, ನೋಟ್ ಮಾಡಿಕೊಳ್ಳುವವರು ಯಾರು ?

ಶ್ರೀ ಸಿ. ಬೈರೇಗೌಡ.—ಸಂತೆ ವ್ಯಾಪಾರ ನಡೆಸುತ್ತಿದ್ದಾರೆ.

ಶ್ರೀ ಎಂ. ರಾಮಪ್ಪ.—ಸಂತೆ ಎಂದು ಏತಕ್ಕೆ ಹೇಳುತ್ತೀರಿ ? ಟೇಪ್ ಹಗರಣ ಮಾಡಿದಿರಲ್ಲ. ಅದನ್ನು ಸ್ವಲ್ಪ ನೆನಸಿಕೊಳ್ಳಿ.

(ಗೊಂದಲ)

ಶ್ರೀ ಸಿ. ಬೈರೇಗೌಡ.—ಹಗರಣ ನಡೆದಾಗ ಬಾಯಿಮುಚ್ಚಿಕೊಂಡು ಕೂತಿದ್ದರಲ್ಲ. ಕಾಲು ನೋಯುತ್ತದೆ, ಪದೇ ಪದೇ ಎದ್ದು ನಿಲ್ಲಬೇಡಿ.

(ಗೊಂದಲ)

ಶ್ರೀ ಎಂ. ರಾಮಪ್ಪ.—ಸಂತೆ ವ್ಯಾಪಾರ ಎಂದು ಹೇಳುತ್ತಿದ್ದಾರೆ. ಆದರೆ ಅವರು ನಡೆಸಿದ ಹಗರಣಗಳನ್ನೆಲ್ಲಾ ಈಗ ನೆನಸಿಕೊಳ್ಳಲಿ.

(ಗೊಂದಲ)

ಶ್ರೀ ಸಿ. ಬೈರೇಗೌಡ.—ಇಲ್ಲಿ ಯಾರೂ ಕೇಳುವವರು ಇಲ್ಲದಿದ್ದರೆ ಮಾತನಾಡುವ ಅವಶ್ಯಕತೆ ಏನು ಇದೆ.

(ಗೊಂದಲ)

ಚೇರ್‌ಮನ್.—ಈರೀತಿ ಸಮಯ ಹಾಳು ಮಾಡುವುದು ಸರಿಯಲ್ಲ. ಈಗ ಚಂದ್ರೇಗೌಡರು ಮಾತನಾಡುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾವು ಇಲ್ಲಿ ಯಾವುದೇ ವಿಷಯ ಕೇಳಿದಾಗ ಮಂತ್ರಿಗಳಾದ ನೀವು ಉತ್ತರ ಹೇಳಬೇಕು. ಅದನ್ನು ಬಿಟ್ಟು ಆ ಕಡೆಯ ಸದಸ್ಯರು ಸೀದಾ ಸೀದಾ ಎದ್ದುಬಿಟ್ಟು ಈ ಕಡೆಯ ಸದಸ್ಯರು ವ್ಯಾಪಾರ ಮಾಡುತ್ತಿದ್ದರು ಹಾಗೇ ಹೀಗೆ ಅಂದರೆ ಹೇಗೆ? ಈ ಭಾಷೆಗಳನ್ನು ಬಳಸಿಕೊಂಡು ಶಾಸನ ಸಭೆಯ ಒಂದು ಗಾಂಭೀರ್ಯವನ್ನು ಕಡಿಮೆ ಮಾಡುವುದು ಸರಿಯಲ್ಲ. ದಯಮಾಡಿ ನಿಮ್ಮ ಸದಸ್ಯರಿಗೆ ಹೇಳಿ. ನಾವು ಮಾನ್ಯ ಮಂತ್ರಿಗಳಿಗೆ ಪ್ರಶ್ನೆ ಕೇಳಿದ್ದು. ಅದಕ್ಕೆ ಉತ್ತರವಾಗಿ ನಾವು ನೋಟ್ ಮಾಡಿಕೊಳ್ಳುತ್ತೇವೆ ಎಂದು ಹೇಳಿದರೆ ಸಾಕಾಗುತ್ತಿತ್ತು. ಆದರೆ ಈಗ ನಡೆದಿದ್ದು ನೋಡಿದರೆ ಶಾಸನ ಸಭೆಯ ಇತಿ ಮಿತಿ ತಪ್ಪಿ ಹೋಗುತ್ತಿರುವಂತೆ ಕಾಣುತ್ತದೆ. ದಯಮಾಡಿ ನಿಮ್ಮಂತಹ ಒಳ್ಳೆಯ ಅನುಭವಿ ಮಂತ್ರಿಗಳು ಇದ್ದಾಗ ನಿಮ್ಮ ಪಕ್ಷದಿಂದ ಈ ತರಹ ಆಗಬಾರದು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ ಈ ಸಲಹೆಯನ್ನು ನಾವೆಲ್ಲರೂ ಒಪ್ಪಿ ನಡೆದುಕೊಳ್ಳಬೇಕು. ನಾವು ಮಾತನಾಡುವ ಭಾಷೆಯಲ್ಲಿ ಸೌಜನ್ಯ ಬೇಕು ಸಾಹಿತ್ಯ ಭಾಷೆ ಉಪಯೋಗಿಸುವಾಗ ಸರಿಯಾಗಿ ಉಪಯೋಗಿಸಬೇಕು. ಅದನ್ನು ಬಿಟ್ಟು ಸಂತೆ, ಅಂಥಾದ್ದು, ಇಂಥಾದ್ದು ಎಂದು ಹೇಳಬಾರದು. ಆ ರೀತಿ ಹೇಳಿದರೆ ಬೇರೆಯವರಿಗೆ ಸಿಟ್ಟು ಬರುತ್ತದೆ. ಸಿಟ್ಟು ಬಂದ ತಕ್ಷಣ ಅದೆಲ್ಲಾ ನಮ್ಮ ಬಾಯಿಯಿಂದ ಬರಬಾರದು ಮಾನ್ಯ ಬೈರೇಗೌಡರು ನನ್ನ ಸ್ನೇಹಿತರು. ಅವರಿಗೆ ಯಾವಾಗಲಾದರೂ ಸಿಟ್ಟು ಬರುತ್ತದೆ. ಅವರಿಗೆ ಅದನ್ನು ತಡೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಕಾಣುತ್ತದೆ, ದಯಮಾಡಿ ಅವರು ಸೌಮ್ಯದಿಂದ ಮಾತನಾಡಬೇಕು ನಿಮ್ಮ ಅಭಿಪ್ರಾಯ ಸರಿಯಾದ ರೀತಿಯಲ್ಲಿ ಬರುವ ರೀತಿ ಮಾತನಾಡಿದರೆ ನಮಗೂ ಬಹಳ ಸಂತೋಷವಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಧನ್ಯವಾದಗಳು.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ನಾವು ಗ್ರಾಮಾಂತರ ಪ್ರದೇಶದಿಂದ ಬಂದವರು, ಸಾಹಿತ್ಯ ಭಾಷೆ ನಮಗೆ ಗೊತ್ತಿಲ್ಲ, ನಮಗೆ ಮಣ್ಣಿನ ಭಾಷೆ ಮಾತ್ರ ಗೊತ್ತಿದೆ. ರೈತರ ಬಗ್ಗೆ

ಮಾತನಾಡುತ್ತಾ, ಮಾನ್ಯ ಅರ್ಥ ಮಂತ್ರಿಗಳು ಕಬ್ಬಿನ ತೆರಿಗೆಯನ್ನು ಟನ್ ಒಂದಕ್ಕೆ ೧೦ ಪರ್‌ಸೆಂಟ್ ಮಾಡಿದ್ದಾರೆ. ರೈತರ ಬಗ್ಗೆ ಕಳಕಳಿಯಿಂದ ಮಾತನಾಡುವ ಸರ್ಕಾರ ಇದು ಇಷ್ಟು ದೊಡ್ಡ ಭಾರ ಯಾರ ಮೇಲೆ ಬೀಳುತ್ತದೆ ಎಂದು ವಿಚಾರ ಮಾಡಿಲ್ಲ, ಈಗಿನ ಪ್ರಕಾರ ಒಂದು ಟನ್ ಕಬ್ಬಿನ ದರೆ ೪೦೦ ರೂಪಾಯಿ ಇದ್ದರೆ ೪೦ ರೂಪಾಯಿ ಟ್ಯಾಕ್ಸ್ ಕೊಡಬೇಕೆಂದು ಆಯಿತು. ಬಹುತೇಕವಾಗಿ ಮಾನ್ಯ ಅರ್ಥ ಮಂತ್ರಿಗಳು ಈ ಒಂದು ತೆರಿಗೆಯನ್ನು ಏನು ಹಾಕಿದ್ದಾರೆ. ಈ ತೆರಿಗೆಯನ್ನು ಕರ್ನಾಟಕದ ರೈತರು ಕೊಡಲಿಕ್ಕಿಲ್ಲ ಎಂದು ನನ್ನ ವಿಚಾರ. ನೀವು ಒಂದು ಟನ್ನಿಗೆ ೪೦ ರೂಪಾಯಿ ಟ್ಯಾಕ್ಸ್ ಕೊಡಿ ಎಂದರೆ ಜನರು ಬೀದಿಗೆ ಇಳಿಯುತ್ತಾರೆ, ರೈತರು ಚಳುವಳಿ ಮಾಡುವಂತಹ ಪರಿಸ್ಥಿತಿ ಬರುತ್ತದೆ. ಇವತ್ತು ಕಬ್ಬು ಬೆಳೆಯುವುದಕ್ಕೆ ಎಷ್ಟು ಬಂಡವಾಳ ಹೂಡಬೇಕು, ಎಷ್ಟು ಕಷ್ಟ ಇದೆ, ಇದನ್ನೆಲ್ಲಾ ಗಣನೆಗೆ ತೆಗೆದುಕೊಂಡು ಲೆಕ್ಕ ಹಾಕಿದರೆ ರೈತರು ಇದನ್ನು ಕೊಡಲಿಕ್ಕೆ ಆಗದೆ ಟ್ಯಾಕ್ಸ್ ಹಾಕಿರುವುದು ಸರಿಯಿಲ್ಲ ಎಂದು ಹೇಳಿ ಅನಿವಾರ್ಯವಾಗಿ ಚಳುವಳಿ ಮಾಡಬೇಕಾಗಬಹುದು. ಇನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬಡ್ಡಿ ರಿಯಾಯಿತಿ ಕೊಡುತ್ತೇವೆಂದು ಹೇಳಿದರು, ಇದನ್ನು ಬಿಟ್ಟಿದ್ದರೂ ರೈತರಿಗೆ ಅಂಥ ದೊಡ್ಡ ಹಾನಿಯೇನೂ ಆಗುತ್ತಾ ಇರಲಿಲ್ಲ. ಇವರು ಸಣ್ಣ ರೈತರಿಗೆ ಕೊಡತಕ್ಕ ಸಾಲವೇ ೫೦೦ ರೂಪಾಯಿ ಇಲ್ಲವೇ ಒಂದು ಸಾವಿರ ರೂಪಾಯಿ ಅದರಲ್ಲಿ ಇವರು ಒಂದು ವರ್ಷಕ್ಕೆ ಬಡ್ಡಿ ರಿಯಾಯಿತಿ ಬಿಡುವುದು ಎಂದರೆ ಅವರಿಗೆ ೨೦–೩೦ ರೂಪಾಯಿ ರಿಯಾಯಿತಿ ಸಿಕ್ಕಬಹುದು, ಇವರ ರಿಯಾಯಿತಿ ಒಂದು ದಿವಸದ ಕೂಲಿಯಾಗುತ್ತದೆ. ಸರ್ಕಾರ ಕೊಡುವಂತಹ ರಿಯಾಯಿತಿ ಒಬ್ಬ ಕೂಲಿಗಾರನಿಗೆ ಕೊಡತಕ್ಕ ಒಂದು ದಿವಸದ ಕೂಲಿ ತರಹ ಭಿಕ್ಷೆ ತರಹ ಆಗುತ್ತದೆ. ಒಬ್ಬ ರೈತನ ಒಂದು ದಿವಸದ ದುಡಿಮೆ ಇವತ್ತಿನ ಶ್ರಮದ ಲೆಕ್ಕ ಹಾಕಿದರೆ ೫೦–೬೦ ರೂಪಾಯಿ ಆಗಬಹುದು. ಈ ದೇಶದಲ್ಲಿ ಸರ್ಕಾರ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅವರು ಬದುಕಿದ್ದಾಗ ೨೦–೩೦ ರೂಪಾಯಿಯನ್ನು ಒಂದು ವರ್ಷಕ್ಕೆ ಸಬ್ಸಿಡಿ ಎಂದು ಕೊಡತಕ್ಕದ್ದು ಹಾಸ್ಯಾಸ್ಪದವಾದ ಮಾತು ಎಂಬುದು ನಿಜ ಇವತ್ತು ಶ್ರಮಿಕರ ಕೂಲಿಕಾರರ ಮತ್ತು ರೈಲ್ವೆ ಡಬ್ಬಿಯಲ್ಲಿ ಕಸ ತೆಗೆಯತಕ್ಕವರ ಕೂಲಿ ೩೦–೪೦ ರೂಪಾಯಿ ಇದೆ. ಇವತ್ತು ರೈತ ಒಂದು ದಿನದಲ್ಲಿ ೧೨–೧೬ ತಾಸುಗಳ ಕಾಲ ದುಡಿದ ಮೇಲೂ ೫–೬ ರೂಪಾಯಿ ಸಿಕ್ಕಲಿಲ್ಲ ಎಂದರೆ ಏನು ಮಾಡಬೇಕು? ಈವತ್ತು ಈ ದೇಶದಲ್ಲಿ ಸಬ್ಸಿಡಿ ಕೊಟ್ಟು ಸರ್ಕಾರದವರು ರೈತನನ್ನು ಬದುಕಿಸಿದ್ದಾರೆಯೇ? ಇದರ ಬಗ್ಗೆ ತಾವು ವಿಚಾರ ಮಾಡಬೇಕು.

ಆತನ ಶ್ರಮಕ್ಕೆ ಸರಿಯಾದಂತಹ ಪ್ರತಿಫಲ ಸಿಗಬೇಕು. ಆತನೂ ಕೂಡ ಮರ್ಯಾದೆಯಿಂದ ಏಕೆ ಬದುಕಬಾರದು. ಸರಿಯಾಗಿ ಕೆಲಸ ಮಾಡದೇ ದಿನದಲ್ಲಿ ನಾಲ್ಕು ಅಕ್ಷರ ಬರೆಯುವಂತಹ ಜನರು ೧೫–೨೦ ಸಾವಿರ ರೂಪಾಯಿ ವೇತನ ತೆಗೆದುಕೊಳ್ಳುತ್ತಾರೆ. ಆದರೆ ವರ್ಷದ ೧೨ ತಿಂಗಳೂ ಕೆಲಸ ಮಾಡುವವರಿಗೆ ಹಳ್ಳಿಯಲ್ಲಿ ದುಡಿಯುವವರಿಗೆ ದಿನಕ್ಕೆ ೨೦–೨೫ ರೂಪಾಯಿ ಕೂಲಿ ಕೊಟ್ಟರೆ ನಿಮಗೆ ಹೊಟ್ಟೆ ಉರಿಯೇ? ರೈತರ ಸಾಲವನ್ನು ಸೂಟು ಬಿಡಿ ಎಂದು ನಾನು ಹೇಳುತ್ತಿಲ್ಲ. ರೈತರ ಸಾಲ ಏತಕ್ಕೆ ಆಯಿತು ಎಂದು ಮೊದಲು ಯೋಚನೆ ಮಾಡಿ ಅದಕ್ಕೆ ಕಾರಣ ಕಂಡುಹಿಡಿಯಿರಿ. ರೈತರು ಬೆಳೆದಂತಹ ಬೆಳೆಗೆ ಸರಿಯಾದಂತಹ ಯೋಗ್ಯ ಬೆಲೆ ಕೊಟ್ಟಿದ್ದರೆ ಕೂಲಿಗಾರರಿಗೆ ಇಂತಹ ಪರಿಸ್ಥಿತಿ ಇವತ್ತು ಒದಗುತ್ತಿರಲಿಲ್ಲ. ಒಳ್ಳೆಯ ಕೂಲಿ ಸಿಗುತ್ತಿತ್ತು. ಇದರಿಂದ ಬಳಕೆದಾರರಿಗೆ ಕೂಡ ಅನುಕೂಲ ಸಿಗಲಿಲ್ಲ. ಇದಕ್ಕೆ ಉದಾಹರಣೆ ಕೊಡಬೇಕೆಂದರೆ ಹತ್ತಿ ಬೆಲೆ ಎಂದು ೧೬೦೦ ರೂಪಾಯಿ ಒಂದು ಕ್ವಿಂಟಾಲ್‌ಗೆ ಹೋದ ವರ್ಷ ಇದ್ದಾಗ ನಮ್ಮ ಹಳ್ಳಿಯ ಹೆಂಗಸರು ಉಡುವ ಹುಬ್ಬಳ್ಳಿ ಸೀರೆ ೧೩೦–೧೪೦ ರೂಪಾಯಿಗೆ ಸಿಗುತ್ತಿತ್ತು. ಅದೇ ಈ ವರ್ಷ ಹತ್ತಿ ಬೆಲೆ ಕ್ವಿಂಟಾಲ್‌ಗೆ ೫೦೦ ರೂಪಾಯಿ ಯಾದಗೂ ಸಹ [illegible]೦–೫೦ ರೂಪಾಯಿಗೆ ಅದೇ ಸೀರೆ ಸಿಕ್ಕುವುದಿಲ್ಲ. ಸೀರೆ ಬೆಲೆ ಮಾತ್ರ ಜಾಸ್ತಿ ಇದೆ. ಇದಕ್ಕೆ ಕಾರಣ ಮಧ್ಯವರ್ತಿಗಳು, ಇದಕ್ಕೆ ಕಾರಣ ಕೇಳಿದರೆ ಇನ್‌ಫ್ಲೇಷನ್, ಡಿಫ್ಲೇಷನ್, ಪ್ರೈಸ್ ಇಂಡೆಕ್ಸ್ ಎಂದು ಹೀಗೆಲ್ಲಾ ಹೇಳುತ್ತಾರೆ. ಆದರೆ ಇದೊಂದೂ ನಮಗೆ ಅರ್ಥವಾಗುವುದಿಲ್ಲ. ಹತ್ತಿ ದರ ಜಾಸ್ತಿಯಾದಾಗ ಸೀರೆಯ ಕಿಮ್ಮತ್ತು ಜಾಸ್ತಿ ಇತ್ತು, ಅದೇ ಹತ್ತಿ ದರ ಕಡಿಮೆಯಾದಾಗ ಸೀರೆ ದರ ಏಕೆ ಕಡಿಮೆಯಾಗಬಾರದು. ಹತ್ತಿ ಬೆಲೆ ಕ್ವಿಂಟಾಲ್‌ಗೆ ೫೦೦ ರೂಪಾಯಿ ಆದಾಗ ಸೀರೆ ಬೆಲೆ ೪೦ ರೂಪಾಯಿ ಏಕೆ ಆಗಬಾರದು. ಎಂಟು ವರ್ಷದ ಹಿಂದೆ ತಂಬಾಕಿನ ಬಗ್ಗೆ ಚಳುವಳಿ ಮಾಡಿದಾಗ ಒಂದು ಕೆ. ಜಿ. ತಂಬಾಕಿನ ಬೆಲೆ ೬ ರೂಪಾಯಿ ಇತ್ತು. ಆಗ ಬೀಡಿ ಕಟ್ಟು ೫೦ ಪೈಸೆ ಇತ್ತು. ಅದೇ ಇವತ್ತಿಗೂ ಒಂದು ಕೆ. ಜಿ. ತಂಬಾಕಿಗೆ ೮ ರೂಪಾಯಿದ್ದರೂ ಸಹ ಬೀಡಿ ಕಟ್ಟಿನ ಬೆಲೆ ಮಾತ್ರ ಒಂದು ರೂಪಾಯಿ ೮೦ ಪೈಸೆ ಆಗಿದೆ. ಇಷ್ಟು ಬೆಲೆ ಏಕೆ ಎಂಬುದನ್ನು ವಿಚಾರ ಮಾಡಬೇಕು. ಮಾನ್ಯ ಅರ್ಥ ಮಂತ್ರಿಗಳು ಇದರ ಬಗ್ಗೆ ಉತ್ತರವನ್ನು ಹೇಳಬೇಕು. ಇವತ್ತು ಒಂದು ಕಿಲೋ ಟಮೋಟೋವನ್ನು ಮಾರಿದರೆ ರೈತರಿಗೆ ೫೦ ಪೈಸೆ ಸಿಗುವುದಿಲ್ಲ ಅದೇ ೪೦೦ ಗ್ರಾಮ್ ಟಮೋಟೋ ಕೆಚಪ್‌ಗೆ ೧೨–೧೩ ರೂಪಾಯಿ ಆಗುತ್ತದೆ. ಇದರಿಂದ ಬರೀ ಉತ್ಪಾದಕರಿಗೆ ಮಾತ್ರ ಅನ್ಯಾಯವಾಗುವುದಿಲ್ಲ ಬಳಕೆ

ದಾರರಿಗೂ ಕೂಡ ತೊಂದರೆಯಾಗುತ್ತದೆ. ನಾವು ಬರೀ ಬಳಕೆದಾರರು ಮಾತ್ರವಲ್ಲ ಉತ್ಪಾದಕರೂ ಹೌದು. ನಾವು ಕೇವಲ ಹತ್ತಿ ಬೆಳೆಯುತಕ್ಕಂತಹ ಜನ ಅಲ್ಲ, ನಾವು ಬಟ್ಟೆಯನ್ನು ಕೊಳ್ಳುವಂತಹ ಜನರೂ ಕೂಡ ಆಗಿದ್ದೇವೆ. ನಾವು ಹೊಗೆಸೊಪ್ಪನ್ನು ಬೆಳೆಯುತಕ್ಕಂತಹ ಜನ ಮಾತ್ರ ಅಲ್ಲ ಬೀಡಿಯನ್ನು ಕೊಳ್ಳತಕ್ಕಂತಹ ಬಳಕೆದಾರರೂ ಕೂಡ ನಾವೇ ಆಗಿದ್ದೇವೆ. ಇದರಿಂದ ಈ ಎರಡೂ ಭಾಗದವರಿಗೂ ಕೂಡ ಅನ್ಯಾಯವಾಗುತ್ತಿದೆ. ಕೆಲವು ಕಾರ್ಖಾನೆಗಳ ಮಾಲೀಕರು ಬಳಕೆದಾರರನ್ನು ಮತ್ತು ಉತ್ಪಾದಕರನ್ನು ಸುಲಿಗೆ ಮಾಡಿ ದೊಡ್ಡ ಶ್ರೀಮಂತರಾಗುತ್ತಿದ್ದಾರೆ ಇಂತಹವರಿಗೆ ರಾಜಕೀಯ ಪಕ್ಷಗಳು ಏಜೆಂಟರಾಗಿ ಕೆಲಸ ಮಾಡಿಕೊಂಡು ಈ ದೇಶವನ್ನು ಪಾತಾಳಕ್ಕೆ ತಳ್ಳುತ್ತಿರು ವಂಥಾದ್ದು ಎಲ್ಲರಿಗೂ ಗೊತ್ತಿದೆ. ಈ ಬಳಕೆದಾರರನ್ನು ಮತ್ತು ಉತ್ಪಾದಕರನ್ನು ರಕ್ಷಣೆ ಮಾಡಬೇಕೆನ್ನುವ ವಿಚಾರದಕ್ಕೆ ಸರಕಾರ ಏಕೆ ಪ್ರಯತ್ನ ಮಾಡಲಿಲ್ಲ. ಕನ್ಸೂಮರ್ಸ್ ಪ್ರೈಸ್ ಇಂಡೆಕ್ಸ್, ಹೋಲ್‌ಸೇಲ್ ಪ್ರೈಸ್ ಇಂಡೆಕ್ಸ್ ಎಂದು ಮಾತನಾಡುತ್ತೇವೆ. ಆದರೆ ರೈತರಿಗೆ ಒಳ್ಳೆಯ ಬೆಲೆ ಕೊಡಲು ಯಾವ ಸರಕಾರ ಪ್ರಯತ್ನ ಮಾಡಿದೆ. ರೈತರು ಬೆಳೆದ ಒಂದು ಕೆ.ಜಿ. ಟೊಮೋಟೋಗೆ ೫೦ ಪೈಸೆ ಸಿಗುವುದಿಲ್ಲ. ಆದೇ ೪೦೦ ಗ್ರಾಮಿನ ಕೆಚಪ್‌ಗೆ ೧೩ ರೂಪಾಯಿಯಾಗುತ್ತದೆಂದು ಹೇಳುವುದು ಸರಿಯಾದ ಕ್ರಮವಲ್ಲ. ಇದಕ್ಕೇನೂ ದೊಡ್ಡ ಕಾರ್ಖಾನೆ ಬೇಕಾಗಿಲ್ಲ. ಕೆಲವು ಆಸಿಡ್‌ಗಳನ್ನು ಬೆರೆಸಿ ಮಾಡಿದರೆ ಆಯಿತು. ಇದಕ್ಕೇನೂ ದೊಡ್ಡ ಪಾಕ ಶಾಸ್ತ್ರ ಬೇಕಾಗಿಲ್ಲ, ದೇವರಿಂದ ಕಲಿತುಕೊಂಡು ಬರಬೇಕಾಗಿಲ್ಲ. ಇಂತಹ ಸಣ್ಣ ವಿಚಾರಕ್ಕೆ ಸರಕಾರ ಏಕೆ ಮನಸ್ಸು ಮಾಡಲಿಲ್ಲ. ಸರಕಾರಕ್ಕೆ ಇದರ ಬಗ್ಗೆ ಸಾಮಾನ್ಯ ಜ್ಞಾನ ಕೂಡ ಇಲ್ಲವೋ ಅಥವಾ ಮನಸ್ಸು ಮಾಡಲಿಲ್ಲವೋ ಗೊತ್ತಿಲ್ಲ. ಮಾನ್ಯ ಬಸವಲಿಂಗಪ್ಪನವರು ಬೆಳಗಾಂಗೆ ಬಂದಾಗ ಮಕ್ಕಳಿಗೆ ಪೌಷ್ಟಿಕ ಉಪಹಾರ ಕೊಡಬೇಕು ಎಂದಾಗ ಉಪ್ಪಿಟ್ಟು ತಯಾರು ಮಾಡಬೇಕೆಂದರೆ ಅದಕ್ಕೆ ೬-೮ ಗಂಟೆಗಳಾಗುತ್ತದೆ ಅದನ್ನು ತಯಾರು ಮಾಡುವುದರಿಂದ ಶಾಲಾ ಮಕ್ಕಳು ಸರಿಯಾಗಿ ಕಲಿಯು ವುದಿಲ್ಲವೆಂದು ಹೇಳಿದರು. ಹಾಗಿದ್ದರೆ ಅದಕ್ಕೆ ಬದಲು ಸೇಂಗಾ ಮತ್ತು ಬೆಲ್ಲವನ್ನು ಹಾಕಿ ಮಾಡಿ ದಂತಹ ಚಿಕ್ಕಿಯನ್ನು ಏಕೆ ಮಕ್ಕಳಿಗೆ ಸಪ್ಲೈ ಮಾಡಬಾರದು? ಇದು ಡ್ರೈಫುಡ್ ಮತ್ತು ಪೌಷ್ಟಿಕ ಆಹಾರ ಕೂಡ ಹೌದು. ಆದರೆ ಈ ರೀತಿ ಮಾಡಲು ಸಾಮಾನ್ಯ ಜ್ಞಾನ ಬೇಕಲ್ಲ. ಮುಖ್ಯವಾಗಿ ರೈತರು ಬೆಳೆಯುವಂತಹ ಹತ್ತಿ ಬೀಜ ಏನು ಇದೆ ಅದನ್ನು ಸರಕಾರದವರು ಖರೀದಿ ಮಾಡಿ ನೂರು ರೂಪಾಯಿ ಗಳ ಅಂತರ ಇಟ್ಟು ಮಾರುವುದು ನಡೆದಿದೆ. ಆದರೆ ಸರಕಾರ ವ್ಯಾಪಾರ ಮಾಡುವುದಕ್ಕೆ ನಿಂತಿಲ್ಲ ಈ ರೀತಿ ಮಾಡಿದರೆ ೪ ಕ್ವಿಂಟಾಲ್ ಹತ್ತಿ ಬೀಜ ಬೆಳೆದರೆ ಒಂದು ಕ್ವಿಂಟಾಲ್ ಅನ್ನು ಸರಕಾರಕ್ಕೆ ಕೊಡಿ ಉಳಿದ ಮೂರು ಕ್ವಿಂಟಾಲ್ ಅನ್ನು ಖಾಸಗಿಯವರಿಗೆ ಕೊಡಿ ಎಂದು ಹೇಳಿದ ಹಾಗಾಗುತ್ತದೆ. ಇದು ಸರಿಯಲ್ಲ. ರೈತರಿಂದ ಕೊಳ್ಳುವ ದರ ಮತ್ತು ಅವರು ಮಾರಾಟ ಮಾಡುವ ದರದಲ್ಲಿ ೧೦-೧೫ ರೂಪಾಯಿ ವ್ಯತ್ಯಾಸ ಇದ್ದಿದ್ದರೆ ಅವನು ಬೇರೆಯವರಿಗೆ ಮಾರಾಟ ಮಾಡುವ ಜವಾಬ್ದಾರಿಯನ್ನು ತಾನೇಕೆ ಹೊತ್ತುಕೊಳ್ಳಬೇಕೆಂದು ಸರಕಾರಕ್ಕೇ ಕೊಡುತ್ತಿದ್ದನು. ನ್ಯಾಷನಲ್ ಸೀಡ್ಸ್ ಕಾರ್ಪೊರೇಷನ್ನ ನವರು ಕೊಡುತ್ತಿದ್ದುದನ್ನು ತೆಗೆದುಕೊಂಡರೆ ನೂರು ರೂಪಾಯಿ ಲಾಭವಾಗುತ್ತದೆಂದು ರೈತರು ತಿಳಿದುಕೊಂಡು ಖರೀದಿ ಮಾಡಿದರು. ಆಗ ಲೂಸ್ ಕಾಳು ಮಾರುವಂಥಾದ್ದು ನಡೆಯಿತು. ಸ್ಪೂರಿಯಸ್ ಸೀಡ್ಸ್ ಅಂದರೆ ಅಂಥಿಂಥ ಬೀಜ ಬೆರೆಸಿ ಮಾರಾಟ ಮಾಡಿ ದೇಶವನ್ನೆಲ್ಲಾ ಹಾಳು ಮಾಡಿದರು? ಇಷ್ಟು ಸಾಮಾನ್ಯ ಜ್ಞಾನದ ಕೊರತೆ ನಮ್ಮ ಸರಕಾರದಲ್ಲಿ ಇದೆಯೋ? ಐಡಿಯಾಲಜಿ ಬಗ್ಗೆ ಮಾತನಾಡಿಕೊಳ್ಳುವುದು ಬೇಡ. ನಮ್ಮ ಸಾಮಾನ್ಯ ಜ್ಞಾನದಿಂದ ಏನು ತಪ್ಪು ಆಗುತ್ತಿದೆ ಎಂಬುದನ್ನು ತಿಳಿದುಕೊಂಡು, ಅದನ್ನು ಸರಿ ಮಾಡಲು ಯಾವ ತರಹ ಮುಂದುವರಿಯಬೇಕು ಎಂಬುದರ ಬಗ್ಗೆ ಪ್ರಯತ್ನ ಮಾಡಬೇಕು. ರೈತರ ಸಾಲ ಬಾಕಿ ಬಗ್ಗೆ ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಅಂತಹ ಜೋರು ಮಾಡಿಲ್ಲ. ಜಪ್ತಿ ಮಾಡಿಲ್ಲವೆಂದು ಹೇಳಿದರು. ಈಗ ಉದಾಹರಣೆಗೆ ಹೇಳಬೇಕೆಂದರೆ ಹೂಲಿ ಗ್ರಾಮದಲ್ಲಿ ಕಾಲುವೆ ಇಲ್ಲ ನೀರು ಹಾಸಿಲ್ಲ, ಆದರೆ ರೈತನಿಗೆ ಟ್ಯಾಕ್ಸ್ ಕಟ್ಟಬೇಕೆಂದು ಹೇಳಿದ್ದಾರೆ ಎರಡೇ ದಿವಸದಲ್ಲಿ ಸುಮಾರು ೪ ಸಾವಿರ ಕಟ್ಟಬೇಕೆಂದು ತಿಳಿಸಿದರು ಇಲ್ಲದಿದ್ದರೆ ನಿನ್ನ ಸುಮಾರು ೨೦ ಎಕರೆ ಭೂಮಿಯನ್ನು ಕರ್ನಾಟಕ ಸರ್ಕಾರದವರು ದಾಖಲು ಮಾಡಿಕೊಳ್ಳುತ್ತೇವೆಂದು ಹೇಳಿ ಆ ರೀತಿ ಮಾಡಿಯೇ ಬಿಟ್ಟರು. ಅವನ ಹೆಂಡತಿ ಮಕ್ಕಳ ಗತಿ ಏನಾಗಬೇಕು? ಅವರನ್ನೆಲ್ಲಾ ಬೀದಿ ಪಾಲು ಮಾಡಿದರು. ರೈತರ ಹೊಲಗಳಿಗೆ ಕಾಲುವೆಗಳೇ ಇಲ್ಲ. ಈ ಹೂಲಿ ಗ್ರಾಮಕ್ಕೆ ಮಾನ್ಯ ಮಂತ್ರಿಗಳು ಹೋಗಿ ನೋಡಲಿ. ನೀರು ಕೊಡದೆ ನೀರಾವರಿ ಟ್ಯಾಕ್ಸ್ ೩-೪ ಸಾವಿರ ರೂಪಾಯಿ ಬಾಕಿ ತೋರಿಸಿದ್ದಾರೆ. ತೆರಿಗೆ ಕೊಡದಿದ್ದರೆ ಭೂಮಿಯನ್ನು ಮುಟ್ಟುಗೋಲು ಹಾಕಿಕೊಳ್ಳುತ್ತೇವೆಂದು ಹೇಳಿದರು. ನಂತರ ೨೦-೩೦ ಎಕರೆ ಭೂಮಿಯನ್ನು ಲ್ಯಾಂಡ್ ರೆವಿನ್ಯೂ ಆಕ್ಟ್ ೧೯೬೪ರ ಪ್ರಕಾರ ಮುಟ್ಟುಗೋಲು ಹಾಕಿಕೊಂಡಿದ್ದೇವೆಂದು ಹೇಳಿದರು. ಈ ರೀತಿ ಕಾನೂನಿಗೆ ತಿದ್ದುಪಡಿ ಮಾಡತಕ್ಕ ಅಧಿಕಾರವನ್ನು ಇವರಿಗೆ ಯಾರು ಕೊಟ್ಟಿದ್ದಾರೆ ? ಒಬ್ಬ ತಹಸಿಲ್ದಾರ್ ಈ ರೀತಿ ಮಾಡಿದರೆ ಹೇಗೆ? ಇದರಿಂದ ವಿಧಾನ ಮಂಡಲಕ್ಕೆ

ಏನಾದರೂ ಮರ್ಯಾದೆ ಇರುತ್ತದೆಯೇ? ಅಧಿಕಾರಿಗಳು ಇರತಕ್ಕ ಕಾನೂನನ್ನು ಪಾಲಿಸಬೇಕು. ಕಾನೂನು ಪ್ರಕಾರ ನೋಟೀಸ್ ಕೊಡದೆ ತಮಗೆ ತಿಳಿದಂತೆ ನೋಟೀಸ್ ಕೊಡುತ್ತಿದ್ದಾರೆ. ಅವನ್ನು ಬಿಟ್ಟು ಈ ರೀತಿ ಅಧಿಕಾರವನ್ನು ದುರುಪಯೋಗ ಮಾಡಿಕೊಂಡರೆ, ಕಾನೂನನ್ನು ಉಲ್ಲಂಘನೆ ಮಾಡಿದರೆ ಅದು ಈ ಸದನಕ್ಕೆ ಅವಮಾನ ಮಾಡಿದ ಹಾಗೆ ಆಗಲಿಲ್ಲವೇ ? ಈ ರೀತಿ ರೈತರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ನಡೆಯುತ್ತಿದೆ. ಇದನ್ನು ನಿಲ್ಲಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ಇದರ ಜೊತೆಗೆ ಹೈಕೋರ್ಟ್‌ನಲ್ಲಾಗಲಿ, ಸುಪ್ರೀಂ ಕೋರ್ಟಿನಲ್ಲಾಗಲಿ ಏನಾದರೂ ತೀರ್ಪು ಕೊಟ್ಟರೆ ಅದನ್ನು ಪಾಲನೆ ಮಾಡತಕ್ಕದ್ದು ಸರ್ಕಾರಿ ಅಧಿಕಾರಿಗಳ ಕೆಲಸ. ಸರ್ಕಾರ ಇಂತಿಂಥ ವಸ್ತುಗಳನ್ನು ಮುಟ್ಟಬಾರದೆಂದು ಕಾನೂನು ಮಾಡಿದೆ. ಆ ಕಾನೂನು ಇದ್ದರೂ ಕೂಡ ಅಂತಹ ವಸ್ತುಗಳ ಜಫ್ತಿಯನ್ನು ಅಧಿಕಾರಿಗಳು ಮಾಡುತ್ತಿದ್ದಾರೆ. ಕೊಳಗ, ಲೋಟ, ತಟ್ಟೆ ತಂಬಿಗೆ ಮುಂತಾದವನ್ನು ಜಫ್ತಿ ಮಾಡುತ್ತಿದ್ದಾರೆ. ಇದನ್ನು ಜಫ್ತಿ ಮಾಡಬಾರದೆಂದು ಕರ್ನಾಟಕದ ಹೈಕೋರ್ಟ್‌ನವರು ತಡೆಯಾಜ್ಞೆ ಕೊಟ್ಟಿದ್ದಾರೆ. ಆದರೂ ಇದರ ಬಗ್ಗೆ ಸರ್ಕಾರ ಏತಕ್ಕೆ ಇಲ್ಲಿಯತನಕ ಈ ಆಜ್ಞೆಯನ್ನು ಪಾಲನೆ ಮಾಡಿಲ್ಲ? ಈ ರೀತಿ ಯಾದರೆ ಕೋರ್ಟ್ ಏತಕ್ಕೆ ಇರಬೇಕು ಕೋರ್ಟಿನ ಆದೇಶವನ್ನು ಮೀರಿ ಕೆಲಸ ನಡೆದರೆ ಕೋರ್ಟಿಗೆ ಅವಮಾನ ಮಾಡಿದ ಹಾಗೆ. ಹಾಗೂ ಈ ಸದನಕ್ಕೆ ಅವಮಾನ ಮಾಡಿದ ಹಾಗೆ. ದೊಡ್ಡ ದೊಡ್ಡ ಮಿಲ್ ಮಾಲೀಕರು ೧೨–೨೦ ಕೋಟಿ ಸಾಲ ಬಾಕಿ ಇಟ್ಟುಕೊಂಡಿರುತ್ತಾರೆ. ಅಂತಹವರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ. ಕೇವಲ ರೈತರ ಸಾಲದ ವಸೂಲಿಗೆ ಕ್ರಮ ಕೈಗೊಳ್ಳುತ್ತಿದ್ದೀರಿ. ಆ ಉದ್ದಿಮೆದಾರರನ್ನು ಏತಕ್ಕೆ ಕೈಬಿಟ್ಟಿದ್ದೀರಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಶ್ರೀ ಬಾಬಾಗೌಡರು ಕೆಲವೊಂದು ಪ್ರಕರಣಗಳನ್ನು ಈ ಸಭೆಗೆ ತಿಳಿಸಿದ್ದಾರೆ. ಅದರ ಬಗ್ಗೆ ಪೂರ್ಣ ವಿವರವನ್ನು ನೀಡಿದರೆ ಸರ್ಕಾರಕ್ಕೆ ಸೂಕ್ತ ಕ್ರಮ ಕೈಗೊಳ್ಳಲು ಅನುಕೂಲವಾಗುತ್ತದೆ. ಹೈಕೋರ್ಟ್‌ನಲ್ಲಿ ಆಗಿರತಕ್ಕ ತೀರ್ಮಾನದ ಪ್ರಕಾರ ರೈತರ ಪಾತ್ರೆ, ತಟ್ಟೆ ಲೋಟಗಳನ್ನು ಜಫ್ತಿ ಮಾಡಬಾರದೆಂದು ಹೇಳಿದ್ದಾರೆ. ಆ ರೀತಿ ಆದೇಶವನ್ನು ಕೊಟ್ಟಿದ್ದೇವೆ. ಆ ಆದೇಶವನ್ನು ಅಧಿಕಾರಿಗಳು ಉಲ್ಲಂಘನೆ ಮಾಡಿದರೆ ಸರ್ಕಾರ ಅವರ ಮೇಲೆ ಕ್ರಮ ಕೈಗೊಳ್ಳುತ್ತದೆ. ಮಾನ್ಯ ಸದಸ್ಯರು ದಯವಿಟ್ಟು ನಿರ್ದಿಷ್ಟವಾದ ಪ್ರಕರಣವನ್ನು ಈ ಸದನಕ್ಕೆ ತಿಳಿಸಿದರೆ ಸೂಕ್ತ ತನಿಖೆ ಮಾಡಲು ಅನುಕೂಲವಾಗುತ್ತದೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ — ಹೈಕೋರ್ಟ್‌ನಲ್ಲಿ ತಮ್ಮ ಅಡ್ವೋಕೇಟ್ ಜನರಲ್‌ರವರು ಬರೆದುಕೊಟ್ಟಿರತಕ್ಕ ಮುಚ್ಚಳಿಕೆಯಲ್ಲಿ ಹಾಗೂ ಸಿವಿಲ್ ಪ್ರೊಸೀಜರ್ ಕೋಡ್‌ನಲ್ಲಿ ಯಾವ್ಯಾವ ವಸ್ತುಗಳನ್ನು ಜಫ್ತಿ ಮಾಡಬಾರದೆಂದು ಇದೆ, ಅಂತಹ ವಸ್ತುಗಳನ್ನು ಏನಾದರೂ ಜಫ್ತಿ ಮಾಡಿದ್ದರೆ, ಅವುಗಳನ್ನು ರೈತರಿಗೆ ವಾಪಸ್ಸು ಕೊಡಿಸುತ್ತೇವೆಂದು ಬರೆದುಕೊಟ್ಟಿದ್ದಾರೆ. ಯಾವ ಯಾವ ಸಹಕಾರ ಸಂಸ್ಥೆಗಳ ಅಧಿಕಾರಿಗಳು ಮತ್ತು ಯಾವ್ಯಾವ ಕಂದಾಯ ಇಲಾಖೆಯ ಅಧಿಕಾರಿಗಳು ಇಂತಹ ವಸ್ತುಗಳನ್ನು ಜಫ್ತಿ ಮಾಡಿದ್ದಾರೆ, ಅದರ ಲೆಕ್ಕವನ್ನು ತರಿಸಿಕೊಂಡು ಅವುಗಳನ್ನು ರೈತರಿಗೆ ವಾಪಸ್ಸು ಕೊಡಬೇಕೆಂದು ಒಂದು ಸುತ್ತೋಲೆಯನ್ನು ಕೂಡಲೆ ಕಳುಹಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ.— ಕ್ರಿಮಿನಲ್ ಪ್ರೊಸೀಜರ್ ಕೋಡ್ ಸೆಕ್ಷನ್ ೬೦ರ ಪ್ರಕಾರ ಒಂದು ಸುತ್ತೋಲೆಯೇ ಇದೆ. ಅದರ ಪ್ರಕಾರ ರೈತರು ಸರ್ಕಾರಕ್ಕೆ ಕೊಡಬೇಕಾದ ಅಥವಾ ಸಹಕಾರ ಸಂಘಗಳಿಗೆ ಕೊಡಬೇಕಾದ ಹಣವನ್ನು ಸಕಾಲದಲ್ಲಿ ಕಟ್ಟದಿದ್ದರೆ ರೈತರ ಜೀವನಾವಶ್ಯಕ ಸಾಮಗ್ರಿಗಳನ್ನು ಅಥವಾ ವ್ಯವಸಾಯೋಪಕರಣಗಳನ್ನು ಅಂದರೆ ಎತ್ತು, ಗಾಡಿ. ಕುಂಟೆ. ಕುಡುಗೋಲು ಇಂಥವುಗಳನ್ನು ಯಾರೂ ಕೂಡ ಜಫ್ತಿ ಮಾಡಬಾರದು ಎಂತಲೇ ಒಂದು ಸುತ್ತೋಲೆ ಇದೆ. ಒಂದು ವೇಳೆ ಎಲ್ಲಾದರೂ ಈ ಸುತ್ತೋಲೆ ಉಲ್ಲಂಘನೆಯಾಗಿದ್ದರೆ ಆ ನಿಮಿಷದಲ್ಲೇ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬಹುದು. ಇದರ ಬಗ್ಗೆ ನಮ್ಮದೇನೂ ಭಿನ್ನಾಭಿಪ್ರಾಯವಿಲ್ಲ. ಹೈಕೋರ್ಟ್‌ನವರು ಜಡ್ಜ್‌ಮೆಂಟ್‌ನ್ನು ಮಾಡಿರತಕ್ಕದು ಕೂಡ ಇಂಥ ಪ್ರಕರಣಗಳ ಆಧಾರದ ಮೇಲೆ.

ಪ್ರೊ. ಎಂ. ಡಿ ನಂಜುಂಡಸ್ವಾಮಿ.— ಸುತ್ತೋಲೆ ಇದೆ. ನಮಗೂ ಗೊತ್ತಿದೆ. ಸರ್ಕಾರದವರು ಆ ಸುತ್ತೋಲೆಯನ್ನು ಉಲ್ಲಂಘನೆ ಮಾಡಿದ್ದಾರೆ. ಇದಕ್ಕೆ ಏನು ಮಾಡಬೇಕೆಂಬುದು ನಮಗೆ ಗೊತ್ತಿದೆ. ನಾವು ಮಾಡುತ್ತೇವೆ. ಇಂಡಿಯನ್ ಪೀನಲ್ ಕೋಡ್ ಸೆಕ್ಷನ್ ೧೨೪ರ ಪ್ರಕಾರ ಇವನ್ನು ಯಾವ ರೀತಿ ಎದುರಿಸಬೇಕೆಂಬುದು ನಮಗೆ ಗೊತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ರೀತಿ ಮಾತನಾಡಬಾರದು. ನಾವು ಏನು ಮಾಡಬೇಕೋ ಆ ರೀತಿ ಮಾಡುತ್ತೇವೆ ಎಂದು ಅವರು ಹೇಳುವುದು ಸರಿಯಲ್ಲ

ಥೇವರ್ಗನ್.— ಯಾವುದಾದರೂ ನಿರ್ದಿಷ್ಟವಾದ ಪ್ರಕರಣಗಳಿದ್ದರೆ ಹೇಳಿ. ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಟಿ. ಎಂ. ಮಂಜುನಾಥ್.— ಮಾನ್ಯ ಅಧ್ಯಕ್ಷರೆ, ಪ್ರೊ. ನಂಜುಂಡಸ್ವಾಮಿಯವರ ಬಗೆ ನನಗೆ ಪೂಜ್ಯ ಭಾವನೆ ಇದೆ. ಅವರು ರೈತರ ಮುಖಂಡರು. ಈ ದೇಶದ ಮಣ್ಣಿನ ಮಕ್ಕಳು ಎಂದು ನಾವು ಯಾರನ್ನು ಹೇಳುತ್ತೇವೆ ಅವರ ಮುಖಂಡರಾಗಿ ಇವರಿಗೆ ಎಷ್ಟು ಕಳಕಳಿ ರೈತರ ಬಗ್ಗೆ ಇದೆಯೋ ಅಷ್ಟೇ ಕಳಕಳಿ ನಮಗೂ ಇದೆ. ಆ ಜನರನ್ನು ಇಲ್ಲಿ ಈ ರೀತಿ ಪ್ರಚೋದನೆ ಮಾಡುವುದು ಯಾವ ವರ್ಗಕ್ಕೂ ಒಳ್ಳೆಯದಲ್ಲ. ಯಾವ ಅಧಿಕಾರಿ ಸರ್ಕಾರದ ಸುತ್ತೋಲೆಯನ್ನು ಉಲ್ಲಂಘನೆ ಮಾಡಿದ್ದಾನೆ, ಅವನ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಶಿಕ್ಷೆ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಮಾನ್ಯ ನಂಜುಂಡಸ್ವಾಮಿಯವರು ಈ ರೀತಿ ಮಾತನಾಡಿದರೆ ರಾಜ್ಯದ ಜನತೆಯ ಮನಸ್ಸಿನಲ್ಲಿ ಯಾವ ಭಾವನೆ ಉಂಟಾಗುತ್ತದೆಂಬುದನ್ನು ಅವರು ಯೋಚನೆ ಮಾಡಬೇಕು.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.— ನಾನು ಯಾವ ಕಾರಣಕ್ಕೂ ಅವರನ್ನು ಪ್ರಚೋದನೆ ಮಾಡುವುದಿಲ್ಲ. ಆದರೆ ರೈತವರ್ಗಕ್ಕೆ ಈ ರೀತಿ ತೊಂದರೆ ಕೊಡುವುದಿಲ್ಲವೆಂದು ಸರ್ಕಾರದ ಕಡೆಯಿಂದ ನಮಗೆ ಆಶ್ವಾಸನೆಯನ್ನು ತಾವು ಕೊಡಿಸಬೇಕು. ಈರೀತಿ ರೈತರಿಗೆ ಅಪಮಾನ ಮಾಡುವುದಿಲ್ಲ ಎಂದು ತಾವು ನಮಗೆ ಸರ್ಕಾರದಿಂದ ಆಶ್ವಾಸನೆ ಕೊಡಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ.— ಮಾನ್ಯ ಬಾಬಾಗೌಡರು ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಅದು ವಾಸ್ತವವಾಗಿ ನಡೆದಿದ್ದರೆ ಅಂಥ ಅಧಿಕಾರಿಯ ಬಗ್ಗೆ ಸರ್ಕಾರ ಕ್ರಮ ತೆಗೆದು ಕೊಳ್ಳುತ್ತದೆ. ಸಹಕಾರ ಸಂಘಗಳ ಸಾಲವಾಗಿರಲಿ, ನೀರಾವರಿ ಕಂದಾಯದ ಬಾಕಿ ಆಗಿರಲಿ, ಅಥವಾ ಇನ್ನಾವುದೇ ಸರ್ಕಾರದ ಸಾಲವಾಗಿರಲಿ, ರೈತನು ಸಕಾಲದಲ್ಲಿ ಕಟ್ಟಲಿಲ್ಲವೆಂಬ ಕಾರಣಕ್ಕೋಸ್ಕರ ಆ ರೈತರ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕ ಪ್ರವೃತ್ತಿ ಸರಿಯಲ್ಲ. ಇಂಥ ಪ್ರವೃತ್ತಿ ಹಿಂದೆ ಬ್ರಿಟಿಷರ ಕಾಲದಲ್ಲಿತ್ತು. ಆದರೆ ಈಗ ಅದು ಇರಬಾರದು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಸ್ವಾಮಿ, ಅನೇಕ ಕಡೆ ಈರೀತಿ ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಇಂಥ ನೂರಾರು ಉದಾಹರಣೆಗಳನ್ನು ನಾನು ತಮಗೆ ಕೊಡುತ್ತೇನೆ. ಬರಗಾಲಕ್ಕೆ ತುತ್ತಾದ ಪ್ರದೇಶಗಳಲ್ಲೂ ಕೂಡ ರೈತರು ಕಂದಾಯವನ್ನು ಕಟ್ಟಲಿಲ್ಲ ಎಂಬ ಕಾರಣದಿಂದ ಅವರ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಸರ್ಕಾರದವರು ತಿಳಿಸಿದ್ದಾರೆ.

ಶ್ರೀ ಕಾಗೋಡುತಿಮ್ಮಪ್ಪ.— ಆಕಸ್ಮಿಕವಾಗಿ ಎಲ್ಲಾದರೂ ಅಲ್ಲೊಂದು ಇಲ್ಲೊಂದು ಇಂಥಾದ್ದು ಆಗಿರಬಹುದು...

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.— ರೈತರ ಕಷ್ಟ ನಮಗೆ, ನಿಮಗೆ ಗೊತ್ತಿರುವುದರಿಂದ ನಿಮ್ಮ ಅಧಿಕಾರಿಗಳು ಆ ರೀತಿ ಮಾಡುವುದಕ್ಕೆ ಅವಕಾಶ ಕೊಡಬಾರದು. ಅಥವಾ ಒಬ್ಬರು ಸತ್ತಂತೆ ಮಾಡಿ ಇನ್ನೊಬ್ಬರು ಅತ್ತಂತೆ ಮಾಡೋಣ ಅಂತ ಇಬ್ಬರೂ ಸೇರಿ ಮಾತನಾಡಿಕೊಂಡು ಮಾಡಿದ್ದೀರೋ ಏನೋ ಗೊತ್ತಾಗುತ್ತಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.— ರೈತರಿಗೆ ಕಾಂಗ್ರೆಸ್ ಸರ್ಕಾರ ಮಾಡಿರುವಷ್ಟು ಅನುಕೂಲವನ್ನು ಬೇರೆ ಯಾವ ಸರ್ಕಾರವೂ ಮಾಡಿಲ್ಲ ಎಂಬುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು.

(ಗೊಂದಲ)

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.— ಇದು ನಮ್ಮ ದಿಕ್ಕನ್ನೇ ಬದಲಾವಣೆ ಮಾಡುವ ವಿಚಾರವೆಂದು ಕಾಣುತ್ತದೆ.

ಶ್ರೀ ಕಾಗೋಡುತಿಮ್ಮಪ್ಪ.— ಮಾನ್ಯ ಸಭಾಧ್ಯಕ್ಷಣಿಯವರೇ, ಮಾನ್ಯ ಜಾಲಪ್ಪನವರು ಸಹಕಾರ ಸಚಿವರಾಗಿದ್ದಂಥ ಕಾಲದಲ್ಲಿ ಕೋ ಆಪರೇಟೀವ್ ಆಕ್ಟ್‌ಗೆ ತಿದ್ದುಪಡಿ ತಂದು ರೈತರ ಭೂಮಿಯನ್ನು ಖರೀದಿ ಮಾಡುವುದಕ್ಕೆ ಅವಕಾಶವನ್ನು ತಾವು ಪಡೆಯಲಿಲ್ಲವೇ ? ಆಗ ಏತಕ್ಕೋಸ್ಕರ ಮಾನ್ಯ ಯಡಿಯೂರಪ್ಪನವರು ಸುಮ್ಮನೆ ಕುಳಿತುಕೊಂಡಿದ್ದರು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಅದನ್ನು ಪ್ರತಿಭಟಿಸಿ ನಾನು ಧರಣಿ ಕುಳಿತಿದ್ದೇನೆ, ಪ್ರತಿಭಟನೆ ಮಾಡಿದ್ದೇನೆ. ಬೇಕಾದರೆ ರೆಕಾರ್ಡನ್ನು ತೆಗೆಸಿ ನೋಡಿ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.— ರೈತರನ್ನು ಜೀತಪದ್ಧತಿಯಿಂದ ಮುಕ್ತರನ್ನಾಗಿ ಮಾಡಲು ನಮಗೆ ಸ್ವಾತಂತ್ರ್ಯ ಬಂದು ೪೦ ವರ್ಷಗಳೇ ಕಳೆದರೂ ಸಾಧ್ಯವಾಗಲಿಲ್ಲ. ಅಂಥ ಪರಿಸ್ಥಿತಿ ಇನ್ನೂವರೆಗೆ ಇದೆ. ರೈತರು ಧರ್ಮ ಮತ್ತು ಸಂಸ್ಕೃತಿಯನ್ನು ಬಿಟ್ಟು ಬದುಕಿದವರಲ್ಲ. ತಾನು ಬೆಳೆದದ್ದನ್ನು ಬೇರೆಯವರಿಗೂ ಊಟಕ್ಕೆ ಬಡಿಸಿಕೊಂಡು ಬಂದಿರತಕ್ಕಂಥ ಒಂದು ಸಂಸ್ಕೃತಿಯಲ್ಲಿ ಬೆಳೆದಂಥ ಜನ ರೈತರು ಅಂತಹವರ ಮೇಲೆ ಮೋಸ ಮಾಡಿಕೊಂಡೇ ಬಂದಿರುತ್ತೀರಿ. ಇನ್ನು ಮೇಲಾದರೂ ಈರೀತಿ ಮಾಡಬೇಡಿ. ಸರ್ಕಾರದ ಈ ಕೆಟ್ಟ ನೀತಿಯನ್ನು ಬದಲಾಯಿಸಿ ಎಂದು ಹೇಳುತ್ತೇನೆ.

ಶ್ರೀ ಟಿ.ಎಂ. ಮಂಜುನಾಥ್.— ನಮ್ಮ ಸರ್ಕಾರದವರು ೧೦೦ಕ್ಕೆ 20 ಭಾಗ ರೈತರಿಗೆ ಅನುಕೂಲ ಮಾಡಿಕೊಂಡೆ ಬಂದಿರುತ್ತಾರೆ. ಬೇರೆ ಯಾರು ಮಾಡಿದ್ದಾರೆ.

(ಗೊಂದಲ)

ಶ್ರೀ ಬನ್ನಿಕೋಡ್‌ಬಸಪ್ಪ ಹನುಮಂತಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ಬಾಬಾಗೌಡ ಪಾಟೀಲ್‌ರವರು ಹೇಳುತ್ತಿರುವ ಅನೇಕ ವಿಚಾರಗಳನ್ನು ಬದಲಿಸುವ ರೀತಿಯಲ್ಲಿ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಅವರಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.— ನಾವು ಸಾಲವನ್ನು ಸೂಟಿಬಿಡಿ ಎಂದು ಕೇಳುತ್ತಿಲ್ಲ. ನಮ್ಮ ಸಾಲಕ್ಕೆ ನಾವು ಹೊಣೆಗಾರರಿದ್ದೇವೆ, ಕಳೆದ ೪೦ ವರ್ಷಗಳಕಾಲ ಅಧಿಕಾರದಲ್ಲಿದ್ದ ತಾವು ರೈತರಿಗೆ ಮೋಸ ಮಾಡಿಕೊಂಡೆ ಬಂದಿರುತ್ತೀರಿ. ಆ ರೀತಿ ಮಾಡದೆ ರೈತರಿಗೆ ಅವರ ಶ್ರಮಕ್ಕೆ ಪ್ರತಿಫಲ ವನ್ನು ಕೊಡಿ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಸದಸ್ಯರ ಮನಸ್ಸನ್ನು ನಾನು ಚುರುಕುಗೊಳಿಸುತ್ತೇನೆ. ಸರ್ಕಾರದವರು ರೈತರಿಗೆ ಮೋಸ ಮಾಡಿದ್ದಾರೆ, ಮೋಸ ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿಬಿಟ್ಟರು, ಹಾಗೆಯೇ ಮಾನ್ಯ ಪ್ರೊಫೇಸರ್ ನಂಜುಂಡಸ್ವಾಮಿಯವರು ಹೇಳಿದರು. ಯಾರು ಮೋಸ ಮಾಡಿದರು ಎಂದು ನಾನು ಅವರಿಗೆ ಕೇಳುತ್ತೇನೆ ದಯವಿಟ್ಟು ನಿಮ್ಮ ಬುದ್ಧಿಯನ್ನು ತಿರುಗಿಸಿ ಮೋಸ ಮಾಡುವವರ ಕಡೆಗೆ ಗಮನ ಕೊಡಿ. ಅದನ್ನು ತಡೆಯಲಿಕ್ಕೆ ಪ್ರಯತ್ನವನ್ನು ತಾವು ಪಟ್ಟರೆ ಯಾರು ಸಹ ರೈತರಿಗೆ ಮೋಸ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.— ರೈತರ ಸಾಲವನ್ನು ಸೂಟಿಬಿಡುತ್ತೇವೆಂದು ಹೇಳಿದರು ನಂತರ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಪಕ್ಷದ ಪ್ರಣಾಲಿಕೆಯಲ್ಲಿ ಆ ರೀತಿ ಬರೆದಿಲ್ಲ ವೆಂದು ಹೇಳಿದರು. ಆದರೆ ನಾವು ಪ್ರಣಾಲಿಕೆಯನ್ನು ನೋಡುವ ಜನರಲ್ಲ. ನವೆಂಬರ್ ೧೩ನೇ ತಾರೀಖಿನ ದಿವಸದ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಸಾಲ ಸೂಟಿ ಮಾಡುತ್ತೇವೆಂದು ಹೇಳಿರುವ ವಿಚಾರ ಬಂದಿದೆ. ಇವತ್ತು ಬೇಕಾದರೆ ತಾವು ಅವನ್ನು ತೆಗೆದು ನೋಡಬಹುದು ಬಹುತೇಕ ಕಾಂಗ್ರೆಸ್ ಪಕ್ಷದ ಸದಸ್ಯರು ಕೂಡ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯನ್ನು ತೆಗೆದು ನೋಡಿರಲಿಕ್ಕಿಲ್ಲ. ಸಾಲ ಸೂಟಿ ಬಿಡಿಸುತ್ತಿದ್ದೇವೆ ಎಂಬ ಮಾತನ್ನು ಮಾತ್ರ ಈಗ ಹೇಳುತ್ತಿದ್ದಾರೆ. ಅಷ್ಟು ಮಾತ್ರ ಸತ್ಯ. ಆದರೆ ಈಗ ತಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಈ ರೀತಿ ಬರೆದಿಲ್ಲ, ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತೇವೆಂಬ ಮಾತನ್ನು ನುಣಿಚಿಕೊಂಡು ಮಾತನಾಡುತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಪತ್ರಿಕೆಗಳಲ್ಲಿ ಆರೀತಿ ಪ್ರಕಟಣೆ ಮಾಡಿದ ಮಾರನೆಯ ದಿವಸವೇ ಮತ್ತೊಂದು ಹೇಳಿಕೆಯನ್ನು ಕೊಡಬೇಕಾಗಿತ್ತು. ಏನೆಂದರೆ, ಹತ್ತುಸಾವಿರ ರೂಪಾಯಿಗಳ ಒಳಗಿರುವಂತಹ ಸಾಲವನ್ನು ಸೂಟ್ ಮಾಡುತ್ತೇವೆ ಎನ್ನುವ ಅಂಶವನ್ನು ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಬರೆದಿಲ್ಲ, ಆದರೆ ಪತ್ರಿಕೆಯವರು ಆರೀತಿ ತಪ್ಪು ಪ್ರಿಂಟ್ ಮಾಡಿರುತ್ತಾರೆ ಎನ್ನುವ ವಿಚಾರವನ್ನು ಹೇಳಬೇಕಾಗಿತ್ತು. ಅದು ಬಿಟ್ಟುಬಿಟ್ಟು ಸರ್ಕಾರ ಸ್ಥಾಪನೆ ಯಾದ ಮೂರು ತಿಂಗಳ ನಂತರ ನಾವು ಆರೀತಿ ಹೇಳಲಿಲ್ಲ, ಬೇಕಾದರೆ ಪ್ರಣಾಳಿಕೆಯನ್ನು ನೋಡಲಿ ಎಂದು ಹೇಳಿದರೆ ಹೇಗೆ ? ಪತ್ರಿಕೆಗಳು ಜನಸಾಮಾನ್ಯರ ಒಂದು ಮಹತ್ವವಾದ ಅಂಗ. ಪತ್ರಿಕೆ ಗಳನ್ನು ಓದಿಕೊಂಡು ಅದನ್ನು ಒಪ್ಪತಕ್ಕಂಥ ಜನರು ಇರುತ್ತಾರೆ. ಆದರೆ ಇದು ಏನು ಅಂಥ ದೊಡ್ಡ ಮೊತ್ತ ಅಲ್ಲ. ೩೬೦ ಕೋಟಿ ಸಾಲ ಸೂಟ್ ಬಿಡುವುದು ಏನಿದೆ, ಅದರ ಬಗ್ಗೆ ಹಗುರವಾಗಿ ಮಾತನಾಡಲಿಕ್ಕೆ ಹೋಗಬೇಡಿ. ಇದು ಏನು ಜಂಜಬಿಕಾಸಲ್ಲ ಎನ್ನತಕ್ಕಂಥದರ ಬಗ್ಗೆ ಮಾತನಾಡಿದರು ಹಾಗಿದ್ದರೆ ಪತ್ರಿಕೆಗಳಲ್ಲಿ ಬರೆದಿರುವವರು ತಪ್ಪು ಪ್ರಿಂಟ್ ಮಾಡಿ ಬರೆಯಲು ಸಾಧ್ಯವೇ ? ಜನ ಸಾಮಾನ್ಯರು ನೋಡುವುದು ಪತ್ರಿಕೆಗಳನ್ನು ಪತ್ರಿಕೆಗಳನ್ನೇ ನಂಬಿಕೊಂಡಿರುವಜನ ಅಂದರೆ ರೈತರು; ಇದು ೩೬೦ ಕೋಟಿ ಏನು ಅಂಥ ದೊಡ್ಡ ಮೊತ್ತವಲ್ಲ. ಏಕೆಂದರೆ ಕೆಲವು ಕಾರ್ಖಾನೆಗಳಿಗೆ ಸೂಟು ಬಿಟ್ಟಿರುವುದನ್ನು ನೋಡಿದರೆ ಇದು ಜುಜುಂಬಿ

೧-೩೦ ಪಿ. ಎಂ.

ಕೇಂದ್ರ ಸರ್ಕಾರದವರು ೪೨ ಸಾವಿರ ಕೋಟಿ ರೂಪಾಯಿಗಳನ್ನು ಇಲ್ಲಿಯತನಕ ಕಾರ್ಖಾನೆಗಳಿಗೆ ಸಿಕ್ ಇಂಡಸ್ಟ್ರೀಸ್ ಎಂದು ಹೇಳಿ ಸೂಟ್ ಬಿಟ್ಟರು. ಆದರೆ ಈಗ ಈ ೧೩ ಸಾವಿರ ಕೋಟಿ ರೂಪಾಯಿ ಭಾರೀ ಮೊತ್ತ ಅನ್ನುತ್ತೀರಿ, ೪೦ ಸಾವಿರ ಕೋಟಿ ರೂಪಾಯಿ ಸೂಟ್ ಬಿಡುವಾಗ ಅದು ನಿಮಗೆ ಭಾರೀ ಮೊತ್ತ ಅನ್ನಿಸಲಿಲ್ಲವೇ ? ಹಿಂದೆ ಸರ್ಕಾರ ನಡೆಸಿದವರು ೭೨ ಕೋಟಿ ರೂಪಾಯಿ ಪಂಚತಾರಾ ಹೋಟೆಲುಗಳಿಂದ ಬಾಕಿ ಬರಬೇಕಾದುದನ್ನು ಸೂಟ್ ಬಿಟ್ಟರು. ಇದು ನಾಲ್ಕೈದು ಜನರು ಸೇರಿ ನಡೆಸುವ ಹೋಟೆಲ್‌ಗಳು. ಇವತ್ತು ೩ ಕೋಟಿಯಷ್ಟು ಇರುವ ರೈತರ ಸಾಲ ೩೬೦ ಕೋಟಿ ರೂಪಾಯಿ ಇದೆ. ರೈತರ ಕಬ್ಬಿನ ಮೊಲಾಸಿಸ್‌ಗೆ ಒಂದು ಪೈಸೆಯನ್ನು ಸರ್ಕಾರ ಕೊಡುವುದಿಲ್ಲ. ಆ ಮೊಲಾಸಿಸ್‌ನಿಂದ ೪೦೦ ಕೋಟಿ ರೂಪಾಯಿ ಆದಾಯ ಪ್ರತಿವರ್ಷ ಬರುವಾಗ ಈ ೩೬೦ ಕೋಟಿ ರೂಪಾಯಿಗಳನ್ನು ಸೂಟ್ ಬಿಡುವುದು ಒಳ್ಳೆಯದೆಂದು ತಿಳಿದು ಕೊಂಡಿಲ್ಲ. ನಮ್ಮ ಕಡೆಯಿಂದ ನಿಮಗೆ ಪುಕ್ಕಟೆ ಕೋಟ್ಯಾಂತರ ರೂಪಾಯಿ ಆದಾಯ ಬರುತ್ತಿರುವಾಗ ಅದರಲ್ಲಿ ೩೬೦ ಕೋಟಿ ರೂಪಾಯಿಗಳನ್ನು ವಜಾ ಮಾಡಿ ಎಂದು ಕೇಳಿಕೊಳ್ಳುತ್ತೇನೆ, ಅದೇನು ನಿಮಗೆ ದೊಡ್ಡ ಹೊರೆ ಆಗುವುದಿಲ್ಲ. ಆದರೆ ಈಗ ಸರ್ಕಾರಿ ಖರ್ಚು ವಿಪರೀತವಾಗಿರುವ ಕಾರಣ ನೌಕರರ ಪಗಾರಕ್ಕೆ ಬಹಳಷ್ಟು ಹೋಗುತ್ತಿರುವ ಕಾರಣದಿಂದ ಆ ತರಹ ಮಾಡುವುದಕ್ಕಾಗುವುದಿಲ್ಲ ವೆಂದರೂ ಕೊನೇ ಪಕ್ಷ ರೈತರಿಗೆ ಬಡ್ಡಿಯನ್ನಾದರೂ ಸೂಟ್ ಬಿಡುತ್ತೇವೆಂದು ಹೇಳುವುದಕ್ಕೆ ಇವರಿಗೆ ಆಗಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ರೈತರ ಬಗ್ಗೆ ಪ್ರತ್ಯೇಕವಾಗಿ ಇಲ್ಲಿ ಚರ್ಚೆಗೆ ಬರುತ್ತದೆ. ಆಗ ನೀವು ವಿವರವಾಗಿ ಮಾತನಾಡುವುದು ಒಳ್ಳೆಯದು, ತಾವು ಮಾತನಾಡಬೇಕು, ನಮಗೂ ಕೇಳುವ ಆಸೆ ಇದೆ. ಈ ಬಗ್ಗೆ ಪ್ರತ್ಯೇಕ ಚರ್ಚೆಗೆ ತೀರ್ಮಾನವಾಗಿದೆ. ಆ ಸಂದರ್ಭದಲ್ಲಿ ಇದನ್ನೆಲ್ಲ ನೀವು ವಿವರವಾಗಿ ಹೇಳಿದರೆ ಸಭೆಗೆ ಅನುಕೂಲವಾಗಬಹುದೆಂದು ನನ್ನ ಸಲಹೆ. ತಾವು ವಿಚಾರ ಮಾಡಿ ನೋಡಿ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಮಾನ್ಯ ಸದಸ್ಯರು ಪ್ರತ್ಯೇಕವಾದ ಚರ್ಚೆಯಲ್ಲಿ ವಿವರವಾಗಿ ರೈತರ ಬಗ್ಗೆ ಮಾತನಾಡೋಣವೆಂದು ಹೇಳುತ್ತಿದ್ದಾರೆ. ಅಂತು ರೈತರಿಗೆ ಈ ಬಡ್ಜೆಟ್ಟಿನಲ್ಲಿ ಯಾವ ಆಸೆಯೂ ಉಳಿದಿಲ್ಲ. ಬಹುತೇಕ ರೈತರು ಇದನ್ನು ಮಾನ್ಯಮಾಡಲಿಕ್ಕಿಲ್ಲ. ಕಬ್ಬಿನ ಹೊಸ ಟ್ಯಾಕ್ಸನ್ನು ನಾನು ವಿರೋಧಿಸಿ ಈಗ ಏನು ಬಾಕಿ ವಸೂಲಿಗಾಗಿ ಹೊಸ ಪದ್ಧತಿಯನ್ನು ಅನುಸರಿಸಿ ವಸೂಲ್ಮಾಡುವುದನ್ನು ವಿರೋಧಿಸಿ ಕರ್ನಾಟಕ ರಾಜ್ಯದ ಎಲ್ಲರೈತರು ಪ್ರತಿಭಟನೆ ಮಾಡಬಹುದು. ಅಂಥ ಪ್ರತಿಭಟನೆ ನಡೆಯದಂತೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಬೆಳಗಾಂ ಜಿಲ್ಲೆಯಲ್ಲಿ ೬ ಸಕ್ಕರೆ ಕಾರ್ಖಾನೆಗಳಿವೆ. ಇವತ್ತಿನ ದಿವಸ ೪೦೦ ಕೋಟಿ ರೂಪಾಯಿ ಮೊಲಾಸಿಸ್‌ನಿಂದ ಸರ್ಕಾರಕ್ಕೆ ಆದಾಯ ಬರುತ್ತಿದೆ ಎಂದು ಕೇಳಿದ್ದೇನೆ. ಇದರೊಳಗೆ ಮೂರನೇ ಒಂದು ಭಾಗ ಬೆಳಗಾಂ ಜಿಲ್ಲೆಯದು. ಈ ರೀತಿ ನೂರಾರು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಆದರೆ ಕಬ್ಬು ಬೆಳೆಯುವ ಪ್ರದೇಶದಲ್ಲಿ ಒಂದು ರಸ್ತೆಗಳು ಸಹ ಸರಿಯಾಗಿಲ್ಲ. ಚಕ್ಕಡಿ ಕಟ್ಟಿಕೊಂಡು ಹೋದರೆ ಅದರ ಹಳಿಯೇ ಹೋಗಿಬಿಡುತ್ತದೆ, ಟ್ರ್ಯಾಕ್ಟರ್ ತೆಗೆದುಕೊಂಡು ಹೋದರೆ ಟೈರ್ ಹಾಳಾಗಿ ಹೋಗುತ್ತದೆ, ಇಂಥ ಪರಿಸ್ಥಿತಿ ಇರುವಾಗ ನೂರಾರು ಕೋಟಿ ರೂಪಾಯಿ ಕೇವಲ ಕಬ್ಬಿನಿಂದ ಸರ್ಕಾರಕ್ಕೆ ಆದಾಯ ಬರುವಾಗ ಕೇವಲ ೧೧ ಕೋಟಿ ರೂಪಾಯಿಗಳನ್ನು ವಿಶೇಷವಾಗಿ ಕೊಟ್ಟು ಕಬ್ಬು ಬೆಳೆಯುವ ಪ್ರದೇಶದಲ್ಲಿ ರಸ್ತೆ ರಿಪೇರಿ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕಬ್ಬು ಬೆಳೆಯುವ ರೈತರಿಗೆ ನೀರಾವರಿಯ ಅವಶ್ಯಕತೆ ಬಹಳವಾಗಿರುತ್ತದೆ. ಸಣ್ಣ ಸಣ್ಣ ನೀರಾವರಿ ಯೋಜನೆಗಳಾದ ಹಿಡ್‌ಕಲ್ ಜಲಾಶಯದ ಮೇಲ್ಮಟ್ಟದ ಕಾಲುವೆ. ಮಾರ್ಕಂಡೇಯ ಯೋಜನೆ, ಹರಿನಾಲಾ ಯೋಜನೆ ಹಾಗೂ ಮತ್ತಿತರ ಸಣ್ಣ ಸಣ್ಣ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೆಂದು ಹೇಳುತ್ತೇನೆ. ಅದರ ಜೊತೆಗೆ ನಿನ್ನೆ ಕೆ. ಹೆಚ್. ಪಾಟೀಲರು ಹೇಳಿದ ಹಾಗೆ ಸಕ್ಕರೆ ಕಾರ್ಖಾನೆಗಳು ಒಳ್ಳೆಯ ರೀತಿಯಲ್ಲಿ ನಡೆದರೆ ರೈತರಿಗೆ ಲಾಭ. ಆದರೆ ರೈತರ ಬೇಡಿಕೆಗಳನ್ನು ನಡೆಸಿಕೊಡುತ್ತೇವೆಂದು ಹೇಳುವುದಕ್ಕೆ ಸರ್ಕಾರಕ್ಕೆ ಮನಸ್ಸು ಇಲ್ಲ. ಮಲಪ್ರಭಾ ಸಕ್ಕರೆ ಕಾರ್ಖಾನೆಯನ್ನು ಒಂದು ವರ್ಷ ಕಾಲ ರೈತರು ತಮ್ಮ ಕೈಗೆ ತೆಗೆದುಕೊಂಡು ಒಳ್ಳೆಯ ಲಾಭ ಮಾಡಿಕೊಟ್ಟರು ಒಂದೇ ವರ್ಷದಲ್ಲಿ ಎಲ್ಲ ಖರ್ಚುಗಳನ್ನು ಕಳೆದು ೩ ಕೋಟಿ ರೂಪಾಯಿಗಳನ್ನು ಬ್ಯಾಂಕಿನಲ್ಲಿಟ್ಟರು. ಇವತ್ತಿನ ದಿವಸ ಆ ಕಾರ್ಖಾನೆಯನ್ನು ಸೂಪರ್‌ಸೀಡ್ ಮಾಡಿ ಅಧಿಕಾರಿಗಳ ಕೈಗೆ ಕೊಟ್ಟು ಮತ್ತೆ ಹಾಳು ಮಾಡುವ ವಿಚಾರ ನೋಡಿದರೆ ಸಹಕಾರಿ ರಂಗದಲ್ಲಿ ಉತ್ತಮ ರೀತಿಯಲ್ಲಿ ಕೆಲಸ ಮಾಡುವವರಿಗೆ ಸರ್ಕಾರ ಉತ್ತಮ

ರೀತಿಯಲ್ಲಿ ಪ್ರೋತ್ಸಾಹ ಕೊಡುವುದಿಲ್ಲವೆಂದು ನನ್ನ ನಂಬಿಕೆ. ರಾಜ್ಯಪಾಲರ ಆಡಳಿತ ಇದ್ದಾಗ ಆಡಳಿತಾಧಿಕಾರಿಗಳ ಕೈಗೆ ಕೊಟ್ಟರು. ಈಗಲೂ ರೈತರ ಕಡೆ ಕೊಡಿ. ಕೂಡಲೇ ಚುನಾವಣೆ ಮಾಡಿ. ರೈತರಿಗೆ ಅನುಕೂಲ ಮಾಡಿಕೊಡಿ.

ಛೇರ್ಮನ್.—ಬಾಬಾಗೌಡರು ಇನ್ನು ಎರಡು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್,—ಆಮೇಲೆ ಸ್ಥಳೀಯ ಸಮಸ್ಯೆಗಳು ಎಂದರೆ ಧಾರವಾಡ ತಾಲ್ಲೂಕಿನ ಸೈರಾಪುರ ಗ್ರಾಮದ ರೈತರು ದೊಡ್ಡ ಮನಸ್ಸು ಮಾಡಿ ಅಗ್ರಿಕಲ್ಚರ್ ಕಾಲೇಜಿಗೆ ಸುಮಾರು ೭೫–೮೦ ದುಮಾಷಾ ಭೂಮಿಯನ್ನು ಈಗಾಗಲೇ ಕೊಟ್ಟಿದ್ದಾರೆ. ಇನ್ನು ೨೦ ಪರ್ಸೆಂಟ್ ಉಳಿದುಕೊಂಡಿದೆ. ಅದನ್ನು ಕೂಡ ಸ್ವಾಧೀನಪಡಿಸಿಕೊಂಡು ಕಾಲೇಜಿಗೆ ಕೊಡುವ ಪ್ರಯತ್ನವನ್ನು ಸರ್ಕಾರದವರು ಮಾಡುತ್ತಿದ್ದಾರೆ ಅದಕ್ಕೆ ಹೊಂದಿಕೊಂಡಂತೆ ಈಗಾಗಲೇ ಟೆಲ್ಕೊ ಕಂಪನಿಗೆ ಎರಡು ಸಾವಿರ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಆದರೆ ಆ ಕಂಪನಿ ಪ್ರಾರಂಭವಾಗಲಿಲ್ಲ. ಆದ್ದರಿಂದ ರೈತರ ಭೂಮಿ ಬಿಟ್ಟು ಆ ಭೂಮಿಯನ್ನು ಅಗ್ರಿಕಲ್ಚರ್ ಕಾಲೇಜಿಗೆ ಕೊಟ್ಟರೆ ಏನು ತಪ್ಪು ? ಆ ಕಾಲೇಜಿನವರು ರೈತರ ಭೂಮಿ ಉತ್ತಮ ಮಟ್ಟದ ಭೂಮಿ, ಆ ಭೂಮಿ ಅಷ್ಟು ಉತ್ತಮ ಮಟ್ಟದ್ದಲ್ಲ ಎಂದು ಹೇಳುತ್ತಾರೆ. ಇಡೀ ಊರಿನ ರೈತರಿಗೆ ಉಳಿದಿರುವುದು ಇನ್ನು ೧೫೦ ಎಕರೆ ಜಮೀನು ಮಾತ್ರ ಅದನ್ನು ಏತಕ್ಕೆ ತೆಗೆದುಕೊಳ್ಳಬೇಕು ? ಟೆಲ್ಕೊ ಕಂಪನಿಯ ಜಮೀನನ್ನು ಕೊಟ್ಟರೆ ಏನು ತಪ್ಪು ? ಅದು ಸರ್ಕಾರದ ವಶದಲ್ಲಿಯೇ ಇದೆ. ನಾವು ಈ ಬಗ್ಗೆ ಡೆಪ್ಯುಟಿ ಕಮಿಷನರ್‌ಗೆ ಹೇಳಿದಾಗ ಸರ್ಕಾರಕ್ಕೆ ಬರೆಯುತ್ತೇವೆ, ಅಕ್ವಿಸಿಷನ್ ಸ್ಟಾಪ್ ಮಾಡಿದ್ದೇವೆ ಎಂದು ಲೆಟರ್ ಬಂತು ಆದರೂ ಈಗ ರೈತರನ್ನು ಹೊರಗೆ ಹಾಕುವ ಪ್ರಯತ್ನ ಮಾಡುತ್ತಿದ್ದಾರೆ, ಇದು ನಡೆಯಬಾರದು. ಸರ್ಕಾರಕ್ಕೆ. ಜನರನ್ನು ಬಿಕಾರಿ ಮಾಡುವ ವಿಚಾರ ಇರಬಾರದು. ಜನರನ್ನು ಬದುಕಿಸುವ ಪ್ರಯತ್ನ ಮಾಡಬೇಕು, ಶ್ರೀಮಂತರ ಬಗ್ಗೆ ಏನಾದರೂ ಮಾಡಿ, ಆದರೆ ಬಡ ರೈತರ ಬಗ್ಗೆ ತೊಂದರೆ ಕೊಡುವುದು ಬೇಡ, ಟಾಲ್‌ಸ್ಟಾಯ್ ಒಂದು ವಾಕ್ಯ ಬರೆದಿದ್ದಾನೆ, In "Anna Karennina" he says, "All happy families resemble one another but each unhappy family is unhappy in its special way."

ಶ್ರೀ ಬಿ. ಬಸವಲಿಂಗಪ್ಪ.—ನಮಗೆ ತಿಳಿಯಬೇಕಲ್ಲ, ಇನ್ನೊಂದು ಸಾರಿ ಹೇಳಿ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—"All happy families resemble one another but each unhappy family is unhappy in its special way." ಈ ಅನ್‌ಹ್ಯಾಪಿ ಫ್ಯಾಮಿಲಿಯನ್ನು ಬೀದಿಗೆ ಎಳೆಯತಕ್ಕ ಪ್ರಯತ್ನ ಸರ್ಕಾರದಿಂದ ನಡೆದಿದೆ. ಅದು ಬಂದ್ ಆಗಬೇಕೆಂದು ಮತ್ತೊಮ್ಮೆ ಸರ್ಕಾರವನ್ನು ಕೇಳಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಅಧ್ಯಕ್ಷರೇ, ಬಾಬಾಗೌಡರು ಬಹಳ ಶಕ್ತಿಯುತವಾದ ರೈತರ ಕೆಲಸಗಾರರು. ರೈತರ ನಾಯಕರಾಗಿದ್ದಾರೆ. ಅವರು ಈ ಬಜೆಟ್ಟನ್ನು ಯಾವ ರೀತಿ ಟೀಕೆ ಮಾಡಬೇಕೋ ಆ ರೀತಿ ಮಾಡಿದ್ದರೆ ಸಂತೋಷವಾಗುತ್ತಿತ್ತು. ಅದು ಬಿಟ್ಟು ಬರೀ ರೈತರ ಬಗ್ಗೆ ಹೇಳಿದ್ದಾರೆ. ರೈತರು ಬಡವರು ಇದ್ದೇ ಇದ್ದಾರೆ. Happy people are also there. You don't give us guidance for solving problems of unequals. We have to create a society of equals. We must remove unhappy people. What is your suggestion to the Government?

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ. - ವಿವರಗಳನ್ನು ಕೊಟ್ಟರೆ ವಿವರಗಳು ಬೇಡ ಎಂದು ಹೇಳುತ್ತೀರಿ. ಆ ಮಾತನ್ನು ಹೇಳಿದರೆ ವಿವರ ಕೊಡಿ ಎಂದು ಹೇಳುತ್ತೀರಿ. ತಮ್ಮ ಇಲಾಖೆಯ ವಿಷಯವನ್ನೂ ಮಾತನಾಡಬೇಕಾಗಿತ್ತು. ವಿಕೇಂದ್ರೀಕರಣ ವ್ಯವಸ್ಥೆ ಬಗ್ಗೆ ಮಾತನಾಡಬೇಕಾಗಿತ್ತು. ಮಂಡಲ ಪಂಚಾಯತ್‌ಗಳು ಜಿಲ್ಲಾ ಪರಿಷತ್‌ಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂಬುದನ್ನು ನಾವು ಅನುಭವಿಸಿದ್ದೇವೆ. ಈಗಾಗಲೇ ತಾಲ್ಲೂಕು ಪಂಚಾಯತ್ ಅಧ್ಯಕ್ಷರಾಗಿ ಕೆಲಸ ಮಾಡಿರುವ ಶಾಸಕರಿಗೆ ಅದು ಗೊತ್ತಿದೆ.

ಛೇರ್ಮನ್.— ಆ ವಿಷಯವನ್ನು ವಿಶೇಷವಾದ ಚರ್ಚೆಯಾಗಿ ತೆಗೆದುಕೊಳ್ಳುವುದು ಒಳ್ಳೆಯದು

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.— ಅದು ಬಜೆಟ್‌ನಲ್ಲಿದೆ. ತಾಲ್ಲೂಕು ಪಂಚಾಯತಿಯಲ್ಲಿ ನಿರ್ಣಯವಾದಂಥ ಒಂದು ತೀರ್ಮಾನವೂ ಕಾರ್ಯಗತವಾಗಿಲ್ಲ. ಏಕೆಂದರೆ ಅದಕ್ಕೆ ಅಧಿಕಾರ ಇಲ್ಲ. ಜಿಲ್ಲಾ ಪರಿಷತ್ತಿಗೆ ಹೋದರೆ ೧೫ ನಿಮಿಷದಲ್ಲಿ ಜಿಲ್ಲಾ ಪರಿಷತ್ ಮೀಟಿಂಗ್ ಮುಗಿದು ಹೋಗುತ್ತದೆ. ಯಾವ ಸದಸ್ಯರು ತಮ್ಮ ಕುಂದು ಕೊರತೆಗಳನ್ನು ಅನಿಸಿಕೆಗಳನ್ನು ಜನರ ಸಮಸ್ಯೆಗಳನ್ನು ಹೇಳುವುದಕ್ಕೆ ಅವಕಾಶ ಇಲ್ಲ. ಇದು ಎಂಥ ವಿಕೇಂದ್ರೀಕರಣವೋ ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಜೀವರಾಜ ಆಳ್ವ ಅವರು ಇದೊಂದು ಅದ್ಭುತ ಪ್ರಯೋಗ ಎಂದು ಹೇಳುತ್ತಿದ್ದರು

ಶ್ರೀ ವಿನಯಕುಮಾರ್ ಸೊರ್ಕೆ.—ಬೆಳಗಾಂ ಜಿಲ್ಲೆಯಲ್ಲಿ ಯಾವ ಪಕ್ಷದ ಜಿಲ್ಲಾ ಪರಿಷತ್ತಿದೆ?

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.— ಜನತಾ ದಳದ್ದಿದೆ. ಆ ವಿಚಾರ ಬೇರೆ, ಏಕೆಂದರೆ ನಾನು ಇಲ್ಲಿ ಪಕ್ಷದ ವಿಚಾರ ಮಾತನಾಡುವುದಿಲ್ಲ.

ಚೇರ್‌ಮನ್.— ಈಗ ಮಾನ್ಯ ಆಳ್ವರವರು ಮಾತನಾಡಬಹುದು.

† ಡಾ. ಜೀವರಾಜ್ವ ಆಳ್ವ (ಜಯಮಹಲ್).— ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ರಾಜ್ಯದ ನೂತನ ಅರ್ಥ ಮಂತ್ರಿಗಳ ಹೊಸ ಬಡ್ಜೆಟ್‌ನ್ನು ನಾವು ಬಹಳ ಕುತೂಹಲದಿಂದ ನಿರೀಕ್ಷೆ ಮಾಡುತ್ತಿದ್ದೆವು. ಈ ಕುತೂಹಲಕ್ಕೆ ಮುಖ್ಯ ಕಾರಣ, ಇವರಿಗಿರುವ ಅಗಾಧ ಅನುಭವ, ಹಿಂದೆ ಇವರು ಮಂತ್ರಿ ಆದಂತಹ ಅನುಭವ, ಶಾಸನ ಸಭೆಯ ಸದಸ್ಯರಾಗಿ ಅನುಭವ, ಪಾರ್ಲಿಮೆಂಟ್ ಸದಸ್ಯರಾಗಿ ಅನುಭವ, ಜೊತೆಗೆ ನಮ್ಮಲ್ಲಿ ಹಲವು ಜನರ ತರಹ ಅವರೇನೂ ಕನಸುಗಾರರಲ್ಲ. He is a practical man ಈ ಬಡ್ಜೆಟ್ ಭಾಷಣದ ಪ್ರಿಯಾಂಬಲ್‌ನಲ್ಲಿ ಹೇಳಿರುವುದನ್ನು ನೋಡಿ ನಮಗೂ ಬಹಳ ಸಂತೋಷ ಆಯಿತು. ಅವರು

> "In the wake of 'Glasnost' and 'Perestroika' tidal waves of public will are sweeping many parts of the world, transforming their political and economic systems almost overnight."

ಎಂದು ಒಂದು ಮಾತನ್ನು ಸೂಚ್ಯವಾಗಿ ಹೇಳಿದರು, ಆ ಮಾತು ಮುಗಿದ ತಕ್ಷಣವೇ ಕಾಂಟ್ರಡಿಕ್ಷನ್ ಶುರು ಆಯಿತು. ಒಂದು ಕಡೆ ಇದರ ಸೂತ್ರದಾರರಾದ ಗೂರ್ಬಚೇವ್‌ರವರ ಹೆಸರು ಹೇಳಲಿಲ್ಲ. ಅದಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ಇರುವಂತಹ Galbraithರವರನ್ನು he quotes and subsequently...

ಇದನ್ನು ತಾವು ಏನೂ ಅನ್ಯಥಾ ಭಾವಿಸಬಾರದು. ನಾವು ಒಂದು ಪ್ರಜಾಪ್ರಭುತ್ವ ಪ್ರತಿನಿಧಿಗಳಾಗಿ ಕೆಲಸ ಮಾಡುತ್ತಿದ್ದೇವೆ. ನಮ್ಮ ಜಾಗಗಳು ಅದಲುಬದಲಾಗಿವೆ. ನಮ್ಮ ರಾಜಕೀಯ ಸಿದ್ಧಾಂತಗಳು ಬದಲಾಗಿವೆ. ಆದರೆ ಸಾಮಾಜಿಕ ಭಾವನೆಗಳು ಯಾವುದೂ ಬದಲು ಆಗಿಲ್ಲ. ಸಾಮಾಜಿಕ ಚಿಂತನೆಗಳನ್ನು ನಾವು ಇಟ್ಟುಕೊಂಡಿದ್ದೇವೆಂದು ನಾವು ಭಾವಿಸುತ್ತೇವೆ. ಸ್ವಾತಂತ್ರ್ಯಾನಂತರ ೧೯೬೯ರ ವರೆಗೆ ಈ ಅವಿಭಾಜ್ಯ ಕಾಂಗ್ರೆಸ್ ಎರಡು ಹೋಳು ಆಗುವವರೆಗೆ ಈ ಭಾರತ ದೇಶದ ಸುಮಾರು ಶೇಕಡ ೮೦ ಜನ ರೈತರ ಬಗ್ಗೆ ದೀನದಲಿತರ ಬಗ್ಗೆ ಯಾವುದೇ ಚಿಂತನೆಯನ್ನು ನಾವು ಮಾಡಲಿಲ್ಲ. ೧೯೬೯ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಜಾರಿಗೆ ತಂದ ೨೦ ಅಂಶಗಳ ಕಾರ್ಯಕ್ರಮವನ್ನು ನಾವೂ ಕೂಡಾ ಹಳದಿ ಕಣ್ಣಿನಲ್ಲೇ ನೋಡಿದೆವು. We looked at it as political expediency and because of the political compulsions the so called 20 Point Economic Programme was introduced. ನಂತರ ಸ್ವಲ್ಪ ಆಲೋಚನೆ ಮಾಡಿದಾಗ ಏನೋ ಒಂದು ಕಾರಣಕ್ಕೆ ಗರೀಬೀ ಹಠಾವೋ ಎಂದು ಹೇಳಿಕೊಂಡು ಏನೋ ಒಂದು ಕಾರಣದಲ್ಲಿ ಕಾಂಗ್ರೆಸ್ಸಿಗರು ಪುನಃ ಅಧಿಕಾರಕ್ಕೆ ಬಂದರೂ ಕೂಡ ಈ ನಮ್ಮ ಸಮಾಜದಲ್ಲಿ ಸುಮಾರು ೩೦ ವರ್ಷಗಳ ಕಾಲ ಯಾವುದೇ ಸ್ವಾತಂತ್ರ್ಯದ ಸವಿಯನ್ನು ಉಣ್ಣದಂತಹ ಹಲವಾರು ಜನರಿಗೆ ಇದರಿಂದ ಉಪಕಾರವಾಯಿತು. ಸಹಾಯವಾಯಿತು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಆಗ ನಾವು ಅಲ್ಲಿ ಕುಳಿತು ಮಾಡಿರತಕ್ಕ ಭಾಷಣ, ಮಾಡಿರುವ ಪ್ರಸ್ತಾಪದ ಬಗ್ಗೆ ತಾವು...

DR. JEEVARAJA ALVA.— That is exactly what I want to convey. ಇವತ್ತು ಸಾಮಾಜಿಕ ಚಿಂತನೆ ಬೇಕು. ರಾಜಕೀಯವಾಗಿ ಕೊಡುವಾಗ ೨೦ ಅಂಶಗಳ ಕಾರ್ಯಕ್ರಮಗಳಲ್ಲಿ ತಪ್ಪುಗಳನ್ನು ಹುಡುಕದೆ ಅದು ಒಂದು ಕಾರ್ಯಕ್ರಮ ಎಂದು ನಾವು ತೆಗೆದುಕೊಂಡರೂ ಕೂಡಾ

ಆದರಲ್ಲಿ ಈ ಸ್ವಾತಂತ್ರ್ಯದ ಸವಿಯನ್ನು ಉಣ್ಣದಿರುವಂತಹ ರೈತರಿಗೆ ದೀನದಲಿತರಿಗೆ ಬಹಳಷ್ಟು ಮಟ್ಟಿಗೆ ಸ್ವಲ್ಪ ಸಹಾಯವಾಯಿತು. ನಾನು ಅದನ್ನು ಬೇರೆ ವರ್ಗದಲ್ಲಿ ನಮ್ಮ ನಾಯಕರು, ನಮ್ಮ ಶಾಸಕ ವರ್ಗದವರು It was because there was no sincerity of purpose, ಎಂದು ಹೇಳಬಹುದು. There was no spontaneity ಎಂದು ಹೇಳುತ್ತಿದ್ದೇನೆ, Because it was a political expediency in 1969, this 20-point programme was introduced. ನಂತರ ಮೊನ್ನೆ ಪ್ರಥಮ ಕಾಂಗ್ರೆಸ್‌ಯೇತರ ಸರ್ಕಾರ ಮಾನ್ಯ ರಾಮಕೃಷ್ಣ ಹೆಗ್ಗಡೆಯವರ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದಾಗ ಮೊದಲ ಬಾರಿಗೆ ನಾವು ಚುನಾವಣೆ ಸಮಯದಲ್ಲಿ ಗರೀಬೀ ಹಟಾವೋ ಮಾಡಲಿಲ್ಲ ಅಥವಾ so called populistic programmes were envisaged but it was in the very first year of the Government,

ಒಬ್ಬ ಸನ್ಮಾನ್ಯ ಸದಸ್ಯರು. — ಪುಸ್ತಕ, ಚೆಡ್ಡಿ...

ಡಾ. ಜೀವರಾಜ ಆಳ್ವ. — ಹೌದು ಪುಸ್ತಕ, ಚೆಡ್ಡಿ. ಅದರ ಹಿಂದೆ ಇರುವ ಭಾವನೆಗಳನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಅಸಮಾನತೆಯನ್ನು ನೀವು ಅರ್ಥ ಮಾಡಿಕೊಂಡಿಲ್ಲ. ಈ ಚೆಡ್ಡಿ ಕೊಡುವಾಗ ನಾವು ಅವರಿಗೆ ಪ್ರಶ್ನೆಗಳನ್ನು ಹಾಕಿದೆವು. ನಾವು ಸಚಿವ ಸಂಪುಟದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ಪ್ರಶ್ನೆಯನ್ನು ಹಾಕಿದ್ದೇವೆ. ಏಕೆ ಇದನ್ನು ಮಾಡುತ್ತಿದ್ದೀರಿ ಎಂದು ನಾವು ಕೇಳಿದೆವು ಆದರೆ ಯಾವ ವರ್ಗದ ಜನರಿಗೆ ಇವರ ಸಹಾಯ ಹೋಯಿತು ಆಲೋಚನೆ ಮಾಡಿದಾಗ ನಾವು ಬಹಳ ದೊಡ್ಡ ದೊಡ್ಡ ಮಾತುಗಳನ್ನು ಸಮಾನತೆಯ ಬಗ್ಗೆ ಆಡುತ್ತೇವೆ. ಅಸಮಾನತೆಯನ್ನು ಹೊಡೆದೋಡಿಸಬೇಕೆಂದು ನಾವು ಹೇಳುತ್ತೇವೆ. ಈ ಅಸಮಾನತೆಯ ಆರಂಭ ಆಗುವುದು ಶಾಲೆಗಳಲ್ಲಿ. ಒಬ್ಬ ದಟ್ಟ ದರಿದ್ರನ ಮಗ ಶಾಲೆಗೆ ಬಂದಾಗ ಆತನ ಮೈ ಮೇಲಿರುವ ಬಟ್ಟೆಯನ್ನು ನಾವು ನೋಡಬಹುದು. ಆದೇ ಸ್ಕೂಲ್ ಮಾಸ್ತರನ ಮಗ ಅದಕ್ಕಿಂತಲೂ ಜಾಸ್ತಿ ಬೆಲೆಯ ಬಟ್ಟೆಯನ್ನು ಹಾಕಿರುತ್ತಾನೆ, ಆದರೆ ಪಟೇಲ ಅಥವಾ ಊರ ಶಾನುಭೋಗರ ಮಗ ಯಾವ ತರಹದ ಒಂದು ಬಟ್ಟೆ ಹಾಕಿಕೊಂಡು ಬರುತ್ತಾನೆ ಎಂಬುದನ್ನು ನೋಡಬೇಕು.

ಆದ್ದರಿಂದ ಅಲ್ಲಿ ಸಮಾನತೆ ಆಗಲಿ, ಯೂನಿಫಾರಂ ಹಾಕಿದಾಗ ಮೊದಲಿನಿಂದ ನರ್ಸರಿಯಿಂದ ಮಕ್ಕಳು ೧ ಮತ್ತು ೨ನೇ ದರ್ಜೆಯಲ್ಲಿ ಕಲಿಯುತ್ತಿರುವ ಬಡ ಮಕ್ಕಳಿಗೆ ಈ ಒಂದು ಈರ್ಷ್ಯೆ ಮನೋಭಾವನೆ ಅಸೂಯೆ ಮನೋಭಾವನೆ ಬಾರದೆ ಇರಲಿ ಎಂದು ಯೂನಿಫಾರಂ ಕೊಟ್ಟಿದ್ದೇವೆ. ಸಮಾನತೆ ಭಾವನೆ ಬರಲಿ ಎಂದು ಕೊಟ್ಟಿದ್ದೆವು.

ಶ್ರೀ ರಮಾನಾಥರೈ. — ತಾವು ಅಧಿಕಾರ ನಡೆಸುತ್ತಿದ್ದಾಗ ಅನೇಕ ಶಾಲೆಗಳಲ್ಲಿ ಅಧ್ಯಾಪಕರೇ ಇರಲಿಲ್ಲ. ಅಂತಹ ಕಡೆ ಪುಸ್ತಕ ಯಾಕೆ, ಚಡ್ಡಿ ಯಾಕೆ ಬೇಕು ?

(ಗೊಂದಲ)

ಡಾ. ಜೀವರಾಜ ಆಳ್ವ. — ನೀವು ಒಂದು ಮಾತನ್ನು ಬಹಳ ಅನನ್ಯ ಪ್ರೀತಿಯಿಂದ...

(ಗೊಂದಲ)

ಶ್ರೀ ರಮಾನಾಥರೈ. — ಅದಕ್ಕಾಗಿ ಜನರು, ನಿಮ್ಮನ್ನು ಆ ಕಡೆ ಕೂರಿಸಿರುವುದು.

ಶ್ರೀ ಗೋಪಾಲ ಮುಕುಂದ ಕಾನಡೆ — ಶಾಲಾ ಮಕ್ಕಳಿಗೆ ಬಟ್ಟೆ ಹೊಲಿಸಿಕೊಡುವುದಕ್ಕಾಗಿ ಆ ಯೋಜನೆ ಜಾರಿಗೆ ತರಲಿಲ್ಲ. ಕಂಟ್ರಾಕ್ಟರುಗಳಿಗೆ ದುಡ್ಡು ಮಾಡುವುದಕ್ಕೋಸ್ಕರ ಆ ಯೋಜನೆ ಜಾರಿಗೆ ತಂದಿದ್ದು ಕಂಟ್ರಾಕ್ಟರ್‌ಗಳು ೪ ರೂಪಾಯಿಗೆ ಹೊಲಿದು ೧೨ ರೂಪಾಯಿ ರೇಟ್‌ಗೆ ಕೊಟ್ಟಿದ್ದಾರೆ. ಅಂತಹವರಿಗೆ ನೀವು ಸಹಾಯ ಮಾಡಿದ್ದೀರಿ.

ಡಾ. ಜೀವರಾಜ ಆಳ್ವ. — ಧೋತಿ ಸೀರೆ ಕಂಟ್ರಾಕ್ಟನ್ನು ಕಂಟ್ರಾಕ್ಟರ್‌ಗೆ ನಾವು ಕೊಡಲಿಲ್ಲ. ಅವುಗಳನ್ನು ಕೋ-ಆಪರೇಟಿವ್ ಸೊಸೈಟಿಗಳಿಗೆ ಕೊಟ್ಟಿದ್ದೇವೆ.

ಶ್ರೀ ಗೋಪಾಲ ಮುಕುಂದ ಕಾನಡೆ. — ನೀವು ಕಮೀಷನ್ ಹೊಡೆದು ಕೊಟ್ಟಿದ್ದೀರಿ. ಮಾಡಿದ ತಪ್ಪನ್ನು ಒಪ್ಪಿಕೊಳ್ಳಿ.

ಡಾ. ಜೀವರಾಜ ಆಳ್ವ. — ಮಾನ್ಯ ಸದಸ್ಯರು ಮಾತನಾಡುವಾಗ ನಾನು ಸುಮ್ಮನೆ ಕುಳಿತು ಕೊಂಡು ಕೇಳುತ್ತೇನೆ.

(ಗೊಂದಲ)

ಛೇರ್ಮನ್.—ಮಾನ್ಯ ಸದಸ್ಯರಾದ ಕಾನಡೆಯವರು ತಾವು ಭಾಷಣ ಮಾಡುವಾಗ ತಾವು ಹೇಳಬೇಕಾದ್ದನ್ನು ಹೇಳಿ. ಇತರ ಸದಸ್ಯರುಗಳು ಮಾತನಾಡುವಾಗ ತಾವು ದಯಮಾಡಿ ಮಾತನಾಡುವುದು ಬೇಡ.

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.—ಮಂಗಳೂರಿಗೆ ಮತ್ತೊಂದು ಸ್ಟೇಟ್ ಮಿನಿಸ್ಟರ್ ಮಾಡುತ್ತಾರೆಂದು ಸುದ್ದಿ ಇದೆ. ಅದನ್ನು ಗಿಟ್ಟಿಸಿಕೊಳ್ಳುವುದಕ್ಕೋಸ್ಕರ ಮಾನ್ಯ ಸೊರಕೆಯವರು ಮಧ್ಯೆ ಮಧ್ಯೆ ಎದ್ದು ಮಾತನಾಡುತ್ತಾರೆ.

ಒಬ್ಬ ಮಾನ್ಯಸದಸ್ಯರು.—ಅವರಿಗೆ ಮಂತ್ರಿ ಪದವಿ ಕೊಡಲಿಕ್ಕೆ ನೀವು ಶಿಫಾರಸ್ಸು ಮಾಡಬೇಡಿ. ಅವರು ಯೊಗ್ಯತೆ ಇದ್ದರೆ ಮಂತ್ರಿಗಳಾಗುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ದಯಮಾಡಿ ಎಲ್ಲರೂ ಸುಮ್ಮನಿರಬೇಕು. ಮಾನ್ಯ ಆಳ್ವರವರು ಮಂತ್ರಿಗಳಾಗಿದ್ದವರು ಜನತಾ ಸರ್ಕಾರದಲ್ಲಿ ದೊಡ್ಡ ಜವಾಬ್ದಾರಿ ಸ್ಥಾನವನ್ನು ವಹಿಸಿಕೊಂಡು ಕೆಲಸ ಮಾಡಿದ್ದಾರೆ. ಅವರು ಮಾತನಾಡುವಾಗ ತೊಂದರೆ ಮಾಡಬೇಡಿ. ಅವರು ಹೇಳುವ ಮಾತು ನಿಮಗೆ ಹಿಡಿಸಲಿಲ್ಲವೆಂದರೆ ನೀವು ಮಾತನಾಡುವಾಗ ಪ್ರತ್ಯೇಕವಾಗಿ ಆ ಬಗ್ಗೆ ಹೇಳುವುದು ಒಳ್ಳೆಯದು.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಸದಸ್ಯರಾದ ಕಾನಡೆಯವರು ಹೇಳಿದ ಮಾತು ರೆಕಾರ್ಡ್‌ಗೆ ಹೋಗಿದೆ. ಅವರು ಹೇಳಿದ್ದು ಏನೆಂದರೆ ಹಿಂದಿನ ಸರ್ಕಾರದವರು ಪಠ್ಯ ಪುಸ್ತಕಗಳನ್ನು ಹಂಚುವುದರಲ್ಲಿ ಕಮೀಷನ್ ತೆಗೆದುಕೊಂಡಿದ್ದಾರೆಂಬ ಮಾತನ್ನು ಒಬ್ಬ ಜವಾಬ್ದಾರಿಯುತ ಸದಸ್ಯರು ಹೇಳಿದರು.

ಶ್ರೀ ಗೋಪಾಲ ಮುಕುಂದ ಕಾನಡೆ.—ನಾನು ಪ್ರೂವ್ ಮಾಡುತ್ತೇನೆ. ನಾನು ಅಲ್ಲಿದ್ದಾಗ ಪ್ರೂವ್ ಮಾಡಿದ್ದೇನೆ. ನಾನು ಕಾನಡೆ ಮಾತನಾಡುವವನು, ನಾನು ಮಾತನಾಡುವಾಗ ಪ್ರೂವ್ ಇಟ್ಟುಕೊಂಡು ಮಾತನಾಡುತ್ತೇನೆ. ಎರಡು ರೂಪಾಯಿ ಒಂದು ಬಟ್ಟೆ ಹೊಲಿಯಲಿಕ್ಕೆ ದುಡ್ಡು ಕೊಟ್ಟು ೮ ರೂಪಾಯಿ ಕಮೀಷನ್ ಹೊಡೆದಿದ್ದೀರಿ, ನೀವು ಮಾಡಿದ ತಪ್ಪನ್ನು ಒಪ್ಪಿಕೊಳ್ಳಿ. ತಪ್ಪನ್ನು ಒಪ್ಪಿಕೊಳ್ಳಿ. ಇಲ್ಲದಿದ್ದರೆ ಸುಮ್ಮನೆ ಏತಕ್ಕೆ ಮಾತನಾಡುತ್ತೀರಿ? ಇದಕ್ಕೆ ಬೇಕಾದರೆ ಒಂದು ಆಯೋಗ ನೇಮಿಸಿ.

ಶ್ರೀ ಸಿ ಬೈರೇಗೌಡ.—ಮಾನ್ಯ ಸದಸ್ಯರಾದ ಕಾನಡೆಯವರು ಬಹಳ ಗುರುತರವಾದ ಆಪಾದನೆಯನ್ನು ಮಾಡುತ್ತಿದ್ದಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ನಾನು ಹಿಂದೆ ಸಹ ಇದೇ ಆಪಾದನೆಯನ್ನು ಮಾಡಿದ್ದೇನೆ. ಇವತ್ತು ಸಹ ಮಾಡುತ್ತಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಸದಸ್ಯರದ್ದು ಇದೇ ಆಟಿಟ್ಯೂಡ್ ಆದರೆ ಈ ಸದನ ನಡೆಯುವುದಕ್ಕೆ ಆಗುವುದಿಲ್ಲ. ಈ ವಿಷಯವನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಿ ಕೊಡಿ. ಒಬ್ಬ ಸದಸ್ಯರು ಬೇಜವಾಬ್ದಾರಿಯಿಂದ ಆಪಾದನೆಯನ್ನು ಸದನದಲ್ಲಿ ಮಾಡಿದರೆ, it should be referred to the Privilege Committee.

ಶ್ರೀ ಗೋಪಾಲ ಮುಕುಂದ ಕಾನಡೆ.—ನಾನು ಪ್ರೂವ್ ಮಾಡುತ್ತೇನೆ. ಏನೇನು ಮಾಡಿದ್ದೀರಿ ಎನ್ನುವುದನ್ನು ಹೇಳುತ್ತೇನೆ.

(ಗೊಂದಲ)

ಛೇರ್ಮನ್.—ರೆಕಾರ್ಡ್ ತರಿಸಿ ನೋಡೋಣ, ಅದರ ಅವಶ್ಯಕತೆ ಇದ್ದರೆ ಚರ್ಚೆಗೆ ಅವಕಾಶ ಕೊಡೋಣ. ದಯಮಾಡಿ ಮಾನ್ಯ ಸದಸ್ಯರಾದ ಆಳ್ವರವರು ಮಾತನಾಡಲಿಕ್ಕೆ ಅವಕಾಶ ಕೊಡಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ನೀವು ಲಂಚಕೋರರು ಎಂದು ಹೇಳಿದ ಮಾತು ರೆಕಾರ್ಡಿನಲ್ಲಿ ಇದ್ದೇ ಇದೆ. ತಾವು ರೆಕಾರ್ಡ್ ತರಿಸಿ ನೋಡಿ. ನಾನು ಹೇಳಿದ್ದೇನೆ ನಾನು ಆ ಕಡೆ ಕುಳಿತುಕೊಂಡಿದ್ದಾಗ ಭ್ರಷ್ಟಾಚಾರ ಸರ್ಕಾರವೆಂದು ಹೇಳಿರುವುದು ನಿಜ. ಅದು ರೆಕಾರ್ಡ್‌ನಲ್ಲಿದೆ.

ಶ್ರೀ ಎಂ. ಪಿ. ವೆಂಕಟೇಶ್.—ಅವರು ಸರಿಯಿಲ್ಲವೆಂದು ಜನ ನಿಮ್ಮನ್ನು ಆರಿಸಿದ್ದಾರೆ. ಜನ ನಿಮಗೆ ಓಟು ಕೊಟ್ಟಿದ್ದಾರೆ. ನೀವು ಕೆಲಸ ಮಾಡಿ. ಪುನಃ ಏತಕ್ಕೆ ಆಪಾದನೆ ಮಾಡುತ್ತಿದ್ದೀರಿ?

ಡಾ. ಜೀವರಾಜ ಆಳ್ವ.—ಯಾವುದೇ ರೀತಿಯ ಟೀಕೆ ಮಾಡುವುದಕ್ಕೆ ಅಥವಾ ನಾವು ಆ ತರಹ ಸ್ವರ್ಗ ಕೊಟ್ಟಿದ್ದೇವೆ, ನಾವು ಮಾಡಿದ್ದೆಲ್ಲ ಸರಿ ಎಂದು ಹೇಳುವುದಕ್ಕೆ ನಾನು ನಿಂತಿಲ್ಲ, ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದೇನೆ. ನಾವು ಮಾಡಿದ ತಪ್ಪುಗಳನ್ನು ನೀವು ಮಾಡಬೇಡಿ ಎಂದು ಒಳ್ಳೆಯ ಅಧಿಕಾರವನ್ನು ಕೊಡಿ. ಜನತೆ ನಿಮ್ಮಿಂದ ಬಹಳಷ್ಟು ನಿರೀಕ್ಷೆ ಪಡುತ್ತಿದೆ. ಕೆಲವು ಸಲಹೆಗಳನ್ನು ಕೊಡುವುದಕ್ಕೆ ಮಾತ್ರ ನಾನು ನಿಂತಿದ್ದೇನೆ. ಸಲಹೆಗಳನ್ನು ಒಪ್ಪುವುದು ಬಿಡುವುದು ನಿಮಗೆ ಸೇರಿದ್ದು. ಇದು ಕಳಕಳಿಯಿಂದ ಬರುವಂಥ ಮಾತು, ಹೃದಯಾಂತರಾಳದಿಂದ ಬರುವಂಥ ಮಾತು ನಾವು ಎಲ್ಲವನ್ನೂ ಸರಿಯಾಗಿ ಮಾಡಿದ್ದೇವೆ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ಅದರ ಹಿಂದಿರ ತಕ್ಕಂಥ ಭಾವನೆಗಳನ್ನು ಹೇಳಿದ್ದೇನೆ. ತಪ್ಪು ಒಪ್ಪುಗಳು ಆಗಿರಬಹುದು. ಅದರಲ್ಲಿ ಕಂಟ್ರಾಕ್ಟರ್ಸ್ ಇರಬಹುದು, ಅದರಲ್ಲಿ ಕಮಿಷನ್ ಏಜೆನ್ಸಿ ಇರಬಹುದು. ಆದರೆ ಯಾವ ಭಾವನೆಯಿಂದ ಯಾವ ಮಾತನ್ನು ಹೇಳಿದ್ದೇನೆ ಎಂದರೆ ಸ್ವಾತಂತ್ರ್ಯ ಬಂದ ನಂತರ ಯಾವುದೇ ಸ್ವಾತಂತ್ರ್ಯದ ಸವಿಯನ್ನು ಅನುಭವಿಸದೇ ಇರುವಂಥ ಜನರಿಗೆ ಸ್ವಲ್ಪವಾದರೂ ಸೌಲಭ್ಯಗಳನ್ನು ಕಲ್ಪಿಸಿ ಕೊಡೋಣ. ಇವತ್ತು ರೈತರ ಬಗ್ಗೆ ಹಿರಿಯರಾದಂತಹ ಪ್ರೊಫೆಸರ್ ನಂಜುಂಡಸ್ವಾಮಿಯವರು ಹೇಳಿದಾಗ ತಾವೆಲ್ಲರೂ ಎದ್ದು ನಿಂತಿರಿ. ಪ್ರಚೋದನೆ ಮಾಡುವಂಥ ಪರಿಸ್ಥಿತಿ ಬರಬಹುದು ಎಂದು. ಸ್ವಾತಂತ್ರ್ಯ ಬಂದು ೪೨ ವರ್ಷಗಳಾದರೂ ಕೂಡ ದಟ್ಟದರಿದ್ರರಾದವರು ಇನ್ನೂ ಇದ್ದಾರೆ. ಅದು ಸ್ಲಮ್ ಡ್ವೆಲ್ಲರ್ಸ್ ಇರಬಹುದು, ಹಳ್ಳಿಗಳಲ್ಲಿ ಇಂತಹವರು ಇರಬಹುದು. ಒಂದು ಮಾತನ್ನು ಇಲ್ಲಿ ಹೇಳಿದರೆ ಅದು ಅತಿಶಯೋಕ್ತಿ ಎನಿಸಬಹುದು. ಒಮ್ಮೆ ಫೆಮಿನ್ ರಿಲೀಫ್‌ಗಾಗಿ ಹುಣಸೂರಿಗೆ ಹೋಗಿದ್ದೆ. ಒಂದು ಕ್ಷೇತ್ರದಲ್ಲಿ ರಿಲೀಫ್ ವರ್ಕ್ಸ್ ನೋಡಲು ಹೋದಾಗ ಅಲ್ಲಿ ಕೆಲಸ ಮಾಡತಕ್ಕಂಥ ರೈತಾಪಿ ಜನ ಬಂದರು. ಪರವಾಗಿಲ್ಲ ಅವರಿಗೆ ಸ್ವಲ್ಪವಾದರೂ ಕೆಲಸ ಸಿಗುತ್ತದೆ ಎಂದು ಭಾವಿಸಿದೆ. ಅವರಿಗೆ ಇಡೀ ವರ್ಷದಲ್ಲಿ ಕೇವಲ ೧೫ ದಿವಸ ಮಾತ್ರ ಕೆಲಸ ಸಿಗುತ್ತದೆ ಇನ್ನೂ ಹದಿನೈದು ದಿವಸ ಅವರಿಗೆ ಕೆಲಸ ಕೊಡಿ ಎಂದು ನಾನು ಅಧಿಕಾರಿಗಳಿಗೆ ನನ್ನ ತೀರ್ಮಾನವನ್ನು ಕೊಟ್ಟುಬಿಟ್ಟೆ. ಸರಿ ಸಾರ್ ಎಂದು ಅವರು ಹೇಳಿದರು. ಆದರೆ ಆಮೇಲೆ ಅವರು ಕಾರಿನ ಹತ್ತಿರ ಬಂದು ಹೇಳುತ್ತಾರೆ. ಆಗುವುದಿಲ್ಲ ಸಾರ್, ದುಡ್ಡಿಲ್ಲ 'ಎಂದು' ಇಂತಹ ನಿಕೃಷ್ಟವಾದ ಬಡತನದಲ್ಲಿರುವ ಜನತೆಯತ್ತ ಸ್ವಲ್ಪವಾದರೂ ನಾವು ಗಮನಹರಿಸೋಣ, ಬರೀ ಇಲ್ಲಿ ತಪ್ಪು ನಡೆಯುತ್ತಿದೆ, ಈ ವ್ಯವಸ್ಥೆಯಲ್ಲಿ ಮೋಸವಾಗುತ್ತದೆ ಎಂದರೆ these middlemen have to be hanged but the system the programmes are not to be abolished. ಎಲ್ಲಿ ತಪ್ಪಾಗಿದ್ದರೆ ಅಲ್ಲಿ ತಪ್ಪನ್ನು ಸರಿಪಡಿಸಿ. ನಮ್ಮಿಂದ ತಪ್ಪಾಗಿದೆಯೆಂದೇ ನಾವು ಈಗ ಈ ಸ್ಥಾನದಲ್ಲಿ ಕುಳಿತಿದ್ದೇವೆ. ಎದ್ದು ನಿಂತರೆ ಸಾಕು ನಿಮ್ಮ ಸರ್ಕಾರ ಏನು ಆಯಿತು ಎಂದು ಪ್ರಶ್ನೆ ಹಾಕುತ್ತೀರಿ. ಟೀಕೆ ಮಾಡುತ್ತೀರಿ. ನಾನು ಇಲ್ಲಿ ಸಲಹೆ ಕೊಡುತ್ತಿದ್ದರೆ 'ನಿಮ್ಮ ಸರ್ಕಾರ ಏನಾಗಿದೆ, ನಿಮ್ಮ ಬಜೆಟ್‌ನಲ್ಲಿ ಏನಾಗಿದೆ'. ಎಂದು ಕೇಳುವುದು, ಇದೇ ರೀತಿ ಮುಂದುವರೆದರೆ I don't see any relevance of this House. ಇವತ್ತು ನಾವು ಏನಾದರೂ ನಿಮಿಷ ನಿಮಿಷಕ್ಕೂ ನಿಮಗೆ ತಡೆ ಹಾಕುವುದಕ್ಕೆ ಹೋಗಿದ್ದೇವಾ ನಮ್ಮ ಸರ್ಕಾರ ಬಂದ ಒಂದು ವಾರದಲ್ಲಿ ಎಷ್ಟೆಷ್ಟು ಟೀಕೆಗಳನ್ನು ಮಾಡಿದ್ದೀರಿ? ಎಷ್ಟೆಷ್ಟು ಅವಮಾನಕರವಾದ ಪ್ರಸಂಗಗಳನ್ನು ತಂದಿರಿ, We have been acting as a responsible opposition even at the cost of the press saying it is not colourful ಅಲ್ಲಿ ಅದಕ್ಕೆ ಫಂಡ್ಸ್ ಇಲ್ಲ ಇಲ್ಲಿ ಏನೂ ಲವಲೇಶ ಇಲ್ಲ ಅಂತ insipid debate ಎಂದು ಹೇಳುವಷ್ಟರ ಮಟ್ಟಿಗೆ we have been responsible. ಅದನ್ನು ಅರ್ಥಮಾಡಿಕೊಳ್ಳುವುದು ನಿಮಗೆ ಆಗುತ್ತಿಲ್ಲ ಅತ್ಯಂತ ಜವಾಬ್ದಾರಿಯುತವಾಗಿ ಈ ಮಾತನ್ನು ನಾನು ಹೇಳಿದೆ. I admit as a bitter critic of Smt. Indira Gandhi and the Congress regime. I now admit, there was a brighter side of 20 point programme, ಇಷ್ಟು ಹೇಳಿದ ಮೇಲೆ, ಅಷ್ಟೊಂದು ಕಳಕಳಿಯಿಂದ ಹೇಳಿದ ಮೇಲೆ, ನಮ್ಮ ತಪ್ಪನ್ನು ಒಪ್ಪಿಕೊಂಡ ಮೇಲೂ, ಜನರ ಭಾವನೆಗಳಿಗೆ ಸ್ಪಂದಿಸಿ ಎಂದು ಹೇಳಿದಾಗ ಇದು ಯಾರಿಗೆ ಸ್ವಾಮಿ ಈ ಬ್ರಿಡ್ಜ್‌ಗಳನ್ನು ಕಟ್ಟುವುದು? ಈ ವಿದ್ಯುಚ್ಛಕ್ತಿ ಯಾರಿಗೆ ಹೋಗುತ್ತದೆ? ನಿಮ್ಮ ಆಲ್‌ರೌಂಡ್ ಡೆವಲಪ್‌ಮೆಂಟ್ಸ್ ಸೋಶಿಯಲ್ ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್ಸ್ ಲಾಭ ಎಷ್ಟು ಜನರಿಗೆ ಹೋಗುತ್ತದೆ? ಉಳಿದ ಮೂರುವರೆ ಕೋಟಿ ಜನರ ಬಗ್ಗೆ ಅನುಕಂಪವನ್ನು ವ್ಯಕ್ತಪಡಿಸೋಣ I am not a rural politician. ಅವರ ಬಗ್ಗೆ ಅನುಕಂಪ ಇದೆ ಎಂದು ಹೇಳಿದಾಗ, ಹೌದು ಅನ್ನಿಸುತ್ತದೆ, ನೋವಾಗುತ್ತದೆ. ಜನರ ನೋವನ್ನು ಕೇಳಿ ಎಂದರೆ ನಿಮಗೆ ಅದು ಪ್ರಚೋದನಾಕಾರಿ ಭಾಷಣವಾಗುತ್ತದೆ. I am not here to make a revolutionary speech. We cannot usher in a new

era immediately. Let us start a new beginning. ಹೋದಸಲ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಅತ್ಯಂತ ಕಳಕಳಿಯಿಂದ ಒಂದು ಮಾತನ್ನು ಹೇಳಿದ್ದೆ. ಅದನ್ನು ನೀವು ಅರ್ಥ ಮಾಡಿ ಕೊಳ್ಳಲಿಲ್ಲ. ಈ ಸಲ ೧೭ಳ ಜನರನ್ನು ಆರಿಸಿ ಐತಿಹಾಸಿಕ ತೀರ್ಪನ್ನು ಕರ್ನಾಟಕದ ಜನತೆ ಕೊಟ್ಟಿದ್ದಾರೆ. ಅದನ್ನು ಉಪಯೋಗಮಾಡಿಕೊಳ್ಳಿ ಎಂದು ಹೇಳುತ್ತೇನೆ. ಆದರೆ ಕಳೆದ ನೂರು ದಿವಸಗಳಲ್ಲಿ ನಿಸ್ತೇಜವಾದ, ನಿರ್ಲಿಪ್ತವಾದ ಸರ್ಕಾರವನ್ನು ಕೊಟ್ಟಿದ್ದೀರಿ. You have not been acting, I have the highest regard for the Chief Minister and to every Minister who has occupied the front benches here.

Men of repute, men of certain credibility can perform.

ಅದಕ್ಕೆ ಸರ್ಕಾರ ಮತ್ತು ವಿರೋಧಪಕ್ಷದ ಗೌರವವನ್ನು ಎಲ್ಲರೂ ನೋಡಬೇಕು. ನಾವೇನಾದರೂ ಟೀಕೆ ಮಾಡಿದರೆ ಕೇಳಿ. ನೀವೇನು ಅಲ್ಲಿ ಕುಳಿತುಕೊಂಡು ತಕ್ಷಣ ಸ್ವರ್ಗವನ್ನು ತರುವುದಿಲ್ಲ ಅಥವಾ ಕರ್ನಾಟಕವನ್ನು ಬದಲಾವಣೆ ಮಾಡುವುದಿಲ್ಲ. ನಾವೆಲ್ಲರೂ ಫೇಲಾದರೆ, ಅವರ ಮೇಲೆ ಇವರ ದೂರು. ಇವರ ಮೇಲೆ ಅವರ ದೂರು ಈ ರೀತಿ ನಮ್ಮನ್ನು ನಾವೇ ಆತ್ಮ ವಂಚನೆ ಮಾಡುತ್ತಾ ಹೋದರೆ, ನಾಳೆ ಜನಕೆ ಕೇಳುತ್ತಾರೆ. Probably there will be a time when there will be a third force altogether. ಆ ಹೆದರಿಕೆಯಿಂದ ಈ ಮಾತನ್ನು ಹೇಳುತ್ತೇನೆ. ಆದ್ದರಿಂದ ಪುನಃ ಆ ದಾರಿಗೆ ಹೋಗುವುದು ಬೇಡ. One must remember the changes that are taking place in the world. That will happen in India also. There is a concern, there is a desire for change, People want something more. ಇವತ್ತು ಮಾನ್ಯ ರಾಜಶೇಖರ ಮೂರ್ತಿಯವರು ಒಂದು ಸೂಚನೆ ಕೊಟ್ಟರು. To me it sounds good but ideologicallv speaking, it is totally contradictory. ಇವತ್ತು ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್ಸನ್ನು ನ್ಯಾಷನಲೈಸ್ ಮಾಡುವುದು ಅಥವಾ ವಿರೋಧ ಪಕ್ಷದ ಸದಸ್ಯರ ಸಲಹೆಯನ್ನು ತೆಗೆದುಕೊಂಡು, ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಇವತ್ತು ಸುಮಾರು ೮ ನೂರು ಕೋಟಿ ರೂಪಾಯಿ ಅಕ್ಯೂಮುಲೇಟೆಡ್ ಲಾಸ್ ಇದ್ದರೆ, ಇಂತಹ ಬಿಳಿಯಾನೆಗಳನ್ನು ಏತಕ್ಕೋಸ್ಕರ ಸಾಕಬೇಕೆಂಬ ಭಾವನೆಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕು. Ideologically thinking is something different. visions are different, dreams are different but final execution o. the job, final results that could be obtained are different. ಆ ಭಾವನೆಗಳನ್ನು ಮಾಡಿಕೊಂಡು ಕ್ರೋಢೀಕರಿಸಿ ಮಾಡಬೇಕೇ ಹೊರತು, ಇವತ್ತು ಹೇಳಿದ್ದೀರಿ. ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್ಸ್ ಬಗ್ಗೆ ಸರ್ಕಾರದ ವ್ಯವಸ್ಥೆ ವ್ಯವಹಾರ ಅಲ್ಲ, ಸರ್ಕಾರದ ವ್ಯವಸ್ಥೆ ಉದ್ದಿಮೆ ಅಲ್ಲ, ಸರ್ಕಾರದ ವ್ಯವಸ್ಥೆ ಲಾ ಅಂಡ್ ಆರ್ಡರ್. Basic law and order and looking after the basic needs of the people. ಅದಂ ಬಿಟ್ಟು ಯಾವುದೋ ಒಂದು ಇಂಡಸ್ಟ್ರಿಯಲ್ ಫೈನಾನ್ಸಿಂಗ್, ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್ಸ್‌ಗೆ ಎಂಟು ನೂರು ಕೋಟಿ, ಪ್ರತಿ ವರ್ಷ ಸುಮಾರು ಒಂದು ನೂರು ಕೋಟಿ ರೂಪಾಯಿ ಅದಕ್ಕೆ ಸಂದಾಯವಾಗ ಬೇಕಾಗುತ್ತದೆ. ಇದನ್ನು ಯಾವ ಕಾರಣಕ್ಕೋಸ್ಕರ ಇಟ್ಟಿದ್ದೀರಿ, You can only promote, You can only create an atmosphere for industrial growth. It is not for you to sustain. It is not for you to accept the accumulated losses. ಅದೇ ಹಣವನ್ನು ನೀವು ನಿರ್ಮಲ ಗ್ರಾಮ ಯೋಜನೆ ಎಂಬ ದೊಡ್ಡ ಕನಸು ಕಂಡಿದ್ದೀರಲ್ಲ, ಆ ಯೋಜನೆಗೆ ಹಾಕಿ. ಇದಕ್ಕೆ ನೀವು ಹಾಕಿರುವ ಹಣ ಎಷ್ಟು? ಮಾನ್ಯ ಅಧ್ಯಕ್ಷಿಣೀಯವರೇ, ಇದು ಅತಿಶಯೋಕ್ತಿ ಅಲ್ಲ. ಕೆಲವು ಸಲ ನಮ್ಮ ಗ್ರಾಮೀಣ ದೃಶ್ಯ, it is most devastating, it is most painful. ನಾನು ಮೊನ್ನೆ ದಾವಣಗೆರೆಗೆ ಯಾವುದೋ ಒಂದು ಕಾರ್ಯಕ್ರಮಕ್ಕೆ ರೈಲಿನಲ್ಲಿ ಹೋಗಿದ್ದೆ. ಆ ದಿನ ಬೆಳಿಗ್ಗೆ ೫ ಗಂಟೆಗೆ ಎದ್ದು ಕಂಪಾರ್ಟ್‌ಮೆಂಟ್ ಹೊರಗೆ ನೋಡಿದಾಗ ನಾಲ್ಕೂವರೆ ಅಥವಾ ಐದು ಗಂಟೆಯಾಗುತ್ತಿದೆ. ಇನ್ನೇನು ಸೂರ್ಯ ಉದಯ ವಾಗುತ್ತಿದೆ. ಸ್ವಲ್ಪ ದೂರದಲ್ಲಿ ಜನ ನಿಂತಿದ್ದಾರೆ, ಇಷ್ಟು ಹೊತ್ತಿನಲ್ಲಿ ಏಕೆ ಇಷ್ಟೊಂದು ಜನ ನಿಂತಿದ್ದಾರೆಂದು ಆಲೋಚನೆ ಮಾಡಿದರೆ, ಮಲಮೂತ್ರಕ್ಕೆ ಹೋಗಲು, ಟ್ರೈನ್ ಹೋಗುವವರೆಗೆ, ಆ ಕತ್ತಲು ಕಂದಕದ ಲಭ್ಯ ಪಡೆದು ಅವರು ಅಲ್ಲಿಗೆ ಬರಬೇಕು. ಇದು ನಮ್ಮ ಸ್ವಾತಂತ್ರ್ಯ, ೪೨ ವರ್ಷಗಳ ಸ್ವಾತಂತ್ರ್ಯ. ಇದು ನೀವು ಮಾಡಿದ ಕೆಲಸ. ಮಾನ್ಯ ಬಸವಲಿಂಗಪ್ಪನವರೇ ನೀವು, ನಾವು ಸೇರಿ ಮಾಡಿದಂಥ ಕೆಲಸ. ನಾವು ಆರು ವರ್ಷಗಳ ಕಾಲ ಸರ್ಕಾರ ನಡೆಸಿದೆವು. ನಮ್ಮ

ಹೆಂಗಸರು, ಮಕ್ಕಳು ಸೂರ್ಯ ಅಸ್ತವಾದ ಮೇಲೆ ಮಲಮೂತ್ರ ವಿಸರ್ಜನೆಗೆ ಹೋಗಬೇಕು. ಇಲ್ಲವೇ ರೈಲ್ವೆ ಟ್ರ್ಯಾಕ್ಟರ್ ಸಂದಿಗೊಂದಿಗಳನ್ನು ಹುಡುಕಿಕೊಳ್ಳಬೇಕು ಇವತ್ತು ನಿರ್ಮಲ ಗ್ರಾಮೀಣ ಯೋಜನೆ ಬಗ್ಗೆ ತೀರ್ಮಾನ ಮಾಡಿದ್ದೀರಿ. ೪ ಕೋಟಿ ರೂಪಾಯಿಗಳನ್ನು you are waiting for UNICEF, for a sum of Rs. 2 crore, an International agency. Have we to wait for International Agencies to give to the poors? Close the entire works for one year or for one month. Let there not be any work whatsoever. ಮಾನ್ಯ ಪುಟ್ಟಸ್ವಾಮಿಗೌಡರೂ ಪಕ್ಕದಲ್ಲೇ ಕುಳಿತಿದ್ದಾರೆ. ನಂದಿಬೆಟ್ಟದ ರೋಡಿನಲ್ಲೋ ಅಥವಾ ತುಮಕೂರು ರೋಡಿನಲ್ಲೋ ನೋಡಬೇಕು. ವರ್ಷಾನು ಗಟ್ಟಲೆ ಒಂದು ಹನಿ ನೀರೂ ಹರಿಯುದಂಥ ಜಾಗದಲ್ಲಿ ಲಕ್ಷೋಪಲಕ್ಷ ಕಲ್ಲುವಡ್ಡುಗಳು ಆಗುತ್ತಿವೆ. ಅರ್ಧ ಇಂಚು ಡೀವಿಯೇಷನ್ ತೆಗೆಯಬೇಕಾದರೂ ಕೋಟಿಗಟ್ಟಲೆ ಖರ್ಚು ಮಾಡುತ್ತೀರಿ. Four way ಟ್ರಾಫಿಕ್ ಮಾಡುತ್ತೀರಿ. High time priorities have to be understood. ಏಕೆ ಆಗುವುದಿಲ್ಲ. ರೈತರ ಸಾಲ ಏಕೆ ಮನ್ನಾ ಮಾಡುವುದಕ್ಕೆ ಆಗುವುದಿಲ್ಲ. ನೀವು ಈ ಬಗ್ಗೆ ಕೇಂದ್ರಸರ್ಕಾರವನ್ನು ಖಚಿತವಾಗಿ ತೋರಿಸುತ್ತೀರಿ. ನಿಮಗೆ ಖಚಿತವಾಗಿ ತಿಳಿಸುವುದಕ್ಕೆ ಕೆಚ್ಚೆದೆ ಇದೆಯೇ ? "Under the directions issued by the Central Government, we are prepared to bear this much burden" ಎಂದು ಹೇಳುವಂಥ ಕೆಚ್ಚು ನಿಮಗಿದೆಯೇ ಎಂದು ಕೇಳುತ್ತೇನೆ. ಸುಮಾರು ಒಂದು ಸಾವಿರ ಕೋಟಿ ರೂಪಾಯಿ ಕೇಂದ್ರ ಸರ್ಕಾರ ಕೊಟ್ಟಿದೆ. ಅವರನ್ನು ನೋಡಿ ನೀವೂ ಸ್ಪಂದಿಸಿ, It is not a political sermon here but basic commitment. ನನ್ನ ಪ್ರಾರ್ಥನೆ ಇಷ್ಟೆ, ನಿರ್ಮಲಗ್ರಾಮ ಎಂಬ ಯೋಜನೆ ಮಾಡಿದ್ದೀರಿ, ಆಮೇಲೆ ವಿದ್ಯಾಮಂದಿರ ಯೋಜನೆ. These are all beautiful projects but the money allocated should not be a cursory.

೨.೦೦ ಪಿ.ಎಂ.

It is not to be misconstrued as a drama or a gimmick. There must be positive action. ಇವತ್ತು ನಿರ್ಮಲ ಗ್ರಾಮ ಯೋಜನೆಗೆ ೫೦ ಕೋಟಿ ರೂಪಾಯಿ ಒದಗಿಸುತ್ತೀರಾ, ತೀರ್ಮಾನ ಮಾಡಿ, ಆಗ ಇಡೀ ರಾಜ್ಯದ ವಿಧಾನಸಭೆ ನಿಮ್ಮ ಜೊತೆ ನಿಲ್ಲುತ್ತದೆ. ಪಿ.ಡಬ್ಲ್ಯೂ.ಡಿ. ಡಿಪಾರ್ಟ್‌ಮೆಂಟ್‌ನಿಂದ ಹಣ ತೆಗೆದುಕೊಳ್ಳಿ. I had requested, I pleaded with the Finance Minister ಅದನ್ನು ನೀವು ಮಾಡುವುದಿಲ್ಲ. Whatever savings are there the entire money could be allocated to the Krishna and Cauvery basins. That you don't do. This is nothing but a bureaucratic jugglery of figures, you have submitted. ೧೫೦ ಕೋಟಿ ರೂಪಾಯಿಗಳ ಎಕ್ಸೆಸ್ ರೆವಿನ್ಯೂ ಅಕ್ಯುಮಲೇಷನ್ ಮಾಡಿದ್ದೀರಿ. ಆ ೧೫೦ ಕೋಟಿ ರೂಪಾಯಿ ತಂದಿರುವುದು ಒಂದೆರಡು ವರ್ಗಗಳಿಂದ ೧೫೦ ಕೋಟಿ ರೂಪಾಯಿ ತರಬೇಕಾದರೆ, ಜನಗಳ ಕಷ್ಟಗಳ ಬಗ್ಗೆ ನಾನು ಹೇಳುವುದಿಲ್ಲ. Not many people are affected. General mass, thankfully, are not affected. ನಿಮ್ಮ ಟ್ರೇಡ್ ಪಾಲಿಸಿ ಇದೆಯಲ್ಲ, ಅದರಿಂದ ೧೦೦ ಕೋಟಿ ರೂಪಾಯಿ ಬರಬಹುದು, ಆದರೆ ೧೦೦೦ ಕೋಟಿ ರೂಪಾಯಿ ಹೆಚ್ಚು ಲಾಸ್ ಆಗುತ್ತದೆ. There is disparity in sales tax system in certain States. You have been telling that there will be Southern States Finance Ministers Conference so that the imbalance is corrected. ಇವತ್ತು ಇಂಬ್ಯಾಲೆನ್ಸ್‌ನಿಂದಾಗಿ ಕರ್ನಾಟಕ ರಾಜ್ಯಕ್ಕೆ ಸುಮಾರು ಸಾವಿರಾರು ಕೋಟಿ ರೂಪಾಯಿಗಳ ಅನ್ಯಾಯ ಆಗುತ್ತಿದೆ, ಈ ಅನ್ಯಾಯವನ್ನು ಸರಿಪಡಿಸುವುದರಲ್ಲಿ ತಾವು ಮುಖ್ಯಪಾತ್ರ ವಹಿಸಬೇಕು. You must demand. If they are not perpared to meet, you must find ways because, ಡಿಸ್ಪ್ಯಾರಿಟಿ ಇರುವುದರಿಂದ they are taking the maximum advantage. ಇವೊತ್ತು ಹೊಸೂರು ಎಂದು ಇದೆ. ಅಲ್ಲಿಗೆ ನಮ್ಮ ಮಾನ್ಯ ವಾಟಾಳ್‌ನಾಗರಾಜ್

ರವರು ಹೋಗುತ್ತಿರುತ್ತಾರೆ. ಆ ಸ್ಥಳದಲ್ಲಿ ಇಂಡಸ್ಟ್ರಿಯಲ್ ಷೆಡ್ಸ್ ಹಾಕಿದ್ದಾರೆ. The entire burden of maintenance and sustenance is on Karanataka soil and Karnataka resources. Electricity is provided by us, water is provided by us. They are spending in thousands. Workers and officers are staying in Bangalore ಆದರೆ ಇದರ ಪೂರ್ಣ ಖರ್ಚು ನಮ್ಮದು ಆದರೆ ಲಾಭ ಏನಿದೆ ಅದು ಅವರದ್ದು. ಗೋವಾದಲ್ಲಿ ಕಾರು ತೆಗೆದುಕೊಂಡರೆ ಆರು ಸಾವಿರ ರೂಪಾಯಿ ಕಡಿಮೆ.. ಪಾಂಡಿಚೇರಿಯಲ್ಲಿ ಕಾರು ತೆಗೆದುಕೊಂಡರೆ ಆರು ಸಾವಿರ ರೂಪಾಯಿ ಕಡಿಮೆ ಹೀಗೆ ಪ್ರತಿಯೊಂದರಲ್ಲೂ ಡಿಸ್ಪ್ಯಾರಿಟಿ ಇದೆ. Disparity in Sales Tax system, has cost Karnataka exchequer dearly. ಈ ಬಗ್ಗೆ ಎಲ್ಲಾ ರಾಜ್ಯಗಳ ಮಾನ್ಯ ಆರ್ಥಿಕ ಮಂತ್ರಿಗಳನ್ನು ಕರೆಸಿ ಚರ್ಚೆ ಮಾಡಬೇಕು. ಆರ್ಥಿಕ ಮಂತ್ರಿಗಳ ಸಭೆ ಸೇರಿಸುತ್ತಿದ್ದೇವೆ ಎಂದು ಹೇಳಿದರು. ಮೂಲತಃ ನನ್ನ ಪ್ರಶ್ನೆ Taking over of public sector undertakings. ಬಗ್ಗೆ ವಿರೋಧ ಪಕ್ಷಗಳು ಸಲಹೆ ಮಾಡಿದರೆ ಆದನ್ನು ತೆಗೆದುಕೊಳ್ಳಿ ಅಥವಾ ವಿಧಾನಸಭಾ ಸದಸ್ಯರ ಒಂದು ಕಮಿಟಿ ನೇಮಕ ಮಾಡಿ. Even if you were to be branded a capitalist, alright. Some basic commitment to the cause is important than being criticised in some editorials. We are not here to feed the ego of certain intellectuals but basic commitment is to the masses. ಇವತ್ತು ೯೦–೧೦೦ ಕೋಟಿ ಅಲ್ಲ, ೮೦೦ ಕೋಟಿ ಅಕ್ಯೂಮಲೇಟೆಡ್ ಲಾಸಸ್. ಅದನ್ನು ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಗೆ ಹಂತ ಹಂತವಾಗಿ ಕೊಡಿ, ಕೊಡುವಾಗ ಅಲ್ಲಿ ಮಾತ್ರ Let there not be any compromise. Let there be higher bidding, open bidding. Let there be clear rules prescribed. ಈ ತರಹ ಮಾಡದಿದ್ದರೆ, ಏನೋ ಒಂದು ಗೋಲ್‌ಮಾಲ್ ಮಾಡಿ, ಕೆಲವೊಂದು ಸಂಸ್ಥೆಯ ಹೆಸರು ಗೊತ್ತಿಲ್ಲ, ಆ ಸಂಸ್ಥೆಯಲ್ಲಿ ಏನಾಗಿದೆ ಎಂದು ಹೇಳಿದರೆ, ಷೇರ್ಸ್ ಕನ್‌ವರ್ಟ್ ಮಾಡುವುದಕ್ಕೆ, ಕರ್ನಾಟಕ ಟೆಲಿ ಕೇಬಲ್ಸ್ ಇರಬಹುದು, ಅಲ್ಲಿ ಒಬ್ಬ ದೊಡ್ಡ ಇಂಡಸ್ಟ್ರಿಯಲಿಸ್ಟ್ ಮತ್ತು ಒಬ್ಬ ದೊಡ್ಡ ಅಧಿಕಾರಿ ಮೂರು ತಿಂಗಳು ಡಿಲೇ ಮಾಡಿದ್ದಕ್ಕೋಸ್ಕರ ಷೇರ್ ವ್ಯಾಲ್ಯೂ increased by Rs.30/–. Net gross income to the Karnataka was to the tune of nearly Rs.1½ crores, ಆದುದರಿಂದ ಒಂದು ಹೊಸ ವಾತಾವರಣ ನಿರ್ಮಾಣ ಮಾಡಬೇಕಾಗುತ್ತದೆ. ಬರೀ ಟೀಕೆ ಮಾಡುವುದಕ್ಕೆ ನಾನು ಈ ಮಾತನ್ನು ಹೇಳುತ್ತಿಲ್ಲ. ಸಾಮಾಜಿಕ ಕಾರ್ಯಕ್ರಮಗಳಿಗೆ, ಜನಪರ ಕಾರ್ಯಕ್ರಮಗಳಿಗೆ ಒಂದು ಹೊಸ ಚಿಂತನೆಯನ್ನು ಕೊಟ್ಟಂಥ It may not be the political expediency that made Smt. Indira Gandhi to float 20–Point Economic Programme. It is a subject of discussion. But here ನಮ್ಮ ಸರ್ಕಾರದ ಬಗ್ಗೆ ಪುನಃ ನಾನು ಉಚ್ಚರಿಸುವುದಕ್ಕೆ ಇಷ್ಟಪಡುತ್ತಿದ್ದೇನೆ. ಈಗ ನಮ್ಮ ನಾಯಕರಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಸಭೆಗೆ ಬಂದಿದ್ದಾರೆ. ಇವರು ಸಹ ನಮ್ಮ ಸಾಮಾಜಿಕ ಕಾರ್ಯಕ್ರಮಗಳಿಗೆ ಒಂದು ಹೊಸ ಚಿಂತನೆಯನ್ನು ಕೊಟ್ಟರು ಅದನ್ನು ಪಾಪ್ಯುಲಿಸ್ಟ್ ಪ್ರೋಗ್ರಾಂ ಎಂದು ನಾವು ಕರೆದರೆ, ನೀವು ಅದನ್ನು ಟೀಕೆ ಮಾಡುತ್ತೀರಿ. In the whole system you are trying to find lapses and loopholes. But no one appreciates the sincerity of the project that we have envisaged, the Project that we have executed.

ಶ್ರೀ ಬಿ. ಬಸವಲಿಂಗಪ್ಪ.—ತಾವು ತುಂಬಾ ಚೆನ್ನಾಗಿ ಮಾತನಾಡುತ್ತಿದ್ದೀರಿ. ತಮ್ಮ ತತ್ವ ನಿರೂಪಣೆ ಏನು ಇದೆ, ಅದನ್ನು ಹೇಳಬೇಕು. ಸಾರ್ವಜನಿಕ ಉದ್ದಿಮೆಗಳಲ್ಲಿ ೮೦೦ ಕೋಟಿ ರೂಪಾಯಿಗಳು ನಷ್ಟವಾಗುತ್ತಿದೆ ಎಂದು ಹೇಳಿದಿರಿ. ಅದರ ಮೇಲೆ ತಾವು ವ್ಯಾಖ್ಯಾನ ಮಾಡಿ ಹೇಳುವಾಗ ತಮಗೆ ಸಾರ್ವಜನಿಕ ಉದ್ದಿಮೆಗಳಲ್ಲಿ ಆಸಕ್ತಿ ಇದೆಯೋ ಅಥವಾ ಖಾಸಗಿ ಉದ್ದಿಮೆಗಳಲ್ಲಿ ಆಸಕ್ತಿ ಇದೆಯೋ ಎಂಬುದನ್ನು ದಯಮಾಡಿ ಹೇಳಿ. ಸಾರ್ವಜನಿಕ ಉದ್ದಿಮೆಗಳಲ್ಲಿ ನಷ್ಟವಾಗುತ್ತಿದೆ. ಅವು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆ ಆಧಾರದ ಮೇಲೆ ತಾವು ವಾದ ಮಂಡಿಸುತ್ತಿದ್ದೀರಿ. ಈಗ ಉದ್ದಿಮೆಗಳು ನಡೆಯುತ್ತಿವೆ. ಅವು ನಷ್ಟದಲ್ಲಿ ಇವೆ. ಇದು ನಿಮ್ಮ ವಾದ. ಇದಕ್ಕೆ ಮುಂದೆ ಏನು ಮಾಡಬೇಕು. ತಾವೇನು ಮಾಡುತ್ತೀರಿ ಅದನ್ನು ಹೇಳಿ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಇದ್ದಾರೆ. ಅವರು ಪ್ಲಾನಿಂಗ್ ಕಮಿಷನ್ ಉಪಾಧ್ಯಕ್ಷರು ಕೂಡ ಇದ್ದಾರೆ. ಖಾಸಗಿ ಉದ್ದಿಮೆಗಳಿಗೆ ಪ್ರೋತ್ಸಾಹ ಕೊಡೋಣವೇ ಅಥವಾ ಸಾರ್ವಜನಿಕ ಉದ್ದಿಮೆಗಳಿಗೆ ಪ್ರೋತ್ಸಾಹ ಕೊಡೋಣವೇ ? ಇದರಲ್ಲಿ ರತಕ್ಕಂಥ

ಲೇಬರ್ ಪಾಲಿಸಿ ಏನು ? ಇದರ ಬಗ್ಗೆ ತಾವೇನಾದರೂ ಅಭ್ಯಾಸ ಮಾಡಿದ್ದೀರಾ ? ತಾವು ಸ್ವಲ್ಪ ಈ ಬಗ್ಗೆ ತಮ್ಮ ತತ್ವ ನಿರುಪಣೆ ಮಾಡಬೇಕಾಗುತ್ತದೆ.

ಡಾ. ಜೀವರಾಜ ಆಳ್ವ.— ಸಾರ್ವಜನಿಕ ಉದ್ದಿಮೆಗಳ ಬಗ್ಗೆ ನಾನು ಮೊದಲೇ ಹೇಳಿದೆ. Government cannot take the responsibility of being a trader or a businessman, or an industrialist. ಯಾವುದೇ ಉದ್ದಿಮೆ ಬೆಳೆಸಬೇಕಾದರೆ ಅದಕ್ಕೆ ಸರಿಯಾದ ವಾತಾವರಣ ಕಲ್ಪಿಸುವಂತಹ ವ್ಯವಸ್ಥೆ ಆಗಬೇಕು. It can be basic promoter and it should be handed over to the right peopl . I am not leading the case of privatisation here. Once having launched, and the particular industry has taken shape, it is going on but because of mismanagement there has been accumulated loss of Rs. 800 crores and this year it is an additional loss of about 50-60 crores. ಅದನ್ನು ತೆಗೆದುಕೊಳ್ಳ ತಕ್ಕಂಥ ಶಕ್ತಿ ನಮ್ಮ ಖಜಾನೆಗೆ ಇಲ್ಲ. ಅದಕ್ಕಾಗಿ ಒಂದು ಹೊಸ ವ್ಯವಸ್ಥೆ ನಿರ್ಮಾಣವಾಗಬೇಕಾಗಿದೆ. Let there be a dialogue, between people, legislators responsible legislators and indu tries.

ಶ್ರೀ ವಾಟಾಳ್ ನಾಗರಾಜ್.—ಆದಕ್ಕೆ ಆಡಳಿತ ಸರಿ ಮಾಡಬೇಕು.

ಡಾ॥ ಜೀವರಾಜ್ ಆಳ್ವ.—ಆಡಳಿತವನ್ನು ಸರಿ ಮಾಡುವುದಕ್ಕೆ ಕಳೆದ್ಹತ್ತು ವರ್ಷಗಳಿಂದ ನಮ್ಮ ಕೈಯಲ್ಲಿ ಆಗಲಿಲ್ಲ. ನಮ್ಮ ತಪ್ಪನ್ನು ನಾವು ಒಪ್ಪಿಕೊಳ್ಳುತ್ತೇವೆ. Let there be a open dialogue in the House. Let there be a House Committee on the rights and merits of the case. ಆದ್ದರಿಂದ ಈ ಬಗ್ಗೆ ನನ್ನ ಪ್ರಶ್ನೆ ಇಷ್ಟೇ, ಮಾನ್ಯ ರಾಜ್‌ಶೇಖರಮೂರ್ತಿಯವರು ಖಂಡಿತವಾಗಿ ನನ್ನ ಸಲಹೆಯನ್ನು ಒಪ್ಪಿಕೊಳ್ಳುತ್ತಾರೆ. ಬಹುಶಃ ನಾವು ಸಹ ಈ ಬಗ್ಗೆ ದಿಟ್ಟ ಕಾರ್ಯಕ್ರಮಗಳನ್ನು ಹಾಕಿಕೊಂಡು ಜನಪರ ಕಾರ್ಯಕ್ರಮಗಳನ್ನು ಪ್ರಾಮಾಣಿಕತೆಯಿಂದ ಮಾಡಿದ್ದೇವೆ, ಹಾಗೂ ಸಾಧಿಸಿದ್ದೇವೆ. ಜನರ ಮೆಚ್ಚುಗೆಯನ್ನು ಸಹಗಳಿಸಿದ್ದೆವೆ. ಕೊನೆಕೊನೆಯಲ್ಲಿ ನಮ್ಮ ನಮ್ಮಲ್ಲಿನ ಆಂತರಿಕ ಜಗಳಗಳಿಂದ ನಾವು ಇಂದು ಈ ಸ್ಥಾನದಲ್ಲಿ ಕುಳಿತುಕೊಂಡಿದ್ದೇವೆಯೋ ವಿನಹಃ ನಿಮ್ಮಿಂದ ಸೋತು ಅಲ್ಲ. ನಮ್ಮ ನಮ್ಮಲ್ಲಿನ ಜಗಳಗಳಿಂದ ನಮ್ಮಲ್ಲಿದ್ದ ನ್ಯೂನ್ಯತೆಗಳಿಂದ ಈ ಕಡೆ ಬಂದು ಕುಳಿತುಕೊಂಡಿದ್ದೇವೆ. ಇನ್ನು ನಾನು ಅರ್ಬನ್ ವಾಟರ್ ಸಪ್ಲೈ ಬಗ್ಗೆ ಮಾತನಾಡುವುದಾದರೆ ಮೊದಲಿನಿಂದಲೂ ಈ ಬಗ್ಗೆ ಒಂದೇ ಒಂದು ಪ್ರಾರ್ಥನೆ ಏನೆಂದರೆ ಕಾವೇರಿ ೩ನೇ ಹಂತದ ಕೆಲಸ ಜಾಗ್ರತೆ ಆಗಬೇಕು ಎಂಬುದು. ಈ ಕಾವೇರಿ ೩ನೇ ಹಂತಕ್ಕೆ ೮೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಕಾವೇರಿ ೩ನೇ ಹಂತವನ್ನು ಪೂರೈಸಿದರೆ ಮಾತ್ರ ಬೆಂಗಳೂರು ನಗರಕ್ಕೆ ಸಾಕಷ್ಟು ನೀರು ಸರಬರಾಜು ನೀಡಿದಂತಾಗುತ್ತದೆ. ನಾನು ತಮಗೆ ಒಂದು ಮಾತನ್ನು ಹೇಳುತ್ತೇನೆ. ಏನೆಂದರೆ ಹಿಂದೆ ಕಾವೇರಿ ೨ನೇ ಹಂತದಲ್ಲಿ ೩೦ ಎಂ. ಜಿ. ಡಿ.ಯಲ್ಲಿ ೨೦ ಎಂ. ಜಿ. ಡಿ. were utilised by Hosur Complex and Wheel and Axle. It is none of our concern. Let the industrialists of Industrial camps, let them generat their own water. ಕೋಟ್ಯಾಂತರ ರೂಪಾಯಿಗಳ ಹಣವನ್ನು ವೆಚ್ಚ ಮಾಡಿದ ಮೇಲೂ ಬೆಂಗಳೂರು ನಗರದ ನಾಗರೀಕರಿಗೆ ನೀರು ಇಲ್ಲದೆ ಇರುವಂತಹ ವ್ಯವಸ್ಥೆ ನಿರ್ಮಾಣವಾಗಬಾರದು, ನಾನು ಹಿಂದೆ ಮಾನ್ಯ ಧರ್ಮಸಿಂಗ್‌ರವರು ಮಂತ್ರಿಗಳಾಗಿದ್ದಾಗಲೂ ಈ ಮಾತನ್ನು ಹೇಳಿದ್ದೆ. Out of 30 mgd, 20 mgd were utilised for industrial complexes. ಇವತ್ತು ಬೆಂಗಳೂರು ನಗರದ ಗುಟ್ಟಹಳ್ಳಿ, ಜಯಮಹಲ್ ಮತ್ತು ಮಲ್ಲೇಶ್ವರಗಳಲ್ಲಿ ಒಂದು ಗಂಟೆ ಸಹ ಸರಿಯಾಗಿ ನೀರು ಬರುತ್ತಿಲ್ಲ. ಅಂತಹ ಒಂದು ಅಸಮಾನತೆಯನ್ನು ನಿರ್ಮಾಣ ಮಾಡಿದ್ದಾರೆ. Let the entire produce of the III Stage be utilised by individual customers. ಮುಖ್ಯವಾಗಿ ಬೆಂಗಳೂರಿನ ನಾಗರೀಕರಿಗೆ ಸರಿಯಾದಂತಹ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಸ್ಲಮ್ ಕ್ಲಿಯರೆನ್ಸ್ ಬಗ್ಗೆ ಹೇಳುವುದಾದರೆ ತಾವು ಬಡವರ ಬಗ್ಗೆ ಇಲ್ಲಿ ಹೇಳಿದ್ದೀರಿ. ನಾವು ಅಲ್ಲಿ ಹೋಗಿ ನೋಡಿದಾಗ ಬಹಳ ವಿಮಂಚನೆಗೆ ಒಳಗಾಗುವಂತಹ ಪರಿಸ್ಥಿತಿ ಇದೆ. ನಾವು ಅಧಿಕಾರದಲ್ಲಿದ್ದಾಗ ಒಳ್ಳೆಯ ಕೆಲಸವನ್ನು ಮಾಡಿದ್ದೇವೆ. ಎಷ್ಟು ಸಾಧ್ಯವೋ ಅಷ್ಟು ಸುಧಾರಣೆ ಮಾಡಿದ್ದೇವೆ. ಇವತ್ತು ಸುಮಾರು ಎಂಟು ನೂರು ಇಲ್ಲವೇ ಒಂದು ಸಾವಿರ ಸ್ಲಮ್ಸ್ ಇವೆ. ಕಾರ್ಪೊರೇಷನ್‌ನವರು ಏನು ಲಿಸ್ಟ್ ಮಾಡಿ ಕೊಟ್ಟಿದ್ದಾರೋ ಅದನ್ನು ತಾವು ಇಲ್ಲಿ ಹೇಳಿದ್ದೀರಿ. ನಾವು ಈ ಸ್ಲಮ್ ಡೆವಲಪ್‌ಮೆಂಟ್ ಬೋರ್ಡ್

ಗಳಿಗೆ ಹಣ ಕೊಟ್ಟಿದ್ದೇವೆ. ಸಾಧ್ಯವಾದಷ್ಟು ಕೆಲಸವನ್ನು ನಾವೂ ಸಹ ಮಾಡಿದ್ದೇವೆ. ಸಾಕಷ್ಟು ಸುಧಾರಣೆ ಮಾಡಿ ತೋರಿಸಿದ್ದೇವೆ. ಅವರುಗಳಿಗೆ ಬೇರೆ ಕಡೆ ಜಾಗಗಳನ್ನು ಕೊಟ್ಟಿದ್ದೇವೆ. ಇನ್‌ಫ್ರಾಸ್ಟ್ರಕ್ಚರ್‌ಗಳನ್ನು ಕೊಟ್ಟಿದ್ದೇವೆ. ಅವರಿಗೆ ವಾಟರ್ ಫೆಸಿಲಿಟಿ ಕೊಟ್ಟಿದ್ದೇವೆ, ಬಾತ್ ರೂಮ್ಸ್ ಕಟ್ಟಿಸಿ ಕೊಟ್ಟಿದ್ದೇವೆ,

ಶ್ರೀ ವಾಟಾಳ್ ನಾಗರಾಜ್.—ಕೊಳೆಗೇರಿಗಳು ಹೇಗೆ ನಿರ್ಮಾಣವಾಗುತ್ತದೆ ಮತ್ತು ೩ನೇ ಸ್ಟೇಜ್, ೪ನೇ ಸ್ಟೇಜ್‌ನಿಂದ ನೀರು ತಂದರೂ ಈ ಬೆಂಗಳೂರಿಗೆ ಸಾಕಾಗುವುದಿಲ್ಲ, ಈಗಿನ ಪರಿಸ್ಥಿತಿ ನೋಡಿದರೆ ಹೊರಗಡೆಯಿಂದ ಬರತಕ್ಕಂಥ ಜನ ಜಾಸ್ತಿಯಾಗಿದ್ದಾರೆ, ಹೊರಗಡೆಯಿಂದ ಬರತಕ್ಕ ಜನರನ್ನು ತಡೆಗಟ್ಟುವುದಕ್ಕೆ ಏನು ಮಾಡಬೇಕು? ಕೊಳೆಗೇರಿಗಳು ನಿರ್ಮಾಣವಾಗುತ್ತಿವೆ. ಅವುಗಳು ಹೇಗೆ ನಿರ್ಮಾಣವಾಗುತ್ತಿವೆ ಎನ್ನುವುದನ್ನೂ ದಯವಿಟ್ಟು ಹೇಳಬೇಕು. ಹೇಗಾಯಿತು? ಯಾವಾಗ ಆಯಿತು ಎಂಬುದನ್ನು ಹೇಳಬೇಕು.

ಡಾ: ಜೀವರಾಜ್ ಆಳ್ವ.—ನಾನು ಸೋಶಿಯಲ್ ಕಂಪಲ್‌ಷನ್ಸ್, ಮಾನವ ಧರ್ಮಕ್ಕೆ ಮಾತ್ರ ಸೀಮಿತವಾಗಿ ಮಾತನಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಧರ್ಮ ನೀತಿ ಒಂದು ಕಡೆ ಇರಲಿ. ಧರ್ಮ ಮಾಡುವವನ ಗಂಟೇ ಹೋದರೆ ಗತಿ ಏನು?

ಡಾ: ಜೀವರಾಜ್ ಆಳ್ವ.—ಆಮೇಲೆ ಇಲ್ಲಿ ಭಾಗಗಳಲ್ಲಿ, ಇದು ಅನ್ಯಥಾ ಭಾವಿಸಬಾರದು. ಇವತ್ತು ಎಕ್ಸೈಸ್ ಸೇಲ್ ಟ್ಯಾಕ್ಸ್ ಆನ್ ಟರ್ಮಿನಲ್ ಪಾಯಿಂಟ್‌ನ್ನು ನೀವು ಅಬಾಲಿಷ್ ಮಾಡಿದ್ದೀರಿ. ನಾವು ಇದನ್ನು ಇಂಟ್ರಡ್ಯೂಸ್ ಮಾಡಲಿಕ್ಕೆ ಮುಖ್ಯ ಕಾರಣ ಈಗ ಸೆಕೆಂಡ್ಸ್‌ನ್ನು ತಪ್ಪಿಸಬೇಕೆಂದು ಆದರೆ ತಾವು ಇದರಲ್ಲಿ [illegible] ಮಾತಾಡ [illegible] ಬಹಳ [illegible] ಗಂಭೀರವಾಗಿ ಇದನ್ನು ನಾನು ಆಪಾದನೆ ಎಂದು ಹೇಳುತ್ತಿಲ್ಲ, ಸೂಕ್ಷ್ಮವಾಗಿ ಈ ಗುಸು ಗುಸು ಹಿಂದಿನ ಬಾಗಿಲಿನಲ್ಲಿ ನಡೆಯುವಂಥ ವಿಚಾರವನ್ನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದೇ ಒಂದು ಟ್ಯಾಕ್ಸ್ ಮಾಡುವುದಕ್ಕೆ ಒಂದು ಲಾಬಿ ಇದೆ ಸ್ವಾಮಿ. These excise tycoons, who think probably they own every politician in Karnataka and every party in Karnataka, ಇವರು ಯಾವ ವ್ಯವಸ್ಥೆಗೆ ಹೋಗಿದ್ದರೆಂದರೆ ಅರ್ರ್ಯಾಕ್ ಬಾಟ್ಲಿಂಗ್ ಜಡ್ಜ್‌ಮೆಂಟ್ ಆಗುವ ಒಂದು ಗಂಟೆ ಮೊದಲು ಇವರು ೧೫ ಬಾಟಲ್ ಶಾಂಪೇನ್ ಓಪನ್ ಮಾಡಿದಂಥ ದೊಡ್ಡ ಜನ ಇವರು. ಜಡ್ಜ್‌ಮೆಂಟ್ ಆಗುತ್ತದೆಂದು ಇವರಿಗೆ ಗೊತ್ತಿತ್ತು. ಆ ತರಹದ ವ್ಯವಸ್ಥೆಯಲ್ಲಿ ಅವರು ಏನು ಹೇಳುತ್ತಿದ್ದರೆಂದರೆ ಸುಮಾರು ೩ ಕೋಟಿ ರೂಪಾಯಿಗಳು ಸರ್ಕಾರದ ವ್ಯವಸ್ಥೆಗೆ ಸಂದಾಯವಾಗಿದೆ ಅನ್ನುವ ಗುಸು ಗುಸು ಮಾತು ಇದೆ, ಏಕೆಂದರೆ, They are capable of it. Even if you have not taken they have paid it. Probably some middleman has taken it. ಏಕೆಂದರೆ ನಮಗೂ ಪರಿಚಯದವರೂ ಇರುತ್ತಾರೆ, ಗೊತ್ತಿದ್ದವರು ಇರುತ್ತಾರೆ. ಈ ವಿಸ್ಪರಿಂಗ್ ಕ್ಯಾಂಪೈನ್ ಅನ್ನುತ್ತಾರೆ. It is very, very, very, serious. You have taken certain steps.

ಶ್ರೀ ಬಿ. ಬಸವಲಿಂಗಪ್ಪ.—ಬಹಳ ಗುರುತರವಾದ ಅಪಾದನೆ ಮಾಡುತ್ತಿದ್ದಾರೆ, ಈ ಸರ್ಕಾರ ಬಂದ ಮೇಲೆ ನಾವು ಯಾವ ರೀತಿ ರಾಜ್ಯಭಾರ ಮಾಡುತ್ತಿದ್ದೇವೆಂಬುದು ಎಲ್ಲಾ ಜನಗಳಿಗೂ ಗೊತ್ತು. ೩ ಕೋಟಿ ರೂಪಾಯಿಗಳ ಯಾರಿಗೆ ಸಂದಾಯವಾಗಿದೆ? ಯಾರು ತೆಗೆದುಕೊಂಡಿದ್ದಾರೆ? ಯಾರು ಕೊಟ್ಟಿದ್ದಾರೆ? ಇದನ್ನು ದಯಮಾಡಿ ಸ್ಪಷ್ಟವಾಗಿ ತಾವು ಹೇಳಬೇಕು. ಅದರಮೇಲೆ ನೀವು ಜವಾಬ್ದಾರಿ ಇರತಕ್ಕಂಥ ಜನ. ವಿಸ್ಪರಿಂಗ್, ಗುಸು ಗುಸು ಮಾತುಗಳ ಮೇಲೆ ನಾವು ಕತೆ ಕಟ್ಟುವುದಕ್ಕಾಗುವುದಿಲ್ಲ ಅದು ಸರಿಯೂ ಅಲ್ಲ. ತಾವು ಹೇಳುವಾಗ ಜವಾಬ್ದಾರಿಯಿಂದ ಹೇಳಿ. ಗುಸು ಗುಸು ಮಾತು ಎಂದು ಹೇಳುವುದು ಸರಿಯಲ್ಲ.

ಶ್ರೀ ಹರ್ಷ ಕುಮಾರ ಗೌಡ.—ಈ ನಿರ್ಧಾರ ಸರ್ಕಾರ ತೆಗೆದುಕೊಳ್ಳಬೇಕಾದರೆ, ಈ ವಿಶದ ಹಿಂದೆ ಏನಿತ್ತು, ಕರ್ನಾಟಕ ರಾಜ್ಯದಲ್ಲಿ ದಲಿತರ ಕೂಗು ಅದನ್ನು ಸಲ್ಲಿಸಿರುವಂಥ ಪ್ರಗತಿಪರ ನಿರ್ಧಾರವನ್ನು ನಮ್ಮ ಸರ್ಕಾರ ತೆಗೆದುಕೊಂಡಿರುವಾಗ ಅದು ಯಾರ ಹಿತಾಸಕ್ತಿಯಿಂದ ತೆಗೆದುಕೊಂಡಿದೆ? ಕರ್ನಾಟಕ ರಾಜ್ಯದ ದಲಿತರ ಹಿತಾಸಕ್ತಿಯಿಂದ ತೆಗೆದುಕೊಂಡಿದೆ. ಇಡೀ ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯವರು ಸುಮಾರು ವರ್ಷಗಳಿಂದ ಪಾನ ನಿಷೇದವನ್ನು ಮಾಡಬೇಕೆಂದು ಹೋರಾಟ ಮಾಡಿದ್ದರು. ಅದಕ್ಕೆ ಸ್ಪಂದಿಸತಕ್ಕ ಪ್ರಾಮಾಣಿಕ ಪ್ರಯತ್ನವನ್ನು ನಮ್ಮ ಸರಕಾರ ಮಾಡಿದೆ. ಟಾಡಿ ಸೇಲ್ ಬ್ಯಾನ್ ಬಗ್ಗೆ ನಾನು ಮಾತನಾಡಿಲ್ಲ. ಆದರೆ ಅದರ ಇನ್ನೊಂದು ವ್ಯವಸ್ಥೆಯ ಕಥೆಯೇ ಬೇರೆ. ಇದನ್ನು

ದಯವಿಟ್ಟು ಯಾರೂ ತಪ್ಪು ತಿಳಿದುಕೊಳ್ಳಬಾರದು. I am touching a very, very crucial and very sensitive issue. ಅರ್ರ್ಯಾಕ್ ಬಾಟಲ್ ಕೇಸ್ ಬಗ್ಗೆ ಜಡ್ಜ್‌ಮೆಂಟ್ ಬರುವುದಕ್ಕೆ ಮೊದಲು ೧೫ ಶಾಂಪೇನ್ ಬಾಟಲ್ಸ್ ಓಪನ್ ಆಯಿತು. ಅಂದರೆ, ಅದರ ಹಿಂದಿರುವಂಥ ಮಹಾ ಶಕ್ತಿಗಳ ಪ್ರಭಾವದ ಅನುಭವ ತಮಗೆ ಆಗಿರಬೇಕು. ಇವೊತ್ತು ಆ ಶಕ್ತಿಗಳನ್ನು ದಮನ ಮಾಡುವುದಕ್ಕೆ ನೀವು ಹೊರಟಿದ್ದೀರಿ. The so-called excise tycoons who have a hold over political system. politicians, political individuals as such. ಅವನ್ನು ೬ ವರ್ಷಗಳ ಕಾಲ ನಾವು ತಡೆ ಹಿಡಿದಿದ್ದೆವು ಈಗ ನೀವು ಅದನ್ನು ತಡೆ ಹಿಡಿಯುವುದಕ್ಕೆ ಪ್ರಯತ್ನ ಮಾಡಿದ್ದೀರಿ ಇದನ್ನು ಏಕೆ ಹೇಳುತ್ತಿದ್ದೇನೆಂದರೆ, There is a very, very sensitive thing. ನಾವು ಸೆಕೆಂಡ್ಸ್ ಪಾಯಿಂಟ್ ಟರ್ಮಿನಲ್ ಟ್ಯಾಕ್ಸ್ ಇಂಟ್ರಡ್ಯೂಸ್ ಮಾಡಿದಾಗ ಸೆಕೆಂಡ್ಸ್ ಮಾರಾಟ ತಪ್ಪಿಸಬೇಕೆಂದು ನಾವು ವಿಚಾರ ಮಾಡಿದಾಗ ತಾವು ಅದನ್ನು ತೆಗೆಯುವಂಥ ಅಗತ್ಯತೆ ಏಕೆ ಬಂತು. ಏಕೆಂದರೆ There are beneficiaries in any act of the Government. There are bound to be beneficiaries financial beneficiaries or Political beneficiaries. ಆದ್ದರಿಂದ ನೀವು ಇದನ್ನು ಒಳ್ಳೆಯ ಸದ್ಭಾವನೆಯಿಂದ ಮಾಡಿದ್ದರೆ. If it is just to streamline the system I whole heartedly congratulate you. ನೀವು ಟಾಡಿ ಸೇಲ್ ವಿಚಾರದಲ್ಲಿ ತೆಗೆದುಕೊಂಡ ನಿರ್ಣಯವನ್ನು ನಾನು ಒಪ್ಪಿಕೊಳ್ಳುತ್ತೇನೆ. I totally agree that it is one of the most progressive acts We must see the plus side of it. ಇದರಿಂದ ರಾಜ್ಯದ ಬಡಜನರಿಗೆ ದೀನದಲಿತರಿಗೆ ಏನು ಲಾಭ ಇದೆ ಎಂದು ನಮಗೆಲ್ಲಾ ಗೊತ್ತಿದೆ. It is a vicious circle, ನಾನು ಮಾನ್ಯ ರಾಜಶೇಖರ ಮೂರ್ತಿ ಯವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ತಾವುಗಳು ಯಾವುದೇ ಹಿತಾಸಕ್ತಿಗಳ ಕೈವಾಡಕ್ಕೆ ಒಳಗಾಗಬೇಡಿ. ತಮಗೆ ಈ ಸಭೆಯ ಎಲ್ಲಾ ಸದಸ್ಯರು ಈ ವಿಚಾರದಲ್ಲಿ ಒಂದು ಧೈರ್ಯವನ್ನು ಕೊಡುತ್ತಿದ್ದೇವೆ. ಅದನ್ನು ತಾವು ಉಪಯೋಗ ಮಾಡಿಕೊಳ್ಳಿ, ಇದರ ಕುರಿತು ನಾವು ಮತ್ತೆ ಏನು ಸಲಹೆಗಳನ್ನು ಕೊಡಬೇಕೋ ಅದನ್ನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಹೇಳುತ್ತೇನೆ. ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ನಾನು ಸನ್ಮಾನ್ಯ ಸಚಿವರು ಅರ್ಥ. ಈ ಸದನದಲ್ಲಿ ಮಂಡಿಸಿರತಕ್ಕಂಥ ಆಯವ್ಯಯ ಪತ್ರವನ್ನು ಸ್ವಾಗತಿಸುತ್ತಾ ನನ್ನ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸದನದಲ್ಲಿ ಬಜೆಟ್ ಮೇಲೆ ಮಾತನಾಡಿದ ಮಾನ್ಯ ವಿರೋಧಪಕ್ಷದ ಸದಸ್ಯರುಗಳು ಮಾಡಿದ ಭಾಷಣವನ್ನು ಮತ್ತು ಟೀಕೆಯನ್ನು ಕೇಳಿದ್ದೇನೆ. ಅವರು ಹಿಂದೆ ಸುಮಾರು ೬–೭ ವರ್ಷಗಳ ಕಾಲ ಈ ರಾಜ್ಯವನ್ನು ಆಳಿದ್ದು ಮತ್ತು ಅವರ ಆಳ್ವಿಕೆಯ ಕಾಲದಲ್ಲಿ ನಡೆದಂಥ ಆರ್ಥಿಕ ದುರ್ವ್ಯವಸ್ಥೆಯ ಪರಿಸ್ಥಿತಿಯಲ್ಲಿತ್ತು ಮತ್ತು ಆರ್ಥಿಕವಾಗಿ ಕರ್ನಾಟಕ ರಾಜ್ಯ ಯಾವರೀತಿಯ ದುರ್ಬಲತೆಯನ್ನು ಹೊಂದಿತ್ತು ಎಂಬುದನ್ನು ಕೂಡಾ ಮರೆತವರಂತೆ ತಮ್ಮ ತಮ್ಮ ಭಾಷಣದಲ್ಲಿ ಮಾತನಾಡಿದುದನ್ನು ನೋಡಿ ನನಗೆ ಬಹಳಷ್ಟು ನೋವು ಉಂಟಾಯಿತು. ನಾನು ಈ ಹಿಂದೆ ಸದಸ್ಯನಾಗಿದ್ದಾಗ ಇದೇ ಜನರು ಹಿಂದೆ ಈ ಶಾಸನಸಭೆಯಲ್ಲಿ ವಿರೋಧಪಕ್ಷದ ಕಡೆ ಕುಳಿತು ನ್ಯಾಯ ನೀತಿ, ಸುವ್ಯವಸ್ಥೆಯ ಆಡಳಿತ, ಮೌಲ್ಯಾಧಾರಿತ ರಾಜಕಾರಣ ಇತ್ಯಾದಿಗಳ ಬಗ್ಗೆ ಬಹಳಷ್ಟು ಮಾತನಾಡುತ್ತಾ ಇದ್ದರು ಅದೇ ರೀತಿಯಲ್ಲಿ ಸಮೃದ್ಧ ಕರ್ನಾಟಕ ರಾಜ್ಯ ಕಟ್ಟುತ್ತೇವೆ ಎಂದು ಹೇಳಿದ್ದನ್ನು, ಮಾತನಾಡಿದ್ದನ್ನು ಕೂಡ ನಾನು ಕೇಳಿದ್ದೇನೆ. ವಿರೋಧಿ ಪಕ್ಷದಲ್ಲಿದ್ದು ಭಾಷಣ ಮಾಡುತ್ತಿರುವುದನ್ನು ಕೇಳುತ್ತಿದ್ದ ನನಗೆ ಇವರ ಮಾತುಗಳ ಬಗ್ಗೆ ವಿಶ್ವಾಸ ಹೊಂದಿ, ನಾನು ದೇವರಲ್ಲಿ ಪ್ರಾರ್ಥನೆ ಮಾಡುತ್ತಾ ಇದ್ದೆ. ಏನೆಂದರೆ ಇಂತಹ ಜನರು ಆಡಳಿತ ಮಾಡುವ ಒಂದು ಅವಕಾಶವನ್ನು ದೇವರು ಕೊಡಲಿ ಈ ರಾಜ್ಯವನ್ನು ಸಮೃದ್ಧ ರಾಜ್ಯವನ್ನಾಗಿ ಮಾಡುವಂತಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತಿದ್ದೆ. ರಾಜ್ಯದ ಒಳಿತಿನ ಬಗ್ಗೆ ಮಾತ್ರ ಮಾತನಾಡುತ್ತಿದ್ದ ಅವರ ಕಳಕಳಿಯು ಕಾರ್ಯರೂಪಕ್ಕೆ ಬರುವಂತಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತಿದ್ದೆ. ಅದೇ ರೀತಿಯಲ್ಲಿ ಅದೇ ಜನರಿಗೆ ಈ ರಾಜ್ಯವನ್ನು ಆಳಲು ಅಧಿಕಾರವೂ ಸಿಕ್ಕಿತು. ೬–೭ ವರ್ಷಗಳ ಕಾಲ ಅವರು ರಾಜ್ಯವನ್ನು ಆಳಿದರು. ಅವರ ಆಳ್ವಿಕೆ ಮುಗಿಯುವ ಕಾಲದಲ್ಲಿ ಈ ರಾಜ್ಯದ ಪರಿಸ್ಥಿತಿಯು ಹೇಗಿತ್ತು ಎಂದು ನಾನು ವಿವರಿಸಿ ಹೇಳಬೇಕಾಗಿಲ್ಲ. ಇಂಥ ಒಂದು ಆರ್ಥಿಕ ದುರ್ವ್ಯವಸ್ಥೆ ಹಿಂದೆಂದೂ ಇರಲಿಲ್ಲ. ಇವರು ಕೊಟ್ಟ ೫೦ ರೂಪಾಯಿಗಳ ಚೆಕ್ ಕೂಡ ಬೌನ್ಸ್ ಆಗುತ್ತಿದ್ದವು. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಕೊಟ್ಟಿರತಕ್ಕಂಥ ಚೆಕ್ಕುಗಳು ೨ ವರ್ಷಗಳ ಕಾಲವಾದರೂ ಹಾಗೆಯೇ ಉಳಿಯುವಂತಾಯಿತು. ವಿಧವಾ

ಮಾಸಾಶನ, ವೃದ್ಧಾಪ್ಯ ವೇತನ, ಅಂಗವಿಕಲರಿಗೆ ಕೊಡತಕ್ಕಂಥ ವೇತನ, ಒಟ್ಟಾರೆ ದುರ್ಬಲವರ್ಗದವರಿಗೆ ಕೊಡತಕ್ಕಂಥ ಮಾಸಾಶನಗಳನ್ನು ಕೂಡ ಕೊಡಲು ಸಾಧ್ಯವಿಲ್ಲದ ಆರ್ಥಿಕ ದೌರ್ಬಲ್ಯತೆಯಿಂದಾಗಿ ಇವರು ಹೊರಗೆ ಹೋದರು. ಇನ್ನು ಕೆಲವರು ಮಾತನಾಡುವಾಗ ತಮ್ಮ ಆಡಳಿತದಲ್ಲಿ ತಪ್ಪು ಮಾಡಿದ್ದೇವೆ, ಅದು ನಿಜ, ಆದರೆ ನಿಮ್ಮ ಆಡಳಿತದಲ್ಲಿ ಅದೇ ತಪ್ಪುಗಳನ್ನು ನೀವು ಪುನಃ ಮಾಡಬೇಡಿ, ಒಳ್ಳೆಯ ಕೆಲಸ ಮಾಡಿ ಎಂದು ಹಾರೈಸಿದ್ದಾರೆ. ಅದನ್ನು ಕೇಳಿ ನನಗಂತೂ ತುಂಬಾ ಮೆಚ್ಚುಗೆ ಆಯಿತು. ಇನ್ನು ಕೆಲವರು ಮಾತನಾಡುವಾಗ ನಾವು ಸಮೃದ್ಧ ಕರ್ನಾಟಕವನ್ನು ಕಟ್ಟಿದ್ದೇವೆ. ಒಳ್ಳೆಯ ಆಡಳಿತವನ್ನು ನಾವು ಕೊಟ್ಟಿದ್ದೇವೆ, ರಾಜ್ಯದಲ್ಲಿ ಲಂಚರುಷವತ್ತುಗಳು ಇರಲಿಲ್ಲ ಎಂದು ಹೇಳಿದಾಗ ನನಗೆ ವಿಸ್ಮಯವೂ ಆಯಿತು. ಇವರು ಮಾಡಿದ ಇವರ ಆಡಳಿತದ ವೈಪರೀತ್ಯಗಳು ಇವರ ಆತ್ಮಸಾಕ್ಷಿಗೆ ಗೊತ್ತು, ಮತ್ತು ದೇವರಿಗೆ ಗೊತ್ತು. ನಾನು ಅದನ್ನು ಪುನಃ ಹೇಳಲೇ ಬೇಕಾದ ಅವಶ್ಯಕತೆ ಇರಲಾರದು. ಒಂದು ರೀತಿಯಲ್ಲಿ ರಾಕ್ಷಸರ ರೀತಿ ರಾಜ್ಯಭಾರ ನಡೆಸಿದರು. ಜನರನ್ನು ಗುಲಾಮರಂತೆ ಮಾಡಿಕೊಂಡು ತಮಗೆ ಬೇಕಾದ ಹಾಗೆ ಆಡಳಿತ ನಡೆಸಿದರು. ಪೋಲೀಸರು ತಮಗಾಗದವರನ್ನು ದನಗಳನ್ನು ಬಡಿದ ಹಾಗೆ ಬಡಿಯಲು ಶುರು ಮಾಡಿದರು. ಇವರ ರಾಜ್ಯಭಾರದ ಸಮಯದಲ್ಲಿ ಎಷ್ಟೋ ಜನರು ಕಣ್ಣೀರು ಸುರಿಸಿದರು. ಒಮ್ಮೆ ಇವರು ಹೋದರೆ ಸಾಕಪ್ಪ ಎಂಬ ಭಾವನೆಯನ್ನು ಬಹಳಷ್ಟು ಜನರು ತಾಳುವಂತಾಯಿತು.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡುತ್ತಿರುವ ಬಗ್ಗೆ ಕ್ರಿಯಾ ಲೋಪ ಇದೆ. ಇವರು ಮಾತನಾಡುವಾಗ ಬಜೆಟ್ ಮೇಲೆ ಮಾತನಾಡಬೇಕೇ ಹೊರತು ಯಾವುದೇ ಹಿಂದಿನ ಸರಕಾರದ ಆಡಳಿತದ ಬಗ್ಗೆ ಅಲ್ಲ. ಈ ರೀತಿ ಅವರು ದೂಷಣೆ ಮಾಡುತಕ್ಕಂಥಾದ್ದು ಸರಿಯಲ್ಲ. ಇವರು ಕೇವಲ ರಾಜಕೀಯ ಭಾಷಣ ಮಾಡುತ್ತಾ ಇದ್ದಾರೆ.

ಶ್ರೀ ಕೆ.ಹೆಚ್. ಹನುಮೇಗೌಡ.—ಜನ ಸೇರಿರುವ ಜಾಗದಲ್ಲಿ ಅಂದರೆ ಬಸ್ ಸ್ಟಾಂಡಿನಲ್ಲಿ ಸಿನಿಮಾ ಥಿಯೇಟರ್‌ನಲ್ಲಿ, ಬೀದಿಗಳಲ್ಲಿ ಈ ರೀತಿ ಮಾತನಾಡಿದ್ದನ್ನು ಕೇಳಿ ಹೇಳುತ್ತಿದ್ದೇನೆ. ಅದಕ್ಕೆ ತಾವು ಏತಕ್ಕೆ ಸಿಟ್ಟಿಗೇಳುತ್ತೀರಿ ? ತಾವು ಮಾತನಾಡಲು ನಾವು ಅವಕಾಶ ಕೊಟ್ಟ ಹಾಗೆ ನಮಗೂ ತಾವು ಅವಕಾಶ ನೀಡಬೇಕು.

ವಿರೋಧ ಪಕ್ಷದ ಒಬ್ಬರು ಸದಸ್ಯರು.—ತಾವು ಬಜೆಟ್ ಮೇಲೆ ಮಾತನಾಡಿ. ಅದು ಬಿಟ್ಟು ರಾಜಕೀಯ ಭಾಷಣ ಮಾಡುತ್ತಿದ್ದೀರಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ಅದನ್ನೇ ನಾನು ಮಾಡುತ್ತಿರುವುದು. ಆದರೆ ಆ ಕಡೆಯವರು ಬಜೆಟ್ ಪುಸ್ತಕ ಬಿಟ್ಟು ಬೇರೆಲ್ಲ ಮಾತನಾಡಿದರು.

ಡಾ. ಜೀವರಾಜ್ ಆಳ್ವ.—ಬಜೆಟ್ ಪುಸ್ತಕ ಹೊರತುಪಡಿಸಿ ಒಂದು ಶಬ್ದ ಕೂಡ ನಾನು ಎತ್ತಿಲ್ಲ.

ಶ್ರೀ ಎಂ. ರಾಜಶೇಖರಮೂರ್ತಿ.—ಹಾಗಿದ್ದರೆ ನೀವು ಹೇಳಿದ ಗುಸು ಗುಸು ಸುದ್ದಿ ಬಜೆಟ್ ಪುಸ್ತಕದಲ್ಲಿದೆಯೇ ?

ಡಾ. ಜೀವರಾಜ್ ಆಳ್ವ.—ಸೆಕೆಂಡ್ಸ್ ಮಾರಾಟ ಕಟ್ ಮಾಡಿದ್ದರಿಂದ ಹಾಗೆ ಹೇಳಬೇಕಾಯಿತು.

ಶ್ರೀ ಕಾಗೋಡು ತಿಮ್ಮಪ್ಪ.—ಬಜೆಟ್ ಮೇಲೆ ಅನೇಕ ವಿಷಯಗಳ ಮೇಲೆ ವಿಸ್ತಾರವಾಗಿ ಮಾತನಾಡಬಹುದು. ತೀರಾ ಸೀಮಿತವಾಗೇ ಇರಬೇಕೆಂದೇನಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ.—ಅವರು ಮಾತನಾಡಿದ್ದರಿಂದ ನಾನು ಮಾತನಾಡಬೇಕಾಯಿತೆಂದು ಹೇಳಿದೆ. ನಿಮಗೆ ಜ್ಞಾಪಕವಿದ್ದರೆ ಜ್ಞಾಪಿಸಿಕೊಳ್ಳಿ. ಆಗಿನ ವ್ಯವಹಾರಗಳ ಬಗ್ಗೆ ನಿಮ್ಮ ಅಂತರಾತ್ಮವನ್ನು ಕೇಳಿಕೊಂಡರೆ. ಮೊದಲು ಹೇಗಿದ್ದೀರಿ ಹೇಗೆ ನಡೆದುಕೊಂಡಿರಿ, ಆಮೇಲೆ ಹೇಗೆ ಆತ್ಮವಂಚನೆ ಮಾಡಿಕೊಂಡಿರಿ ಎಂಬುದೆಲ್ಲಾ ಗೊತ್ತಾಗುತ್ತವೆ. ನಿಮ್ಮ ಕಾಲದಲ್ಲಿ ಲಂಚವನ್ನು ಲೀಗಲೈಸ್ ಮಾಡಿದಿರಿ. ದುಡ್ಡು ಕೊಟ್ಟ ಹೊರತು ಯಾವ ಕೆಲಸವೂ ಆಗುತ್ತಿರಲಿಲ್ಲ. ಇದಕ್ಕೆ ಯಾರು ಹೊಣೆ? ಚುನಾವಣೆಗಿಂತ ಮುಂಚೆ ಏನೇನು ಮಾಡುತ್ತೀವೆಂದಿದ್ದೀರೋ ಅದರಲ್ಲಿ ಯಾವುದನ್ನೂ ಮಾಡಲಿಲ್ಲ. ನೀವು ತಪ್ಪು ಮಾಡಿದಿರಿ. ಅದಕ್ಕೇ ಈಗ ಅಲ್ಲಿ ಕೂತುಕೊಂಡಿರುವಿರಿ. ನೀವು ಉತ್ತಮರಾಗಿ, ಒಳ್ಳೆಯ ಬುದ್ಧಿ ಕಲಿತು ಜನ ಮತ್ತೆ ಆಶೀರ್ವದಿಸಿದರೆ ಇಲ್ಲಿಗೆ ಬನ್ನಿ. ಅಧ್ಯಕ್ಷರೇ, ಇಷ್ಟನ್ನು ಹೇಳಿ ಮಾನ್ಯ ಅರ್ಥ ಸಚಿವರು ಮಂಡಿಸಿರುವ ಬಜೆಟನ್ನು ಹೃತ್ಪೂರ್ವಕವಾಗಿ ಸ್ವಾಗತಮಾಡಿ ಎರಡು ಮಾತುಗಳನ್ನು ಹೇಳುತ್ತೇನೆ.

ಅಧ್ಯಕ್ಷರೇ, ಈ ಬಜೆಟನ್ನು ಅನೇಕ ವರ್ಗದ ಜನರು ಸ್ವಾಗತ ಮಾಡಿದ್ದಾರೆ. ಏಕೆಂದರೆ, ಇಷ್ಟೊಂದು ಹೀನಸ್ಥಿತಿಯಲ್ಲಿದ್ದ ರಾಜ್ಯದ ಆರ್ಥಿಕ ಸ್ಥಿತಿಯನ್ನು ಪುನಃ ಉತ್ತಮಪಡಿಸುವುದಕ್ಕೆ ಅರ್ಥ

ಸಚಿವರು ತುಂಬಾ ಪ್ರಯತ್ನ ಮಾಡಿ ಉತ್ತಮ ಬಜೆಟನ್ನು ಈ ಸಲ ಮಂಡನೆ ಮಾಡಿದ್ದಾರೆ. ಆದ್ದರಿಂದ ನಾನಾ ವರ್ಗದ ಜನರು ಇದನ್ನು ಸ್ವಾಗತಿಸಿದ್ದಾರೆ. ಮಾನ್ಯ ಅರ್ಥಸಚಿವರು ಮಾಡಿರುವ ದೊಡ್ಡ ಕೆಲಸ ಏನೆಂದರೆ, ಹೆಂಡದ ಮಾರಾಟವನ್ನು ನಿಷೇಧಿಸಿರುವುದು. ಯಾರು ದೇಶಕ್ಕೋಸ್ಕರ ಹಗಲೂ ರಾತ್ರಿ ದುಡಿಯುತ್ತಿರುವವರೋ ಅಂಥ ರೈತ ಕಾರ್ಮಿಕರು, ರೈತರು, ದೀನದಲಿತರುಗಳ ಉದ್ಧಾರವನ್ನು ಗಮನದಲ್ಲಿಟ್ಟುಕೊಂಡು ಹೆಂಡ ಮಾರಾಟವನ್ನು ನಿಷೇಧಿಸಿದ್ದಾರೆ. ಇದನ್ನು ಇಡೀ ದೇಶದ ಜನತೆ ಒಂದೇ ಮನಸಿನಿಂದ ಸ್ವಾಗತಿಸಿದ್ದಾರೆ. ದೇಶಕ್ಕಾಗಿ ದುಡ್ಡು ಕೊಡಿಸುವುದೇ ದೊಡ್ಡ ಕೆಲಸವಲ್ಲ, ಆದರೆ ದೇಶದ ಜನರ ಆರೋಗ್ಯ ಸ್ಥಿತಿಯನ್ನು ಕೂಡ ನಾವು ಗಮನದಲ್ಲಿಟ್ಟುಕೊಳ್ಳಬೇಕು. ಮತ್ತು ಕುಡಿತದಿಂದಾಗುವ ಕೆಟ್ಟ ಪರಿಣಾಮವನ್ನು ಯೋಚನೆ ಮಾಡಿ ಸರ್ಕಾರದವರು ಈ ನಿರ್ಧಾರ ತೆಗೆದುಕೊಂಡಿರುವುದು ಬಹಳ ಮೆಚ್ಚತಕ್ಕಂಥ ವಿಚಾರವಾಗಿದೆ.

ಇನ್ನು ಎರಡನೇ ವಿಷಯವೆಂದರೆ, ಪಟ್ಟಣ ಪ್ರದೇಶಗಳಲ್ಲಿ ನೀರಿನ ಸರಬರಾಜಿನ ಬಗ್ಗೆ ಒಂದು ವ್ಯವಸ್ಥೆಯನ್ನು ಕಲ್ಪಿಸಲು ಒಂದು ಕಾರ್ಯಕ್ರಮವನ್ನು ರೂಪಿಸಿದ್ದಾರೆ.

ಇವೊತ್ತು ಅನೇಕ ಮುನಿಸಿಪಾಲಿಟಿಗಳವರು ಜನರಿಗೆ ಕುಡಿಯುವ ನೀರನ್ನು ಕೊಡತಕ್ಕಂಥ ವಿಚಾರದಲ್ಲಿ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಸುಮಾರು ೩೦–೩೫ ಪಟ್ಟಣಗಳಲ್ಲಿ ಲೈಫ್ ಇನ್‌ಷೂರೆನ್ಸ್ ಕಾರ್ಪೊರೇಷನ್, ಹುಡ್ಕೋ ಸ್ಕೀಮ್‌ಗಳಿಂದ ಹಣದ ಸಹಾಯವನ್ನು ಪಡೆದು ನೀರನ್ನು ಸುವ್ಯವಸ್ಥಿತವಾಗಿ ಹಂಚುವುದಕ್ಕೆ ಮಾಡಿರತಕ್ಕಂಥ ಒಂದು ವ್ಯವಸ್ಥೆ ಬಹಳ ಶ್ಲಾಘನೀಯವಾಗಿದೆ. ಇದು ತುಂಬಾ ಉತ್ತಮವಾದ ಕೆಲಸ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ, ಒಂದು ಸಲಹೆಯನ್ನು ನಾನು ಮಾನ್ಯ ಅರ್ಥ ಸಚಿವರಿಗೆ ಈ ಸಂದರ್ಭದಲ್ಲಿ ಕೊಡುವುದಕ್ಕೆ ಬಯಸುತ್ತೇನೆ. ಬೆಂಗಳೂರು ಪಟ್ಟಣದಲ್ಲಿ ಈಗ ಸುಮಾರು ನಲವತ್ತು ಲಕ್ಷ ಜನಸಂಖ್ಯೆ ಇದೆ. ಬೆಂಗಳೂರು ಪಟ್ಟಣದವರಿಗೆ ಕುಡಿಯುವ ನೀರಿನ ಯೋಜನೆಗಾಗಿ ಪ್ರತಿವರ್ಷ ಸರ್ಕಾರ ೩೫–೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಆದರೆ ಸುಮಾರು ಒಂದು ಲಕ್ಷ ಮೇಲ್ಪಟ್ಟು ಇರತಕ್ಕಂಥ ರಾಜ್ಯದ ಸುಮಾರು ೪೦–೫೦ ನಗರಗಳು ಮತ್ತು ಪಟ್ಟಣಗಳ ಜನಸಂಖ್ಯೆ ಬಹುಶಃ ಎಂಬತ್ತು ಲಕ್ಷದವರೆಗೆ ಬರಬಹುದು ಎಂದು ಕಾಣುತ್ತದೆ, ಇಷ್ಟು ಜನರಿಗೆ ಒದಗಿಸುತ್ತಿರತಕ್ಕಂಥ ಹಣ ಬಹಳ ಕಡಿಮೆ ಇದೆ. ಕಳೆದ ಮೂರು ವರ್ಷಗಳಲ್ಲಿ ೨೧ ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆ. ಕಳೆದ ವರ್ಷ ೨೦ ಕೋಟಿ ರೂಪಾಯಿ ಕೊಟ್ಟಿದ್ದಾರೆ, ಈ ವರ್ಷದ ಬಜೆಟ್‌ನಲ್ಲಿ ೧೫ ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆ, ಅಂದರೆ ಈ ಸಲ ಐದು ಕೋಟಿ ರೂಪಾಯಿಯನ್ನು ಇಳಿಸಿದ್ದಾರೆ. ಈ ರೀತಿ ಕೊಡುವ ಹಣ ಬಹಳ ಕಡಿಮೆಯಾಗಿದೆ. ಸಾಧ್ಯವಾದಷ್ಟು ಮಟ್ಟಿಗೆ ಈ ಹಣವನ್ನು ಹೆಚ್ಚಿಸಬೇಕು ಎಂದು ಮಾನ್ಯ ಸಚಿವರಲ್ಲಿ ನಾನು ಜನರ ಪರವಾಗಿ ಕೇಳಿಕೊಳ್ಳುತ್ತೇನೆ. ಕೊನೆಯ ಪಕ್ಷ ಕಳೆದ ವರ್ಷಕ್ಕಿಂತ ೧೫–೨೦ ಕೋಟಿ ರೂಪಾಯಿಯನ್ನಾದರೂ ಜಾಸ್ತಿ ಮಾಡಬೇಕು ಎಂದು ಹೇಳುತ್ತಾ ಬೆಂಗಳೂರು ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆಗೆ ಎಷ್ಟು ಹಣವನ್ನು ಕೊಟ್ಟಿದ್ದೀರೋ ಅಷ್ಟೇ ಹಣವನ್ನು ರಾಜ್ಯದಲ್ಲಿರುವ ಪಟ್ಟಣಗಳ ನೀರಿನ ವ್ಯವಸ್ಥೆಗಾಗಿ ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ಪಟ್ಟಣ ಪ್ರದೇಶಗಳಲ್ಲಿ ನೀರಿನ ಹಂಚಿಕೆಯನ್ನು ಮಾಡುವಾಗ ಮುನಿಸಿಪಾಲಿಟಿಯವರು ಅಥವಾ ಕಾರ್ಪೊರೇಷನ್‌ನವರು ನೀರಿನ ಮ್ಯಾನೇಜ್‌ಮೆಂಟ್‌ನ್ನು ನೋಡಿಕೊಳ್ಳುವುದರ ಬದಲು ಏನು ಈಗ ಅರ್ಬನ್ ಡೆವಲಪ್‌ಮೆಂಟ್ ಮತ್ತು ಸಿವರೇಜ್ ಬೋರ್ಡ್‌ಗಳು ಇವೆ ಆ ಬೋರ್ಡ್‌ನವರ ಮುಖಾಂತರ ನೀರನ್ನು ಸಪ್ಲೈ ಮಾಡುವ ವ್ಯವಸ್ಥೆಯನ್ನು ಮಾಡಿ ಇಂಡಿವಿಜ್ಯುಯಲ್ ಹೌಸಸ್‌ಗೆ ನೀರನ್ನು ಕೊಡುವ ವ್ಯವಸ್ಥೆಯನ್ನು ಮುನಿಸಿಪಾಲಿಟಿ ಅಥವಾ ಕಾರ್ಪೊರೇಷನ್ ಅವರಿಗೆ ಕೊಡುವುದು ಉತ್ತಮ ಎಂದು ಹೇಳುತ್ತೇನೆ. ಏಕೆಂದರೆ ಎಷ್ಟೋ ಸಂದರ್ಭಗಳಲ್ಲಿ ನೀರನ್ನು ಸರಿಯಾಗಿ ಕ್ಲೀನ್ ಮಾಡುತ್ತಿಲ್ಲ. ಇದರ ಬಗ್ಗೆ ಮುನಿಸಿಪಾಲಿಟಿಯವರಿಗೆ ಕಂಪ್ಲೇಂಟ್ ಕೂಡಾ ಬರುತ್ತಿದೆ. ನೀರಿಗೆ ಬ್ಲೀಚಿಂಗ್ ಪೌಡರನ್ನು ಹಾಕುತ್ತಾರೆ, ಕಾಸ್ಟ್ಲಿ ಬ್ಲೀಚಿಂಗ್ ಪೌಡರನ್ನು ನೀರಿಗೆ ಮಿಕ್ಸ್ ಮಾಡುವುದಿಲ್ಲ. ಸರಿಯಾದ ಪ್ರಮಾಣದಲ್ಲಿ ಇದನ್ನು ಹಾಕುತ್ತಿಲ್ಲ ಇದರಿಂದ ತುಂಬಾ ಅನಾನುಕೂಲವಾಗಿ ಜನರ ಆರೋಗ್ಯ ಕೆಡುತ್ತಿರುವುದರಿಂದ ಅದರ ಬದಲಿಗೆ ನೀರಿಗೆ ಕ್ಲೋರಿನ್ ಗ್ಯಾಸನ್ನು ಮಿಕ್ಸ್ ಮಾಡಿಬಿಡುವುದರಿಂದ ಈ ಅನಾನುಕೂಲಗಳನ್ನು ತಪ್ಪಿಸಬಹುದು. ಆದ್ದರಿಂದ ಈ ವ್ಯವಸ್ಥೆಯನ್ನು ಕಡ್ಡಾಯವಾಗಿ ಜಾರಿಗೆ ತರಬೇಕು ಎಂದು ಹೇಳುತ್ತೇನೆ, ಇನ್ನು ಪಂಚಾಯತ್ ರಾಜ್ ಇಲಾಖೆಯ ಬಗ್ಗೆ ಹೇಳುವುದಾದರೆ, ಈ ದಿಸೆಯಲ್ಲಿ ವಿಕೇಂದ್ರೀಕರಣದ ಒಂದು ದೊಡ್ಡ ಹೆಜ್ಜೆಯನ್ನು ಇಟ್ಟಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಬಹುಶಃ ಈ ವಿಕೇಂದ್ರೀಕರಣ ಎನ್ನುವ ಬಗ್ಗೆ ಗ್ರಾಮಾಂತರ ಪ್ರದೇಶದಲ್ಲಿ ಸಂಚಾರ ಮಾಡಿದಾಗ ನಾನು ಅನೇಕ ಜನರನ್ನು ಕೇಳಿದ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಯ ಈಗಿನ ಸಿಸ್ಟಂನ್ನು ಇಂಟ್ರುಡ್ಯೂಸ್ ಮಾಡಿರುವುದರಿಂದ ನಿಮಗೆ ಏನ

ಪ್ರಯೋಜನವಾಗಿದೆ ಎಂದು ನಾನು ಜನರನ್ನು ಕೇಳಿದ್ದಕ್ಕೆ ಅವರು ಏನು ಹೇಳಿದರೆಂದರೆ ಇದು ಅಧಿಕಾರ ವಿಕೇಂದ್ರೀಕರಣ ಅಲ್ಲ ಪಟ್ಟಣದಲ್ಲಿ ಭ್ರಷ್ಟಾಚಾರ ಇತ್ತಲ್ಲ, ಆ ಭ್ರಷ್ಟಾಚಾರ ವಿಕೇಂದ್ರೀಕರಣವಾಗಿ ಹಳ್ಳಿ ಹಳ್ಳಿಗೂ ಒಂದು ಹೋಯಿತು ಎನ್ನುವ ಮಾತನ್ನು ಅನೇಕ ಜನರು ಹೇಳಿದರು. ಇದಕ್ಕೆ ಕಾರಣವೇನು ಎಂದರೆ ಮೊದಲು ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿಗಳ ವ್ಯವಸ್ಥೆ ಇದ್ದಾಗ ಇಷ್ಟೊಂದು ಪ್ರಮಾಣದಲ್ಲಿ ಭ್ರಷ್ಟಾಚಾರ ಇರಲಿಲ್ಲ. ಸ್ವಲ್ಪ ಭಯಭೀತಿಯಿಂದ ಕೆಲಸ ಕಾರ್ಯಗಳು ನಡೆಯುತ್ತಿತ್ತು, ಜನ ನೆಮ್ಮದಿಯಿಂದ ಇದ್ದರು. ಹಿಂದೆ ಈ ಪಂಚಾಯಿತಿಗಳಿಗೆ ಪಾರ್ಟಿ ಸಿಸ್ಟಂ ಮೇಲೆ ಕ್ಯಾಂಡಿಡೇಟ್ಸ್‌ಗಳನ್ನು ಹಾಕುತ್ತಿರಲಿಲ್ಲ. ಆಗ ಆಯಾ ಹಳ್ಳಿಯಲ್ಲಿನ ಮುಖ್ಯಸ್ಥರೋ ಯೋಗ್ಯರೋ, ಉತ್ತಮರೋ ಯಾರೋ ನಿಂತುಕೊಳ್ಳುತ್ತಿದ್ದರು. ಆ ಸಿಸ್ಟಂ ಬಹಳ ಚೆನ್ನಾಗಿ ನಡೆದುಕೊಂಡು ಹೋಗುತ್ತಿತ್ತು. ಎರಡು-ಮೂರು ಹಳ್ಳಿಯವರು ಒಂದು ಕಡೆ ಸೇರಿಕೊಳ್ಳುತ್ತಿದ್ದರು. ಈ ರೀತಿಯ ಗಲಾಟೆ ವಗೈರೆ ಯಾವುದೂ ಇರಲಿಲ್ಲ. ಈಗ ೧೫-೨೦ ಹಳ್ಳಿಗಳನ್ನು ಸೇರಿಸಿ ಮಂಡಲ ಪಂಚಾಯಿತಿಗಳನ್ನಾಗಿ ಮಾಡಿರುವುದರಿಂದ ಇವತ್ತು ಏನಾಗಿದೆ ಎಂದರೆ ಯಾರು ಮೆಜಾರಿಟಿಯಲ್ಲಿ ಆರಿಸಿ ಬರುತ್ತಾರೋ ಎಲ್ಲಾ ಅವರದೇ ಆಗಿ ಬಿಟ್ಟಿದೆ. ಅವರು ಹೇಳಿದ್ದೇ ಕಾನೂನು. ಎರಡನೆಯದು ಎಂದರೆ ಸರ್ಕಾರ ಕೊಟ್ಟಂಥ ಯಾವ ಹಣ ಕೂಡಾ ಮಂಡಲ ಪಂಚಾಯಿತಿಗಳಲ್ಲಿ ಸರಿಯಾಗಿ ಖರ್ಚಾಗುತ್ತಿಲ್ಲ.

೨-೩೦ ಪಿ.ಎಂ.

ಲೂಟ್ ಎನ್ನುವ ಪದವನ್ನು ಏನಾದರೂ ವ್ಯವಸ್ಥಿತವಾದ ರೀತಿಯಲ್ಲಿ ಯಾರಾದರು ನೋಡಬೇಕು ಎಂದರೆ ಈ ಮಂಡಲ್ ಪಂಚಾಯತ್‌ಗೆ ಹೋಗಿ ನೋಡಬೇಕು. ಜವಾಹರ್ ರೋಜ್‌ಗಾರ್ ಯೋಜನೆಗೆ ಕೊಟ್ಟಂತಹ ಹಣ ೧೦೦ಕ್ಕೆ ೯೦ರಷ್ಟು ಭಾಗ ಸದ್ವಿನಿಯೋಗ ಆಗಿಲ್ಲ. ಅವರು ಮಾಡಿರತಕ್ಕ ಕೆಲಸ ಯಾವುದು ಅಂದರೆ, ಯಾವುದೋ ಹಳೆ ಕಾಲದಲ್ಲಿರತಕ್ಕ ರೋಡ್‌ಗಳನ್ನು ಕೆತ್ತುವುದು ಬಿಲ್ ಮಾಡುವುದು, ದುಡ್ಡು ಹೊಡೆಯುವುದು ಈ ಬಗ್ಗೆ ಅವರಿಗೆ ಯಾವುದೇ ರೀತಿಯ ಭಯ ಭೀತಿ ಇಲ್ಲ. ಪ್ರತಿಯೊಂದು ಪಂಚಾಯತ್‌ಗೆ ಬರತಕ್ಕ ಹಣ ಒಂದು ಲಕ್ಷ. ಎರಡು ಲಕ್ಷ, ಎರಡು ಲಕ್ಷ ಎಂಭತ್ತೈದು ಸಾವಿರ ಹೀಗೆ ಒಂದೊಂದು ಮಂಡಲ್‌ಗೆ ರೋಜ್‌ಗಾರ್ ಯೋಜನೆಯಿಂದ ಹಣ ಬಂದಿದೆ. ಬಂದ ತಕ್ಷಣ ಏನು ಮಾಡುತ್ತಾರೆ ? ಅದರ ಮೇಲ್ಪಟ್ಟವರು ಯಾರಿಗೂ ಅಧಿಕಾರ ಇಲ್ಲ. ೪-೫-೬ ಅಥವಾ ಪ್ರತಿ ಮೆಂಬರಿಗೆ ಒಂದೊಂದು ಕೆಲಸ ಮಂಜೂರು ಆಗಿರುತ್ತದೆ. ಕಾನೂನು ಕಟ್ಟಲೆ ಪ್ರಕಾರ ಯಾವುದೇ ಮಂಜೂರಾತಿ ಆಗುವುದಿಲ್ಲ. ಉದಾಹರಣೆಗೆ ಹೇಳಬೇಕೆಂದರೆ ನಾನು ರೋಜ್‌ಗಾರ್ ಯೋಜನೆಯ ಕೆಲಸವನ್ನು ಚೆಕ್ ಮಾಡಬೇಕು ಎಂದು ಹೋಗಿ ನೋಡಿದಾಗ Gravel quoting the ಹರಿಜನ ಕಾಲೋನಿ Gravel quoting the approcah Road, ಎಂದು ಹೇಳಿ Gravel quoting the this road that road ಎಂದು ಕೊಡು ಸುಮಾರು ಒಂದು ಲಕ್ಷ ೮೫ ಸಾವಿರ ರೂಪಾಯಿಗಳ ಹಣವನ್ನು ಖರ್ಚು ಮಾಡಿದ್ದಾರೆ ಇಂಜಿನಿಯರ್ ಹಾಗೂ ಸಂಬಂಧಪಟ್ಟ ಬಿ.ಡಿ.ಓ. ಆಫೀಸರ್ ಅವರನ್ನು ಕರೆದುಕೊಂಡು ಹೋಗಿ, ಏತಕ್ಕೆ ಈ ರೀತಿ ಖರ್ಚು ಹಾಕಿದ್ದೀರಿ ಎಂದು ಕೇಳಿದೆ ನಿಮ್ಮ ಕಾನೂನು ಪ್ರಕಾರ ೨೫ ಪರ್ಸೆಂಟ್ ಹಣ ಕಾಡುಮರ ಬೆಳೆಸುವುದಕ್ಕೆ ಉಪಯೋಗಿಸಬೇಕೆಂದು ಕೇಳಿದ್ದೇನೆ. ೧೮ಪರ್ಸೆಂಟ್ ಅನ್ನು ಹರಿಜನ ಶ್ರೇಯೋಭಿವೃದ್ಧಿಗೋಸ್ಕರ ಖರ್ಚು ಮಾಡಬೇಕು, ಉಳಿದಿದ್ದು ಅಭಿವೃದ್ಧಿ ಕೆಲಸಗಳಿಗೆಂದು ಕನ್‌ಸ್ಟ್ರಕ್ಟೀವ್ ವರ್ಕ್ಸ್‌ಗೆ ಉಪಯೋಗ ಮಾಡಬೇಕು ಎಂಬ ನಿಬಂಧನೆ ಇದೆಯಲ್ಲ. ಎಂದು ಕೇಳಿದೆ, ಬರೇ ಗ್ರಾವೆಲ್ ಕೋಟಿಂಗ್‌ಗೆ ದುಡ್ಡು ಹೊಡೆದಿದ್ದೀರಲ್ಲ ಎಂದರೆ, ಇಲ್ಲ ಸ್ವಾಮಿ, ನಮಗೆ ಇಷ್ಟ ಬಂದ ಹಾಗೆ ಮಾಡಬಹುದು, ಯಾರೂ ಏನೂ ಕೇಳುವ ಹಾಗೆ ಇಲ್ಲ ಎಂದು ಹೇಳಿದರು. ಈಗ ಮೇಲ್ಮಟ್ಟದ ರಾಜಕೀಯ ಭ್ರಷ್ಟಾಚಾರ ಏನು ಇದೆಯೋ ಅಷ್ಟೇ ಅಥವಾ ಅದಕ್ಕಿಂತಲೂ ಜಾಸ್ತಿ ಭ್ರಷ್ಟಾಚಾರ ಈ ಮಂಡಲ್ ಪಂಚಾಯತ್‌ಗಳಿಗೆ ತೆಗೆದುಕೊಂಡು ಹೋಗಿ ಇಟ್ಟಂತಹ ಕೀರ್ತಿ ಹಿಂದಿನ ಸರ್ಕಾರಕ್ಕೆ ಸೇರುತ್ತದೆ, ಅದು ಈ ಸರ್ಕಾರಕ್ಕೆ ಸೇರತಕ್ಕದ್ದು ಅಲ್ಲ. ಯಾವುದೇ ಹಳ್ಳಿಗೆ ಹೋಗಲಿ, ಯಾರನ್ನೇ ಕೇಳಲಿ, ಈ ಹೊಸ ಪದ್ಧತಿ ಜಾರಿಗೆ ತಂದು ಮಾಡಬಾರದ್ದನ್ನೆಲ್ಲಾ ಮಾಡಿ ಗ್ರಾಮಾಂತರ ಪ್ರದೇಶದಲ್ಲಿ ನೆಮ್ಮದಿಯ ಜೀವನವನ್ನು ಕಲಕಿದರು. ಅದೇನೋ ಮೆಂಬರ್‌ಗಳೆಂದು ಹೇಳಿ ಸಾವಿರಾರು ರೂಪಾಯಿ ದುಡ್ಡು ಖರ್ಚು ಮಾಡುತ್ತಾರೆ. ಮೋಟಾರ್ ಬೈಕ್‌ನಲ್ಲಿ ಬಂದು ಮಾಡಬಾರದ ವ್ಯವಹಾರವನ್ನೆಲ್ಲಾ ಮಾಡುತ್ತಿದ್ದಾರೆ. ಇಷ್ಟು ಬಿಟ್ಟು ಏನೂ ಮಂಡಲ್ ಪಂಚಾಯತ್‌ನಿಂದ ಯಾವ ಪ್ರಯೋಜನವೂ ಜನರಿಗೆ ಆಗುವುದಿಲ್ಲ ಎಂದು ಹೇಳುತ್ತೇನೆ. ಹಾಸನ ಜಿಲ್ಲಾ ಪರಿಷತ್‌ನಲ್ಲಿ ಸುಮಾರು ೭೦ ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಲಾಗಿದೆ. ಮನುಷ್ಯ ಅಲ್ಲ ಬ್ರಹ್ಮನೇ ಬಂದರೂ ಸಹಿತ ಯಾವಯಾವ ಐಟಮ್‌ಗೆ ಖರ್ಚು ಮಾಡಲಾಗಿದೆ, ಯಾರಿಗೆ ಇದರಿಂದ ಉಪಯೋಗ ಆಗಿದೆ ಎಂದು ಕಂಡು ಹಿಡಿಯುವುದಕ್ಕೆ ಆಗುವುದಿಲ್ಲ. ಅಷ್ಟರಮಟ್ಟಿಗೆ

ಈ ಒಂದು ವ್ಯವಸ್ಥೆ ಮಾಡಿ ದೇಶದ ಆರ್ಥಿಕ ವ್ಯವಸ್ಥೆಯು ಸರ್ವನಾಶ ಆಗಿದೆ. ಇವೊತ್ತು ನೀವು ಏನಾದರೂ ಈ ಕಡೆಯಿಂದ ಆ ಕಡೆಗೆ ಹೋಗಿ ಕುಳಿತಿರಬೇಕಾದರೆ ಇದೇ ಮೂಲ ಕಾರಣ. ಏನು ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ನೆಮ್ಮದಿಯನ್ನು ಕಲಕಿ ಹಾಗೂ ಈ ಭ್ರಷ್ಟಾಚಾರವನ್ನು ಎಸ್ಟಾಬ್ಲಿಷ್ ಮಾಡಿ ಸರ್ವ ವಿಧದಲ್ಲಿ ಎಲ್ಲರಿಗೂ ದುಡ್ಡು ಹೋಗಬೇಕೆಂದು ಮಾಡಿರುವ ತೀರ್ಮಾನದ ಪಾಪದ ಫಲವಾಗಿ ಇವೊತ್ತು ಬಹುಶಃ ನೀವು ಅಧಿಕಾರ ಕಳೆದುಕೊಂಡಿದ್ದೀರಿ ಎಂದು ಹೇಳಿದರೆ ತಪ್ಪಾಗಲಾರದು. ನಾನು ಇನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ, ಈ ದೇಶ ಸಮೃದ್ಧ ಆಗಬೇಕಾದರೆ ಗ್ರಾಮಾಂತರ ಪ್ರದೇಶದಲ್ಲಿ ನೆಮ್ಮದಿ ನೆಲಸಿ ಜನರು ಶಾಶ್ವತವಾಗಿ ನೆಮ್ಮದಿಯಿಂದ ಬದುಕಬೇಕಾದರೆ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳ ಆಕ್ಟ್ ಏನು ಇದೆ ಅದನ್ನು ಎಷ್ಟು ಜಾಗ್ರುತೆ ಸಾಧ್ಯವಾದರೆ ಅಷ್ಟು ಜಾಗ್ರುತೆ ಅಬಾಲಿಷ್ ಮಾಡಬೇಕು. ಈ ರೀತಿ ಅಬಾಲಿಷ್ ಮಾಡಿ ಮೊದಲು ಇದ್ದ ಹಾಗೆ ತಾಲ್ಲೂಕ್ ಬೋರ್ಡ್ ಮತ್ತು ಪಂಚಾಯತ್ ವ್ಯವಸ್ಥೆಯನ್ನು ಜಾರಿಗೆ ತಂದು ಆ ಜನರು ತಮ್ಮ ವ್ಯವಹಾರವನ್ನು ತಾವೆ ಫೈಸಲ್ ಮಾಡಿಕೊಳ್ಳುವಂಥ ವ್ಯವಸ್ಥೆ ಮಾಡುವುದರ ಜೊತೆಗೆ ಅವರು ನೆಮ್ಮದಿಯಾಗಿ ಜೀವನ ಮಾಡುವ ಹಾಗೆ ಮಾಡುವುದಕ್ಕೆ ಅವಕಾಶ ಕಲ್ಪಿಸುವುದು ಅತಿ ಮುಖ್ಯ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೂ ಒಂದು ವಿಚಾರ. ಅಧಿಕಾರಿಗಳ ನಿವೃತ್ತಿ ವಯಸ್ಸನ್ನು ೫೫ ವರ್ಷಗಳಿಗೆ ಇಳಿಸುತ್ತೇವೆಂಬ ಒಂದು ಇಂಡಿಕೇಶನ್ ಕೊಟ್ಟಿದ್ದೀರಿ. ಇದನ್ನು ಬಹಳ ಜನ ಸ್ವಾಗತ ಮಾಡುತ್ತಾರೆ. ಏಕೆಂದರೆ ಅನೇಕ ಕಿರಿಯ ಅಧಿಕಾರಿಗಳು ಪ್ರಮೋಷನ್ ಇಲ್ಲದೆ ಅನೇಕ ವರ್ಷಗಳಿಂದ ಕಾಯುತ್ತಿದ್ದಾರೆ. ಅಂತಹವರು ನಮಗೆ ದೇವರ ದಯೆಯಿಂದ ಈ ರೀತಿ ಆದರೆ ಸಾಕು, ನಮಗೆ ಜೀವನದಲ್ಲಿ ಒಳ್ಳೆಯ ಪ್ರಮೋಷನ್ ಸಿಗುತ್ತದೆ ಎಂದು ಹಾಗೂ ಒಳ್ಳೆಯ ಹುದ್ದೆ ದೊರಕುತ್ತದೆ ಎಂದು ಒಂದು ವರ್ಗದವರು ಹೇಳಿದರೆ, ಮತ್ತೊಂದು ಕಡೆ ಲಕ್ಷಾಂತರ ಜನ ವಿದ್ಯಾವಂತ ನಿರುದ್ಯೋಗಿಗಳು. ಆದರಲ್ಲೂ ವಯಸ್ಸು ಮೀರುತ್ತಿರುವವರು ಕೆಲಸವಿಲ್ಲದೆ ಬೀದಿ ಬೀದಿಯಲ್ಲಿ ಅಲೆದಾಡುತ್ತಿದ್ದಾರೆ, ಅವರುಗಳು ಕೆಲಸ ಸಿಕ್ಕಬಹುದೆಂಬ ನಿರೀಕ್ಷೆಯಲ್ಲಿ ಇದ್ದಾರೆ. ಇವರದನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಿವೃತ್ತಿ ವಯಸ್ಸನ್ನು ತಕ್ಷಣ ೫೫ ವರ್ಷಗಳಿಗೆ ಇಳಿಸಬೇಕಾದ್ದು ಬಹಳ ಮುಖ್ಯ. ದಯವಿಟ್ಟು ಇದನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಅರ್ಥ ಸಚಿವರಲ್ಲಿ. ಹಾಗೂ ಸರ್ಕಾರದವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಪಂಚಾಯಿತಿ ಬಗ್ಗೆ ಮಾತನಾಡುವಾಗ ಇನ್ನೊಂದು ವಿಚಾರ ಹೇಳುವುದನ್ನು ಮರೆತುಬಿಟ್ಟೆ. ಕಬ್ಬನ್ ಪಾರ್ಕಿನಲ್ಲಿ ಮಂಡಲ ಪಂಚಾಯಿತಿಗಳಲ್ಲಿ ಕೆಲಸ ಮಾಡುತ್ತಿರುವ ಕೆಳವರ್ಗದ ಸುಮಾರು ೮–೧೦ ಸಾವಿರ ನೌಕರರು ಮೂರು ದಿವಸಗಳಿಂದ ಸತ್ಯಾಗ್ರಹ ಹೂಡಿದ್ದಾರೆ. ನಾನು ನಿನ್ನೆ ಹೋಗಿ ಅವರನ್ನು ವಿಚಾರಿಸಿದೆ. ಅನೇಕ ಜನ ಹೆಂಗಸರು ಬಂದಿದ್ದಾರೆ. ಯಾರು ಶಿಶುವಿಹಾರಕ್ಕೆ ಮಕ್ಕಳನ್ನು ಕರೆದುಕೊಂಡು ಬರುವ ಅಟೆಂಡರ್‌ಗಳು ಬೀದಿ ಕ್ಲೀನ್ ಮಾಡುವವರು ಹೀಗೆ ಸಣ್ಣಪುಟ್ಟ ಕೆಲಸಗಳನ್ನು ಮಾಡತಕ್ಕಂಥ ನೌಕರರಿಗೆ ತಿಂಗಳಿಗೆ ಕೊಡುತ್ತಾ ಇರತಕ್ಕಂಥ ಸಂಬಳ ೩೦ ರೂಪಾಯಿಗಳು ನಾನು ಸದನದ ಮುಖಾಂತರ ಮಾನ್ಯ ಸಚಿವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ೩೦ ರೂಪಾಯಿಯಲ್ಲಿ ಆ ಜನ ಏನು ಮಾಡಬೇಕು, ಹೇಗೆ ಜೀವನ ಮಾಡಬೇಕು. ಟೌನ್‌ನಲ್ಲಿ ಕೆಲವು ಉತ್ತಮವಾದ ಹೋಟೆಲುಗಳಿವೆ ಎಂದು ಏನು ನಾವು ಹೇಳುತ್ತೇವೆ ಆ ಹೋಟೆಲುಗಳಿಗೆ ಹೋಗಿ ಕಾಫಿ ಕುಡಿದರೆ ಒಂದು ಕಾಫಿಗೆ ೨ ರೂಪಾಯಿಯಿಂದ ಹಿಡಿದು ೮ ರೂಪಾಯಿಗಳವರೆಗೆ ಚಾರ್ಜ್ ಮಾಡುತ್ತಾರೆ. ಸಣ್ಣ ಹಳ್ಳಿಯಲ್ಲಿರತಕ್ಕಂಥ ಹೋಟೆಲಿಗೆ ಹೋದರೂ ಕೂಡ ಕಾಫಿ ಚಾರ್ಜ್ ಒಂದು ರೂಪಾಯಿ ಒಂದೂ ಕಾಲು ರೂಪಾಯಿ ಇರತಕ್ಕಂಥ ಕಾಲದಲ್ಲಿ ದಿವಸಕ್ಕೆ ಒಂದು ಲೋಟ ಕಾಫಿ ಕುಡಿದರೂ ಕೂಡ ತಿಂಗಳಿಗೆ ೩೦ ರೂಪಾಯಿ ಚಾರ್ಜ್ ಆಗುತ್ತದೆ. ಇಂತಹ ಪರಿಸ್ಥಿತಿ ಇರುವಾಗ ೩೦ ರೂಪಾಯಿ ಅವರಿಗೆ ಸಂಬಳ ಕೊಟ್ಟು ನೀನು ಕೆಲಸ ಮಾಡು ಎಂದು ಹೇಳುವುದು ಏನಿದೆ ಇದನ್ನು ಯಾವ ದೇವರು ಮೆಚ್ಚುತ್ತಾನೆ. ಈ ಬಗ್ಗೆ ಯಾವ ಕಾನೂನು ಇದೆ ಇದನ್ನು ಯಾರಿಗೋಸ್ಕರ ಮಾಡಿದಿರಿ ಎಂದು ನನಗೆ ಅರ್ಥವಾಗುತ್ತಾ ಇಲ್ಲ. ಒಂದು ಕಡೆ ತಿಂಗಳಿಗೆ ೭ ಸಾವಿರ, ೮ ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳತಕ್ಕ ಅಧಿಕಾರ ವರ್ಗದವರು, ಇನ್ನೊಂದು ಕಡೆ ಕೇವಲ ೩೦ ರೂಪಾಯಿ, ೬೦ ರೂಪಾಯಿ, ೧೦೦ ರೂಪಾಯಿಗಳಿಗೆ ಕೆಲಸ ಮಾಡತಕ್ಕವರು. ಈ ತಾರತಮ್ಯಕ್ಕೆ ಏನು ಹೇಳುವುದು ? ನಾವು ಹೇಳುವುದು ಸಮಾಜವಾದ ಮತ್ತು ಡೆಮಾಕ್ರಸಿ. ಅಂದರೆ ಯಾವ ಡೆಮಾಕ್ರಸಿ ಆ ಬಡಪಾಯಿಗಳಿಗೆ, ಯಾವ ಸಮಾಜವಾದ ಅವರಿಗೆ ಅನ್ವಯ ಆಗುತ್ತದೆ ? ಒಂದು ಕಡೆ ಹೀಗೆ ವಿಪರೀತ ಸಂಬಳ ಕೊಡುವುದು, ಇನ್ನೊಂದು ಕಡೆ ದಿವಸಕ್ಕೆ ಒಂದು ಲೋಟ ಕಾಫಿ ಕುಡಿಯುವುದಕ್ಕೆ ಆಗದೇ ಇರತಕ್ಕಂಥ ಸಂಬಳ ಕೊಟ್ಟು ಅವರನ್ನು ದಿವಸವೆಲ್ಲಾ ಕೆಲಸ ಮಾಡಿ ಎಂದು ಹೇಳುವುದು. ಇದು ಬಹುಶಃ ನಾವು ಆತ್ಮವಂಚನೆ ಮಾಡಿಕೊಂಡ ಕೆಲಸ ಆಗುತ್ತದೆ ಎಂದು ಈ

ಸಂದರ್ಭವಲ್ಲಿ ತಿಳಿಸುತ್ತೇನೆ. ಮಾನ್ಯ ಸಚಿವರು ಪಂಚಾಯಿತಿಗೆ ಇದರ ಹೋಲ್ಡ್ ಇರಬಹುದು ಎಂದು ಹೇಳುತ್ತಾರೋ ಏನೋ ನನಗೆ ಸರಿಯಾಗಿ ಗೊತ್ತಿಲ್ಲ. ಅವರಿಗೆ ಸರಿಯಾದ ಡೈರೆಕ್ಷನ್ ಕೊಟ್ಟು, ಅವರು ಸರಿಯಾಗಿ ಕೆಲಸ ಮಾಡುವುದಾದರೆ ಅವರಿಗೆ ಸರಿಯಾದ ಸಂಬಳ ಕೊಡಿ. ಹೊಲದಲ್ಲಿ ಹೋಗಿ ಕೆಲಸ ಮಾಡತಕ್ಕವರಿಗೆ, ಅಥವಾ ರಸ್ತೆಯಲ್ಲಿ ಎಲ್ಲಾದರೂ ಸಣ್ಣಪುಟ್ಟ ಕೆಲಸ ಮಾಡತಕ್ಕ ಕೂಲಿಗೆ ೧೨-೧೩ ರೂಪಾಯಿ, ೧೫-೨೦ ರೂಪಾಯಿ ಕೂಲಿ ಸಿಗುವಾಗ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಕೆಲಸ ಮಾಡತಕ್ಕಂಥ ಬಡಪಾಯಿಗಳಿಗೆ ನೀವು ಕೊಡುತ್ತಿರುವುದು ದಿವಸಕ್ಕೆ ಒಂದೂವರೆ ರೂಪಾಯಿನೂ ಕೂಡ ಬೀಳುವುದಿಲ್ಲವಲ್ಲ, ಅಷ್ಟು ಕಡಿಮೆ ಹಣವನ್ನು ಕೊಟ್ಟು ನೀವು ಕೆಲಸ ಮಾಡಿ ಎಂದು ಅವರಿಂದ ದುಡಿಸಿಕೊಳ್ಳುತ್ತಾ ಇರುವುದು ಬಹುಶಃ ಇದು ಯಾರೂ ಮೆಚ್ಚತಕ್ಕ ಕೆಲಸವಲ್ಲ. ಹಿಂದೆ ಒಂದು ಕಾಲದಲ್ಲಿ ಗುಲಾಮರಿದ್ದರು ಎಂದು ಹೇಳುತ್ತಿದ್ದರು ಬಹುಶಃ ಗುಲಾಮರಾಗಿದ್ದವರಿಗೆ ಹೊಟ್ಟೆಗೆ ಸರಿಯಾಗಿ ಊಟವಾದರೂ ಕೊಡುತ್ತಾ ಇದ್ದರು. ಈಗ ಇವರು ೫೦ ರೂಪಾಯಿ ತೆಗೆದುಕೊಂಡರೆ ಅವರಿಂದ ಊಟ ಮಾಡುವುದಕ್ಕೆ ಆಗುತ್ತದೆಯೇ, ಮಕ್ಕಳಿಗೆ ಬಟ್ಟೆ ಹೊಲಿಸುವುದಕ್ಕೆ ಆಗುತ್ತದೆಯೇ, ಅವರು ಬಟ್ಟೆ ಹೊಲಿಸಿಕೊಳ್ಳುವುದಕ್ಕೆ ಆಗುತ್ತದೆಯೇ. ಇಂತಹ ಹೀನಾಯ ಸ್ಥಿತಿ ಅವರಿಗೆ ಇದೆ, ಇದನ್ನು ಯಾರಾದರೂ ಕೇಳಿದರೆ ನಗೆಪಾಟಲು ಆಗುತ್ತದೆ, ಇದನ್ನು ಕೇಳಿ ನಾಚಿಕೆ ಪಡಬೇಕು. ದಯವಿಟ್ಟು ಇಂತಹ ಅಸಹ್ಯಕರವಾದಂಥ ಪರಿಸ್ಥಿತಿ ಈದೇಶದಲ್ಲಿ ಇರಲಿಕ್ಕೆ ತಾವು ಅವಕಾಶ ಕೊಡಬಾರದು. ಒಂದು ಕಡೆ ಸಮತಾವಾದ ಎಂದು ಹೇಳುತ್ತೇವೆ. ಎರಡು ಸಾವಿರ ಎರಡೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ಆಸ್ತಿ ಇರತಕ್ಕಂಥ ದೊಡ್ಡ ದೊಡ್ಡ ಮನುಷ್ಯರು ಇದ್ದಾರೆ. ಇನ್ನೊಂದು ಕಡೆ ಎಲ್ಲಾದರೂ ಬೀದಿಯಲ್ಲಿ ಹೋಗಿ ನೋಡಿದರೆ, ತಿಂದು ಬಿಸಾಕಿರತಕ್ಕ ಎಂಜಲು ಎಲೆಯಲ್ಲಿ ಇರತಕ್ಕಂಥ ಅನ್ನ ತಿಂದು ಬದುಕುವಂಥ ಜನಗಳೂ ಕೂಡ ಇದ್ದಾರೆ. ಇದು ಸಮತಾವಾದವೇ ? ಇದು ಪ್ರಜಾಪ್ರಭುತ್ವವೇ ? ಹೀಗೆ ಏನೇನು ಬೇಕೋ ಅದನ್ನೆಲ್ಲಾ ಹೇಳಿಕೊಂಡು ಮಾಡಬಾರದ್ದನ್ನೆಲ್ಲಾ ಮಾಡಿ ಕೊಂಡು ಈ ರೀತಿ ಅನ್ಯಾಯಗಳಿಗೆ ಅವಕಾಶ ಕೊಡುತ್ತಾ ಹೋದರೆ ಯಾವತ್ತಾದರೂ ಆ ಜನಗಳ ಒಂದು ಶಾಪಕ್ಕೆ ಈ ಸಮಾಜ ಬಲಿಯಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಕಬ್ಬನ್‌ಪಾರ್ಕಿಗೆ ಹತ್ತಾರು, ನೂರಾರು ಮೈಲಿಯಿಂದ ಬಂದಿದ್ದಾರೆ, ಸುಮಾರು ೮-೧೦ ಸಾವಿರ ಜನ ಹೆಣ್ಣುಮಕ್ಕಳು ಮತ್ತು ಕೂಲಿ ಕೆಲಸ ಮಾಡತಕ್ಕಂಥ ಬಡಪಾಯಿಗಳು ಬಂದು ಕುಳಿತಿದ್ದಾರೆ. ಮಾನ್ಯ ಸಚಿವರು ಇವತ್ತು ಸಂಜೆಯೊಳಗೆ ಅಥವಾ ನಾಳೆಯೊಳಗೆ ಹೋಗಿ ಅವರನ್ನು ಭೇಟಿಮಾಡಿ ಅವರಿಗೆ ಇರತಕ್ಕಂಥ ತೊಂದರೆಯನ್ನು ತಿಳಿದುಕೊಂಡು ಅವರಿಗೆ ಏನು ಬೇಕೋ ಆ ವ್ಯವಸ್ಥೆಯನ್ನು ಮಾಡಿಕೊಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಅಧ್ಯಕ್ಷಿಣಿಯವರೆ, ರೈತರ ಬಗ್ಗೆ ಬಹಳ ವಿಪುಲವಾದ ಚರ್ಚೆ ಕಳೆದ ೨-೩ ದಿವಸಗಳಿಂದ ಆಯಿತು, ಅದಕ್ಕೂ ಮೊದಲು ಕೂಡ ಆಯಿತು, ನಾನು ಒಂದು ಮಾತು ಕೇಳುತ್ತೇನೆ ಏನೆಂದರೆ, ರೈತರು ಏನು ಪಾಪ ಮಾಡಿ ಹುಟ್ಟಿದ್ದಾರೆ ಎಂದು, ಏಕೆಂದರೆ ಈ ದೇಶದ ರೈತರಿಗೆ ಇಷ್ಟೊಂದು ಹಿಂಸೆ, ಇಷ್ಟೊಂದು ತೊಂದರೆ ಏಕೆ ಆಗಬೇಕು ಎಂದು ನನಗೆ ತಿಳಿಯುತ್ತಿಲ್ಲ. ಅವನಿಗೆ ನ್ಯಾಯವಾಗಿ ಕೊಡಬೇಕಾದ ಅನುಕೂಲಗಳನ್ನು ಮೊದಲು ಕಲ್ಪಿಸಿಕೊಡಬೇಕು. ಇಲ್ಲದೇ ಇದ್ದರೆ ನಿಮ್ಮ ಪಾಡಿಗೆ ನೀವು ಬದುಕಿ, ನೀವು ಏನು ಬೆಳೆಯುತ್ತೀರೋ ಬೆಳೆಯಿರಿ, ನೀವು ಯಾವರೀತಿ ಮಾರಾಟ ಮಾಡುತ್ತೀರೋ ಆ ರೀತಿ ಮಾರಾಟ ಮಾಡಿಕೊಳ್ಳಿ ಎಂದು ಹೇಳಬೇಕು, ಆದರೆ ಆ ಎರಡೂ ಇಲ್ಲ. ಒಂದು ಕಡೆ ರೈತ ಬಹಳ ಕಷ್ಟ ಬಿದ್ದು ಬೆಳೆದಂಥ ಆಹಾರ ಪದಾರ್ಥಗಳನ್ನು ಮಾತ್ರ ಇವರು ಕೇಳತಕ್ಕ ರೇಟಿಗೆ ಕೊಡಬೇಕು. ಅವರು ಬೆಳೆಯಬೇಕು, ಇವರಿಗೆ ಕೊಡಬೇಕು, ಹೋಗಲಿ, ರೈತ ಕೊಂಡು ಕೊಳ್ಳತಕ್ಕ ಯಾವುದಾದರೂ ಬೇರೆ ಪದಾರ್ಥಗಳಿಗೆ ಏನಾದರೂ ಇವರು ಕಡಿಮೆ ರೇಟ್ ನಿಗದಿ ಮಾಡುತ್ತಾರಾ, ಅವರ ರಕ್ಷಣೆಗೆ ಹೋಗುತ್ತಾರಾ, ಅಂದರೆ ಅದು ಯಾವುದೂ ಇಲ್ಲ. ಈ ರೇಟ್ ಏನಾದರೂ ಜಾಸ್ತಿಯಾದರೆ ಕಂಟ್ರೋಲ್ ತರುತ್ತಾರೆ. ರೇಟ್ ಏನಾದರೂ ಕಡಿಮೆಯಾಗಿ ಬಿದ್ದು ಹೋದರೆ ರೈತ ಸರ್ವನಾಶ ಆದ. ಅಂದರೆ ಇವರು ಯಾರೂ ಕೂಡ ಅವನ ಕಡೆ ತಿರುಗಿ ಸಹ ನೋಡು ವುದಿಲ್ಲ. ಇದು ಏನಿದು ಸರ್ಕಾರ ? ೧೦೦ಕ್ಕೆ ೮೦ ಭಾಗ ಇರತಕ್ಕ ರೈತರ ಬಗ್ಗೆ ಸುಸಂಸ್ಕೃತ ಸರ್ಕಾರ ಮತ್ತು ಈ ಸುಸಂಸ್ಕೃತ ಸಮಾಜ ತೋರತಕ್ಕ ಧೋರಣೆ ಇದೇ ಏನು ?

ಏತಕ್ಕೆ ಇಂಥ ಅನ್ಯಾಯಗಳನ್ನು ಮಾಡುತ್ತಾರೋ ಗೊತ್ತಿಲ್ಲ. ರೈತರು ಸಾಲ ಮರುಪಾವತಿ ಮಾಡಲು ಸಿದ್ಧರಿದ್ದರು. ಅಲ್ಪಸ್ವಲ್ಪ ಸಾಲ ಕಟ್ಟುವುದಕ್ಕೆ ರೈತರು ದುಡ್ಡನ್ನು ಮಂಚಿಕೊಂಡಿದ್ದರು ಆದರೆ ಸಾಲ ಮಜಾ ಆಗುತ್ತದೆಂದು ದಿನ ಪತ್ರಿಕೆಗಳಲ್ಲಿ ಬರುವುದನ್ನು ನೋಡಿ ಕಟ್ಟದೆ ಸುಮ್ಮನೆ ಆದರು. ತಮ್ಮಲ್ಲಿರತಕ್ಕ ದುಡ್ಡನ್ನು ಹಬ್ಬ ಹುಣ್ಣಿಮೆ ಎಂದು ಖರ್ಚು ಮಾಡಿ ಕಳೆದುಕೊಂಡಿದ್ದಾರೆ. ಇವತ್ತು

ರೈತರು ಸಾಲ ಕಟ್ಟಬೇಕೆಂದರೆ ಹೊಲ ಮನೆ ಹರಾಜು ಆಗುತ್ತದೆ. ಅವರು ಮತ್ತೆ ಸಾಲ ತೆಗೆದುಕೊಳ್ಳಬೇಕಾದರೆ ಅವರಿಗೆ ಸಾಲ ಕೊಡುವವರು ಯಾರು ? ಆದ್ದರಿಂದ ರೈತರ ಬಗ್ಗೆ ಈ ಸರ್ಕಾರ ಮಾನವೀಯ ದೃಷ್ಟಿಯಿಂದ ನಡೆದುಕೊಂಡು ಎಲ್ಲ ರೀತಿಯ ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಕೊನೆಯ ಪಕ್ಷ ಮುಂದುವರಿದ ದೇಶಗಳಲ್ಲಿರತಕ್ಕ ರೈತರಿಗೆ ಏನು ಸವಲತ್ತುಗಳನ್ನು ಒದಗಿಸಿದ್ದಾರೋ ಅದನ್ನಾದರೂ ನಮ್ಮ ರಾಜ್ಯದ ರೈತರಿಗೂ ಕೊಡಬೇಕೆಂದು ಹೇಳುತ್ತೇನೆ. ಇವತ್ತು ರೈತರು ಬೆಳೆದ ಆಹಾರ ಪದಾರ್ಥಗಳಿಗೆ ಬೆಂಬಲ ಬೆಲೆಯನ್ನು ಕೊಡಬೇಕು. ಮಾರುಕಟ್ಟೆಯಲ್ಲಿ ದವಸಧಾನ್ಯಗಳ ಬೆಲೆ ಕಡಿಮೆ ಆದಾಗ ರೈತರ ಸಹಾಯಕ್ಕೆ ಸರ್ಕಾರ ಹೋಗಬೇಕು. ಈ ವಿಚಾರದಲ್ಲಿ ಮಾನ್ಯಮಂತ್ರಿಗಳು ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಸಾಮಾನ್ಯವಾಗಿ ಬರಗಾಲಕ್ಕೆ ತುತ್ತಾದ ಪ್ರದೇಶಗಳಲ್ಲಿ ಬೆಳೆ ಹಾಳಾಗುತ್ತದೆ. ಅಂಥ ಪ್ರದೇಶಗಳಲ್ಲಿ ಬೆಳೆ ವಿಮೆಯನ್ನು ಮುಖ್ಯವಾಗಿ ಜಾರಿಗೆ ತರುವುದು ಒಳ್ಳೆಯದು. ಇವತ್ತು ನೀರಾವರಿ ಅನುಕೂಲ ಎಲ್ಲಿದೆಯೋ, ಅಲ್ಲಿ ಬೆಳೆ ವಿಮೆಯನ್ನು ಜಾರಿ ಮಾಡಿದ್ದಾರೆ. ವರ್ಷವೆಲ್ಲಾ ನೀರು ಹರಿದು ಭತ್ತ ಬೆಳೆಯುತಕ್ಕ ಪ್ರದೇಶಗಳಲ್ಲಿ ಬೆಳೆ ವಿಮೆ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಇದು ಸರಿಯಲ್ಲ ಈ ಯೋಜನೆಗೆ ಕೇವಲ ೫೦ ಲಕ್ಷ ರೂಪಾಯಿಗಳನ್ನು ಇಟ್ಟಿರುವುದು ಕೇವಲ ಕಣ್ಣೊರೆಸುವ ಮಾತೇ ವಿನಃ ಇದರಿಂದ ಯಾವ ಪುರುಷಾರ್ಥವೂ ಸಾಧನೆ ಆಗುವುದಿಲ್ಲವೆಂದು ಹೇಳುತ್ತೇನೆ. ಆ ಕಡೆಯ ಸದಸ್ಯಮಿತ್ರರು ಮಾತನಾಡುತ್ತಾ ಇನ್ನು ಸ್ಕೂಲಿಗೆ ಹೋಗುವ ಮಕ್ಕಳಿಗೆ ಕೊಡುತ್ತಿದ್ದ ಬಟ್ಟೆ, ಪುಸ್ತಕಗಳ ಬಗ್ಗೆ ಹೇಳಿದರು. ಇದಕ್ಕೆ ಒಂದು ತತ್ವ, ಆಧಾರ ಇದೆ ಎಂದು ಹೇಳಿದರು. ಆದರೆ ನಾನು ಹೇಳುತ್ತೇನೆ ಇದರಲ್ಲಿ ಯಾವ ತತ್ವವೂ ಇಲ್ಲ, ಆಧಾರವೂ ಇಲ್ಲ ಮಣ್ಣಾಂಗಟ್ಟಿಯೂ ಇಲ್ಲ. ಆ ಮಕ್ಕಳೆಲ್ಲಾ ಸರ್ವನಾಶವಾದವು ಏಕೆಂದರೆ ಇವರು ಪುಸ್ತಕ ಮತ್ತು ಬಟ್ಟೆಗಳನ್ನು ಯಾವಾಗ ಕೊಡುತ್ತಿದ್ದರು ? ಮೇ ತಿಂಗಳಲ್ಲಿ ಶಾಲೆಗಳು ಪ್ರಾರಂಭವಾದರೆ, ಇವರು ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಪುಸ್ತಕಗಳನ್ನು, ಬಟ್ಟೆಗಳನ್ನು ಕೊಡುತ್ತಿದ್ದರು, ಇದರಿಂದ ಹಳ್ಳಿ ಮಕ್ಕಳ ಹಿತರಕ್ಷಣೆ ಆಗುತ್ತದೆಯೇ ? ಇವರು ಮಕ್ಕಳ ಉದ್ಧಾರಕರೇ ? ಹಳ್ಳಿಮಕ್ಕಳ ಉದ್ಧಾರಕ್ಕೆ ಇವರು ಇದ್ದರೆ ? ಮಕ್ಕಳು ಪುಸ್ತಕ ಕಳೆದುಕೊಂಡರೆ ಮತ್ತೆ ಪುಸ್ತಕಗಳು ಇಲ್ಲ. ಮಾರುಕಟ್ಟೆಯಲ್ಲಿಯೂ ಸಿಗುವುದೂ ಇಲ್ಲ. ಇವರೂ ಮತ್ತೆ ಕೊಡುವುದಿಲ್ಲ. ಆಗ ಏನು ಮಾಡಬೇಕು ಇದು ನೀವು ತಂದಂತಹ ಸೋಷಿಯಲಿಸಂ ಮತ್ತು ಬಡವರ ಉದ್ಧಾರಕ್ಕಾಗಿ ತಂದ ಯೋಜನೆ. ಮಕ್ಕಳಿಗೆಬಟ್ಟೆ ಕೊಟ್ಟಿರುವುದಂತೂ ಒಂದುಕರ್ಮಕಾಂಡ. ಎಲ್ಲಿ ಅಳತೆ ತೆಗೆದುಕೊಂಡರೋ ಯಾರಿಗೆ ಹೊಲಿಯಲು ಕೊಟ್ಟಿದ್ದರೋಗೊತ್ತಿಲ್ಲ. ಮಕ್ಕಳು ನಿಕ್ಕರ್ ಹಾಕಿ ಕೊಂಡರೆ ಒಂದು ತೋಳು ಮೇಲಕ್ಕೆ ಹೋಗುತ್ತೆ ಒಂದು ತೋಳುಕೆಳಕ್ಕೆ ಬರುತ್ತೆ. ಇದರಿಂದ ಆ ಹುಡುಗರು ಇಂತಹ ಬಟ್ಟೆ ಹಾಕುವುದಿಲ್ಲ, ಕೂಲಿ ಕೆಲಸಕ್ಕೆ ಹೋಗುತ್ತೇವೆಂದು ಹೇಳುತ್ತಿದ್ದವು. ಈ ಯೋಜನೆಯಿಂದ ಕೋಟಿಗಟ್ಟಲೆ ದುಡ್ಡು ದುಡ್ಡು ಮಾಡಿಕೊಂಡು ಈ ಹುಡುಗರನ್ನು ಹಿಡಿದುಕೊಂಡು ಇಂತಹ ಒಂದು ಸೋಷಿಯಲಿಸಂ ಜಾರಿಗೆ ತರುವುದಕ್ಕೆ ಹೊರಟಿದ್ದರು. ಪಾಪ ಜನ ದಡ್ಡರಿದ್ದಾರೆ ನಾವು ಏನು ಮಾಡಿದರೂ ನಡೆಯುತ್ತದೆ, ಜನ ಓಟು ಕೊಡುತ್ತಾರೆಂದು ತಿಳಿದು. ಈಗ ಅನುಭವಿಸುತ್ತಿದ್ದಾರೆ. ಇದರ ಜೊತೆಗೆ ಇತರೆ ರಿಯಾಯಿತಿಗಳನ್ನು ಏನು ತಂದಿದ್ದರು, ಅದನ್ನೆಲ್ಲಾ ತೆಗೆದಿದ್ದು ಬಹಳ ಒಳ್ಳೆಯದಾಯಿತು, ಏಕೆಂದರೆ ಇವತ್ತು ಸರ್ಕಾರ ಕೊಡುವುದನ್ನು ಜನ ಮನಃಪೂರ್ವಕವಾಗಿ ಸ್ವೀಕರಿಸಬೇಕು. ಜೊತೆಗೆ ಅದರಿಂದ ಜನರಿಗೆ ಪ್ರಯೋಜನವಾಗಬೇಕು. ಜನಗಳಿಗೆ ಪ್ರಯೋಜನವಾಗುವಂಥ ಸ್ಕೀಮುಗಳನ್ನು ತರಬೇಕು, ಇಲ್ಲವೇ ಇದ್ದರೆ ಹಿಂದಿನ ಸರ್ಕಾರ ಜಾರಿಗೆ ತಂದ ಯೋಜನೆಗಳಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ. ಹೆರಿಗೆ ಭತ್ಯೆ ಎನ್ನುವ ಯೋಜನೆ ಜಾರಿಗೆ ತಂದರು, ಬಡವರ ಹೆಣ್ಣು ಮಕ್ಕಳು ಕಛೇರಿಗಳಿಗೆ ತಿರುಗಿ ತಿರುಗಿ ಇವರು ಕೊಡುವ ಹಣದಲ್ಲಿ ಅರ್ಧ ಭಾಗದ ಹಣವನ್ನು ಬಸ್ ಚಾರ್ಜಿಗೆ ಖರ್ಚುಮಾಡಿಕೊಂಡಿರುವ ನೂರಾರು ಉದಾಹರಣೆಗಳು ಇವೆ. ಹೀಗೆ ಇವರು ಜಾರಿಗೆ ತಂದ ಯಾವ ಯೋಜನೆಗಳು ಸಹ ಪರಿಪೂರ್ಣವಾಗಿ ಜಾರಿಗೆ ಬರಲಿಲ್ಲ. ಈ ಹಣ ನೇರವಾಗಿ ಬಡ ಹೆಣ್ಣುಮಕ್ಕಳಿಗೆ ಸಿಗುವ ಬದಲು ಇವರ ಹಿಂಬಾಲಕರು, ಪಾರ್ಟಿಯ ಪುಡಾರಿಗಳ ಜೇಬಿಗೆ ಹೋಗುತ್ತಿತ್ತು. ಇದರಿಂದ ಅವರು ಶ್ರೀಮಂತರಾದರೇ ವಿನಃ ಬೇರೆ ಯಾರಿಗೂ ಅನುಕೂಲವಾಗಲಿಲ್ಲ.

ಅಧ್ಯಕ್ಷರೇ. ಹಳ್ಳಿಗಳ ಕಡೆ ಹೋಗಿ ನೋಡಿದರೆ ಕಳೆದ ನಾಲ್ಕು ವರ್ಷಗಳಿಂದೀಚೆಗೆ ಯಾರಾದರೂ ಮೋಟಾರ್ ಬೈಕ್ ತೆಗೆದುಕೊಂಡಿದ್ದರೆ ಇಲ್ಲವೇ ಗ್ರಾಮಾಂತರ ಪ್ರದೇಶದಲ್ಲಿ ಯಾರಾದರೂ ಒಂದು ತಾರಸಿ ಮನೆ ಕಟ್ಟಿದ್ದರೆ ಅವರು ಇವರ ಪಾರ್ಟಿ ವರ್ಕರ್ಸ್ ಎಂದು ಹೇಳಬಹುದು. ೫೦೦ ರೂಪಾಯಿಗಳನ್ನು ಇವರ ಕಡೆಯ ಕಂಟ್ರಾಕ್ಟರುಗಳು ಖರ್ಚು ಮಾಡಿ, 4½ ಸಾವಿರ, ಇಲ್ಲವೆ ೧೦,೦೦೦ ರೂಪಾಯಿ, ಇಲ್ಲವೆ ೧೫ ಸಾವಿರ ಬಿಲ್ಲು ತೆಗೆದುಕೊಂಡು ಮಾಡಬಾರದ್ದನ್ನು ಈ ದೇಶಕ್ಕೆ

ಮಾಡಿದ್ದಾರೆ. ಅಂತಹವರು ಇವರ ಕಣ್ಣಿಗೆ ಕಾಣಿಸುತ್ತಾರೆಯೋ ಏನೋ ಬೇರೆಯವರು ಯಾರು ಇವರ ಕಣ್ಣಿಗೆ ಕಾಣುತ್ತಿಲ್ಲ. ಇನ್ನೊಂದು ವಿಚಾರ ಎಂದರೆ ಅಡಲ್ಟ್ ಎಜುಕೇಷನ್ ಇದಕ್ಕಿಂತಲೂ ಆತ್ಮವಂಚನೆಯ ಕೆಲಸ ಇನ್ನೊಂದು ಇಲ್ಲ. ಇದಕ್ಕಾಗಿ ಕೋಟ್ಯಾಂತರ ರೂಪಾಯಿಗಳು ಖರ್ಚಾಗುತ್ತಿದೆ. ಆದರೆ ಯಾವ ವಿಧವಾದ ಪ್ರಯೋಜನವು ಆಗುತ್ತಿಲ್ಲ. ತಾವು ಮೂರು ನೈಟ್ ಸ್ಕೂಲ್‌ಗಳಿಗೆ ಭೇಟಿ ಕೊಟ್ಟು ನೋಡಿದರೆ ತಮಗೇ ಅರ್ಥವಾಗುತ್ತದೆ. ಈ ನೈಟ್ ಸ್ಕೂಲ್‌ಗಳಲ್ಲಿ ಪುಸ್ತಕ ಕೊಟ್ಟಿದ್ದೇವೆ. ದೀಪಕ್ಕೆ ಎಣ್ಣೆ ಕೊಟ್ಟಿದ್ದೇವೆ, ಬಳಪ ಕೊಟ್ಟಿದ್ದೇವೆ ಎಂದು ಖರ್ಚು ಹಾಕಿಕೊಂಡು ಫಿಗರ್ ಓದುತ್ತಾರೆ. ಏನೂ ಇದರಿಂದ ಯಾರಿಗೂ ಅನುಕೂಲವಾಗಿಲ್ಲ. ನಿಮ್ಮ ಕ್ಷೇತ್ರದಲ್ಲಿ ನೀವು ಒಂದು ಮೂರು ಶಾಲೆಗಳನ್ನು ಪರೀಕ್ಷೆ ಮಾಡಿ ನೋಡಿ. ಅದರಲ್ಲಿ ಒಂದು ಶಾಲೆ ಏನಾದರೂ ಸರಿಯಾಗಿ ನಡೆದಿದ್ದರೆ ಇಲ್ಲವೇ ತಾವು ಏನಾದರೂ ಈ ಶಾಲೆಗಳು ಸರಿಯಾಗಿ ನಡೆಯುತ್ತಿವೆ ಎಂದು ಹೇಳಿದರೆ ನಾನು ರಾಜಿನಾಮೆ ಕೊಟ್ಟು ರಾಜಕೀಯದಿಂದ ನಿವೃತ್ತಿಯಾಗುತ್ತೇನೆ. ಇದು ಎಲ್ಲರಿಗೂ ಗೊತ್ತಿರತಕ್ಕಂತ ವಿಚಾರ. ಗೊತ್ತಿದ್ದು ಗೊತ್ತಿದ್ದು ಇದಕ್ಕಾಗಿ ನೂರಾರು ಕೋಟಿ ರೂಪಾಯಿಗಳ ದುಡ್ಡನ್ನು ಖರ್ಚು ಮಾಡುತ್ತಿದ್ದಾರೆ. ಇವೆಲ್ಲ ಪ್ರಯೋಜನಕ್ಕೆ ಬಾರದ ಸ್ಕೀಮ್‌ಗಳು. ಇವಕ್ಕೆಲ್ಲಾ ಏತಕ್ಕೆ ಖರ್ಚು ಮಾಡುತ್ತೀರಿ. ಇವನ್ನು ಸ್ಕ್ರಾಪ್ ಮಾಡಬೇಕು. ಇವೆಲ್ಲ ಪ್ರಯೋಜನವಿಲ್ಲ. ಜನರು ಹೊಟ್ಟೆಗೆ ಇಲ್ಲದೆ ಸಾಯುತ್ತಿರುವಾಗ ರಾತ್ರಿ ಹೊತ್ತಿನಲ್ಲಿ ಬಂದು ಪಾಠಕಲಿಯಿರಿ ಎಂದರೆ ಯಾರು ಕಲಿಯುವುದಿಲ್ಲ. ಇವರು ಹೇಳಿದ ಮಾತುಗಳನ್ನು ಯಾರು ಸಹಾ ಕೇಳುವುದಿಲ್ಲ. ಜನರು ಯಾರೂ ಅಲ್ಲಿಗೆ ಹೋಗುವುದಿಲ್ಲ. ಈ ಬಗ್ಗೆ ನಾನು ನನ್ನ ಕ್ಷೇತ್ರದಲ್ಲಿ ಹೋಗಿ ವಿಚಾರಿಸಿದ್ದೇನೆ. ನೈಟ್ ಸ್ಕೂಲ್‌ನಲ್ಲಿ ಏನು ಹೇಳಿಕೊಡುತ್ತಾರೆ ಎಂದು ಕೇಳಿದರೆ ಯಾರೋ ಬಂದಿದ್ದರು ಒಂದೆರಡು ದಿನ ಇದ್ದು ಹೊರಟು ಹೋದರು ಎಂದು ಹೇಳುತ್ತಾರೆ. ಇದರಲ್ಲಿ ಇಷ್ಟೊಂದು ಅನ್ಯಾಯ ಆಗುತ್ತಿದೆ. ಈ ಯೋಜನೆಗೆ ಕೋಟ್ಯಾಂತರ ರೂಪಾಯಿ ಹಣ ಕೊಡುವುದು ಬಹಳ ಮೂರ್ಖತನ. ಆದ್ದರಿಂದ ಇವೆಲ್ಲ ಪ್ರಯೋಜನವಿಲ್ಲ. ಇಂತಹ ಸ್ಕೀಮ್‌ಗಳನ್ನು ತಕ್ಷಣ ತೆಗೆಯಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಅಧಿಕಾರಿ ವರ್ಗದವರಿಗೆ ಸಂಬಳ ಸಾರಿಗೆಗೆಂದು ೧,೭೫೦ ಕೋಟಿ ರೂಪಾಯಿಗಳವರೆಗೆ ದುಡ್ಡು ಖರ್ಚಾಗುತ್ತಿದೆ. ಇದರಲ್ಲಿ ಒಳ್ಳೆಯ ಪುಣ್ಯಾತ್ಮರು ಇದ್ದಾರೆ. ಕೆಲವರು ಉತ್ತಮವಾಗಿ ಕೆಲಸ ಮಾಡುವವರು ಇದ್ದಾರೆ. ಆದರೆ ಕೆಲಸಕ್ಕೆ ಬಾರದಂತಹ ಅನೇಕ ಜನರಿದ್ದಾರೆ. ಅಡಲ್ಟ್ ಎಜುಕೇಷನ್ ಇಲಾಖೆ ತರಹ ಇನ್ನೂ ಎಷ್ಟೋ ಇಲಾಖೆಗಳಲ್ಲಿರುವವರಿಗೆ ಕೆಲಸ ಇಲ್ಲ. ಅವರುಗಳಿಗೆಲ್ಲಾ ಜೀಪು ಪೆಟ್ರೋಲ್ ಎಲ್ಲ ವ್ಯವಸ್ಥೆ ಕೊಟ್ಟು ಅವರನ್ನು ಭ್ರಷ್ಟರನ್ನಾಗಿ ಮಾಡಿದ್ದೇವೆ. ಪಾಪ ಒಳ್ಳೆಯ ಅಧಿಕಾರಿಗಳು ಇಂಥದ್ದಕ್ಕೆ ಸಿಕ್ಕಿಕೊಂಡು ಅವರೂ ಸಹ ಭ್ರಷ್ಟರಾಗಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಮಾನ್ಯ ಅರ್ಥ ಸಚಿವರು ಒಂದು ಕೆಲಸವನ್ನು ಮಾಡಬೇಕು. ಯಾವ ಯಾವ ಇಲಾಖೆಯಲ್ಲಿ ಎಷ್ಟು ಜನ ಅಧಿಕಾರಿಗಳಿಗೆ ಕೆಲಸ ಇದೆ. ಅದರ ಬಗ್ಗೆ ವಿಚಾರ ಮಾಡಬೇಕು. ಚೆನ್ನಾಗಿ ಕೆಲಸ ಮಾಡುವವರಿಗೆ ಡಬ್ಬಲ್ ಪ್ರಮೋಷನ್ ಕೊಡಿ ಅಥವಾ ೨-೩ ಇನ್‌ಕ್ರಿಮೆಂಟ್‌ಗಳನ್ನು ಕೊಡಿ. ಅವರಿಗೆ ಏನು ಪ್ರೋತ್ಸಾಹ ಕೊಡಬೇಕೋ ಅದನ್ನು ಕೊಡಿ. ಇವತ್ತು ಏನಾಗಿದೆ ಎಂದರೆ ಉತ್ತಮವಾಗಿ ಕೆಲಸ ಮಾಡುವವರಿಗೆ ಪುರಸ್ಕಾರ ಇಲ್ಲ. ಅಯೋಗ್ಯ ಕೆಲಸ ಮಾಡುವವರಿಗೆ ಶಿಕ್ಷೆ ಇಲ್ಲ. ಈ ಮಟ್ಟಕ್ಕೆ ಬಂದು ಒಂದು ಕಂಡಂತೆ ಒಂದು ಕಾಣದಂತೆ ಆಗಿದೆ. ಬೆಂಗಳೂರು ಜಿಲ್ಲಾ ಆಫೀಸ್‌ನಲ್ಲಿ ಅಥವಾ ಎಲ್ಲೋ ಹೋಗಿ ನೋಡಿ ಎಲ್ಲಿಯೂ ಪೂರ್ತಿ ಜನರು ಇರುವುದಿಲ್ಲ. ಸಾಕಷ್ಟು ಅಧಿಕಾರಿ-ಶಾಹಿ ಬೆಳೆದು ಕೆಲಸ ಇಲ್ಲದೆ ಹೊರಗಡೆ ಓಡಾಡಲಿಕ್ಕೆ ಬಿಟ್ಟು ಕೊಟ್ಟವರು ನಾವೇ ಎಂದು ಹೇಳಿದರೆ ತಪ್ಪಾಗಲಾರದು. ಇದರ ಬಗ್ಗೆ ತಾವು ಯೋಚನೆ ಮಾಡಿ. ಇವತ್ತು ಯಾವ ಕೆಲಸಕ್ಕೂ ಬರದಂತ ಇಲಾಖೆಗಳು ಇವೆ. ಅವುಗಳನ್ನೆಲ್ಲಾ ತೆಗೆದು ಮತ್ತೆ ರೀಆರ್ಗನೈಸ್ ಮಾಡಿ. ಒಂದು ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಮಾಡಬೇಕೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಆಹಾರ ವಿತರಣೆ ಬಗ್ಗೆ ಹೇಳಬೇಕೆಂದರೆ ಇದಕ್ಕಿಂತಲೂ ಭ್ರಷ್ಟಾಚಾರ ಏನಾದರೂ ನೋಡಬೇಕಾದರೆ ಗ್ರಾಮಾಂತರ ಪ್ರದೇಶದಲ್ಲಿ ಆಗತಕ್ಕ ಆಹಾರದ ವಿತರಣೆಯಲ್ಲಿ ನೋಡಬೇಕು. ಅಲ್ಲಿ ಹಸಿರು ಕಾರ್ಡ್ ಕೊಟ್ಟಿದ್ದಾರೆ. ಅವು ಕೊಟ್ಟಿರುವುದು ಹೆಚ್ಚು ಕಡಿಮೆ ತೀರಾ ಅನುಕೂಲಸ್ಥರಿಗೆ ಹೊರತು ತೀರಾ ನಿರ್ಗತಿಕ ಬಡವರಿಗೆ ಹಸಿರು ಕಾರ್ಡ್ ಕೊಟ್ಟಿಲ್ಲ. ಅನಂತರ ಫೇರ್ ಪ್ರೈಸ್ ಷಾಪ್ ಮಾಡಿ ಆಹಾರ ವಿತರಣೆ ವ್ಯವಸ್ಥೆ ಮಾಡಿದ್ದಾರೆ. ಆದರೆ ಅವರು ಯಾವ ಪದಾರ್ಥಗಳನ್ನು ತೆಗೆದುಕೊಂಡು ಹೋಗುವುದಿಲ್ಲ. ಎಲ್ಲಿಯೋ ನೂರಕ್ಕೆ ಒಬ್ಬರು ಇಬ್ಬರು ತೆಗೆದುಕೊಂಡು ಹೋಗಿ ಅಲ್ಪಸ್ವಲ್ಪ ಹಂಚಿಕೆ ಮಾಡುತ್ತಾರೆ. ಉಳಿದವರೆಲ್ಲರೂ ಪಟ್ಟಣದಲ್ಲಿಯೋ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಾಟ ಮಾಡಿ ದುಡ್ಡನ್ನು ಹೊಡೆಯುತ್ತಿದ್ದಾರೆ. ಇದರಲ್ಲಿ ಸರಿಯಾದ ಸೂಪರ್-ವಿಷನ್ ಇಲ್ಲ. ವರ್ಷಕ್ಕೆ ೫೦ ಕೋಟಿ ದುಡ್ಡನ್ನು ಸಬ್ಸಿಡಿ ರೂಪದಲ್ಲಿ ಆಹಾರ ಧಾನ್ಯ

ವಿತರಣೆಗೆ ಸರ್ಕಾರದವರು ಕೊಡುತ್ತಿದ್ದಾರೆ. ಈಗ ದುಡ್ಡು ಉಳಿಯುತ್ತಿಲ್ಲ. ದುಡ್ಡು ಕೊಟ್ಟಿದ್ದರಿಂದ ಜನರಿಗೆ ಏನಾದರೂ ಪ್ರಯೋಜನ ಆಗುತ್ತಿದೆಯೇ, ಅನುಕೂಲ ಆಗುತ್ತಿದೆಯೇ. ಅಂದರೆ ಅದೂ ಇಲ್ಲ. ಈ ಎಲ್ಲಾ ವ್ಯವಸ್ಥೆ ನೋಡಿಕೊಳ್ಳುವ ಮತ್ತು ಸೂಪರ್‌ವಿಷನ್ ಅಧಿಕಾರವನ್ನು ಜಿಲ್ಲಾ ಪರಿಷತ್ ಅವರಿಗೆ ಕೊಟ್ಟಿದ್ದಾರೆ. ಅದು ಒಂದು ಸೊಗಸಾದ ಹುಲ್ಲುಗಾವಲು ಇದ್ದ ಹಾಗೆ ಇದೇ. ಹಳ್ಳಿಗಳ ಕಡೆ ಹಗ್ಗ ಮೂಗುದಾರ ಇಲ್ಲದ ಹೋರಿ ಕಿತ್ತುಕೊಂಡು ಹೋಗಿ ಕಂಡಾಪಟ್ಟೆ ಮೇಯಿತು ಎಂದು ಹೇಳುತ್ತಾರಲ್ಲ, ಆ ಪರಿಸ್ಥಿತಿಗೆ ಈ ಜಿಲ್ಲಾ ಪರಿಷತ್ತುಗಳು ಬಂದಿವೆ ಏಕೆಂದರೆ ಎಲ್ಲ ಇಲಾಖೆಗಳ ವರ್ಗಾವರ್ಗಿ ಸೂಪರ್‌ವಿಷನ್ ಅಧಿಕಾರವನ್ನು ಅವರಿಗೆ ಕೊಟ್ಟಿದ್ದಾರೆ. ಅಲ್ಲಿಯ ಮಾಸ್ಟರ್‌ಗೆ ಏನ್ರಿ ನೀವು ಸ್ಕೂಲಿಗೆ ಹೋಗಲಿಲ್ಲವೇ ಎಂದು ಕೇಳಿದರೆ, ಇಲ್ಲ ನಾವು ನಮ್ಮ ಮೆಂಬರ್ಸ್ ಸರಿಮಾಡಿ ಕೊಂಡಿದ್ದೇವೆ. ನಾವು ಹೋಗದೆ ಇದ್ದರೂ ಪರವಾಗಿಲ್ಲ ಎಂದು ಹೇಳುತ್ತಾರೆ. ಇದರಿಂದ ತಿಂಗಳಿಗೆ ಒಂದು ಸಾರಿಯೂ ಪಾಠ ಶಾಲೆಗಳಿಗೆ ಹೋಗದೇ ಇರತಕ್ಕಂತಹ ಪರಿಸ್ಥಿತಿ ಇದೆ. ಅವರನ್ನು ಕೇಳಿದರೆ ನಮಗೇನೂ ತೊಂದರೆಯಾಗುವುದಿಲ್ಲ, ಜಿಲ್ಲಾ ಪರಿಷತ್ ಸದಸ್ಯರನ್ನು ಅನುಸರಿಸಿ ಕೊಂಡಿದ್ದೇವೆಂದು ಹೇಳುತ್ತಾರೆ. ನಾನು ಆ ಪಾರ್ಟಿ ಈ ಪಾರ್ಟಿ ಎಂದು ಹೇಳುವುದಕ್ಕೆ ಈಗ ಹೋಗುವುದಿಲ್ಲ. ಆದರೆ ಅಲ್ಲಿ ಈ ತರಹ ವ್ಯವಹಾರಗಳು ನಡೆಯುತ್ತಿವೆ. ಈ ನರ್ಸ್‌ಗಳ ಮತ್ತು ಆಯಾಗಳ ಸ್ಥಿತಿಯಂತೂ ಬಹಳ ಕೆಟ್ಟಿದೆ. ಕೆಲವು ನೌಕರರ ಸ್ಥಿತಿಯಂತೂ ಬಹಳ ಚಿಂತಾಜನಕವಾಗಿದೆ. ಯಾರು ಜಿಲ್ಲಾ ಪರಿಷತ್ ಸದಸ್ಯರನ್ನು ಹೊಂದಿ ಕೊಳ್ಳುತ್ತಾರೆ ಅವರಿಗೆ ವರ್ಗ ಇಲ್ಲ. ಅವರನ್ನು ಹೊಂದಿಕೊಳ್ಳದೇ ಹೋದವರಿಗೆ ಯಮ ಶಿಕ್ಷೆಯಾಗುತ್ತದೆ. ಸದಸ್ಯರುಗಳ ಮರ್ಜಿಯನ್ನನುಸರಿಸಿ ಕೆಲಸ ಮಾಡಬೇಕೇ ವಿನಃ ಜನರ ಹಿತದೃಷ್ಟಿಯನ್ನು ನೋಡಿಕೊಂಡು ಕೆಲಸ ಮಾಡುವ ಅಧಿಕಾರ ವರ್ಗದವರು ಯಾರಿದ್ದಾರೆ. ಇದ್ದರೆ ಅಂತಹವರು ಜಿಲ್ಲಾ ಪರಿಷತ್ತಿನಲ್ಲಿ ಉಳಿಯುವುದು ಕಷ್ಟ. ಜಿಲ್ಲಾ ಪರಿಷತ್‌ನ ಆಡಳಿತ ವರ್ಗದಲ್ಲಿನ ನಿಷ್ಠೆಯಿಂದ ಕೆಲಸ ಮಾಡತಕ್ಕಂತಹವರ ಮಾತೂ ಒಳ್ಳೆಯ ಕೆಲಸ ಮಾಡತಕ್ಕಂತಹ ಅಧಿಕಾರಿ ವರ್ಗದವರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅದೇ ಜಿಲ್ಲಾ ಪರಿಷತ್ ಸದಸ್ಯರನ್ನು, ಅಧ್ಯಕ್ಷರನ್ನು ಅನುಸರಿಸಿಕೊಂಡು ಹೋಗುತ್ತಿರುವವರಿಗೆ ಎಲ್ಲ ರೀತಿಯ ಎನ್‌ಕರೇಜ್‌ಮೆಂಟ್ ಸಿಗುತ್ತದೆ ಕೊನೆಯ ಪಕ್ಷ ಪ್ರೈಮರಿ ಎಜುಕೇಷನ್ ಮತ್ತು ಆರೋಗ್ಯ ಇಲಾಖೆಗಳನ್ನು ಅವರಿಂದ ತೆಗೆದು ಇಲಾಖೆಗೆ ಕೊಡದೇ ಹೋದರೆ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ತೊಂದರೆಯಾಗುತ್ತದೆ. ಮಕ್ಕಳ ವಿದ್ಯಾಭ್ಯಾಸ ಹಾಳಾಗಿ ಹೋಗುತ್ತದೆ. ಮತ್ತು ಇವರನ್ನು ನಂಬಿಕೊಂಡಿರತಕ್ಕಂತಹ ಆರೋಗ್ಯ ಇಲಾಖೆಯ ಡಾಕ್ಟರ್ಸ್ ಮುಂತಾದವರು ಯಾರು ಇದ್ದಾರೆ ಇವರಿಗೆ ತೊಂದರೆಯಾಗುತ್ತದೆ. ಕೆಲವು ವಿಚಾರಗಳನ್ನು ನಾನು ಏನು ಇಲ್ಲಿ ಹೇಳಿದ್ದೇನೆ ಅದನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಅಧ್ಯಕ್ಷರಿಗೆ, ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್):— ಮಾನ್ಯ ಅಧ್ಯಕ್ಷಿಣಿಯವರೇ ನಮ್ಮ ರಾಜ್ಯದ ಅರ್ಥ ಮಂತ್ರಿಗಳು ೧೯೯೦–೯೧ನೇ ಸಾಲಿನ ಬಡ್ಜೆಟ್ ಅನ್ನು ಈ ಸದನದ ಒಪ್ಪಿಗೆಗಾಗಿ ಇಲ್ಲಿ ಏನು ಇಟ್ಟಿದ್ದಾರೆ ಅದನ್ನು ನಾನು ವಿರೋಧಿಸುತ್ತಾ ತಮ್ಮ ಅಪ್ಪಣೆ ಪಡೆದು ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಮಾನ್ಯ ಅರ್ಥ ಮಂತ್ರಿಗಳು ತಮ್ಮ ಮೊದಲನೆಯ ಪ್ಯಾರಾದಲ್ಲಿ ವಿಶ್ವದ ಒಂದು ಚಿತ್ರವನ್ನು ಕೊಟ್ಟಿದ್ದಾರೆ. ಅದರಲ್ಲೂ ಪ್ರಮುಖವಾಗಿ ಸಮಾಜವಾದಿ ರಾಷ್ಟ್ರಗಳಲ್ಲಿ ಆಗಿರತಕ್ಕಂತಹ ಮತ್ತು ಆಗುತ್ತಾ ಇರತಕ್ಕಂತಹ ಮತ್ತು ಅಲ್ಲಿರತಕ್ಕಂತಹ ಕೆಲವು ಆರ್ಥಿಕ ಪರಿಸ್ಥಿತಿ ಬಗ್ಗೆ ತಮ್ಮದೇ ಆದಂತಹ ವಿಶ್ಲೇಷಣೆಯನ್ನು ಕೊಟ್ಟಿದ್ದಾರೆ ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ, ವಿಶ್ವದ ಒಂದು ಚಿತ್ರವನ್ನು ಕೊಟ್ಟಿರತಕ್ಕಂತಹ ಮಾನ್ಯ ಅರ್ಥ ಮಂತ್ರಿಗಳು ನಮ್ಮ ದೇಶದಲ್ಲಿ ಆಗಿರತಕ್ಕಂತಹ ಚಿತ್ರಕ್ಕೆ ಎಷ್ಟು ಒತ್ತನ್ನು ಕೊಡಬೇಕಾಗಿತ್ತೊ ಅಷ್ಟು ಒತ್ತನ್ನು ಕೊಟ್ಟಿಲ್ಲ. ಬದಲಾವಣೆಗಳು ವಿಶ್ವದಲ್ಲಿ ಆಗಿದೆ ಅದೇ ರೀತಿ ನಮ್ಮ ದೇಶದಲ್ಲೂ ಕೂಡ ಬದಲಾವಣೆಗಳು ಆಗಿದೆ. ಹಿಂದೆ ನಮ್ಮ ರಾಜ್ಯದಲ್ಲಿ ಆಡಳಿತ ನಡೆಸುತ್ತಾ ಇರತಕ್ಕಂತಹ ಪಕ್ಷ ಇವತ್ತು ಕೇಂದ್ರದಲ್ಲಿ ಆಡಳಿತ ನಡೆಸುತ್ತಿದೆ ಅದರ ಬಗ್ಗೆ ಇಲ್ಲಿ ಸೂಕ್ಷ್ಮವಾಗಿ ಒಂದೇ ಮಾತಿನಲ್ಲಿ ಹೇಳಿ ಮುಗಿಸಿದ್ದಾರೆ. ಇದಕ್ಕೆ ಕಾರಣ ಏನು ಎನ್ನುವುದನ್ನು ತಿಳಿಸಿದ್ದಿದ್ದರೆ ಚೆನ್ನಾಗಿತ್ತು. ಆದರೆ ಆ ವಿಚಾರವನ್ನು ಸ್ವಲ್ಪ ಸೂಕ್ಷ್ಮವಾಗಿ ಹೇಳಬೇಕಾಗಿದ್ದರೆ ನಮ್ಮ ದೇಶ ಅಭಿವೃದ್ಧಿಯ ಪಥದಲ್ಲಿ ನಡೆಯುತ್ತಾ ಇರತಕ್ಕಂತಹ ದೇಶವಾಗಿದ್ದು ಹಿಂದುಳಿರತಕ್ಕಂತಹ ದೇಶ ಕೂಡ ಆಗಿದೆ. ಇಲ್ಲಿ ಅಭಿವೃದ್ಧಿ ಕೆಲಸಗಳು ಎಷ್ಟು ತ್ವರಿತವಾಗಿ ಆಗಬೇಕಾಗಿದೆಯೋ ಅಷ್ಟು ತ್ವರಿತವಾಗಿ ಅಷ್ಟು ವೇಗದಲ್ಲಿ ಆಗುತ್ತಿಲ್ಲ. ಅದಕ್ಕೆ ನಾವು ಅವಲಂಬಿಸಿಕೊಂಡಿರತಕ್ಕಂತಹ ಆರ್ಥಿಕ ನೀತಿ ಏನು ಇದೆ, ಸಮಾಜವಾದದ ಬುನಾದಿಯ ಮೇಲೆ ಹೋಗುತ್ತಾ ಇರತಕ್ಕಂತಹ ಆರ್ಥಿಕ ನೀತಿಯು ಅಥವಾ ಬಂಡವಾಳ ಶಾಹಿಯ ಆರ್ಥಿಕ ನೀತಿ ಏನು ಇದೆ ಇದರ ಬಗ್ಗೆ ವಿಶ್ಲೇಷಣೆಯನ್ನು ಮಾನ್ಯ ರಾಜಶೇಖರ ಮೂರ್ತಿಯವರು ಕೊಟ್ಟಿಲ್ಲ. ಆದರೂ ಸಹ ಇವತ್ತಿನ ದಿವಸ ನಮ್ಮ ದೇಶದಲ್ಲಿ

ಆಗಿರುವ ಬದಲಾವಣೆಗೆ ಮುಖ್ಯ ಕಾರಣವೆಂದರೆ ನನ್ನ ಪ್ರಕಾರ ಅತಿ ಉನ್ನತ ಸ್ಥಾನಗಳಲ್ಲಿ ಯಾರು ಇದ್ದಾರೆ, ಅದು ಕೇಂದ್ರ ಸರ್ಕಾರವಿರಬಹುದು, ರಾಜ್ಯ ಸರ್ಕಾರವಿರಬಹುದು. ಕೆಲವು ಕಡೆ ಬಿಟ್ಟರೆ ಉಳಿದಂತೆ ಉನ್ನತ ಸ್ಥಾನದಲ್ಲಿರುವವರು ನಡೆಸಿರುವ ಭ್ರಷ್ಟಾಚಾರ ಇವತ್ತು ಅಂತಹವರನ್ನು ಆ ಸ್ಥಾನದಿಂದ ಇಳಿಸುವುದಕ್ಕೆ ಮೂಲ ಕಾರಣವೇನು ಅನ್ನುವುದನ್ನು ನಾವಂತೂ ಮರೆಯುತ್ತಿಲ್ಲ. ಅದರ ವಿಶ್ಲೇಷಣೆಯನ್ನು ಮಾನ್ಯ ರಾಜಶೇಖರ ಮೂರ್ತಿಯವರು ಮಾಡಬೇಕಾಗಿತ್ತು. ಆದರೆ ಅವರು ಮಾಡಿಲ್ಲ. ಉನ್ನತ ಸ್ಥಾನದಲ್ಲಿರತಕ್ಕ ಭ್ರಷ್ಟಾಚಾರವನ್ನು ಹೋಗ ಲಾಡಿಸುವ ಬಗ್ಗೆ ಇಲ್ಲಿ ಏನೂ ಹೇಳಿಲ್ಲ. ಈವತ್ತು ಆಡಳಿತ ಯಂತ್ರದಲ್ಲಿರತಕ್ಕ ಭ್ರಷ್ಟಾಚಾರವನ್ನು ಯಾರಾದರೂ ತೊಡೆದು ಹಾಕುತ್ತೇವೆಂದರೆ ಅದು ತಿರುಕನ ಕನಸಿನಂತೆ ಆಗುತ್ತದೆ ಆದ್ದರಿಂದ ಅಂತಹ ಒಂದು ಭ್ರಮೆ ಭ್ರಾಂತಿ ನನಗಂತೂ ಕೂಡ ಇಲ್ಲ. ಆದರೆ ಅತಿ ಉನ್ನತ ಸ್ಥಾನವನ್ನು ಅಲಂಕರಿಸಿದಂತಹ ವರು ಭ್ರಷ್ಟಾಚಾರದಿಂದ ಹೊರತಾಗಿರುವುದಕ್ಕೆ ಸಾಧ್ಯವಿದೆ. ಈ ಒಂದು ಧೃಡವಾದ ನಿರ್ಧಾರವನ್ನು ಮಾನ್ಯ ರಾಜಶೇಖರ ಮೂರ್ತಿಯವರು ತಮ್ಮ ಬಜೆಟ್ ಭಾಷಣದಲ್ಲಿ ಪ್ರಸ್ತಾಪಿಸಿರುವುದಿಲ್ಲ. ಇದು ನನ್ನ ಗಮನಕ್ಕೆ ಬಂದಿದೆ. ಆದರೆ ಈ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಆದ್ದರಿಂದ ಅದು ಇಲ್ಲಿ ಚರ್ಚೆಯಾಗುವಾಗ ನಾನು ಇದರ ವಿವರಗಳಿಗೆ ಬರುತ್ತೇನೆ. ಇದನ್ನೇ ಹಿನ್ನೆಲೆಯಾಗಿ ಇಟ್ಟು ಕೊಂಡು ಇವತ್ತು ನಮ್ಮ ರಾಜ್ಯದಲ್ಲೂ ಕೂಡ ಬದಲಾವಣೆಯಾಗಿದೆ. ನಿಜ ಒಪ್ಪುತ್ತೇನೆ, ೧೭೮ ಜನ ಕಾಂಗ್ರೆಸ್ ಸ್ನೇಹಿತರು ಇಲ್ಲಿ ಬಂದು ಕುಳಿತಿದ್ದಾರೆ. ನಾವು ಮೊದಲು ಆ ಕಡೆ ಕುಳಿತಿದ್ದವು ಈಗ ಈ ಕಡೆ ಬಂದು ಕುಳಿತಿದ್ದೇವೆ. ಅದು ಜನಗಳ ಇಚ್ಛೆ ಅವನ್ನು ಯಾರು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ವಿರುದ್ಧವಾಗಿ ನಡೆದು ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ನಡೆದಿರತಕ್ಕ ಬದಲಾವಣೆಗೆ ನಾನು ಶಿರಸಾವಹಿಸಿ ಒಪ್ಪಿಕೊಳ್ಳುತ್ತೇನೆ ಅದರಿಂದ ನಾವು ಈ ಕಡೆ ಬಂದು ಕುಳಿತಿರುವುದು.

ಶ್ರೀ ರಮಾನಾಥ ರೈ:—ದೇಶದ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ. ರಾಜ್ಯದ ಬಗ್ಗೆ ವಿಶ್ಲೇಷಣೆ ಮಾಡುವುದಕ್ಕೆ ಮಾನ್ಯ ಬೈರೇಗೌಡರು ಏತಕ್ಕೆ ಹೋಗಿಲ್ಲ. ದೇಶದಲ್ಲಿ ಬದಲಾವಣೆ ಆಗಿದ್ದರ ಬಗ್ಗೆ ಬಹಳವಾಗಿ ವಿಶ್ಲೇಷಣೆ ಮಾಡಿದ್ದೀರಿ. ರಾಜ್ಯದಲ್ಲಿ ಆಗಿದ್ದಕ್ಕೆ ವಿಶ್ಲೇಷಣೆ ಮಾಡಿಲ್ಲ. ಅದನ್ನೂ ಸ್ವಲ್ಪ ಹೇಳಿ, ಅಭಿಪ್ರಾಯಗಳು ಸಮಾನವಾಗಿರಲಿ.

ಶ್ರೀ ಸಿ.ಬೈರೇಗೌಡ:— ಮಾನ್ಯ ಅಧ್ಯಕ್ಷರೆ ದೇಶದಲ್ಲಿ ಆಗಿರತಕ್ಕ ಬದಲಾವಣೆಗೆ ಮೂಲಕಾರಣ ಏನಿದೆ? ಅದೇ ಇಲ್ಲಿ ಆಗಿರತಕ್ಕ ಬದಲಾವಣೆಗೂ ಮೂಲ ಕಾರಣ ೭ನೇ ಪಂಚವಾರ್ಷಿಕ ಯೋಜನೆ ಮುಗಿದಿದೆ. ೮ನೇ ಪಂಚವಾರ್ಷಿಕ ಯೋಜನೆಗೆ ಕಾಲಿಡತಕ್ಕ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ೮ನೇ ಪಂಚವಾರ್ಷಿಕ ಯೋಜನೆಗೆ ಕಾಲಿಡತಕ್ಕ ಸಂದರ್ಭದಲ್ಲಿ ಮಾನ್ಯ ಅರ್ಥ ಮಂತ್ರಿಗಳು ಬಜೆಟ್ ಅನ್ನು ಇವತ್ತಿನ ದಿವಸ ನಮ್ಮ ಮುಂದೆ ಇಟ್ಟಿದ್ದಾರೆ. ನಾನು ಬಹಳ ನಿರೀಕ್ಷೆ ಮಾಡಿದ್ದೆ. ೧೭೮ ಜನ ನನ್ನ ಸ್ನೇಹಿತರು ಕಾಂಗ್ರೆಸ್ ಪಕ್ಷದಿಂದ ಆರಿಸಿ ಬಂದಿದ್ದಾರೆ. ಆದ್ದರಿಂದ ರಾಜ್ಯದ ಜನತೆಯ ದಿಕ್ಕನ್ನು ಬದಲಾಯಿಸತಕ್ಕ ಮಹತ್ತರ ಬದಲಾವಣೆಯನ್ನು ಮಾಡುತ್ತಾರೆಂದು ಹಾಗೂ ಜನತೆಯು ಬೆಂಬಲ ಇವತ್ತಿನ ದಿವಸ ಅವರಿಗೆ ಏನು ಸಿಕ್ಕಿದೆಯೋ, ಆ ಜನತೆಯು ಬೆಂಬಲವನ್ನು ಮೀರಿಸತಕ್ಕ ಕಾರ್ಯಗಳನ್ನು ಮಾಡಿ ತೋರಿಸುತ್ತಾರೆಂಬ ಕಲ್ಪನೆ ಕೂಡ ನನಗೆ ಇತ್ತು. ಅದಕ್ಕಾಗಿ ಬಜೆಟ್ ಭಾಷಣ ವನ್ನು ಮಾನ್ಯ ಅರ್ಥ ಸಚಿವರು ಓದುವಾಗ ಬಹಳ ಕಾತುರದಿಂದ ಪ್ರತಿಯೊಂದು ಪದವನ್ನು ನಾನು ಕೇಳುತ್ತಿದ್ದೆ. ಆದರೆ ಮೊದಲಿನಿಂದ ಕೊನೆಯವರೆಗೂ ಆ ರೀತಿಯಾದಂತಹ ಬದಲಾವಣೆಗೆ ಅವರಿಗೆ ಎಷ್ಟು ಬೆಂಬಲದಕ್ಕಿದೆಯೋ ಆ ಬೆಂಬಲಕ್ಕೆ ತಕ್ಕಂತೆ ಪ್ರತಿಫಲ ಜನತೆಗೆ ಕೊಡುವಂತಹ ಕೆಲಸ ಈ ಬಜೆಟ್ ನಲ್ಲಿ ನಡೆದಿಲ್ಲವೆಂದು ವಿಷಾದದಿಂದ ಇವತ್ತು ಹೇಳಬೇಕಾಗಿದೆ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ನಮ್ಮ ಗುರಿಗಳನ್ನು ಮುಟ್ಟುವುದರಲ್ಲಿ ಎಡವಿದ್ದೇವೆ, ನಮ್ಮ ರಾಜ್ಯದಲ್ಲಿ ಪ್ರಮುಖವಾಗಿ ಕಾಣು ತ್ತಿರುವ ಮೂಲಭೂತ ಸಮಸ್ಯೆಗಳಾದ ನೀರಾವರಿ ಬಗ್ಗೆ-ಯಾಗಲಿ, ಅಥವಾ ವಿದ್ಯುತ್ ಬಗ್ಗೆಯಾಗಲಿ, ಆಹಾರ ಪದಾರ್ಥಗಳ ಬಗ್ಗೆಯಾಗಲಿ ನಾವು ನಮ್ಮ ಗುರಿಯನ್ನು ಮುಟ್ಟುವುದರಲ್ಲಿ ಎಡವಿದ್ದೇವೆಂಬ ಮಾತನ್ನು ಏನು ಹೇಳಿದ್ದಾರೆ. ಅದು ನಿಜ.

೩-೦೦ ಪಿ.ಎಂ.

ಅವರು ಆದ್ಯತೆಗಳನ್ನು ಕೊಡುವಾಗ ತಮ್ಮ ಅನುಭವದ ಹಿನ್ನೆಲೆಯನ್ನು ಗಮನದಲ್ಲಿ ಇಟ್ಟುಕೊಂಡು ಇದಕ್ಕೆ ಆದ್ಯತೆಯನ್ನು ಕೊಡುತ್ತಾರೆಂದು ನಾನು ಅಂದುಕೊಂಡಿದ್ದೆ. ಆದರೆ ನಾನು ಏನು ಒಂದು ಆಸೆಯನ್ನು ಇಟ್ಟುಕೊಂಡಿದ್ದೆ ಅದು ಇವತ್ತು ನಿರಾಶೆಯಾಗಿದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಆರ್ಥಿಕ ಸಚಿವರು ತಮ್ಮ ಬಜೆಟ್

ಭಾಷಣದಲ್ಲಿ "ಮೂಲಭೂತ ಸೌಲಭ್ಯಗಳ ನಿರ್ಮಾಣ ಆರ್ಥಿಕ ಅಭಿವೃದ್ಧಿಗೆ ಅತ್ಯಾವಶ್ಯಕ. ಅದು ರಾಜ್ಯದ ಅಭಿವೃದ್ಧಿಯ ದಿಕ್ಸೂಚಿಯೂ ಹೌದು. ಮೂಲಭೂತ ಸೌಲಭ್ಯಗಳು ಹೆಚ್ಚಿದಂತೆ ಆರ್ಥಿಕ ಪ್ರಗತಿ ತ್ವರಿತಗೊಳ್ಳುತ್ತದೆ. ಈ ಸೌಲಭ್ಯಗಳ ಕೊರತೆಯುಂಟಾದರೆ ಆರ್ಥಿಕ ಪ್ರಗತಿಯೂ ಇಳಿಮುಖವಾಗುತ್ತದೆ". ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಯಾವಾಗ ಇನ್‌ಫ್ರಾಸ್ಟ್ರಕ್ಚರ್ ಹೆಚ್ಚಾಗುವುದಿಲ್ಲ, ಆಗ ರಾಜ್ಯದ ಆರ್ಥಿಕ ಪ್ರಗತಿ ತಾನೇತಾನಾಗಿ ಇಳಿಮುಖವಾಗುತ್ತದೆ. ಈ ಮಾತನ್ನು ಅವರು ಒಪ್ಪಿಕೊಂಡಿದ್ದಾರೆ. ಆರ್ಥಿಕ ಚಿಂತನೆ ಇರುವ ಯಾವ ವ್ಯಕ್ತಿಯಾದರೂ ಈ ಮಾತನ್ನು ಒಪ್ಪಿಕೊಳ್ಳತಕ್ಕದ್ದಾಗಿದೆ. ಅಷ್ಟೇ ಅಲ್ಲದೆ ಇನೂ ಮುಂದೆ ಹೋಗಿ ಇವರು ಏನು ಹೇಳಿದ್ದಾರೆಂದರೆ "ಕರ್ನಾಟಕದಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಯ ಸೂಚ್ಯಂಕವು ಅಖಿಲ ಭಾರತ ಮಟ್ಟದಲ್ಲಿ ಸರಾಸರಿ ೧೦೦ಕ್ಕೆ ಹೋಲಿಸಿದರೆ ೧೯೭೭-೭೮ರಲ್ಲಿ ೧೧೫ ಆಗಿತ್ತು, ಮುಂದಿನ ದಶಕದಲ್ಲಿ ಅದೇನೂ ಮೇಲಕ್ಕೆ ಏರಲಿಲ್ಲ. ಬದಲಾಗಿ ೧೯೮೭-೮೮ರಲ್ಲಿ ಅದು ೯೮ಕ್ಕೆ ಇಳಿಯಿತು" ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಇದನ್ನು ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಂಡು ಅತಿ ಮುಖ್ಯವಾದ ಆದ್ಯತೆಗಳನ್ನು ಈ ಆಹಾರೋತ್ಪಾದನೆಗೆ ಕೊಡಬೇಕು. ನಾನು ಈ ಮಾತನ್ನು ಏತಕ್ಕೆ ಹೇಳುತ್ತೀದ್ದೆನೆಂದರೆ, ಅವಶ್ಯಕತೆಗಿಂತ ಹೆಚ್ಚಿಗೆ ಆಹಾರವನ್ನು ಉತ್ಪತ್ತಿ ಮಾಡತಕ್ಕ ರಾಜ್ಯ ನಮ್ಮದಲ್ಲ. ಎಷ್ಟೋ ಸಂದರ್ಭಗಳಲ್ಲಿ ಆಹಾರೋತ್ಪಾದನೆಯಲ್ಲಿ ಅತ್ಯಂತ ಕೊರತೆಯನ್ನು ನಾವು ಅನುಭವಿಸಿದ್ದೇವೆ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಆದ್ದರಿಂದ ಇವತ್ತು ನಮ್ಮಲ್ಲಿ ಆಹಾರೋತ್ಪಾದನೆ ಹೆಚ್ಚಾಗಬೇಕಾದರೆ ಮುಖ್ಯವಾಗಿ ವ್ಯವಸಾಯ ರಂಗಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು ಮತ್ತು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರ ಆರ್ಥಿಕ ಸ್ಥಿತಿಯ ಕಡೆಗೆ ಗಮನಕೊಡಬೇಕು. ನೀರಾವರಿಗೆ ನಾವು ಎಷ್ಟು ಒತ್ತನ್ನು ಕೊಡಬೇಕಾಗಿತ್ತೋ ಅಷ್ಟು ಒತ್ತನ್ನು ನೀವು ಕೊಡುವುದಕ್ಕೆ ಸಾಧ್ಯವಾಗಿಲ್ಲ ಎಂಬುದು ನಿಮ್ಮ ಭಾಷಣದಲ್ಲೇ ವೇದ್ಯವಾಗುತ್ತದೆ. ನೀರಾವರಿಗೆ ಹೆಚ್ಚಿನ ಅನುಕೂಲವಾಗಬೇಕಾದರೆ ವ್ಯವಸಾಯ ರಂಗಕ್ಕೆ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಒದಗಿಸುವ ವ್ಯವಸ್ಥೆಯಾಗಬೇಕು. ಅದರಲ್ಲೂ ಮಳೆಯಿಂದ ವಂಚಿತವಾಗಿರುವಂಥ ಕೋಲಾರ ಮುಂತಾದ ಬಯಲು ಸೀಮೆಗಳ ಕಡೆಗೆ ನಿಮ್ಮ ಆದ್ಯತೆ ಹೆಚ್ಚಬೇಕು. ನಮ್ಮಲ್ಲಿ ವಿದ್ಯುತ್ ಇಲ್ಲದೆ ಊಟ ಮಾಡುವುದಕ್ಕೂ ಕೂಡ ಸಾಧ್ಯವಾಗುತ್ತಿಲ್ಲ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಅದರೆ ನಾನು ಮೊನ್ನೆ ಒಂದು ಹಳ್ಳಿಗೆ ಹೋಗಿದ್ದಾಗ ಬಾಯಾರಿಕೆ ಆಯಿತು. ಅಲ್ಲಿ ಕುಡಿಯಲು ನೀರನ್ನು ಕೇಳಿದಾಗ ಅವರು ಹೇಳಿದರು, ಸ್ವಾಮಿ, ಕಳೆದ ೩ ದಿವಸದಿಂದ ನಮಗೆ ವಿದ್ಯುಚ್ಛಕ್ತಿಯೇ ಇಲ್ಲ. ಇದರಿಂದಾಗಿ ನಮಗೆ ನೀರು ಇಲ್ಲ ಎಂದು ಹೇಳಿ ಕೊನೆಗೆ ಕುಡಿಯಲು ಹಾಲನ್ನು ತಂದುಕೊಟ್ಟರು. ಅಂದರೆ ವಿದ್ಯುಚ್ಛಕ್ತಿ ಇಲ್ಲದಿದ್ದುದರಿಂದ ಎಂಥ ತೊಂದರೆ ಆಯಿತೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ೧೯೯೫ರ ಹೊತ್ತಿಗೆ ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಅವಶ್ಯಕತೆ ಎಲ್ಲಿಗೆ ಹೋಗಿ ಮುಟ್ಟುತ್ತದೆಂಬುದನ್ನು ಮಾನ್ಯ ರಾಜಶೇಖರ ಮೂರ್ತಿಯವರು ಹೇಳಿದ್ದಾರೆ. ವಿದ್ಯುಚ್ಛಕ್ತಿಯ ಉತ್ಪಾದನೆಯಲ್ಲಿ ನಮ್ಮ ಗುರಿ ಇದ್ದದ್ದು ೫೮೧ ಮಿಲಿಯನ್ ಯೂನಿಟ್‌ಗಳು. ಆದರೆ ಉತ್ಪಾದನೆಯಾದುದು ೫೪೦ ಮಿಲಿಯನ್ ಯೂನಿಟ್‌ಗಳು. ಅಂದರೆ ಸುಮಾರು ೪೧ ಮಿಲಿಯನ್ ಯೂನಿಟ್‌ಗಳ ಕೊರತೆ ಆದಂತಾಯಿತು. ಮುಂದಿನ ೫ ವರ್ಷಗಳಲ್ಲಿ ಅಂದರೆ ೧೯೯೫ರ ಕೊನೆಯ ಹೊತ್ತಿಗೆ ನಮ್ಮ ರಾಜ್ಯದಲ್ಲಿ ಎಷ್ಟು ವಿದ್ಯುಚ್ಛಕ್ತಿ ಉತ್ಪಾದನೆ ಆಗಬೇಕಾಗಿದೆ ಎಂಬುದನ್ನು ಇವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಮುಂದಿನ ೫ ವರ್ಷಗಳ ಅವಧಿಗೆ ಚಾಲ್ತಿ ವಿದ್ಯುತ್ ಯೋಜನೆಗಳಿಗೆ ಸುಮಾರು ೯೫ ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಹೇಳಿದ್ದಾರೆ. ಮುಂದಿನ ೫ ವರ್ಷಗಳಿಗೆ ಅವಶ್ಯಕವಾಗಿರತಕ್ಕಂಥ ವಿದ್ಯುಚ್ಛಕ್ತಿಯ ಬಾಬಿಗೆ ಈ ಸಲ ಒದಗಿಸಿರತಕ್ಕಂಥದ್ದು ೨೬೬.೬೬ ಕೋಟಿ ರೂಪಾಯಿಗಳು ೧೯೯೫ರ ವರೆಗೆ ಈ ಬಾಬಿಗೆ ಎಷ್ಟು ವಿದ್ಯುತ್ ಕೊರತೆ ಇದೆ, ಎಷ್ಟು ವಿದ್ಯುತ್ ಬೇಕಾಗುತ್ತದೆ ಎನ್ನುವುದನ್ನೂ ಸಹ ಇಲ್ಲಿ ಕೊಟ್ಟಿದ್ದೀರಿ. ೨೬.೮೦೦ ದಶಲಕ್ಷ ಯೂನಿಟ್ಸ್‌ಗಳು ಬೇಕಾಗುತ್ತದೆಂದು. ಹೇಳಿದ್ದೀರಿ. ಇದನ್ನು ಸರಿದೂಗಿಸಬೇಕಾದರೆ ೨.೫೦೧ ಕೋಟಿ ರೂಪಾಯಿಗಳನ್ನು ನಾವು ಇದರ ಮೇಲೆ ಖರ್ಚುಮಾಡಬೇಕಾಗುತ್ತದೆ. ಇವತ್ತು ಇದೆಲ್ಲ ಆಗಬೇಕಾದರೆ ಈಗ ಕೊಟ್ಟಿರತಕ್ಕಂಥ ೨೬೬ ಕೋಟಿ ರೂಪಾಯಿಗಳನ್ನು ಐದರಿಂದ ಗುಣಿಸಿದರೆ ೧೨೦೦ರಿಂದ ೧೫೦೦ ಕೋಟಿ ರೂಪಾಯಿಗಳನ್ನು ಮುಂದಿನ ೫ ವರ್ಷಗಳಲ್ಲಿ ತೊಡಗಿಸಲಿಕ್ಕೆ ಸಾಧ್ಯವಾಗುತ್ತದೆ. ಆದರೆ ಇದಕ್ಕೆ ಬೇಕಾಗಿರತಕ್ಕಂಥದ್ದು ಎಷ್ಟು ಎಂದರೆ ಎರಡೂವರೆ ಸಾವಿರ ಕೋಟಿ ರೂಪಾಯಿಗಳು. ಬಹಳ ಅವಶ್ಯಕವಾಗಿ ಈ ಕೊರತೆಯನ್ನು ತಗ್ಗಿಸಬೇಕಾಗಿದೆ. ಇದು ಕೇವಲ ಬರೆ ವಿದ್ಯುತ್ತಿಗೆ ಸೀಮಿತವಾಗಿಲ್ಲ. ನಮ್ಮ ನೀರಾವರಿ ಯೋಜನೆಗಳನ್ನು ಸಹ ಮುಗಿಸಬೇಕಾಗಿದೆ. ಅದರಲ್ಲೂ ಪ್ರಮುಖವಾಗಿ ಕೃಷ್ಣಾ ಜಲಾನಯನ ಪ್ರದೇಶದಲ್ಲಿರತಕ್ಕಂಥ ಯೋಜನೆಗಳು, ಮತ್ತು ಕಾವೇರಿ ಜಲಾನಯನ ಪ್ರದೇಶದಲ್ಲಿರತಕ್ಕಂಥ ಯೋಜನೆಗಳು ಈ ಎರಡೂ

ಯೋಜನೆಗಳನ್ನು ತೆಗೆದುಕೊಂಡಲ್ಲಿ, ಅವರಲ್ಲಿ ಕೃಷ್ಣಾನದಿ ಜಲಾನಯನ ಪ್ರದೇಶಗಳಲ್ಲಿರತಕ್ಕಂಥ ಯೋಜನೆಗಳನ್ನು ನಾವು ಎರಡು ಸಾವಿರದ ಇಸವಿಯ ಹೊತ್ತಿಗೆ ಮುಗಿಸಬೇಕಾದ ಅವಶ್ಯಕತೆ ಬಹಳ ವಾಗಿದೆ. ಇದನ್ನು ನಾವು ಮಾಡದಿದ್ದರೆ ನಮ್ಮ ಪಾಲಿನ ನೀರು ಬಳಕೆಯಾಗದಿದ್ದರೆ, ನಮ್ಮ ಪಾಲಿನ ನೀರು ಶಾಶ್ವತವಾಗಿ ನಮ್ಮ ರಾಜ್ಯದ ರೈತರಿಗೆ ದೊರೆಯುವುದಿಲ್ಲ. ಇವಕ್ಕೆ ಸುಮಾರು ಮೂರು ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ ಎನ್ನುವ ಮಾತನ್ನು ಮಾನ್ಯ ಅರ್ಥಸಚಿವರು ತಿಳಿಸಿದ್ದಾರೆ. ಮೂರು ಸಾವಿರ ಕೋಟಿ ರೂಪಾಯಿಗಳು ಬೇಕಾಗಿರುವ ಕಡೆಗೆ ಒದಗಿಸಿರತಕ್ಕ ಹಣ ಎಷ್ಟು ಇದೆಯೆಂದರೆ, ಕೇವಲ ೨೧೨.೩೩ ಕೋಟಿ ರೂಪಾಯಿಗಳನ್ನು ಇವತ್ತಿನದಿವಸ ಒದಗಿಸಿದ್ದಾರೆ. ಸ್ವಾಮಿ ಈ ರೀತಿಯಾಗಿ ನೀರಾವರಿ ಖಾತೆಗೆ ಹಣವನ್ನು ಕೊಡುತ್ತಾ ಹೋದರೆ ಈ ಯೋಜನೆಗಳನ್ನು ಮುಗಿಸಲು ಎಷ್ಟು ವರ್ಷಗಳು ಬೇಕಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ನೀವೇ ಹೇಳಿರುವ ಪ್ರಕಾರ ೨೦ ವರ್ಷಗಳೇ ಬೇಕಾಗುತ್ತದೆ. ಎರಡು ದಶಕಗಳೇ ಬೇಕಾಗುತ್ತದೆಂದು ಮಾನ್ಯ ಅರ್ಥಸಚಿವರು ತಿಳಿಸಿದ್ದಾರೆ. ನೀವು ಇನ್ನು ಕೇವಲ ಒಂದು ದಶಕ ಅಂದರೆ ೧೦ ವರ್ಷಗಳ ಒಳಗೆ ಕೃಷ್ಣಾನದಿಯಲ್ಲಿರತಕ್ಕಂಥ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಬೇಕು. ಇದು ಈಗಾಗಲೇ ತೀರ್ಮಾನವಾಗಿರತಕ್ಕಂಥ ವಿಚಾರ. ಇದನ್ನು ಎರಡು ಸಾವಿರದ ಇಸವಿಯೊಳಗೆ ಬಳಸದೆ ಇದ್ದಲ್ಲಿ ಆ ನೀರು ಶಾಶ್ವತವಾಗಿ ನಮ್ಮ ಕೈ ತಪ್ಪಿ ಹೋಗುತ್ತದೆ. ಆದರೆ ತಾವು ಕೊಡುತ್ತಿರತಕ್ಕಂಥ ಹಣ ಏನು ಇದೆ, ಅದು ಬಕಾಸುರನ ಹೊಟ್ಟೆಗೆ ಅರೆಕಾಸು ಮಜ್ಜಿಗೆ ಕೊಡತಕ್ಕಂಥ ರೀತಿಯಲ್ಲಿದೆ. ಇದರಿಂದ ನಮ್ಮ ಇಡೀ ರಾಜ್ಯದ ಆರ್ಥಿಕ ಪರಿಸ್ಥಿತಿ, ನಮ್ಮ ಇಡೀ ರಾಜ್ಯದಲ್ಲಿರತಕ್ಕಂಥ ರೈತರ ಪರಿಸ್ಥಿತಿ ಹದಗೆಡುವ ಪರಿಸ್ಥಿತಿಗೆ ಬರುತ್ತದೆ. ಆಹಾರಧಾನ್ಯಗಳ ಉತ್ಪಾದನೆಗೆ ಅವಶ್ಯಕವಾಗಿರತಕ್ಕಂಥ ನೀರಾವರಿ ಯೋಜನೆಗಳು ಕುಂಠಿತವಾಗುತ್ತಿರುವುದರಿಂದ ನಮ್ಮ ಆಹಾರದ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು ಕಷ್ಟವಾಗುತ್ತದೆ. ಇದು ಕೇವಲ ಕೃಷ್ಣಾನದಿಯ ಪಾತ್ರದಲ್ಲಿರತಕ್ಕಂಥ ಯೋಜನೆಗಳಿಗೆ ಮಾತ್ರ ಸೀಮಿತವಾಗಿಲ್ಲ. ಕಾವೇರಿ ನದಿಯ ಪಾತ್ರದಲ್ಲಿ ಬರತಕ್ಕಂಥ ಯೋಜನೆಗಳಿಗೂ ಕೂಡ ಇದೇ ಗತಿ ಬರುತ್ತದೆ. ಈಗಾಗಲೇ ತಮಿಳುನಾಡಿಗೂ ಮತ್ತು ಕರ್ನಾಟಕಕ್ಕೂ ೧೯೨೪ನೇ ಇಸವಿಯ ಒಂದು ಕರಾರು ಅವಧಿಯು ಏನಿದೆ ಅದು ಈಗಾಗಲೇ ಮುಗಿದಿದೆ. ಆದರೂ ಈ ಬಗ್ಗೆ ನಾನಾ ರೀತಿಯಲ್ಲಿ ಒತ್ತಡಗಳು ಬರುತ್ತಿರುವುದನ್ನು ನಾವು ಇಲ್ಲಿ ನೋಡುತ್ತಿದ್ದೇವೆ. ಕಾವೇರಿ ನದಿ ನೀರಿನ ಹಂಚಿಕೆ ವಿಚಾರ, ಏನು ಇದೆ, ಅದು ಟ್ರಿಬ್ಯೂನಲ್‌ಗೆ ಹೋಗತಕ್ಕಂಥ ಪರಿಸ್ಥಿತಿ ಸಹ ಬಂದಿದೆ. ಯಾವುದೇ ಪಕ್ಷದ ಸರ್ಕಾರ ರಾಜ್ಯದಲ್ಲಿ ಇರಲಿ, ಕೇಂದ್ರದಲ್ಲಿ ಯಾವುದೇ ಪಕ್ಷದ ಸರ್ಕಾರವಿರಲಿ, ಈ ಬಗ್ಗೆ ವಿವಾದ ಬಂದಾಗ ಸಾಮಾನ್ಯವಾಗಿ ಅದು ಟ್ರಿಬ್ಯೂನಲ್ ಮುಂದೆ ಹೋಗಲೇಬೇಕಾಗುತ್ತದೆ. ಇದು ಹಿಂದೆ ನಡೆದಿರತಕ್ಕಂಥದ್ದು.

ಹಿಂದೆ ನಡೆದಿರತಕ್ಕದ್ದನ್ನು ಹೇಳುವುದಾದರೆ, ಕೃಷ್ಣ ನದಿ ನೀರಿನ ವ್ಯವಹಾರದಲ್ಲಿ ಕೂಡ ಇದೇ ರೀತಿ ಆಯಿತು. ಕಾವೇರಿ ನದಿ ನೀರಿನ ವ್ಯವಹಾರದಲ್ಲಿ ಈ ರೀತಿ ಆಗುವುದಿಲ್ಲವೆಂಬ ಭರವಸೆ ನನಗಿಲ್ಲ. ಟ್ರಿಬ್ಯೂನಲ್‌ನ ಎದುರುಗಡೆ ಹೋದರೆ ಅಲ್ಲಿ ಅದು ಯಾವ ರೀತಿ ತೀರ್ಮಾನವಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಅಲ್ಲಿ ಯಾವ ಯೋಜನೆಗಳನ್ನೂ ಕೈಗೆತ್ತಿಕೊಳ್ಳಬೇಕಾದ ಅವಶ್ಯಕತೆ ಇಲ್ಲ ಎಂಬ ತೀರ್ಮಾನ ಬಂದರೆ, ಅದರಿಂದ ಏನೂ ಆಗುವುದಿಲ್ಲ. ಇವತ್ತಿನ ದಿವಸ ಸುಮಾರು ೭೫೦ ಕೋಟಿ ರೂಪಾಯಿಗಳು ಈ ಕಾವೇರಿ ನದಿ ಬೇಸಿನ್‌ನಲ್ಲಿರತಕ್ಕ ಯೋಜನೆಗಳಿಗೆ ಬೇಕೆಂಬ ಮಾತನ್ನು ಹೇಳಿದ್ದಾರೆ. ಆದರೆ ಇಲ್ಲಿ ಆ ಪ್ರಸ್ತಾಪ ಇಲ್ಲ. ಬಹುಶಃ ಇದು ಯೋಜನೆ ಹೊರಗಡೆ ಇರುವ ಕಾರಣದಿಂದ ಬಡ್ಜೆಟ್ಟಿನಲ್ಲಿ ಪ್ರಸ್ತಾಪ ಮಾಡಿಲ್ಲವೋ ಅಥವಾ ಯಾವ ಕಾರಣದಿಂದ ಎಂದು ನನಗೆ ಅರ್ಥವಾಗಿಲ್ಲ. ಬಡ್ಜೆಟ್ಟಿನಲ್ಲಿ ಬೇಕಾಗಿಲ್ಲ, ಕಾವೇರಿ ಬೇಸಿನ್‌ನಲ್ಲಿ ಇರತಕ್ಕ ಯೋಜನೆಗಳನ್ನು ತೆಗೆದುಕೊಳ್ಳತಕ್ಕದ್ದು ಬೇಕಾಗಿಲ್ಲ, ಆದ್ದರಿಂದ ಹಣ ಕೊಡಬೇಕಾದ ಅವಶ್ಯಕತೆ ಇಲ್ಲವೆಂಬ ತೀರ್ಮಾನಕ್ಕೆ ಬಂದಿದ್ದಾರೋ ಏನೋ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನೀರಾವರಿ ಅಂದಾಕ್ಷಣ ನಮಗೆ ದೊಡ್ಡ ದೊಡ್ಡ ಯೋಜನೆಗಳ ಕಲ್ಪನೆ ಬರತಕ್ಕದ್ದು ಸಹಜ. ಅದು ಪ್ರಕೃತಿದತ್ತವಾಗಿ ದೊರೆಯತಕ್ಕ ಸವಲತ್ತು. ರಾಜ್ಯದ ಅಭಿವೃದ್ಧಿಗೆ ರೈತರ ಅಭಿವೃದ್ಧಿಗೆ ನೀರನ್ನು ಉಪಯೋಗಿಸಿಕೊಳ್ಳತಕ್ಕದ್ದು ನಮ್ಮ ಕರ್ತವ್ಯ. ನೀರು ಎಲ್ಲೇ ದೊರೆಯಲಿ ಸಣ್ಣ ಹೊಳೆಯಲ್ಲಿ ದೊರೆಯಲಿ, ದೊಡ್ಡ ನದಿಯಲ್ಲಿ ದೊರೆಯಲಿ, ಅದನ್ನು ಉಪಯೋಗಿಸಿಕೊಳ್ಳಬೇಕು. ನಾನು ರಾಜಶೇಖರಮೂರ್ತಿಯವರ ಭಾಷಣವನ್ನು ನೋಡಿದೆ, ಅದರಲ್ಲಿ ಎಲ್ಲಿಯಾದರೂ ಈ ಸಣ್ಣ ನೀರಾವರಿ ಎಂಬ ಪದ ಇದೆಯೋ, ಅದಕ್ಕೆ ಯಾವ ರೀತಿ ಹಣ ಖರ್ಚು ಮಾಡುತ್ತಾರೆಂದು ನೋಡಿದೆ. ನನಗೆ ಎಲ್ಲಿಯೂ ಕಾಣಲಿಲ್ಲ, ಅದು ಜಿಲ್ಲಾ ಪರಿಷತ್ತಿಗೆ ಬರುತ್ತದೆಂದು ಹೇಳಿದ್ದಾರೆ. ನಾನು ಇದರ ಬಗ್ಗೆ ಬಹಳ ತೀವ್ರವಾಗಿ ಹೇಳಬೇಕಾಗುತ್ತದೆ. ಜಿಲ್ಲಾ ಪರಿಷತ್ತಿಗೆ ಬರುತ್ತದೆ ನಿಜ. ಆದರೆ ಅಲ್ಲಿಗೆ ಏನು ಕೊಟ್ಟಿದ್ದೀರಿ ? ಈಗ ಇರತಕ್ಕ ಕೆರೆಗಳಲ್ಲಿ ಶೇಕಡ ೪೦ರಷ್ಟು ಕೆರೆಗಳಿಗೆ ತೂಬು ಭದ್ರವಾಗಿದ್ದರೆ ಕೋಡಿ ಭದ್ರವಾಗಿರುವುದಿಲ್ಲ. ಕೋಡಿ, ತೂಬು ಎರಡೂ ಭದ್ರವಾಗಿದ್ದರೆ ಕಟ್ಟೆ ಭದ್ರವಾಗಿರುವುದಿಲ್ಲ. ಯಾವ ಕೆರೆ ಸಹ ಸರಿಯಾದ ರೀತಿಯಲ್ಲಿ ಬಳಕೆಯಾಗ ಬೇಕಾಗಿತ್ತೋ ಆ ರೀತಿ

ಆಗುತ್ತಿಲ್ಲ, ಮೊದಲನೆಯದಾಗಿ ಈ ಕೆರೆಗಳಲ್ಲಿ ತುಂಬಿರತಕ್ಕ ಹೂಳನ್ನು ತೆಗೆಸತಕ್ಕ ಕಾರ್ಯ ಆಗಬೇಕು. ಮಾನ್ಯ ಲೋಕೋಪಯೋಗಿ ಮಂತ್ರಿಗಳು ಇದನ್ನು ದಯವಿಟ್ಟು ಗಮನಿಸಬೇಕು. ಇವತ್ತಿನ ದಿವಸ ಸಣ್ಣ ಕೆರೆಗಳನ್ನು ಅಂದರೆ ೫೦೦ ಎಕರೆ ಜಮೀನಿನ ವ್ಯಾಪ್ತಿಗೆ ಒಳಪಟ್ಟಿರತಕ್ಕ ಕೆರೆಗಳನ್ನು ಜಿಲ್ಲಾ ಪರಿಷತ್ತುಗಳಿಗೆ ವರ್ಗ ಮಾಡಿಸಿದ್ದಾರೆ. ೫೦೦ ಎಕರೆಗೆ ಮೇಲ್ಪಟ್ಟ ನೀರಾವರಿ ಕೆರೆಗಳು ಏನಿವೆ, ಆ ಕೆರೆಗಳನ್ನು ಕಟ್ಟಿದಾಗ ಅದರ ಕೆಪಾಸಿಟಿ ಎಷ್ಟಿತ್ತು, ಇವತ್ತಿನ ದಿವಸ ಎಷ್ಟಿದೆ ? ನನಗೆ ತಿಳಿದಿರುವ ಪ್ರಕಾರ ಕೆಲವು ಕೆರೆಗಳು ಶೇಕಡ ೬೦ ರಿಂದ ೬೫ರಷ್ಟು ಹೂಳಿನಿಂದ ತುಂಬಿವೆ. ಬೆಳದಿಂಗಳಿಗೆ ಒಣಗತಕ್ಕ ಕೆರೆಗಳನ್ನು ಇವೊತ್ತಿನ ದಿವಸ ನೋಡುತ್ತಿದ್ದೇವೆ. ಅಧ್ಯಕ್ಷರೆ, ತಾವು ಅರ್ಥ ಮಾಡಿಕೊಳ್ಳಬೇಕು. ಹೂಳಿನಿಂದ ತುಂಬಿವೆ ಅಂದರೆ ಒಂದೆರಡು ಅಡಿಯಿಂದ ತುಂಬಿಲ್ಲ, ಹತ್ತಾರು ಅಡಿಗಳ ಹೂಳಿನಿಂದ ತುಂಬಿವೆ. ಅಂಥ ಕೆರೆಗಳನ್ನು ಅಭಿವೃದ್ಧಿ ಪಡಿಸುವುದಾಗಲಿ, ಅಥವಾ ಅವುಗಳನ್ನು ಮೊದಲಿನ ಸ್ಥಿತಿಗೆ ತರುವುದಕ್ಕೆ ಯಾವ ಕಾರ್ಯಕ್ರಮವನ್ನೂ ಹಾಕಿಲ್ಲ. ಇದರಿಂದ ಬಯಲು ಸೀಮೆಯಲ್ಲಿರತಕ್ಕ ನಮ್ಮ ಕೋಲಾರ, ಬೆಂಗಳೂರು, ತುಮಕೂರಿನ ರೈತರಿಗೆ ನೀರಾವರಿ ಅಂದರೆ ಸಣ್ಣ ಕೆರೆಗಳ ಮೂಲಕವೇ ಆಗತಕ್ಕದ್ದು ಇದಕ್ಕೆ ಯಾವ ಒತ್ತನ್ನೂ ಕೊಟ್ಟಿಲ್ಲ. ಈ ಭಾಗದಲ್ಲಿರತಕ್ಕ ರೈತರು ನಿಮಗೆ ಏನು ಅನ್ಯಾಯ ಮಾಡಿದ್ದಾರೆ ? ಏನು ಮಾಡಬಾರದ ಕೆಲಸ ಮಾಡಿದ್ದಾರೆಂದು ? ಏಕೆ ಮಲತಾಯಿ ಧೋರಣೆ ತೋರಿದ್ದೀರಿ ಎಂದು ಮಾನ್ಯ ಅರ್ಥ ಮಂತ್ರಿಗಳಲ್ಲಿ ಕೇಳುತ್ತೇನೆ. ಈ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡುವಾಗ ಉತ್ತರಿಸುತ್ತಾರೆಂಬ ನಂಬಿಕೆ ನನಗಿದೆ. ನೀರಾವರಿ ಕೆರೆಗಳ ಬಗ್ಗೆ ಸಮೀಕ್ಷೆ ನಡೆಸತಕ್ಕ ಆವಶ್ಯಕತೆ ಇದೆ. ಅಗತ್ಯವಾದ ಕಾರ್ಯಕ್ರಮಗಳನ್ನು ಹಾಕಿ ಪುನಃ ಮೂಲ ರೂಪಕ್ಕೆ ಇವುಗಳನ್ನು ತರತಕ್ಕ ಪ್ರಯತ್ನ ಮಾಡಿದರೆ ಎಲ್ಲವೂ ಸರಿ ಹೋಗುತ್ತದೆಂದು ಹೇಳುತ್ತಾ, ಆ ರೀತಿ ಕಾರ್ಯಕ್ರಮವನ್ನು ರೂಪಿಸಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷಿಣಿಯವರೇ, ಇಷ್ಟನ್ನು ಹೇಳುತ್ತಾ ಇನ್ನೂ ಅನೇಕ ಯೋಜನೆಗಳನ್ನು ಈ ಸಲದ ಆಯವ್ಯಯ ಭಾಷಣದಲ್ಲಿ ತಿಳಿಸಿದ್ದಾರೆ. ಇಲ್ಲಿ ಸಾರ್ವಜನಿಕ ವಲಯದ ಉದ್ಯಮಗಳ ಸ್ಥಾಪನೆಯ ಬಗ್ಗೆ ದೊಡ್ಡ ಪ್ರಮಾಣದಲ್ಲಿ ವಿವರವಾಗಿ ಹೇಳಿದ್ದಾರೆ. ಇವರ ಬಗ್ಗೆ ನನಗೆ ಒಂದು ಸಂತೋಷ ಏನೆಂದರೆ ಈ ವಿಷಯವನ್ನು ಕುರಿತಂತೆ ಮಾನ್ಯ ಸದಸ್ಯರ ಉಪಯುಕ್ತ ಸಲಹೆಯನ್ನು ಸ್ವಾಗತಿಸುತ್ತೇನೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಯಾರು ಯಾರೋ ಏನೇನೋ ಹೇಳುವುದಕ್ಕೆ ಹೊರಟಿದ್ದಾರೆ. ನಾನು ಅದನ್ನೆಲ್ಲಾ ಈಗ ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ಈ ಬಗ್ಗೆ ಸರ್ಕಾರ ಸ್ಪಷ್ಟವಾದ ನಿಲುವನ್ನು ತಾಳಬೇಕಾದುದು ಅತ್ಯಾವಶ್ಯಕವಾದುದು. ಈ ಉದ್ದಿಮೆಗಳಿಂದ ೭೨೦ ಕೋಟಿ ರೂಪಾಯಿ ನಷ್ಟವನ್ನು ಸರ್ಕಾರ ಅನುಭವಿಸುತ್ತಿದೆ. ಬಜೆಟ್‌ನಿಂದ ಇದಕ್ಕೆ ಹಣ ಕೊಡಬೇಕಾಗಿದೆ. ನಮ್ಮ ಲೆಕ್ಕದ ಪ್ರಕಾರ ಈ ಉದ್ದಿಮೆಗಳಲ್ಲಿ ಕಾರ್ಮಿಕರು ಒಂದೂವರೆ ಲಕ್ಷ ಅಥವಾ ಎರಡು ಲಕ್ಷ ಇರಬಹುದೆಂದು ನನಗನ್ನಿಸುತ್ತದೆ. ಇನ್ನೂ ಹೆಚ್ಚು ಇದ್ದಾರೋ ಏನೋ ನನಗೆ ಗೊತ್ತಿಲ್ಲ. ಎರಡು ಲಕ್ಷ ಜನರ ಹಿತ ಕಾಪಾಡುವುದಕ್ಕೋಸ್ಕರ ೭೨೦ ಕೋಟಿ ರೂಪಾಯಿಗಳಷ್ಟು ಹಣವನ್ನು ವ್ಯಯ ಮಾಡುವಾಗ ರೈತರ ಸಾಲ ಮಜಾ ಮಾಡಿರಿ ಎಂದರೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಅವರ ಲೆಕ್ಕದ ಪ್ರಕಾರ ರೈತರ ಸಾಲ ೩೬೦ ಕೋಟಿ ರೂಪಾಯಿ ಆಗುತ್ತದೆ. ಅಷ್ಟನ್ನು ಮಜಾ ಮಾಡಿರಿ ಎಂದರೆ ರಾಜ್ಯಸರ್ಕಾರಕ್ಕೆ ಹೊರೆ ಆಗುತ್ತದೆ, ಆ ಹೊರೆ ಹೊರುವ ಶಕ್ತಿ ಇಲ್ಲ ಎಂದು ಹೇಳುತ್ತಿದ್ದಾರೆ. ಇಡೀ ರಾಜ್ಯದಲ್ಲಿ ಶೇಕಡ ೧೪ರಷ್ಟು ರೈತರು ಸಾಲ ತೆಗೆದುಕೊಂಡಿದ್ದಾರೆ ಎಂದು ಯಾವುದೋ ಸಂದರ್ಭದಲ್ಲಿ ಸರ್ಕಾರದವರು ಹೇಳಿದ್ದು ನನಗೆ ಜ್ಞಾಪಕ ಇದೆ. ಅದೆಷ್ಟೇ ಇರಲಿ, ರೈತ ಶ್ರಮಪಟ್ಟು ದುಡಿಯುತ್ತಾನೆ. ಅಲ್ಲಿ ನಷ್ಟ ಆದರೆ ಅದಕ್ಕೆ ರೈತರು ಕಾರಣರಲ್ಲ. ಅದಕ್ಕೆ ಈ ಸಮಾಜವೂ ಕಾರಣ, ಪ್ರಕೃತಿಯೂ ಕಾರಣ. ರೈತ ತನ್ನ ಎಲ್ಲಾ ಶಕ್ತಿಯನ್ನು ಉಪಯೋಗಿಸಿ ಹಗಲು ರಾತ್ರಿ, ಮಳೆ ಬಿಸಿಲು, ಗಾಳಿ, ಚಳಿ ಎನ್ನದೆ ದುಡಿಯುತ್ತಾನೆ. ಇಂತಹ ರೈತನಿಗೆ ಏನು ಉತ್ಪತ್ತಿ ಬರಬೇಕೋ ಅದು ಬರದೇ ಹೋಗುತ್ತದೆ, ಅದಕ್ಕೆ ಕಾರಣ ಇದೆ. ಆದರೆ ಇಲ್ಲಿ ಉದ್ದಿಮೆಗಳಲ್ಲಿ ಏನು ಬೇಕಾಗಿದೆಯೋ ಅದೆಲ್ಲಾ ಉಂಟು. ಸಂಬಳ ಸಾರಿಗೆ ಉಂಟು, ಆದರೆ ಅಲ್ಲಿ ನಡೆಯುತ್ತಾ ಇರತಕ್ಕ ದುರ್ವ್ಯವಹಾರಗಳಿಂದ, ಅಲ್ಲಿ ನಡೆಯುತ್ತಾ ಇರತಕ್ಕ ಮಿಸ್‌ಮ್ಯಾನೇಜ್‌ಮೆಂಟಿನಿಂದ ನಷ್ಟವಾಗುತ್ತಿರುವ ೭೨೦ ಕೋಟಿ ರೂಪಾಯಿಗಳನ್ನು ಕೊಡ ಬೇಕೆಂದರೆ ಇದರಲ್ಲಿ ಯಾವ ಸಾಮಾಜಿಕ ನ್ಯಾಯ ಅಡಗಿದೆಯೋ ನನಗೆ ಅರ್ಥವಾಗುತ್ತಿಲ್ಲ. ಆದ್ದರಿಂದ ಮಾನ್ಯ ಅರ್ಥ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಇದರ ಬಗ್ಗೆ ನಿರ್ದಾಕ್ಷಿಣ್ಯವಾದ ನಿಲುವನ್ನು ತಾಳಬೇಕಾಗುತ್ತದೆ. ೭೨೦ ಕೋಟಿ ರೂಪಾಯಿಗಳನ್ನು ನೀವು ಬಜೆಟ್‌ನಿಂದ ಕೊಡುವುದಕ್ಕೆ ಸಾಧ್ಯವಿಲ್ಲ, ಯಾವಯಾವುದು ಲಾಭದಾಯಕವಾಗಿ ನಡೆಯುವುದಿಲ್ಲವೋ ಅದನ್ನು ಖಾಸಗಿಯವರಿಗೆ ವಹಿಸಿ. ಅದರಿಂದ ಆರೋಪಗಳು ಬರುತ್ತವೆ. ಏನೋ ನಡೆಸಿದರು, ಮಾಡಿದರು ಎಂಬ ಆರೋಪಗಳಿಗೆ ನೀವು

ಹೆದರಬೇಕಾದ ಅವಶ್ಯಕತೆ ಇಲ್ಲ. ಇದರ ಬಗ್ಗೆ ಸ್ಪಷ್ಟವಾದ ನಿಲುವು ನೀವು ತಾಳಲೇ ಬೇಕಾದ ಅಗತ್ಯವಿದೆ. ಇವತ್ತು ಕೆ.ಎಸ್.ಆರ್.ಟಿ.ಸಿ. ಇದೆ. ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ ಹೋದರೆ ಯಮನ ವಾಹನದಲ್ಲಿ ಹೋದಂತಾಗುತ್ತದೆ.

ಶ್ರೀ ಡಿ.ಎ. ಚಿನ್ನಪ್ಪ.—ಹಾಗೆ ಮಾಡಬೇಡಿ. ಒಂದೇ ಸಾರಿ ಹೋಗಿಬಿಡುತ್ತೀರಿ,

ಶ್ರೀ ಎಂ. ಮಹದೇವ್.—ನೀವು ಹೋಗುವುದು ಬೇಡ.

ಶ್ರೀ ಸಿ. ಬೈರೇಗೌಡ.—ಚಿನ್ನಪ್ಪನವರು ಇದರ ಬಗ್ಗೆ ಬೇರೆ ಏನು ಹೆಸರು ಹೇಳುತ್ತಾರೋ ಅದನ್ನು ಒಪ್ಪಿಕೊಳ್ಳುವುದಕ್ಕೆ ನಾನು ತಯಾರಿದ್ದೇನೆ.

ನಾನು ಬಸ್‌ನಲ್ಲಿ ಓಡಾಡುವುದಿಲ್ಲ. ಆದ್ದರಿಂದ ನನ್ನ ಬಗ್ಗೆ ಆ ಯೋಚನೆ ಇಟ್ಟುಕೊಳ್ಳಬೇಡಿ. ವರ್ಷಕ್ಕೆ ಈ ಕೆ. ಎಸ್. ಆರ್. ಟಿ.ಸಿ. ನಲ್ಲಿ ೫೦ ಕೋಟಿ ರೂಪಾಯಿಗಳ ನಷ್ಟ ಆಗುತ್ತದೆಂದು ನಾನು ಕೇಳಿದ್ದೇನೆ. ಒಂದು ಕಾಲದಲ್ಲಿ ಬಸ್‌ಗಳ ರಾಷ್ಟ್ರೀಕರಣ ಆಗಬೇಕು ಎಂದು ತೀವ್ರವಾಗಿ ಪ್ರತಿಪಾದನೆ ಮಾಡಿದವರಲ್ಲಿ ನಾನೂ ಒಬ್ಬ. ಮತ್ತು ನಮ್ಮ ಸರ್ಕಾರ ಬಂದಾಗ ಒತ್ತಾಯ ಹೇರಿ ನಮ್ಮ ಜಿಲ್ಲೆಯಲ್ಲಿರುವ ಎಲ್ಲಾ ಖಾಸಗೀ ಬಸ್‌ಗಳನ್ನು ರಾಷ್ಟ್ರೀಕರಣ ಮಾಡಬೇಕು ಎಂದು ಒತ್ತಾಯ ತಂದವನೇ ನಾನು. ಆದರೆ ಇವತ್ತಿನ ದಿವಸ ನನ್ನ ಸ್ಪಷ್ಟವಾದ ಅಭಿಪ್ರಾಯ ಏನೆಂದರೆ, ಮೊದಲು ಏನಾದರೂ ಮಾಡುವುದಾದರೆ ಕೆ. ಎಸ್. ಆರ್. ಟಿ. ಸಿ.ಯನ್ನು ಮೊದಲು ಡೀ–ನ್ಯಾಷನಲೈಸ್ ಮಾಡಬೇಕು. ಇವತ್ತು ಯಾವ ರಸ್ತೆಯಲ್ಲಿ ಈ ಬಸ್‌ಗಳು ಹೋಗಬೇಕೋ ಅಲ್ಲಿಗೆ ಹೋಗುವುದಿಲ್ಲ. ಒಂದು ರಸ್ತೆಯಲ್ಲಿ ೧೦ ಮೈಲಿ ಹೋಗಬೇಕೆಂದರೆ ಬರೀ ೩ ಮೈಲಿ ಹೋಗಿ ಅಲ್ಲೇ ನಿಂತುಬಿಡುತ್ತವೆ. ಮತ್ತೆ ಮುಂದೆ ೭ ಮೈಲಿ ಹೋಗಬೇಕಾದವರ ಗತಿ ಏನು ಸ್ವಾಮಿ ? ಇಂತಹ ಅನುಭವಗಳು ನಿತ್ಯವೂ ಗ್ರಾಮಾಂತರ ಪ್ರದೇಶಗಳಲ್ಲಿ ಆಗುತ್ತಿದೆ. ಈ ಬಗ್ಗೆ ಅಧಿಕಾರಿಗಳನ್ನು ಕೇಳಿದರೆ, ಏನು ಮಾಡುವುದು, ಡ್ರೈವರ್ ಹೋಗುವುದಿಲ್ಲ, ಕಂಡಕ್ಟರ್ ಹೋಗುವುದಿಲ್ಲ ಎಂದು ಹೇಳುತ್ತಾರೆ. ಮತ್ತೆ ಆ ಕಂಡಕ್ಟರ್, ಡ್ರೈವರ್‌ಗಳನ್ನು ಕೇಳಿದರೆ ಮಾರುದಿನ ಅಲ್ಲಿಗೆ ಬಸ್ಸೇ ಬರುವುದಿಲ್ಲ. ಈ ಬಗ್ಗೆ ಕಾರಣ ಕೇಳಿದರೆ ಯೂನಿಯನ್ ಎನ್ನುತ್ತಾರೆ. ಇಲ್ಲಿ ಈ ರೀತಿಯ ಶೋಷಣೆ ನಡೆಯುತ್ತಿದೆ. ಇವತ್ತು ಈ ರಂಗದಲ್ಲಿ ಮೂಲಭೂತ ಬದಲಾವಣೆ ತರಲು ಹೊರಟಾಗ ಅನುಕೂಲಕ್ಕಿಂತಲೂ ಅನಾನುಕೂಲವೇ ಹೆಚ್ಚು ಆಗುತ್ತಿದೆ. ಈ ಶೋಷಣೆಯನ್ನು ನಿರ್ನಾಮ ಮಾಡುತ್ತೇವೆಂದು ಹೋಗಿ ಅವರೇ ಶೋಷಣೆ ಮಾಡುವ ಪರಿಸ್ಥಿತಿ ಇವತ್ತಿನ ದಿವಸ ಬಂದಿದೆ. ಈ ಶೋಷಣೆಯಿಂದ ಜನರನ್ನು ಪಾರು ಮಾಡಬೇಕಾದರೆ ಈ ಕೆ. ಎಸ್. ಆರ್. ಟಿ. ಸಿ.ಯನ್ನು ಮೊದಲು ಡಿ –ನ್ಯಾಷನಲೈಸ್ ಮಾಡಬೇಕು. ಇನ್ನು ಕೆಲವು ಸರ್ಕಾರಿ ಉದ್ದಿಮೆಗಳು ಇವೆ. ಅವನ್ನು ಉದ್ದೇಶ ಪೂರ್ವಕವಾಗಿ ಖಾಸಗಿಯವರಿಗೆ ಮಾರಾಟ ಮಾಡಬೇಕೆಂಬ ಕಾರಣದಿಂದ ಅಲ್ಲಿ ಇರತಕ್ಕ ಕೆಲವು ಅಧಿಕಾರಿಗಳು ಶಾಮೀಲು ಆಗಿ ಆ ಸಂಸ್ಥೆಯಲ್ಲಿ ನಷ್ಟವನ್ನುಂಟು ಮಾಡತಕ್ಕ ಉದಾಹರಣೆಗಳು ಸಾಕಷ್ಟು ಇವೆ ಇದರ ಬಗ್ಗೆ ಸರ್ಕಾರ ಬಹಳ ಎಚ್ಚರಿಕೆ ವಹಿಸಬೇಕು. ಒಳ್ಳೆಯ ಸ್ಥಿತಿಯಲ್ಲಿ ಇರುವ ಉದ್ಯಮಗಳ ಅಧಿಕಾರಿಗಳ ಜೊತೆ ಕೆಲವು ಖಾಸಗೀ ರಂಗದವರು ಶಾಮೀಲು ಆಗಿ ಇವನ್ನು ಏನಾದರೂ ಮಾಡಿ ಸರ್ಕಾರದಿಂದ ತಾವು ಪಡೆದುಕೊಳ್ಳಬೇಕೆನ್ನುವಂತಹ ಚಿತಾವಣೆಯನ್ನು ಇವತ್ತಿನ ದಿವಸ ನಡೆಸುತ್ತಿದ್ದಾರೆ. ಸರ್ಕಾರ ಇದರ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ನಾನು ಹೇಳುತ್ತೇನೆ. ಮಾನ್ಯ ಅಧ್ಯಕ್ಷಣೀಯವರೇ ಒಂದು ವಿಚಾರದ ಬಗ್ಗೆ ಇವತ್ತಿನ ದಿವಸ ಬಹಳವಾಗಿ ಚರ್ಚೆ ಆಗಿದೆ. ಈ ಬಗ್ಗೆ ರಾಜಶೇಖರ ಮೂರ್ತಿಯವರು ಸಂಬಂಧಪಟ್ಟ ಮಂತ್ರಿಗಳೂ ಆಗಿದ್ದಾರೆ. ನಾನು ಈ ಬಗ್ಗೆ ಅವರನ್ನು ಅಭಿನಂದಿಸುತ್ತೇನೆ. ಏಕೆಂದರೆ, ನೀವು ಹೆಂಡ ಮಾರಾಟ ಮಾಡುವುದನ್ನು ನಿಲ್ಲಿಸಬೇಕೆಂದು ಒಂದು ದಿಟ್ಟ ನಿಲುವನ್ನು ತೆಗೆದುಕೊಂಡಿದ್ದೀರಿ. ನಿಜವಾಗಿಯೂ ನಾನು ನಿಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕಾರಣ ಏನೆಂದರೆ, ಇದು ಒಂದು ಕರ್ಮ ಕಾಂಡ. ಈಗ ಮಾರಾಟ ಆಗುತ್ತಾ ಇರುವ ಹೆಂಡದಲ್ಲಿ ಶೇಕಡಾ ಇಪ್ಪತ್ತು ಕೂಡಾ ಮರದಿಂದ ಇಳಿಸಿದ ಹೆಂಡ ಇಲ್ಲ. ಮಾನ್ಯ ರಾಜಶೇಖರ ಮೂರ್ತಿಯವರು ಬೇಕಾದರೆ ಇವತ್ತೇ ಹೋಗಿ ನೋಡಲಿ. ಆ ನಂತರ ಈ ಬಗ್ಗೆ ಅವರು ಸಂಬಂಧಪಟ್ಟವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ, ಇದರಲ್ಲಿ ಇರುವ ಕ್ಲೋರಲ್ ಹೈಡ್ರೇಟ್‌ನಿಂದ ಏನು ದುಷ್ಪರಿಣಾಮವಾಗುತ್ತದೆಂದು ನಾನು ಡಾಕ್ಟರ್‌ರವರಿಂದ ಕೇಳಿ ತಿಳಿದುಕೊಂಡಿದ್ದೇನೆ. ಇದು ಮನುಷ್ಯನ ನರಮಂಡಲದ ಮೇಲೆ ವಿರೋಧಿ ಪ್ರತಿಕ್ರಿಯೆಯನ್ನು ತೋರಿಸುತ್ತದೆ. ಹಾಗೂ ಇದರಿಂದ ಕಣ್ಣಿನ ದೃಷ್ಟಿ ಕೂಡಾ ಹೋಗುತ್ತದೆ. ನಮ್ಮ ಸರ್ಕಾರ ಇದ್ದಾಗ ತಾವು ಇಲ್ಲಿ ಕುಳಿತುಕೊಂಡಿದ್ದಿರಿ. ಈ ಬಗ್ಗೆ ಒಬ್ಬಿಬ್ಬರನ್ನು ಬಿಟ್ಟರೆ ಬೇರೆ ಯಾರು ಮಾತನಾಡಿದ್ದಾರೆ? ಆದಗೆ ಈ ವಿಚಾರದಲ್ಲಿ ಮಾತನಾಡಿರತಕ್ಕವನು ಹಾಗೂ ಬಹಳ ಧೈರ್ಯವಾಗಿ ಮಾತನಾಡಿರತಕ್ಕವನು ಎಂದರೆ ನಾನು ಎನ್ನುವ ಮಾತನ್ನು ಬಹಳ ಹೆಮ್ಮೆಯಿಂದ ಹೇಳುತ್ತಿದ್ದೇನೆ. ಈ ವಿಚಾರದಲ್ಲಿ ಬಹಿರಂಗವಾಗಿ ಪ್ರಸ್ತಾಪ ಮಾಡಿದವನು

ನಾನು. ಎಕ್ಸೈಜ್ ವಿಚಾರದಲ್ಲಿ ಎಷ್ಟೆಷ್ಟು ಕೋಟಿ ರೂಪಾಯಿ ಹಣ ಸೋರಿ ಹೋಗುತ್ತಾ ಇತ್ತು, ಅದನ್ನು ಬಹಿರಂಗವಾಗಿ ಖಂಡಿಸತಕ್ಕ ನಿಲುವು ತಳೆದವನು ನಾನು ಆ ಕೆಲಸವನ್ನು ಬೇರೆ ಯಾರು ಮಾಡಿದ್ದಾರೆ ? ಈ ರಾಜ್ಯದಲ್ಲಿ ಪ್ರಪ್ರಥಮವಾಗಿ ಈ ಕೆಲಸ ಮಾಡಿದ್ದೇನೆಂದು ನಾನು ಹೆಮ್ಮೆಯಿಂದ ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಬಾಟ್ಲಿಂಗ್ ಪ್ರಕರಣದಲ್ಲಿ ತಾವೇನು ಮಾಡಿದ್ದೀರಿ ?

ಶ್ರೀ ಸಿ. ಬೈರೇಗೌಡ.—ಈ ಸದನದಲ್ಲಿ ನಡೆದಿರತಕ್ಕ ಕಥೆ ಅದು. ಮಾನ್ಯ ಸ್ವಾಮಿರಾವ್ ರವರೇ ಅಬಕಾರಿ ಇಲಾಖೆಯ ಮೇಲೆ ಮೊದಲು ಚರ್ಚೆಯನ್ನು ಪ್ರಾರಂಭ ಮಾಡಿದರು. ನಾನು ಅವರ ಭಾಷಣವನ್ನು ಬಹಳ ಕುತೂಹಲದಿಂದ ಕೇಳಿದ್ದೇನೆ. ಅವರು ಈ ಕಡೆ ಎರಡನೇ ಅಥವಾ ಮೂರನೇ ಸಾಲಿನಲ್ಲಿ ಕುಳಿತಿದ್ದರು. ತಾವು ಮಾತನಾಡತಕ್ಕ ವಿಷಯ ಬಹಳ ಪ್ರಾಮುಖ್ಯವಾಗಿದ್ದರೂ ಸಹ ಅಬಕಾರಿ ಇಲಾಖೆಯ ಮೇಲೆ ಚರ್ಚೆ ನಡೆಯುವಾಗ ವಿರೋಧ ಪಕ್ಷದ ಮೊದಲನೆಯ ಸಾಲು ಪೂರ್ತಿಯಾಗಿ ಖಾಲಿಯಾಗಿತ್ತು. ಅದನ್ನು ನೀವು ಗಮನಿಸಲಿಲ್ಲ, ಅದನ್ನು ನಾನು ಗಮನಿಸಿದ್ದೇನೆ. ಮೊದಲನೆಯ ಸಾಲು ಪೂರ್ತಿ ಖಾಲಿಯಿತ್ತು ಅಂದರೆ ಅದನ್ನು ಮುಂದಕ್ಕೆ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ. ಸ್ವಾಮಿರಾವ್.— ಈಗ ಏನಾಗಿದೆ ?

ಶ್ರೀ ಸಿ. ಬೈರೇಗೌಡ.— ನಿನ್ನೆ ಈ ವಿಚಾರವನ್ನು ನಾನೇ ಪ್ರಸ್ತಾಪ ಮಾಡಿದೆ. ಆ ದಿನ ಮಾನ್ಯ ಯಡಿಯೂರಪ್ಪನವರು ಮತ್ತು ನಾನು ಈ ವಿಚಾರ ಪ್ರಸ್ತಾಪ ಮಾಡಿದ್ದೇವೆ. ಇಲ್ಲಿ ವಿರೋಧ ಪಕ್ಷಗಳು ಯಾವ ರೀತಿ ಕೆಲಸ ಮಾಡಿವೆ ಎನ್ನತಕ್ಕ ಮಾತನ್ನು ನಾನು ಮತ್ತು ಯಡಿಯೂರಪ್ಪನವರು ಕುಳಿತು ಸಾಕಷ್ಟು ಚರ್ಚೆ ಮಾಡಿದ್ದೇವೆ. ಇದರಲ್ಲಿ ಅಲ್ಲಿ ಕುಳಿತಿರುವವರ ಪಾಲು ಎಷ್ಟಿತ್ತೋ ಅವರಿಗಿಂತ ಕಡಿಮೆ ಪಾಲು ನಿಮ್ಮದು ಯಾರದೂ ಕೂಡ ಇಲ್ಲ. ನಿಮ್ಮದೂ ಕೂಡ...

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಬೈರೇಗೌಡರು ಒಂದು ನಿಮಿಷ ಈಲ್ಡ್ ಆಗುವುದಾದರೆ ಒಂದು ವಿಷಯ ಹೇಳುತ್ತೇನೆ. ಮಾನ್ಯ ಬೈರೇಗೌಡರು ಮಾತನಾಡುತ್ತಾ ಅವರ ಪಾಲು ಅಷ್ಟಿತ್ತು ಇವರ ಪಾಲು ಇಷ್ಟಿತ್ತೆಂದು ಹೇಳುತ್ತಿದ್ದಾರೆ. ತಾವು ಕಳೆದಸಲ ಶಾಸಕರಾಗಿದ್ದ ಸಂದರ್ಭದಲ್ಲಿ ಕೋಲಾರ ಜಿಲ್ಲೆಯಲ್ಲಿ ಬಸ್‌ಗಳನ್ನು ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡಬೇಕೆಂದು ಪತ್ರ ಕೊಟ್ಟಿದ್ದಿರಿ ಮತ್ತು ದೊಡ್ಡ ಅಲಿಗೇಷನ್ ತೆಗೆದುಕೊಂಡು ಬಂದಿದ್ದೀರಿ. ನಾನು ಆಗ ಸಾರಿಗೆ ಮಂತ್ರಿಯಾಗಿದ್ದೆ? ಈಗ ಒಂದೇ ವರ್ಷದಲ್ಲಿ ರಾಷ್ಟ್ರೀಕರಣ ಬೇಡವೆಂದು ಹೇಳಿದಿರಿ. ಅಂದರೆ ಅದಕ್ಕೆ ನೀವು ಎಷ್ಟು ತೆಗೆದು ಕೊಂಡಿದ್ದೀರಿ ?

ಶ್ರೀ ಸಿ. ಬೈರೇಗೌಡ.— ಇಷ್ಟು ಹೊತ್ತಿನ ಮೇಲೆ ಮಾನ್ಯ ಸಿಂಧ್ಯಾರವರಿಗೆ ಜ್ಞಾನೋದಯ ವಾಗಿದೆ? ಬಹಳ ಸಂತೋಷ.

ಶ್ರೀ ಪಿ. ಜಿ ಆರ್. ಸಿಂಧ್ಯ.— ನಾನು ನಿಮ್ಮ ಗಾಡಿ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎಂಬುದನ್ನು ನೋಡುತ್ತಾ ಕುಳಿತುಕೊಂಡಿದ್ದೆ.

ಶ್ರೀ ಸಿ. ಬೈರೇಗೌಡ.— ನನ್ನ ಗಾಡಿ ಸರಿಯಾದ ದಿಕ್ಕಿನಲ್ಲೇ ಹೋಗುತ್ತಿದೆ.

ಛೇರ್ಮನ್.— ಮಾನ್ಯ ಸದಸ್ಯರು ಇನ್ನು ಎರಡು ನಿಮಿಷಗಳಲ್ಲಿ ಮುಗಿಸಬೇಕು.

ಶ್ರೀ ಸಿ. ಬೈರೇಗೌಡ.— ಈ ವಿಚಾರವನ್ನು ನಾನು ಆಗಲೇ ಪ್ರಸ್ತಾಪ ಮಾಡಿದ್ದೇನೆ. ರಾಷ್ಟ್ರೀಕರಣ ಆಗಬೇಕೆಂದು ನಾನೇ ಹೇಳಿದ್ದೇನೆ ಪ್ರಬಲವಾಗಿ ಪ್ರತಿಪಾದನೆ ಮಾಡಿ ಹೇಳಿದ್ದೇನೆ. ಆಗ ನೀವು ಎಲ್ಲಿದ್ದರೋ ಗೊತ್ತಿಲ್ಲ. ಈಗ ಪರಿಸ್ಥಿತಿ ಏನಾಗಿದೆ ಎನ್ನತಕ್ಕದ್ದನ್ನು ತಾವು ಬಂದು ನೋಡಿದರೆ ತಮಗೇ ಗೊತ್ತಾಗುತ್ತದೆ. ತಾವು ಬಂದು ನೋಡಿದರೆ ರಾಷ್ಟ್ರೀಕರಣ ಆಗಬೇಕೆಂದು ಸಹಜವೇ ಅಥವಾ ಬೇಡವೆ ಎನ್ನುವುದು ಗೊತ್ತಾಗುತ್ತದೆ, ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ನಾನು ಹೇಳಿದ್ದೇನೆಯೋ ವಿನಹ ಇನ್ನು ಮುಂದಕ್ಕೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಬೈರೇಗೌಡರು ಏನು ಮಾತನಾಡುತ್ತಿದ್ದಾರೆಂದರೆ ಒಂದು ಕಡೆ ಬಸ್ಸನ್ನು ರಾಷ್ಟ್ರೀಕರಣ ಮಾಡಬೇಕೆಂದು ಹೇಳುತ್ತಾರೆ. ಇನ್ನೊಂದು ಕಡೆ ರಾಷ್ಟ್ರೀಕರಣ ಮಾಡಬಾರದೆಂದು ಹೇಳುತ್ತಿದ್ದಾರೆ. ಅವರಿಗೆ ಯಾವುದು ಬೇಕು ಅದು ರಾಷ್ಟ್ರೀಕರಣವಾಗಬೇಕು. ಯಾವುದು ಬೇಡ ಅದು ರಾಷ್ಟ್ರೀಕರಣವಾಗಬಾರದು. ಯಾವುದು ರಾಷ್ಟ್ರೀಕರಣವಾಗಬೇಕೆಂದು ಹೇಳಿದ್ದಾರೆ, ಅದರ ವಿರುದ್ಧ ಲಾಬಿಯಲ್ಲಿದ್ದಾರೋ ಹೇಗೆ ? ಏಕೆಂದರೆ ಅವರೂ ಹಣವನ್ನು ತೆಗೆದು

ಕೊಂಡಿದ್ದಾರೆ, ನಾವೂ ಹಣವನ್ನು ತೆಗೆದುಕೊಂಡಿದ್ದೇವೆ. ನೀವು ಒಬ್ಬರೇ ಸತ್ಯಸಂಧರು. ದಯವಿಟ್ಟು ಹೇಳಿ ?

೩-೩೦ ಪಿ.ಎಂ.

ಶ್ರೀ ಸಿ. ಬೈರೇಗೌಡ.— ಇದರ ಬಗ್ಗೆ ಎಷ್ಟು ಹೊತ್ತು ಬೇಕಾದರೂ ಚರ್ಚೆ ಮಾಡುವುದಕ್ಕೆ ನಾನು ತಯಾರಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಏಕೆಂದರೆ ವಿರೋಧ ಪಕ್ಷದವರು ಮತ್ತು ಆಡಳಿತ ಪಕ್ಷದವರು ದುಡ್ಡು ತೆಗೆದುಕೊಂಡಿದ್ದಾರೆ, ನಾನು ಒಬ್ಬನೇ ಸತ್ಯಸಂಧ ಎಂದು ನೀವು ಹೇಳಿದಾಗ ನಾನು ಇದನ್ನು ನಿಮಗೆ ಜ್ಞಾಪಕ ಮಾಡಿದೆನೆ ವಿನಹ ಬಾಕಿ ಯಾವುದೂ, ಜ್ಞಾಪಕ ಮಾಡಲಿಲ್ಲ. ಹೆಂಡದ ಕರ್ಮದ ಕಥೆ ಎಂದು ಹೇಳಿದಾಗ, ಬಾಟ್ಲಿಂಗ್‌ನಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಯಾರು ಯಾರು ಎಷ್ಟೆಷ್ಟು ತೆಗೆದು ಕೊಂಡಿದ್ದಾರೆ ಎಂದು ನಾವು ಸಹ ಹೇಳಬೇಕಾಗುತ್ತದೆ. ಆದ್ದರಿಂದ ಇದರಿಂದ ಏನೂ ಉಪಯೋಗ ಇಲ್ಲ.

ಶ್ರೀ ಸಿ. ಬೈರೇಗೌಡ.— ಹೇಳುವುದು ಬೇಡ ಎಂದು ಹೇಳಿದವರು ಯಾರು ?

ಶ್ರೀ ಡಿ. ಎ. ಚಿನ್ನಪ್ಪ.— ಬೈರೇಗೌಡರು ಇಷ್ಟು ಹೇಳುತ್ತಾರಲ್ಲ, ಟೇಪ್ ಹಗರಣದಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಏಕೆ ತೆಗೆದುಕೊಂಡರು ?

ಶ್ರೀ ಸಿ. ಬೈರೇಗೌಡ.— ಅದು ಇಡೀ ದೇಶಕ್ಕೇ ಗೊತ್ತಿದೆ, ಪ್ರಪಂಚಕ್ಕೇ ಗೊತ್ತಿದೆ. ಈಗ ಪುನಃ ಕೇಳಬೇಕು ಎಂದರೆ ಬನ್ನಿ ತೋರಿಸುತ್ತೇನೆ. ಅದು ಪ್ರಪಂಚಕ್ಕೇ ಗೊತ್ತಿರುವ ಇದು. ಅಧ್ಯಕ್ಷರೇ, ಇವತ್ತಿನ ದಿವಸ ಎಕ್ಸೈಸ್‌ನಲ್ಲಿ...

ಛೇರ್‌ಮನ್.—ಆದಷ್ಟು ಬೇಗ ಮುಗಿಸಬೇಕು.

ಶ್ರೀ ಸಿ. ಬೈರೇಗೌಡ.— ಅಬಕಾರಿ ಇಲಾಖೆಯಲ್ಲಿ ಪ್ರತಿದಿವಸ ಒಂದು ಕೋಟಿ ರೂಪಾಯಿಯಷ್ಟು ಹಣ ಸೋರಿ ಹೋಗುತ್ತಿತ್ತು. ನಾನು ಅದರ ವಿವರ ಬೇಕಿದ್ದರೆ ಕೊಡುವುದಕ್ಕೆ ನಾನು ತಯಾರಿದ್ದೇನೆ ಇಲ್ಲಿ ಪ್ರಥಮವಾಗಿ ಹೇಳುತ್ತಿಲ್ಲ. ಬಹಿರಂಗವಾಗಿ ಕೂಡ ಹೇಳಿದ್ದೇನೆ. ಅದನ್ನು ತಡೆಗಟ್ಟುವ ಕೆಲಸ ಸ್ವಲ್ಪಮಟ್ಟಿಗಾದರೂ ಇವತ್ತಿನ ದಿವಸ ಆಗಿದೆ. ಆಗಿರತಕ್ಕಂಥ ಕೆಲಸವನ್ನು ಇಲ್ಲವೆಂದು ಹೇಳ ತಕ್ಕವನು ನಾನಲ್ಲ. ಸುಮಾರು ಒಂದು ದಿನಕ್ಕೆ ಒಂದು ಕೋಟಿ ರೂಪಾಯಿ ಸೋರಿಕೆ ಆಗತಕ್ಕಂಥ ಕಾಲ ಇತ್ತು. ಈಗ ಅದನ್ನು ಕಡಿಮೆ ಮಾಡತಕ್ಕಂಥ ಕೆಲಸ ಮಾಡಲು ಹೊರಟಿದ್ದಾರೆ. ಈ ಕೆಲಸಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಇವತ್ತು ಆಗದೇ ಇರತಕ್ಕಂಥಾದ್ದು ಏನು ? ಈಗ ನಮ್ಮ ರಾಜ್ಯದಲ್ಲಿ ತಯಾರಾಗುವಂತಹ ಒಂದು ಲೀಟರ್ ಮದ್ಯಕ್ಕೆ ಒಂದು ರೂಪಾಯಿ ಇದ್ದದನ್ನು ೨೦ ರೂಪಾಯಿಗೆ ತಾವು ಏರಿಸಿದಿರಿ. ನಿಮ್ಮ ದೃಷ್ಟಿ ಒಂದನೆಯದಾಗಿ ಹೆಚ್ಚಿನ ಆದಾಯ ಬರಬೇಕು ಎನ್ನತಕ್ಕದ್ದು ಎರಡನೆಯದಾಗಿ ಸೆಕೆಂಡ್ಸ್ ಮಾರಾಟವನ್ನು ತಡೆಗಟ್ಟಬೇಕು ಎನ್ನುವ ದೃಷ್ಟಿ ಇರಬಹುದು ಎಂದು ನನಗನಿಸುತ್ತದೆ. ಆದರೆ ಈ ಸೆಕೆಂಡ್ಸನ್ನು ತಡೆಗಟ್ಟುವ ದೃಷ್ಟಿಯಿಂದ ಈ ರೀತಿ ಮಾಡಿದ್ದೀರಿ ಎಂದರೆ ಅದನ್ನು ನಾನು ಒಪ್ಪುವುದಕ್ಕೆ ತಯಾರಿಲ್ಲ. ಹೆಚ್ಚಿನ ಆದಾಯ ಬರಬೇಕೆಂಬ ಕಾರಣದಿಂದ ಈ ರೀತಿ ಮಾಡಿದ್ದೀರಿ ಎಂದರೆ ಅದು ಇರಬಹುದು. ಅದನ್ನು ನಾನು ಒಪ್ಪುತ್ತೇನೆ. ಆದರೆ ಇದರಿಂದ ಸೆಕೆಂಡ್ಸನ್ನು ತಡೆಗಟ್ಟಬಹುದೆಂಬ ಭ್ರಾಂತಿ, ಭ್ರಮೆ ನಿಮಗೆ ಬೇಡ. ಅದಕ್ಕೆ ನಿಮಗೆ ಇಚ್ಛಾಶಕ್ತಿ ಬೇಕು. ಕರ್ನಾಟಕ ರಾಜ್ಯದಲ್ಲಿ ಇದನ್ನು ತಯಾರು ಮಾಡತಕ್ಕಂಥ ಸುಮಾರು ೩೦ ಡಿಸ್ಟಲರಿಗಳು ಇವೆಯೆಂದು ನನ್ನ ಲೆಕ್ಕಾಚಾರ. ಈ ೩೦ ಡಿಸ್ಟಲರಿಗಳಲ್ಲಿ ಕೂಡ ೩೦ ಸೂಪರಿಂಟೆಂಡೆಂಟ್ ಗ್ರೇಡ್‌ನಲ್ಲಿರತಕ್ಕಂಥ ಅಧಿಕಾರಿಗಳನ್ನು ಹಾಕುತ್ತೀರಿ. ಈ ೩೦ ಡಿಸ್ಟಲರಿಗಳಲ್ಲಿ ಇರತಕ್ಕಂಥ ೩೦ ಜನ ಅಧಿಕಾರಿಗಳನ್ನು ಕಂಟ್ರೋಲ್ ಮಾಡತಕ್ಕದ್ದು ಬಹಳ ಸುಲಭ. ಕೆ. ಎಸ್. ಆರ್. ಟಿ. ಸಿ.ಯನ್ನು ಡೀನ್ಯಾಷನಲೈಸೇಷನ್ ಏಕೆ ಮಾಡಬೇಕೆಂದು ಹೇಳಿದೆ ಎಂದರೆ ಅಲ್ಲಿ ೩೦ ಸಾವಿರ ಕಂಡಕ್ಟರ್ಸ್ ಇದ್ದಾರೆ. ೩೦ ಸಾವಿರ ಜನ ಕಂಡಕ್ಟರ್‌ಗಳನ್ನು ಕಂಟ್ರೋಲ್ ಮಾಡುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಅದು ಬಹಳ ಕಷ್ಟದ ಕೆಲಸ. ಆದರೆ ೩೦ ಜನ ಅಧಿಕಾರಿಗಳನ್ನು ತಹಬಂದಿಯಲ್ಲಿ ಇಡುವುದಕ್ಕೆ ಸಾಧ್ಯ ಇದೆ. ಇದಕ್ಕೆ ನಿಮ್ಮ ಇಚ್ಛಾಶಕ್ತಿ ಬಹಳ ಮುಖ್ಯವಾಗಿ ಇರಬೇಕಾಗುತ್ತದೆ.

ಯಾರು ಈ ಇಲಾಖಾ ಮಂತ್ರಿಗಳಾಗಿರುತ್ತಾರೆ ಮತ್ತು ಅಲ್ಲಿ ಮೊದಲನೇ ಕುರ್ಚಿಯಲ್ಲಿ ಈ ಸದನದಲ್ಲಿ ಕುಳಿತಿರುತ್ತಾರೆ. ಅವರಿಗೆ ಇಚ್ಛಾಶಕ್ತಿ ಇದ್ದರೆ ಒಂದು ಬಾಟಲನ್ನೂ ಸಹ ಹೊರಗಡೆ ಕಳುಹಿಸುವುದಕ್ಕೆ ಸಾಧ್ಯವಿಲ್ಲ. ಉಳಿದಂತೆ ನಾನು ಮುಂದಕ್ಕೆ ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ಹೊರಗಡೆ ಕಳುಹಿಸುವುದಿಲ್ಲ ಇರತಕ್ಕ ಹೆಚ್ಚುವರಿ ಕಾಕಂಬಿಯಿಂದ ಇಲ್ಲಿಯೇ ಸ್ಪಿರಿಟ್ ತಯಾರು

ಮಾಡುತ್ತೇವೆ. ಈ ಸ್ಪಿರಿಟ್‌ನಿಂದ ಸಾರಾಯಿ ಮಾಡುತ್ತಾರೆಂದು ಹೇಳುತ್ತಾರೆ. ನನಗೆ ಗೊತ್ತಿರುವ ಮಟ್ಟಿಗೆ ದಕ್ಷಿಣದ ರಾಜ್ಯಗಳಲ್ಲಿ ಅತಿ ಹೆಚ್ಚಿನ ಕಾಕಂಬಿಯನ್ನು ಉತ್ಪನ್ನ ಮಾಡುವುದು ಎಂದರೆ ನಮ್ಮ ರಾಜ್ಯ. ನಮ್ಮದಾದ ಮೇಲೆ ಮಹಾರಾಷ್ಟ್ರ ಬಂಬಹುದು. ಏಕೆಂದರೆ, ಮಹಾರಾಷ್ಟ್ರದಲ್ಲೂ ಹೆಚ್ಚು ಸಕ್ಕರೆ ಕಾರ್ಖಾನೆಗಳಿವೆ. ಇವತ್ತು ಇಲ್ಲಿ ಉತ್ಪಾದನೆ ಮಾಡುತ್ತಿರತಕ್ಕ ಕಾಕಂಬಿ, ಇದು ಸಾರಾಯಿ ಆಗಿ ಮಾರ್ಪಾಟಾಗುತ್ತದೆ ಮತ್ತು ಐ.ಎಂ.ಎಫ್.ಎಲ್. ಆಗಿ ಅದು ಮಾರ್ಪಾಟಾಗುತ್ತದೆ. ಅದು ಮಾರಾಟವಾಗಬೇಕು. ಇಲ್ಲದೇಹೋದರೆ ಈ ಕಾಕಂಬಿಯನ್ನು ಏನು ಮಾಡುತ್ತೀರಿ ? ನಮ್ಮಲ್ಲಿ ಎಷ್ಟು ಕಾಕಂಬಿ ಹೆಚ್ಚುವರಿ ಇದೆ, ಈ ರೀತಿಯಾಗಿ ಹೆಚ್ಚುವರಿ ಇರುವುದನ್ನು ಹೊರಗಡೆ ಕಳುಹಿಸಲೇ ಬೇಕಾಗುತದೆ ಈ ಕಾರಣದಿಂದ ನೀವು ಸ್ಪಿರಿಟನ್ನು ಹೊರಗಡೆ ಕಳುಹಿಸಬೇಕಾಗುತ್ತದೆ; ಇಲ್ಲ ಐ.ಎಂ.ಎಫ್.ಎಲ್.ಅನ್ನು ಹೊರಗಡೆ ಕಳುಹಿಸಬೇಕಾಗುತ್ತದೆ. ಈ ರೀತಿ ಹೊರಗಡೆ ಕಳುಹಿಸಿದಾಗ, ಐ.ಎಂ.ಎಫ್.ಎಲ್.ಗೆ ಒಂದು ಲೀಟರ್‌ಗೆ ಪ್ಯಾರಾ ೮ ಹೇಳಿರುವುದಕ್ಕೂ ಮತ್ತು ೭ನೇ ಪ್ಯಾರಾದಲ್ಲಿ ಹೇಳಿರುವುದಕ್ಕು ಒಂದಕ್ಕೊಂದಕ್ಕೆ ವಿರುದ್ಧವಾದಂಥ ಪರಿಸ್ಥಿತಿ ಇವೊತ್ತಿನ ದಿವಸ ಇದೆ. ನೀವು ಸ್ಪಿರಿಟನ್ನು ಮತ್ತು ಐ.ಎಂ.ಎಫ್.ಎಲ್.ಅನ್ನು ಹೊರಗಡೆ ಕಳುಹಿಸಬೇಕಾದರೆ your IMFL must compete with other manufacturers, IMFL. ಆದರೆ ಇವತ್ತು ಆ ಪರಿಸ್ಥಿತಿ ಇಲ್ಲ. ಒಂದು ರೂಪಾಯಿ ಇದ್ದುದನ್ನು ೨೦ ರೂಪಾಯಿಗೆ ಏರಿಸಿರುವ ಕಾರಣದಿಂದ, ನಮ್ಮಲ್ಲಿ ತಯಾರಾಗತಕ್ಕ ಐ.ಎಂ.ಎಫ್.ಎಲ್. ಏನಿದೆ, ಇದು ಬೇರೆ ಯಾವ ರಾಜ್ಯದಲ್ಲೂ ಮಾರಾಟ ಆಗುವುದಕ್ಕೆ ಸಾಧ್ಯವಿಲ್ಲ. ಒಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ರಾಜ್ಯದಲ್ಲಿ ತಯಾರಾಗತಕ್ಕ ಐ.ಎಂ ಎಫ್.ಎಲ್. ಗೂ, ಬೇರೆ ರಾಜ್ಯಗಳಲ್ಲಿ ತಯಾರಾಗತಕ್ಕ ಐ.ಎಂ ಎಫ್.ಎಲ್. ಗೂ ಅಜಗಜಾಂತರ ವ್ಯತ್ಯಾಸ ಇರುತ್ತದೆ. ಆದ್ದರಿಂದ ಒಂದು ಬಾಟಲಿನ ಬೆಲೆ ೨-೩ ತರಹ ಇದೆ. ಒಂದು ಸಾಮಾನ್ಯವಾಗಿರುವುದು, ಮೀಡಿಯಂ ಮತ್ತು ಇನ್ನೊಂದು ಪ್ರೀಮಿಯಂ ಎಂದು ಹೇಳುತ್ತಾರೆ. ನಾನು ಸಾಮಾನ್ಯವಾಗಿರತಕ್ಕ ಒಂದು ಬಾಟಲಿನ ಬೆಲೆ ಹೇಳ ಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ತಯಾರಾಗತಕ್ಕ ಬಾಟಲಿನ ಬೆಲೆ ಸುಮಾರು ೭೫೦ ಎಂ.ಎಲ್. ಗೆ ೭೫ ರೂಪಾಯಿ ಎಂದು ಹೇಳುತ್ತಾರೆ. ಇದು ಹೊರಗಡೆ ಮಾರಾಟ ಆಗಬೇಕಾದರೆ, ಸುಮಾರು ೧೨೦ ರೂಪಾಯಿ ಆಗುತ್ತದೆ. ಆದ್ದರಿಂದ ಇತರೇ ರಾಜ್ಯಗಳಲ್ಲಿ ಇದನ್ನು ಮಾರಾಟ ಮಾಡುವುದಕ್ಕಾಗುವುದಿಲ್ಲ.

೭೫ ರೂಪಾಯಿ ಬೆಲೆ ಇರುವುದನ್ನು ೧೨೦ ರೂಪಾಯಿ ಎಂದು ಹೇಳಿದರೆ, ಸುಮಾರು ೪೦-೪೫ ರೂಪಾಯಿಗಳಷ್ಟು ಬೆಲೆಯಲ್ಲಿ ಹೆಚ್ಚಾಗುತ್ತದೆ. ಆದ್ದರಿಂದ ಎಲ್ಲೂ ಕೂಡ ಮಾರಾಟ ಮಾಡುವುದಕ್ಕಾಗುವುದಿಲ್ಲ ಇವತ್ತು ಅಂಕಿಅಂಶಗಳನ್ನು ತರಿಸಿ ಇದರ ಬಗ್ಗೆ ದಯಮಾಡಿ ಆಲೋಚನೆ ಮಾಡಿ: ಇದರ ಬಗ್ಗೆ ಪುನರ್ ವಿಮರ್ಶೆ ಮಾಡತಕ್ಕ ಅವಶ್ಯಕತೆ ಖಂಡಿತ ಇದೆ. ಇಲ್ಲದೇಹೋದರೆ, ನಿಮ್ಮ ಉದ್ದೇಶ ಖಂಡಿತ ಸಾಧನೆಯಾಗುವುದಿಲ್ಲ. ನೀವು ಏನು ಹೆಚ್ಚಿನ ಆದಾಯವನ್ನು ನಿರೀಕ್ಷಣೆ ಮಾಡುತ್ತಿದ್ದೀರೊ, ಅದು ಆಗುವುದಿಲ್ಲ. ನಮ್ಮ ರಾಜ್ಯದಲ್ಲಿ ತಯಾರಾದ ಐ ಎಂ.ಎಫ್.ಎಲ್ ಹೊರ ರಾಜ್ಯಗಳಿಗೆ ಹೋದಾಗ ಹೆಚ್ಚಿನ ಆದಾಯ ಬರುತ್ತದೆ ಎಂಬ ನಿಮ್ಮ ನಂಬಿಕೆ ಹುಸಿಯಾಗುತ್ತದೆ. ಹೊರಗಿನವರ ಜೊತೆ ನೀವು ಕಾಂಪಿಟ್ ಮಾಡಿದಾಗ ಮಾತ್ರ ಇದು ಹೊರಗಡೆ ಹೋಗುವುದಕ್ಕೆ ಸಾಧ್ಯ. ಆದರೆ ಹೊರಗಡೆ ಹೋಗಿ ಕಾಂಪಿಟ್ ಮಾಡುವುದಕ್ಕೆ ಸಾಧ್ಯ ಇಲ್ಲ ಎಂದಾಗ ನಿಮ್ಮದು ಹೊರಗಡೆ ಹೋಗತಕ್ಕಂಥ ಪ್ರಶ್ನೆ ಉದ್ಭವ ವಾಗುವುದಕ್ಕೆ ಸಾಧ್ಯವೇ ಇಲ್ಲ ಆದುದರಿಂದ ಇವತ್ತಿನ ದಿವಸ ಇದನ್ನು ಪುನರ್‌ವಿಮರ್ಶೆ ಮಾಡಬೇಕಾದು ಅತಿ ಅವಶ್ಯಕ ಇದೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಇನ್ನು ಸಾರಾಯಿ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ನಾನು ಇವತ್ತು ಬೇಗ್ಗೆ ಸ್ವಲ್ಪ ಮರೆತೆ; ಇಲ್ಲದಿದ್ದರೆ ನಿಮಗೆ ಏನೇನು ನಡೆಯುತ್ತಿದೆ ಎಂದು ತಂದು ತೋರಿಸುತ್ತಿದ್ದೆ. ಈಗ ಕಾನೂನು ಪ್ರಕಾರ ಬಾಟಲ್‌ನಲ್ಲಿ ಸಾರಾಯಿ

ಮಾರಾಟ ಮಾಡಬೇಕೆಂದು ನಿಯಮ ಇದೆ. ನೀವೇ ಹೋಗಿ ಬನ್ನಿ, ಅಥವಾ ನನ್ನ ಜೊತೆ ಬನ್ನಿ, ಯಾವರೀತಿ ಸಾರಾಯಿ ಮಾರಾಟವಾಗುತ್ತಿದೆ ಎಂಬುದನ್ನು ತೋರಿಸುತ್ತೇನೆ. ಸ್ಯಾಚೆಟ್‌ನಲ್ಲಿ ಎಂದರೆ ಪ್ಲಾಸ್ಟಿಕ್ ಚೀಲದಲ್ಲಿ ಸಾರಾಯಿ ತುಂಬಿ ಮಾರಾಟ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಇವತ್ತು ಎಲ್ಲಾ ಕಡೆ ಬೀಡಿ ಅಂಗಡಿಗಳಲ್ಲಿ ಸ್ಯಾಚೆಟ್ಸ್‌ನಲ್ಲಿ ಇರತಕ್ಕಂಥ ಸಾರಾಯಿ ಮಾರಾಟವಾಗುತ್ತಿದೆ. ಇದಕ್ಕೆ ಒಂದೊಂದು ಕಡೆ ಒಂದೊಂದು ಪದ ಹೇಳುತ್ತಾರೆ. ಕೆಲವು ಕಡೆ ಯಾರಿಯಾ ಮೂಟೆ ಎಂದು ಕರೆಯುತ್ತಾರೆ ಕೆಲವು ಕಡೆ ಬೂಸಾ ಮೂಟೆ ಎದು ಕರೆಯುತ್ತಾರೆ. ಇನ್ನೂ ಕೆಲವು ಕಡೆ ವಿಧವಿಧವಾದ ಹೆಸರಿನಿಂದ ಇದು ಮಾರಾಟವಾಗುತ್ತಿದೆ. ಇದರ ಬಗ್ಗೆ ನೀವು ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ, ನೀವು ಅಧಿಕಾರಕ್ಕೆ ಬಂದ ಮೇಲಾದರೂ ಕ್ರಮ ತೆಗೆದುಕೊಳ್ಳಬೇಕಾಗಿತ್ತು, ಆದರೆ ಕ್ರಮ ತೆಗೆದುಕೊಂಡಿಲ್ಲ. ಲೂಸ್ ಆಗಿ ಕೂಡ ಸಾರಾಯಿ ಮಾರಾಟವಾಗುತ್ತಿದೆ. ಪ್ಲಾಸ್ಟಿಕ್ ಚೀಲದಲ್ಲಿಟ್ಟು ಮಾರಾಟ ಮಾಡುತ್ತಿದ್ದಾರೆ. ಬೆಳಗ್ಗೆ ತಂದು ತೋರಿಸಬೇಕೆಂದು ಇದ್ದೆ, ಮರೆತು ಬಂದೆ, ಇದು ಯಾವರೀತಿ ಸಾಧ್ಯ ? ಇದರಿಂದ ನಿಮ್ಮ ಜೋನಫೈಡ್ಸನ್ನು ಸಸ್ಪೆಕ್ಟ್ ಮಾಡಬೇಕಾದ ಪರಿಸ್ಥಿತಿ ಉಂಟಾಗಿದೆ. ಐ.ಎಂ.ಎಫ್.

ಎಲ್ ಸೆಕೆಂಡ್ಸ್ ನಿಲ್ಲಿಸಿದಿರಿ ಸಂತೋಷ. ಆದರೆ ಸಾರಾಯಿ ಬಗ್ಗೆ ಏತಕ್ಕೆ ಇಷ್ಟು ಮಮತೆ ತೋರಿಸುತ್ತಿದ್ದೀರಿ ? ಇಷ್ಟೊಂದು ಲೀನಿಯಂಟ್ ಆಗಿರಬೇಕಾದರೆ, ರಾಜಾರೋಷವಾಗಿ ಬೀಡಿ ಅಂಗಡಿಯಲ್ಲಿ ಪ್ಲಾಸ್ಟಿಕ್ ಚೀಲದಲ್ಲಿ ಸಾರಾಯಿ ಮಾರಾಟವಾಗುತ್ತಿದೆ. ಬೆಂಗಳೂರಿನಲ್ಲಿ ಕೂಡ ನಡೆಯುತ್ತಿದೆ. ಇಲ್ಲಿರತಕ್ಕ ಯಾವ ಸಾರಾಯಿ ಅಂಗಡಿಗೇ ಹೋದರೂ ಕೂಡಾ ಪ್ಲಾಸ್ಟಿಕ್ ಚೀಲದಲ್ಲಿರತಕ್ಕ ಸಾರಾಯಿ ಸಿಗುತ್ತಿದೆ. ಇದರಲ್ಲಿ ತೋರಿಸತಕ್ಕ ಅಫಿಷಿಯಲ್ ಕನ್‌ಸಂಪ್‌ಷನ್ ಪ್ರಮಾಣ ಎಷ್ಟು ಎಂದರೆ, ನನ್ನ ಲೆಕ್ಕದ ಪ್ರಕಾರ, ಎಷ್ಟು ನಿಜವಾಗಿ ಬಳಕೆಯಾಗುತ್ತಿದೆಯೋ, ಅದರಲ್ಲಿ ಶೇಕಡಾ ೩೦ ರಿಂದ ೪೦ ರಷ್ಟು ಮಾತ್ರ ಲೆಕ್ಕದಲ್ಲಿ ತೋರಿಸುತ್ತಿದ್ದಾರೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ಇದನ್ನೆಲ್ಲಾ ಎಕ್ಸೈಸ್ ಡಿಮ್ಯಾಂಡ್ ಬಂದಾಗ ತಾವು ಮಾತನಾಡಿದರೆ ಒಳ್ಳೆಯದು.

ಶ್ರೀ ಸಿ. ಬೈರೇಗೌಡ.—ಓಟ್ ಆನ್ ಆಕೌಂಟ್ ತೆಗೆದುಕೊಂಡ ಮೇಲೆ ನೀವು ಇದನ್ನು ಪುನರ್ ವಿಮರ್ಶೆ ಮಾಡುವುದಕ್ಕೆ ಆಗುವುದಿಲ್ಲ. ಈಗ ಏನೇನು ಟ್ಯಾಕ್ಸ್ ಹಾಕಿದ್ದೀರಿ. ಅದನ್ನು ಪುನರ್ ವಿಮರ್ಶೆ ಮಾಡುವುದಕ್ಕೆ ಆಗುವುದಿಲ್ಲ, ಆದ್ದರಿಂದ ಈಗ ಏನು ನಡೆಯುತ್ತಿದೆ ಎಂಬುದನ್ನು ತಮ್ಮ ಗಮನಕ್ಕೆ ತರಬೇಕೆಂಬ ಕಾರಣಕ್ಕಾಗಿ ಇದನ್ನು ಹೇಳುತ್ತಿದ್ದೇನೆ. ಮುಂದೆ ಎಕ್ಸೈಸ್ ಡಿಮ್ಯಾಂಡ್ ಮೇಲೆ ವಿವರವಾಗಿ ಮಾತನಾಡುತ್ತೇನೆ. ನಮ್ಮಲ್ಲಿ ಎಷ್ಟು ಸಾರಾಯಿ ಕನ್ಸಂಪ್‌ಷನ್ ಎಷ್ಟಾಗುತ್ತಿದೆ ಎಷ್ಟು ತೋರಿಸಬೇಕಾಗಿತ್ತು, ಅಷ್ಟನ್ನು ತೋರಿಸುತ್ತಿಲ್ಲ. ಇನ್ನು ಐ. ಎಮ್. ಎಫ್. ಎಲ್. ಎಷ್ಟು ಉತ್ಪತ್ತಿ ಆಗುತ್ತಿದೆ, ಎಷ್ಟು ಕನ್‌ಸ್ಯೂಮ್ ಆಗುತ್ತಿದೆ ಎಂದರೆ ಅದಕ್ಕೂ ಇದಕ್ಕೂ ಹೋಲಿಸಿದಾಗ, ಅಜಗಜಾಂತರ ವ್ಯತ್ಯಾಸ ಇದೆ. ನಮ್ಮಲ್ಲಿ ಒಂದು ಲೆಕ್ಕದ ಪ್ರಕಾರ ೨೭ ಮಿಲಿಯನ್ ಲೀಟರ್ಸ್ ಆಫ್ ಐ. ಎಮ್. ಎಫ್. ಎಲ್. ನ್ನು ಕರ್ನಾಟಕದಿಂದ ಎಕ್ಸ್‌ಪೋರ್ಟ್ ಮಾಡುತ್ತಿದ್ದೇವೆ. ನಮ್ಮ ಕರ್ನಾಟಕದಲ್ಲಿ ನಾವು ಕನ್‌ಸ್ಯೂಮ್ ಮಾಡುತ್ತಿರತಕ್ಕದ್ದು ೯ ಮಿಲಿಯನ್ ಲೀಟರ್ಸ್. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಶೇಕಡಾ ಮೂರನೇ ಒಂದರಷ್ಟು ಮಾತ್ರ ನಾವು ನಮ್ಮ ರಾಜ್ಯದಲ್ಲಿ ಐ. ಎಮ್. ಎಫ್. ಎಲ್. ಕನ್‌ಸ್ಯೂಮ್ ಆಗುತ್ತಿದೆ. ಇನ್ನು ಮೂರನೇ ಎರಡರಷ್ಟು ಭಾಗ ಹೊರಗಡೆ ಹೋಗಿ ಮಾರಾಟವಾಗುತ್ತಿದೆ. ಇದನ್ನು ಮಾರಾಟ ಮಾಡುವುದಕ್ಕೆ ಆಗುವುದಿಲ್ಲ ಎಂಬ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮತ್ತು ಸಾರಾಯಿ ಬಗ್ಗೆ ಹೇಳಬೇಕಾಗಿದ್ದರೆ, ಎಷ್ಟು ಇಲ್ಲಿ ತೋರಿಸಬೇಕಾಗಿತ್ತೋ ಅದನ್ನು ತೋರಿಸುತ್ತಿಲ್ಲ, ಐ. ಎಮ್. ಎಫ್. ಎಲ್. ಬಳಕೆ ಎಷ್ಟಾಗುತ್ತಿದೆ ಎಂಬ ಬಗ್ಗೆ ನನ್ನ ಹತ್ತಿರ ಅಂಕಿ ಅಂಶ ಇದೆ. ಅವರು ಬೆಲ್ ಹೊಡೆಯುತ್ತಿದ್ದಾರೆ ಎಂಬ ಕಾರಣದಿಂದ ಆ ವಿವರ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಎಷ್ಟು ಸಾರಾಯಿ ಇಲ್ಲಿ ಬಳಕೆಯಾಗುತ್ತಿದೆ ಎಷ್ಟು ಲೆಕ್ಕದಲ್ಲಿ ತೋರಿಸುತ್ತಿಲ್ಲ. ಇದರಿಂದ ಕೋಟ್ಯಾಂತರ ರೂಪಾಯಿ ಹಣ ಸರಕಾರಕ್ಕೆ ನಷ್ಟವಾಗುತ್ತಿದೆ. ಅದರಲ್ಲೂ ಕೂಡಾ ಪ್ರಮುಖವಾಗಿ ಬೆಂಗಳೂರು ನಗರದಲ್ಲಿ ತಾವು ಇವತ್ತು ಏನು ಎಕ್ಸೈಜ್ ಕಂಟ್ರಾಕ್ಟ್ ಕೊಟ್ಟಿದ್ದೀರಿ, ಅವರಿಗೆ ಒಂದು ದಿವಸದ ಆದಾಯ ಸುಮಾರು ೧೫ ಲಕ್ಷ ರೂಪಾಯಿಗಳಷ್ಟು ಹೆಚ್ಚಿದೆ. ಅವರ ಕೈಯಲ್ಲಿ ಕರೆನ್ಸಿ ನೋಟ್‌ಗಳನ್ನು ಎಣಿಸುವುದಕ್ಕೆ ಆಗದೆ ತಕ್ಕಡಿಯಲ್ಲಿ ತೂಕ ಹಾಕುತ್ತಿದ್ದಾರೆ. ಅವರು ಇವತ್ತು ಈ ಪರಿಸ್ಥಿತಿಗೆ ಹೋಗಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳಾದಂಥ ಶ್ರೀ ರಾಜಶೇಖರಮೂರ್ತಿಯವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಯಾವ ತರಹ ಇದರ ವ್ಯವಹಾರ ನಡೆಯುತ್ತಿದೆ ಎನ್ನುವುದನ್ನು ತಾವು ತಿಳಿದುಕೊಳ್ಳಬೇಕು. ಅದನ್ನು ನಾನು ತಮಗೆ ಬಿಡುತ್ತೇನೆ. ನಾನು ರಾಜ್ಯದ ಜನತೆಯ ಹಿತದೃಷ್ಟಿಯಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಇದರ ಬಗ್ಗೆ ತಾವು ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಸಾರಾಯಿ ವ್ಯವಹಾರದಲ್ಲಿ ಸಾಕಷ್ಟು ಅವ್ಯವಹಾರ ನಡೆಯುತ್ತಿದೆ. ಈ ಒಂದು ಅವ್ಯವಹಾರ ನಡೆಯಲು ಇನ್ನು ಮೂರು ತಿಂಗಳು ಅವಕಾಶ ಇದೆ. ಈ ಮೂರು ತಿಂಗಳ ಅವಧಿಯಲ್ಲಿ ನೀವು ಅದ್ಭುತವೇನನ್ನೂ ಸಾಧಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೂ ಪ್ರಯತ್ನ ಮಾಡಿ ಎಂದು ನಾನು ಹೇಳುತ್ತೇನೆ. ಇಲ್ಲ ಹಿಂದೆ ಯಾವ ತರಹ ನಡೆದುಕೊಂಡು ಬಂದರು ಅದೇ ದಾರಿಯಲ್ಲಿ ನಾನು ಹೋಗುತ್ತೇನೆಂದು ಹೋಗುವುದಾದರೆ ಹೋಗಿ, ನಾನು ಸಹ ಹಿಂದೆ ಇದ್ದವರ ಬಗ್ಗೆ ಯಾವ ಭಾವನೆ ಇಟ್ಟುಕೊಂಡಿದ್ದೆನು ಅದೇ ಭಾವನೆಯನ್ನು ನಿಮ್ಮ ಬಗ್ಗೆಯೂ ಇಟ್ಟುಕೊಳ್ಳಬೇಕಾಗುತ್ತದೆ. ಆದರೆ ತಾವು ದಯಮಾಡಿ ಅದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷಣೀಯವರೇ, ತಾವು ಸಹ ಕೆಲವು ದಿವಸಗಳ ಕಾಲ ರೇಷ್ಮೆ ಮಂತ್ರಿಗಳಾಗಿದ್ದವರು, ಈ ರೇಷ್ಮೆ ಉತ್ಪಾದನೆಯಲ್ಲಿ ನಮ್ಮ ಕೋಲಾರ ಜಿಲ್ಲೆ ಪ್ರಮುಖವಾದ ಸ್ಥಾನ ಹೊಂದಿದೆ. ಆದರೆ ಇವತ್ತು ನಾನು ಬಜೆಟ್‌ನಲ್ಲಿ ನೋಡಿದರೆ ಈ ಬಗ್ಗೆ ಏನೂ ಇಲ್ಲ. ಹಿಂದೆ ರಾಜ್ಯಪಾಲರ ಭಾಷಣದಲ್ಲಿ ಏನೋ ಅಲ್ಪ ಸ್ವಲ್ಪ ಹೇಳಿದ್ದರು. ಆದರೆ ಬಜೆಟ್‌ನಲ್ಲಿ ಏನನ್ನೂ ಹೇಳದೆ ಇರುವುದು ಶೋಚನೀಯ

ಈ ರೀತಿ ಏತಕ್ಕೆ ಆಯಿತೋ ಎನ್ನುವುದು ನನಗಂತೂ ಅರ್ಥವಾಗುತ್ತಿಲ್ಲ. ಈ ರೇಷ್ಮೆ ಉದ್ದಿಮೆ ವಿದೇಶಿ ವಿನಿಮಯ ಗಳಿಸಿ ಕೊಡತಕ್ಕಂಥ ಉದ್ದಿಮೆ ಆಗಿದೆ. ಹಲವಾರು ವರ್ಷಗಳಿಂದ ಇದು ಸುಮಾರು ೨೫ ಲಕ್ಷ ಜನರಿಗೆ ಕೆಲಸ ಒದಗಿಸಿರತಕ್ಕಂಥ ಉದ್ದಿಮೆ ಆಗಿದೆ. ಈ ರೇಷ್ಮೆ ಉದ್ದಿಮೆಯನ್ನು ಸುಮಾರು ೩೦-೩೫ ಲಕ್ಷ ಜನ ಅವಲಂಬಿಸಿದ್ದಾರೆ. ಈ ರೇಷ್ಮೆ ಉದ್ದಿಮೆಯನ್ನು ನೀವು ಏತಕ್ಕೆ ಇಷ್ಟು ಅನಾಧಾರಣೆ ಮಾಡಿದ್ದೀರಿ ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ನೀವು ಕೂಡ ಈ ಬೆಳೆಬೆಳೆಯತಕ್ಕಂಥ ಜಿಲ್ಲೆಯಿಂದ ಬಂದಿರತಕ್ಕಂಥವರು ನಿಮಗೆ ನಾನು ಹೆಚ್ಚು ವಿವರಗಳನ್ನು ಕೊಡುವಂತಹ ಅವಶ್ಯಕತೆ ಇಲ್ಲ. ತಾವು ಈ ಬಗ್ಗೆ ಗಮನ ಹರಿಸಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕೊನೆಯದಾಗಿ ಇವತ್ತು ಹೈದರಾಬಾದ್ ಕರ್ನಾಟಕದ ಭಾಗವನ್ನು ಅಭಿವೃದ್ಧಿ ಮಾಡುವುದಕ್ಕೆ ಸುಮಾರು ೪೦-೪೫ ಕೋಟಿ ರೂಪಾಯಿಗಳನ್ನು ಮೀಸಲು ಇಡತಕ್ಕಂಥ ಕೆಲಸವನ್ನು ಮಾಡಿದ್ದೀರಿ. ಬಹಳ ಸಂತೋಷ. ಇವತ್ತಿನ ಅಂಕಿಅಂಶಗಳ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಪರ್ ಕ್ಯಾಪಿಟಾ ಇನ್‌ಕಮ್ ಪ್ರಕಾರ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಪರ್ ಕ್ಯಾಪಿಟಾ ಇನ್‌ಕಮ್ ಅನ್ನು ಮೂಲಕವಾಗಿ ತೆಗೆದುಕೊಳ್ಳುವುದು. ನೀವೇ ಒದಗಿಸಿರತಕ್ಕಂಥ ಅಂಕಿ ಅಂಶಗಳ ಪ್ರಕಾರ ಕೋಲಾರ ಜಿಲ್ಲೆ ಪರ್ ಕಾಪಿಟಾ ಇನ್‌ಕಮ್‌ನಲ್ಲಿ ಕೊನೆಯ ಸ್ಥಾನದಲ್ಲಿದೆ. ತಾವು ಇದನ್ನು ದಯಮಾಡಿ ಗಮನಿಸಬೇಕು. ೨೧೩೦.೭೬ ಕೋಲಾರ ಜಿಲ್ಲೆಯ ಪರ್ ಕ್ಯಾಪಿಟಾ ಇನ್‌ಕಮ್. ತಮ್ಮ ಲಿಸ್ಟ್‌ನಲ್ಲಿ ಕಡೆಯಲ್ಲಿ ಇದೆ. ಅದೇ ರಾಯಚೂರು ೨೫೬೧.೧೨, ಬೀದರ್ ೨೫೫೫.೯೦ ಮತ್ತೆ ಬಳ್ಳಾರಿಯನ್ನು ಈಗ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸಬೇಕೆಂದು ಪ್ರಯತ್ನ ನಡೆಯುತ್ತಿದೆ. ಅದಕ್ಕೆ ನಾನು ಹೇಳಬೇಕಾಗಿದೆ. ಬಳ್ಳಾರಿ ಜಿಲ್ಲೆಯ ಪರ್ ಕ್ಯಾಪಿಟಾ ಇನ್‌ಕಮ್ ೩೦೬೦.೫೪ ಇದೆ. ಆದರೆ ಕೋಲಾರ ಜಿಲ್ಲೆ ಕೊನೆಯಲ್ಲಿ ಇದೆ. ಇವತ್ತು ನಾವು ಹಾಲು ಕೊಡುತ್ತಿದ್ದೇವೆ. ರೇಷ್ಮೆಯನ್ನು ಈ ರಾಜ್ಯದ ಜನತೆಗೆ ಕೊಡುತ್ತಿದ್ದೇವೆ. ಹಣ್ಣು ಮತ್ತು ತರಕಾರಿ ಸಹ ಕೊಡುತ್ತಿದ್ದೇವೆ. ಆದರೂ ಸಹ ನಾವು ಯಾವುದರಲ್ಲೂ ಅಭಿವೃದ್ಧಿ ಆಗಿಲ್ಲ. ಇದನ್ನೆಲ್ಲಾ ನಿಮ್ಮ ಅಂಕಿ ಅಂಶಗಳನ್ನು ನೋಡಿಯೇ ಹೇಳುತ್ತಿದ್ದೇನೆ. ಹೈದರಾಬಾದ್ ಕರ್ನಾಟಕದ ಏರಿಯಾವನ್ನು ಅಭಿವೃದ್ಧಿ ಪಡಿಸುವುದನ್ನು ನಾನು ಬೇಡ ಎನ್ನುವುದಿಲ್ಲ. ಆದರೆ ಆ ಭಾಗಕ್ಕಿಂತಲೂ ಕನಿಷ್ಟವಾಗಿರತಕ್ಕಂಥ ನಮ್ಮ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಇದೇ ರೀತಿಯ ಯೋಜನೆಗಳನ್ನು ನೀವು ಏಕೆ ಮಾಡುವುದಕ್ಕೆ ಮುಂದಾಗಲಿಲ್ಲ ? ನಮ್ಮ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಇದರಲ್ಲಿ ಪ್ರಸ್ತಾಪವೇ ಇಲ್ಲ. ಯೋಜನೆಗಳನ್ನು ತಯಾರು ಮಾಡುವಾಗ ಅಂಕಿ ಅಂಶಗಳ ಆಧಾರದ ಮೇಲೆ ನೀವು ಯೋಜನೆಗಳನ್ನು ತಯಾರು ಮಾಡುತ್ತೀರಿ, ಯಾವ ಅಂಕಿ ಅಂಶಗಳ ಆಧಾರದ ಮೇಲೆ ತಾವು ಈ ಬಜೆಟನ್ನು ತಯಾರು ಮಾಡಿದ್ದೀರಿ ಎಂಬುದೇ ನನಗೆ ಗೊತ್ತಾಗುವುದಿಲ್ಲ. ಕೋಲಾರ ಜಿಲ್ಲೆಗೆ ಮೊದಲ ಆದ್ಯತೆಯನ್ನು ಕೊಡಬೇಕಾಗಿತ್ತು. ಬಾರ್ಡರ್ ಏರಿಯಾಗಳ ಅಭಿವೃದ್ಧಿಗೆಂದು ೫ ಕೋಟಿ ರೂಪಾಯಿಗಳನ್ನು ನೀವು ಬಜೆಟ್‌ನಲ್ಲಿ ಇಟ್ಟಿದ್ದೀರಿ. ದಕ್ಷಿಣ ಕನ್ನಡ ಜಿಲ್ಲೆಯನ್ನು ಒಳಗೊಂಡು ಇನ್ನೂ ಕೆಲವು ಜಿಲ್ಲೆಗಳು ಬಾರ್ಡರ್ ಏರಿಯಾದಲ್ಲಿ ಬರುತ್ತವೆ. ಬಾರ್ಡರ್ ಏರಿಯಾ ಅಭಿವೃದ್ಧಿಗೆ ನೀವು ಇಟ್ಟಿರುವ ೫ ಕೋಟಿ ರೂಪಾಯಿಗಳು ನಶ್ಯಕ್ಕೂ ಸಾಕಾಗುವುದಿಲ್ಲ. ಬಾರ್ಡರ್ ಏರಿಯಾಗಳಿಂದು ತಾವು ಯಾವುದನ್ನು ತೋರಿಸುತ್ತಿದ್ದೀರೋ ಗೊತ್ತಿಲ್ಲ. ನನ್ನ ವಾದ ಏನೆಂದರೆ, ಕೋಲಾರ ಜಿಲ್ಲೆ ಕೊನೆಯ ಸ್ಥಾನದಲ್ಲಿ ಇದೆಯೆಂದು ನಿಮ್ಮ ಅಂಕ ಅಂಶಗಳೇ ಇದನ್ನು ಹೇಳುತ್ತಿದೆ. ಆದ್ದರಿಂದ ನಮ್ಮ ಜಿಲ್ಲೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಹೆಚ್ಚು ಗಮನ ಹರಿಸಬೇಕು. ಕೋಲಾರ ಜಿಲ್ಲೆಯ ಅಭಿವೃದ್ಧಿಯನ್ನು ತಾವು ಕಡೆಗಣಿಸಿದ್ದೀರಿ. ಇದಕ್ಕೆ ಕಾರಣ ಏನು ಎಂದು ಅರ್ಥವಾಗುತ್ತಿಲ್ಲ. ಕೋಲಾರ ಜಿಲ್ಲೆಯ ಅಭಿವೃದ್ಧಿ ಮಟ್ಟವು ಕನಿಷ್ಠ ಸ್ಥಾನದಲ್ಲಿದ್ದರೂ ಅಭಿವೃದ್ಧಿ ಯೋಜನೆಗಳನ್ನು ನಮ್ಮ ಜಿಲ್ಲೆಗೆ ಕೈ ಬಿಡುವುದು ಕಾರಣ ಏನು ? ಆ ದಿಕ್ಕಿನಲ್ಲಿ ನೀವು ಏಕೆ ಆಲೋಚನೆ ಮಾಡಲಿಲ್ಲವೆಂದು ತಾವು ಉತ್ತರ ಕೊಡುವಾಗ ತಿಳಿಸಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್.ಎಂ. ಯಾಹ್ಯ (ಜಯಮಹಲ್).— ಸನ್ಮಾನ್ಯ ಅಧ್ಯಕ್ಷಣಿಯವರೇ, ಸನ್ಮಾನ್ಯ ಅರ್ಥ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಎರಡು ರಷ್ಯನ್ ಶಬ್ದಗಳನ್ನು ಬಳಸಿದ್ದಾರೆ, ಪೆರೆಸ್ತ್ರೊಯಿಕಾ ಮತ್ತು ಗ್ಲಾಸ್‌ನಾಸ್ಟ್ ಎಂಬ ಎರಡು ಶಬ್ದಗಳನ್ನು ಬಳಸಿದ್ದಕ್ಕೆ ನಮ್ಮ ವಿರೋಧ ಪಕ್ಷದ ಮಿತ್ರರು ಬಹಳ ಅಸಹ್ಯ ರೀತಿಯಲ್ಲಿ ಹಾಗೂ ಲಘುವಾಗಿ ತೆಗೆದುಕೊಂಡು ಮಾತನಾಡಿದ್ದಾರೆ. ನಾನು ಅಂಕಿ ಸಂಖ್ಯೆ ಮತ್ತು ಈ ಬಜೆಟ್‌ನ ಕೆಲವು ಪ್ರಪೋಸಲ್ಸನ್ನು ನೋಡಿದಾಗ ನನಗೆ ತೋರುತ್ತಿದೆ, ಏನೆಂದರೆ ಮಾನ್ಯ ಹಣಕಾಸಿನ ಮಂತ್ರಿಯವರು ಕರ್ನಾಟಕದಲ್ಲಿ ಪೆರಿಸ್ತ್ರೋಯಿಕ ಮಾಡಲಿಕ್ಕೆ ಬಹಳ ಪ್ರಯತ್ನ ಪಟ್ಟಿದ್ದಾರೆ ಎಂದು ಅದಕ್ಕಾಗಿ ಅವರಿಗೆ ನಾನು ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ ರಷ್ಯಾದಲ್ಲಿ ಮಾನ್ಯ ಗೋರ್ಬೊಚೇವ್ ಅವರು ಈ ಪೆರಿಸ್ತ್ರೋಯಿಕಾ ಸಿದ್ಧಾಂತವನ್ನು ಎರಡು ಉದ್ದೇಶದಿಂದ

ಜಾರಿಗೆ ತಂದರು. ಪೆರಿಸ್ಟ್ರೋಯಿಕ ಎಂದರೆ, restructure of society-politically and economically. ಆ ಕಾರಣದಿಂದ ಅವರು ರಾಜಕೀಯವಾಗಿ ಸಮಾಜದಲ್ಲಿ ಪರಿವರ್ತನೆಯನ್ನು ತರಲಿಕ್ಕೆ ಹೊರಟಿದ್ದರು. ರಷ್ಯಾದಲ್ಲಿ ಯಾವ ಸಮಾಜ ಇತ್ತೋ, ಅವರದ್ದು ಯಾವ ನೀತಿ ಇತ್ತೋ, ಅದರಲ್ಲಿ ರಾಜಕೀಯವಾಗಿ ಪ್ರಜಾಪ್ರಭುತ್ವ ತರುವುದು, ಚುನಾವಣೆ ಮಾಡುವುದು, ಮಲ್ಟಿ ಪಾರ್ಟಿ ಸಿಸ್ಟಂ ಮಾಡುವುದು, ಈ ಪೆರಿಸ್ಟ್ರೋಯಿಕಾ ನಮ್ಮ ದೇಶಕ್ಕೆ, ನಮ್ಮ ಕರ್ನಾಟಕಕ್ಕೆ ಬೇಕಾಗಿಲ್ಲ ಏಕೆಂದರೆ ಇಲ್ಲಿ ಪ್ರಜಾಪ್ರಭುತ್ವ ಇದೆ. ಇಲ್ಲಿ ಎಲೆಕ್ಷನ್ ಆಗುತ್ತದೆ. ಆ ಕಡೆಯವರು ಈ ಕಡೆ ಇರುತ್ತಾರೆ. ಈ ಕಡೆಯವರು ಆ ಕಡೆಯೂ ಇರುತ್ತಾರೆ. ಈ ರೀತಿ ಇಲ್ಲಿ ಮಲ್ಟಿ ಪಾರ್ಟಿ ಸಿಸ್ಟಮ್ ಇದೆ. ಇಲ್ಲೇನಾದರೂ ಪೆರಿಸ್ಟ್ರೋಯಿಕಾ ಬೇಕಾಗಿದ್ದರೆ, ಅದು ಆರ್ಥಿಕ ನೀತಿ ಆರ್ಥಿಕ ಬದಲಾವಣೆಯಲ್ಲಿ ಇರಬೇಕಾಗುತ್ತದೆ. ದೇಶದ ಕೋಟ್ಯಾಂತರ ಜನ ಯಾರು ಇನ್ನೂವರೆಗೆ ಅಭಿವೃದ್ಧಿ ಕಾರ್ಯಗಳ ಲಾಭವನ್ನು ಪಡೆಯುವುದಕ್ಕೆ ಸಾಧ್ಯವಾಗಿಲ್ಲವೋ ಅವರ ಜೀವನ ಪರಿಸ್ಥಿತಿಯನ್ನು ಉತ್ತಮಗೊಳಿಸುವಂಥ, ಬಡವರ ಜೀವನದ ಮಟ್ಟವನ್ನು ಉತ್ತಮಗೊಳಿಸುವಂಥ, ರೈತರು, ಅಲ್ಪ ಸಂಖ್ಯಾತರ, ಹರಿಜನ ಗಿರಿಜನರ ಜೀವನ ಮಟ್ಟವನ್ನು ಉತ್ತಮಗೊಳಿಸುವುದಕ್ಕಾಗಿ ನಮಗೆ ಪೆರಿಸ್ಟ್ರೋಯಿಕಾ ಬೇಕಾಗಿದೆ. ನಮ್ಮ ಮಾನ್ಯ ಸ್ನೇಹಿತರಾದ ಡಾ. ಜೀವರಾಜ್ ಆಳ್ವರವರು ಹೇಳಿದರು. ಏನೆಂದರೆ. "ಇಂದಿರಾ ಗಾಂಧೀಜಿಯವರು ತಮ್ಮ ೨೦ ಅಂಶಗಳ ಕಾರ್ಯಕ್ರಮದಲ್ಲಿ ಬಹಳಷ್ಟು ಆರ್ಥಿಕ ಬದಲಾವಣೆಯನ್ನು ಮಾಡಲಿಕ್ಕೆ ಹೋರಾಡಿದರು." ಎಂದು ಅವರ ಹೊಗಳಿಕೆಯು ಸತ್ಯವಾದದು. ನಿಜವಾಗಿಯೂ ಅದೊಂದು ಪೆರಿಸ್ಟ್ರೋಯಿಕಾ ಬದಲಾವಣೆಯಾಗಿದೆ. ಅದೇ ರೀತಿಯಲ್ಲಿ ಈ ಬಜೆಟ್‌ನಲ್ಲಿಯೂ ಪೆರಿಸ್ಟ್ರೋಯಿಕಾವನ್ನು ಉಪಯೋಗಿಸಿದ್ದಾರೆ ಎಂದು ಹೇಳಲಿಕ್ಕೆ ಹಲವಾರು ಕಾರಣಗಳು ಇವೆ. ಈ ದೇಶದಲ್ಲಿ ಅಥವಾ ಈ ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿಯು ಬಹಳಷ್ಟು ಕೆಳಮುಖವಾಗಿತ್ತು. ಗ್ರೋಥ್ ನೆಗೆಟಿವ್ ಗ್ರೋಥ್‌ರೇಟ್ ಆಗಿತ್ತು. ಎಕಾನಮಿಯಲ್ಲಿ ಸಾಗ್‌ನೇಟ್ ಆಗಿತ್ತು. ಎಕಾನಮಿ ವಿಚಾರದಲ್ಲಿ ೪–೫ ವರ್ಷಗಳಲ್ಲಿ ನಮ್ಮ ಆರ್ಥಿಕ ಪರಿಸ್ಥಿತಿಯು ತೀರಾ ಕೆಟ್ಟು ಹೋಗಿತ್ತು. ಹಿಂದೆ ಇಡೀ ದೇಶದಲ್ಲಿ ಆರ್ಥಿಕ ವಿಚಾರದಲ್ಲಿ ಕರ್ನಾಟಕ ರಾಜ್ಯಕ್ಕೆ ಪ್ರಬಲವಾದ ರಾಜ್ಯ ಎಂಬ ಒಳ್ಳೆಯ ಹೆಸರಿತ್ತು, ಆದರೆ ಅದೇ ಹೆಸರು ಕಟ್ಟಕಡೆಗೆ ಬ್ಯಾಂಕ್–ಕರಪ್ಟ್ ಸ್ಟೇಟ್ ಎಂಬ ಹೆಸರು ಬರುವ ಹಾಗೆ ಆಯಿತು. ಆ ಬಗ್ಗೆ ಇರುವ ಅಂಕಿ ಅಂಶಗಳನ್ನು ನಾನು ನೋಡುತ್ತಾ ಇದ್ದೇನೆ. ಇಲ್ಲಿ ಗ್ರೋಥ್‌ರೇಟ್ ಜೀರೋ ಆಗುತ್ತದೆ, ಅಲ್ಲಿ ಯಾವ ರೀತಿ ಆರ್ಥಿಕವಾಗಿ ಅಭಿವೃದ್ಧಿಯಾಗುವುದಕ್ಕೆ ನಮಗೆ ಸಾಧ್ಯವಿಲ್ಲ. ಕಳೆದ ಎರಡು ವರ್ಷಗಳಲ್ಲಿ ಗ್ರೋಥ್ ರೇಟ್ ಪೂರ್ಣ ನೆಗೆಟಿವ್ ಆಗಿದೆ. ಅದಕ್ಕಾಗಿ ಕರ್ನಾಟಕ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಆಗುವುದಕ್ಕೆ ಸಾಧ್ಯವಾಗಲಿಲ್ಲ, ಕರ್ನಾಟಕ ರಾಜ್ಯದ ಬಡ ರೈತರಿಗೆ, ಹರಿಜನಗಿರಿಜನರಿಗೆ, ಅಲ್ಪಸಂಖ್ಯಾತರಿಗೆ ಹಿಂದುಳಿದ ವರ್ಗಗಳಿಗೆ ಯಾವುದೇ ರೀತಿಯಾದ ಒಂದು ಎಕನಾಮಿಕ್ ಬೆನಿಫಿಟ್ಸ್ ಸಿಗುವುದಕ್ಕೆ ಸಾಧ್ಯವಾಗಲಿಲ್ಲ. ಅದಕ್ಕಾಗಿ ನಮ್ಮ ರಾಜ್ಯಕ್ಕೆ ಪೆರಿಸ್ಟ್ರೋಯಿಕ ಮಾಡಲೇಬೇಕಾಗಿದೆ. ಇಂಥ ಜನರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕಾದರೆ ಅಂಥ ಒಂದು ಉತ್ತಮ ನೀತಿಯನ್ನು ದೇಶದ ಹಾಗೂ ರಾಜ್ಯದ ಎದುರು ಇಡಬೇಕಾಗಿದೆ. ೭ನೇ ಯೋಜನಾವಧಿಯಲ್ಲಿ ಕರ್ನಾಟಕ ರಾಜ್ಯದ ಆರ್ಥಿಕ ಪರಿಸ್ಥಿತಿಯು ಏನಾಯಿತು ಎಂದು ಅಂದರೆ, ಅಪ್ರೂವ್ಡ್ ಔಟ್‌ಲೇ ೩,೫೭೫ ಕೋಟಿ ರೂಪಾಯಿಗಳು ಇದ್ದುದನ್ನು ರಿವೈಸ್ ಮಾಡಿ ಕಟ್ ಮಾಡಿ ೩.೫೫೭ ಕೋಟಿ ರೂಪಾಯಿಗಳಿಗೆ ತಂದರು. ಅಂದರೆ ಈ ಬೆಳವಣಿಗೆಯಲ್ಲಿ ಹೆಚ್ಚಿಗೆ ಆಗದೆ ೧೧.೭ರಷ್ಟು ಕಡಿಮೆ ಮಾಡಿದರು. ಪ್ಲಾನ್ ಔಟ್‌ಲೇ ಅನ್ನು ಬಹಳಷ್ಟು ಕಡಿಮೆ ಮಾಡಿದರು. ಆನಂತರ ಯಾವ ರೀತಿ ಸ್ಟಾಗ್‌ನೇಷನ್ ಇದೆ ಎಂದು ನೋಡಿದರೆ, ಅದು ೧೯೮೫ನೇ ಇಸವಿಯಲ್ಲಿ ಆ್ಯನ್ಯುವಲ್ ಪ್ಲಾನ್ ಪ್ರಕಾರ ೭೮೬ ಕೋಟಿ ರೂಪಾಯಿಗಳು. ಐದು ವರ್ಷಗಳ ನಂತರ ೧೯೮೯–೯೦ರಲ್ಲಿ ೮೦೪ ಕೋಟಿ ರೂಪಾಯಿಗಳು. ಹೀಗೆ ಐದು ವರ್ಷಗಳ ನಂತರವೂ ಪ್ಲಾನ್‌ಔಟ್‌ಲೇ ಅಷ್ಟೇ ಉಳಿದಿದೆ. ಇನ್‌ಫ್ಲೇಶನ್ ವಿಚಾರದಲ್ಲಿ, ಬೆಲೆ ಏರಿಕೆ ವಿಚಾರದಲ್ಲಿ ಇಳಿಮುಖ ಕಂಡು ಬಂದಿಲ್ಲ. ಅದೇ ರೀತಿಯಲ್ಲಿ ೧೯೯೦–೯೧ರಲ್ಲಿ ಮಾನ್ಯ ಹಣಕಾಸಿನ ಸಚಿವರು ಈಗ ೧,೦೪೨ ಕೋಟಿ ರೂಪಾಯಿ

(ಸಭಾಧ್ಯಕ್ಷ ಶ್ರೀ ಎಸ್. ಎಂ. ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಗಳನ್ನು ಪ್ಲಾನ್‌ಔಟ್‌ಲೇನಲ್ಲಿ ಇಟ್ಟಿದ್ದಾರೆ. ಅಂದರೆ ಈಗ ಅವರು ಹೆಚ್ಚು ಮಾಡಿದ್ದಾರೆ. ಮಾನ್ಯ

೪.೦೦ ಪಿ.ಎಂ.

ಹಣಕಾಸಿನ ಸಚಿವರು ಒಳ್ಳೆಯ ಕೆಲಸ ಮಾಡಿದ್ದಾರೆ. ಇದರಿಂದ ಬರುವ ವರ್ಷ ಇದನ್ನು ಇನ್ನೂ ಹೆಚ್ಚು ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಯಾವ ಆರ್ಥಿಕ ಪರಿಸ್ಥಿತಿ ತೀರಾ ಕೆಟ್ಟುಹೋಗಿತ್ತೋ

ತೀರಾ ಇಳಿಮುಖವಾಗಿತ್ತೋ ಅದನ್ನು ಬಹಳಷ್ಟು ಉತ್ತಮಪಡಿಸುವುದಕ್ಕೆ ಮಾನ್ಯ ರಾಜಶೇಖರ ಮೂರ್ತಿಯವರು ಬಹಳ ಕಷ್ಟಪಟ್ಟಿದ್ದಾರೆ. ಆದ್ದರಿಂದ ಅವರಿಗೆ ಅಭಿನಂದನೆ ಸಲ್ಲಿಸಬೇಕಾಗಿದೆ. ಈ ರೀತಿ ಪ್ಲಾನ್‌ನಲ್ಲಿ ಕಟ್ ಮಾಡಬಾರದು. ನಮ್ಮ ಪ್ಲಾನ್ ಔಟ್‌ಲೇ ಹೆಚ್ಚಾಗಬೇಕೇ ಹೊರತು ಅದನ್ನು ಕಟ್ ಮಾಡಲಿಕ್ಕೆ ಕಾರಣವಿರುತ್ತದೆ. ನಾವು ಯಾವಾಗ ಕಡಿಮೆ ಮಾಡಬಾರದು. ಅದನ್ನು ರಿಸೋರ್ಸಸ್ ಮೊಬಲೈಸ್ ಮಾಡುವುದಿಲ್ಲವೋ, ಆಗ ಪ್ಲಾನಿಂಗ್ ಕಮಿಷನ್ ಅವರ ರೇಷ್ಯೋ ಪ್ರಕಾರ ನಾವು ತೆರಿಗೆ ಹಾಕಿ ನಮ್ಮ ಆದಾಯವನ್ನು ಹೆಚ್ಚು ಮಾಡಿಕೊಳ್ಳದಿದ್ದರೆ ನಮ್ಮ ಪ್ಲಾನ್ ಕಟ್ ಮಾಡುತ್ತಾ ಹೋಗಬೇಕಾಗುತ್ತದೆ. ಅದೇ ರೀತಿ ಕಳೆದ ಐದಾರು ವರ್ಷದಲ್ಲಿ ಇದು ಕಟ್ ಆಗುತ್ತಾ ಹೋಗಿದೆ. ಜನರು ಏನು ಹೇಳುತ್ತಿದ್ದರು? ಅಭಿವೃದ್ಧಿ ಆಗುತ್ತಿಲ್ಲ, ಅಭಿವೃದ್ಧಿ ಆಗುತ್ತಿಲ್ಲವೆನ್ನುತ್ತಿದ್ದರಲ್ಲ, ಅದಕ್ಕೆ ಕಾರಣ ಇದೇ ಆಗಿತ್ತು. ರಿಸೋರ್ಸ್ ಮೊಬಲೈಸ್ ಮಾಡಲಿಲ್ಲ ಅದಕ್ಕೇ ಪ್ಲಾನ್‌ಸೈಜ್ ಕಟ್ಟಾಗುತ್ತಾ ಹೋಯಿತು. ಇದು ಒಂದು ಕಡೆ. ಇನ್ನೊಂದು ಕಡೆ ಏನಿದೆ ನಾನ್‌ಪ್ಲಾನ್ ವಿಚಾರ. ಇದು ಹೆಚ್ಚಾಗುತ್ತಾ ಹೋಯಿತು. ಒಂದು ಕಡೆ ಪ್ಲಾನ್ ಔಟ್‌ಲೇ ಕಡಿಮೆಯಾಗಿದೆ ಇನ್ನೊಂದು ಕಡೆ ನಾನ್‌ಪ್ಲಾನ್ ಔಟ್‌ಲೇ ಜಾಸ್ತಿಯಾಗಿದೆ. ೧೯೮೪ರಲ್ಲಿ ೯೪೪೮ ಕೋಟಿ ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್, ಅದೇ ೧೯೮೯–೯೦ರಲ್ಲಿ ೨೩೩೪ ೪ಕೋಟಿಯಷ್ಟು ಹೆಚ್ಚುವರಿಯಾಗಿದೆ. ೫ ವರ್ಷಗಳಲ್ಲಿ ನಾನ್‌ಪ್ಲಾನ್ ಎಕ್ಸ್‌ಪೆಂಡೀಚರ್ ಶೇಕಡಾ ೯೩ರಷ್ಟು ಹೆಚ್ಚುವರಿ ಆಗಿದೆ. ಈ ರೀತಿ ಒಂದು ಕಡೆ ಪ್ಲಾನನ್ನು ಕಟ್ ಮಾಡುತ್ತಾ ಹೋದರೂ, ಇನ್ನೊಂದು ಕಡೆ ನಾನ್‌ಪ್ಲಾನ್ ಎಕ್ಸ್‌ಪೆಂಡೀಚರ್ ತೀರಾ ಹೆಚ್ಚಾಗುತ್ತಾ ಹೋಯಿತು ಈ ರೀತಿ ನಮ್ಮ ಕರ್ನಾಟಕದ ಆರ್ಥಿಕ ಪರಿಸ್ಥಿತಿ ಬಹಳ ಕ್ರಿಟಿಕಲಾಗಿ ಬಹಳ ಗೊಂದಲಮಯವಾಗಿ ನಮ್ಮ ಕರ್ನಾಟಕ ರಾಜ್ಯದ ಜನರ ಎದುರು ಬಂತು. ಅದಕ್ಕಾಗಿ ಜನರು ಈ ರೀತಿ ರಾಜಕೀಯ ಪರಿವರ್ತನೆ ಯಾಗಬೇಕು, ಯಾರು ಬೇಕಾದಷ್ಟು ಪ್ಲಾನ್‌ಗಳನ್ನು ಪ್ರಾಮಿಸ್‌ಗಳನ್ನು ಮಾಡಿ ಅದನ್ನು ಸರಿಯಾಗಿ ಈಡೇರಿಸುವುದರಿಂದ ಅದನ್ನು ಪರಿವರ್ತನೆ ಮಾಡಲಿಕ್ಕಾಗಿ ಪುನಃ ಆ ಸರ್ಕಾರ ತೆಗೆದು ಪುನಃ ನಮ್ಮ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ಕೆಲವು ಸದಸ್ಯರು ಹೇಳಿದರು ನಾವು ಬಹಳಷ್ಟು ಸಾಧನೆ ಮಾಡಿದೇವೆಂದು. ಈ ಫಿಗರ್ಸನ್ನು ನೋಡಿ ಬಿಟ್ಟರೆ ಯಾವ ಜನ ಕಳೆದ ಚುನಾವಣೆಯಲ್ಲಿ ತೀರ್ಪು ಕೊಟ್ಟಿದ್ದರೋ ಅದು ಸಂಪೂರ್ಣವಾಗಿ ಸರಿಯೆಂದು ಕಾಣುತ್ತದೆ. ನಮ್ಮ ವಿರೋಧ ಪಕ್ಷದ ಸದಸ್ಯರು ಚುನಾವಣೆಗೆ ಹೋದಾಗ ಇದು ನಮ್ಮ ಫರ್‌ಫಾರ್ಮೆನ್ಸ್ ಎಂದು ಹೇಳಿದರು. ಇದರ ಆಧಾರದ ಮೇಲೆ ಮತ ಸಿಗುತ್ತದೆ. ನಮ್ಮ ಫರ್‌ಫಾರ್‌ಮೆನ್ಸ್ ಬಹಳ ಚೆನ್ನಾಗಿದೆಯೆಂದು ಹೇಳಿದರು. ಪ್ರಜಾಪ್ರಭುತ್ವದಲ್ಲಿ ಜನರ ಎದುರು ಹೋಗಬೇಕಾಗುತ್ತದೆ. ಆದರ ಪ್ರಕಾರ ಅವರು ಜನರ ಮುಂದೆ ಹೋದರು. ಅವರಿಗೂ ಸಹ ಗೊತ್ತಿತ್ತು. ಯಾರು ಕಷ್ಟ ಕೊಟ್ಟವರು ಎಂದು. ಪ್ಲಾನ್ ಕಟ್ ಮಾಡಿ ಜನರಿಗೆ ತೊಂದರೆ ಉಂಟು ಮಾಡಿದವರು ಯಾರು ಎಂದು ಜನರಿಗೆ ಗೊತ್ತಿತ್ತು. ಅದೇ ರೀತಿ ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ ಹೆಚ್ಚಾಗಿ ಜನರಿಗೆ ತೊಂದರೆಯಾಗಿದ್ದು ಸಹ ಜನರಿಗೆ ತಿಳಿದಿತ್ತು, ಹೀಗೆ ರಾಜ್ಯದ ಅಭಿವೃದ್ಧಿ ಆಗಲಿಲ್ಲ ಎಂದು ಜನ ತಿಳಿದರೂ ಇವರು ಮಾತ್ರ ತಾವು ಬಹಳಷ್ಟು ಸಾಧಿಸಿದ್ದೇವೆಂದು ಹೇಳಿಕೊಂಡರೂ ಸಹ ಅದು ರಾಜ್ಯದ ಜನರಿಗೆ ಮುಟ್ಟಲಿಲ್ಲ, ಜನ ತಮ್ಮ ತೀರ್ಪು ಕೊಟ್ಟರು. ಈಗ ಒಂದು ರಾಜಕೀಯ ಬದಲಾವಣೆ ನಮ್ಮ ಕರ್ನಾಟಕ ರಾಜ್ಯಕ್ಕೆ ಬಂದಿದೆ.

ಅದಕ್ಕಾಗಿ ಈ ಒಂದು ನಮ್ಮ ಸರ್ಕಾರ ನಾವು ಹೆಚ್ಚು ಹೆಚ್ಚು ಹಣವನ್ನು ಪ್ಲಾನ್‌ಗೆ ಖರ್ಚು ಮಾಡಿ ಅನ್-ಪ್ರೊಡಕ್ಟೀವ್ ಎಕ್ಸ್‌ಪೆಂಡಿಚರ್ ಯಾವುದು ಇತ್ತೋ, ಕಳೆದ ಸರ್ಕಾರ ಬಹಳಷ್ಟು ಅನ್-ಪ್ರೊಡಕ್ಟೀವ್ ಎಕ್ಸ್‌ಪೆಂಡಿಚರನ್ನು ಹೆಚ್ಚು ಮಾಡುತ್ತಾ ಹೋಯಿತು. ನಾನು ಅಂಕಿಅಂಶಗಳನ್ನು ಕೊಡಲಿಕ್ಕೆ ಬಯಸುವುದಿಲ್ಲ. ಏಕೆಂದರೆ ಅದೆಲ್ಲಾ ಕೊಡುತ್ತಾ ಹೋದರೆ ವೇಳೆ ಹೆಚ್ಚಾಗಬಹುದು. ಅಂತೂ ಈಗ ನಾವು ಅನ್-ಪ್ರೊಡಕ್ಟೀವ್ ಎಕ್ಸ್‌ಪೆಂಡಿಚರ್ ಕಡಿಮೆ ಮಾಡಿ ಅದಕ್ಕೆ ಪಾಪ್ಯುಲಿಸ್ಟ್ ಪ್ರೋಗ್ರಾಮ್ ಎಂದು ಯಾವುದು ಇದೆ, ಅದನ್ನು ಮಾಡಿಬಿಟ್ಟರೆ ಬಡತನ ಏನೂ ಹೋಗಲಿಕ್ಕೆ ಸಾಧ್ಯವಾಗುವುದಿಲ್ಲ. ಒಂದು ಧೋತಿ ಕೊಟ್ಟು. ಒಂದು ಸೀರೆಯನ್ನು ಕೊಡುವುದರಿಂದ ಅದು ಜನರಿಗೆ ಇನ್‌ಸಲ್ಟ್ ಮಾಡಿದ ಹಾಗೆ ಆಗುತ್ತದೆ ಅವರಿಗೆ ಏನು ಬೇಕಾಗಿದೆ, ರೈತರಿಗೆ ಏನು ಬೇಕಾಗಿದೆ, ನಾನು ಕೂಡಾ ಕೇಳುತ್ತೇನೆ, ರೈತರ ಸಾಲವನ್ನು ಮನ್ನಾ ಮಾಡಬೇಕು ಎಂದು. ಹತ್ತು ಸಾವಿರ ರೂಪಾಯಿಯ ಮಿತಿಯನ್ನು ಇಟ್ಟುಕೊಂಡು ಮನ್ನಾ ಮಾಡಿ. ಇಲ್ಲಿ ಸಾಲದ ಮನ್ನಾಕ್ಕಿಂತಲೂ ಮತ್ತೆ ನಮ್ಮ ರೈತರ ಅಭಿವೃದ್ಧಿಗೆ ಸಾಲ ಸಿಗುವ ಹಾಗೆ ವ್ಯವಸ್ಥೆ ಮಾಡಬೇಕು ಬರೀ ಸಾಲ ಮನ್ನಾ ಮಾಡಿದರೂ ಸಾಲದು. ಸಾಲದ ಮನ್ನಾದ ಜೊತೆಯಲ್ಲಿ ಮತ್ತೆ ಸಾಲ ಸಿಗುವ ಹಾಗೆ ಮಾಡಬೇಕು. ನಾವೆಲ್ಲರೂ ಜನರಿಂದ ಆರಿಸಿ ಬಂದಿದ್ದೇವೆ. ನಾವೆಲ್ಲರೂ ರೈತರೇ ಮತ್ತು ರೈತರ ಮಕ್ಕಳೇ ಆಗಿದ್ದೇವೆ. ಆದ್ದರಿಂದ ರೈತರ ಸಾಲವನ್ನು ಮನ್ನಾ ಮಾಡುವಾಗ ರೈತರ ಅಭಿವೃದ್ಧಿಗೆ ಸಾಲ ಸಿಗುವ ಹಾಗೆ ಮಾಡಬೇಕು. ಎರಡನೆಯದಾಗಿ ಅವರಿಗೆ ಸರಿಯಾಗಿ ವಿದ್ಯುಚ್ಛಕ್ತಿ ಸಿಗುತ್ತಿಲ್ಲ. ನಮ್ಮ ಅಭಿವೃದ್ಧಿ ಕುಂದಿ

ಹೋಗುವುದರಿಂದ ವಿದ್ಯುಚ್ಛಕ್ತಿ ಕುಂದಿ ಹೋಗುತ್ತಿದೆ, ನೀರಾವರಿ ಕಾರ್ಯವಾಗಿಲ್ಲ, ನೀರಾವರಿ ಸಿಕ್ಕಿಲ್ಲ. ರೈತರಿಗೆ ನೀರು ಸಿಕ್ಕಿದರೆ ಸಾಕು, ಅದಕ್ಕಿಂತಲೂ ಹೆಚ್ಚಿಗೆ ಏನೂ ಅವರಿಗೆ ಬೇಡ. ಅವರಿಗೆ ಸಾಲ ಕೂಡಾ ಬೇಡ. ಅವರ ಸಾಲವನ್ನು ತೀರಿಸಬೇಕಾದರೆ ಅವರಿಗೆ ನೀರು ಬೇಕು, ನೀರು ಬೆಳೆಗೆ ಚೆನ್ನಾಗಿ ಆಗಬೇಕು ನೀರು ಬೇಕು, ವಿದ್ಯುಚ್ಛಕ್ತಿ ಬೇಕು, ಅವರಿಗೆ ಗೊಬ್ಬರ ಬೇಕು. ರಾಸಾಯನಿಕ ಗೊಬ್ಬರ ಬೇಕು, ಅಮೋನಿಯಂ ಸಲ್ಫೇಟ್, ಪಾಸ್ಫೇಟ್ ಅದೆಲ್ಲಾ ಬೇಕು ಮತ್ತು ಅವರಿಗೆ ಒಳ್ಳೆಯ ಸೀಡ್ಸ್ ಬೇಕು, ಅದನ್ನು ದೊರಕಿಸಬೇಕು ಅದನ್ನೆಲ್ಲಾ ಮಾಡಿದರೆ ರೈತರ ಪರಿಸ್ಥಿತಿ ಉತ್ತಮವಾಗಲಿಕ್ಕೆ ಸಾಧ್ಯ ಇದೆ ಅದಕ್ಕಾಗಿ ಈ ಒಂದು ಬಜೆಟ್‌ನಲ್ಲಿ ಬಹಳ ದೊಡ್ಡ ಒಂದು ಮೊತ್ತವನ್ನು ಅವರು ಇರಿಗೇಷನ್ ಮತ್ತು ಪವರ್‌ಗೆ ಕೊಟ್ಟಿದ್ದಾರೆ. ಎಷ್ಟು ಹಣವನ್ನು ಕೊಟ್ಟಿದ್ದಾರೆಂದರೆ ೪೮೮.೩೩ ಕೋಟಿ ರೂಪಾಯಿಗಳು. ಇದೂ ಸಹಾ ಒಂದು ರೀತಿಯ ಬದಲಾವಣೆ. ಇದರಿಂದ ರೈತರಿಗೆ ಲಾಭದಾಯಕ ವಾಗುವುದು. ಅವರಿಗೆ ಎಲೆಕ್ಟ್ರಿಸಿಟಿ, ನೀರು ಬಂದುಬಿಟ್ಟರೆ ಅದರಿಂದಲೇ ರೈತರ ಆರ್ಥಿಕ ಪರಿಸ್ಥಿತಿ ಉತ್ತಮವಾಗಲಿಕ್ಕೆ ಸಾಧ್ಯವಾಗುತ್ತದೆ. ಈ ಬಜೆಟ್‌ನಲ್ಲಿ ಕಳೆದ ಸರ್ಕಾರ ಯಾವ ರೀತಿಯಲ್ಲಿ ಅನ್‌–ಪ್ರೊಡಕ್ಟೀವ್‌ಗೆ ಹಣ ಖರ್ಚು ಮಾಡಿ ಅಭಿವೃದ್ಧಿ ಕುಂದುತ್ತಾ ಹೋಯಿತೋ, ಅದೇ ರೀತಿಯಲ್ಲಿ ಅವರದ್ದು ಡೆಫಿಸಿಟ್ ಕೂಡಾ ಬಹಳ ಇತ್ತು. ಹೆಚ್ಚಾಗಿ ಡೆಫಿಸಿಟ್ ಫೈನಾನ್ಸ್ ಮಾಡುತ್ತಾ ಹೋದರೆ ಬೆಲೆ ಕೂಡಾ ಏರುತ್ತಾ ಹೋಗುತ್ತದೆ. ಕಳೆದ ವರ್ಷದ ಡೆಫಿಸಿಟ್ ನೋಡಿದಾಗಲೇ ಕ್ಲೋಸಿಂಗ್ ಬ್ಯಾಲೆನ್ಸ್ ನೋಡಿದರೆ ಅದು ೧೯೮೯–೯೦ರಲ್ಲಿ ೧೬೭.೮೩ ಕೋಟಿ ರೂಪಾಯಿ ಇದೆ. ಒಂದು ಕಡೆ ಪ್ಲಾನ್ ಕಟ್ ಮಾಡುತ್ತಾ ಹೋದರು. ಇನ್ನೊಂದು ಕಡೆಯಲ್ಲಿ ನಾನ್ ಪ್ಲಾನ್ ಎಕ್ಸ್‌ಪೆಂಡಿಚರನ್ನು ಹೆಚ್ಚು ಮಾಡುತ್ತಾ ಹೋದರು, ಇನ್ನೊಂದು ಕಡೆಯಲ್ಲಿ ಡೆಫಿಸಿಟ್ ಮಾಡುತ್ತಾ ಹೋದರು. ಮೂರನೆಯ ಕಡೆ ಓವರ್–ಡ್ರಾಫ್ಟ್‌ನಲ್ಲಿಯೇ ಸರ್ಕಾರವನ್ನು ನಡೆಸಿದರು, ನಾನು ಸಹ ಅರ್ಥಮಂತ್ರಿಯಾಗಿದ್ದೆ. ಒಂದು ದಿವಸ ಸಹಾ ಓವರ್–ಡ್ರಾಫ್ಟ್ ಆಗದ ಹಾಗೆ ನಾವು ಫೈನಾನ್ಷಿಯಲ್ ಡಿಸಿಪ್ಲಿನ್ ಇಟ್ಟಿದ್ದೆವು ಫೈನಾನ್ಸ್ ಡಿಸಿಪ್ಲಿನ್ ಇಲ್ಲದೇ ಇದ್ದರೆ ರಾಜ್ಯ ಅಭಿವೃದ್ಧಿ ಯಾಗುವುದಕ್ಕೆ ಸಾಧ್ಯ ಇಲ್ಲ. ಒಂದು ದಿವಸ ಕೂಡಾ ಓವರ್–ಡ್ರಾಫ್ಟ್ ಆಗದ ಹಾಗೆ ನಾವು ನೋಡಿಕೊಂಡಿದ್ದೆವು. ಆದರೆ ಇವರು ಪ್ರತಿಯೊಂದು ದಿವಸವೂ ಓವರ್–ಡ್ರಾಫ್ಟ್ ಪಡೆದರೂ ಅದೂ ಸಹ ಅಡ್ವಾನ್ಸ್ ಬಿಟ್ಟು ತೆಗೆದುಕೊಂಡಿದ್ದಾರೆ. ಕೇಂದ್ರ ಸರ್ಕಾರದಲ್ಲಿ ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಎಂದು ಯಾವುದನ್ನು ಹೇಳುತ್ತಾರೋ ಅದರ ಮಿತಿ ಬಿಟ್ಟು ಪ್ರತಿಯೊಂದು ದಿವಸವೂ ಕೋಟ್ಯಾಂತರ ರೂಪಾಯಿಯ ಓವರ್–ಡ್ರಾಫ್ಟ್ ಪಡೆದಿದ್ದಾರೆ. ಇದರಿಂದ ಕರ್ನಾಟಕ ಏನೂ ಅಭಿವೃದ್ಧಿ ಆಗುವುದಕ್ಕೆ ಸಾಧ್ಯವೇ ಆಗಲಿಲ್ಲ. ಅದೇ ರೀತಿಯಲ್ಲಿ ಸರ್ಕಾರಿ ನೌಕರರ ವೇತನ ಸಹ ಅದೇ ರೀತಿ ಹೆಚ್ಚಾಯಿತು. ಕರ್ನಾಟಕದಲ್ಲಿ ೪.೪೫ ಲಕ್ಷ ಎಂಪ್ಲಾಯೀಸ್ ಇದ್ದಾರೆ. ಅವನ್ನು ವಿಚಾರ ಮಾಡಿದರೆ ನಾಲ್ಕು ಕೋಟಿ ಕನ್ನಡಿಗರ ಈ ಒಂದು ಸಂಸಾರದಲ್ಲಿ ೪ ಲಕ್ಷಕ್ಕಿಂತಲೂ ಹೆಚ್ಚು ಗವರ್ನಮೆಂಟ್ ಎಂಪ್ಲಾಯೀಸ್ ಇದ್ದಾರೆ. ಅವರು ಎಷ್ಟು ಭಾಗ ತೆಗೆದುಕೊಳ್ಳುತ್ತಾರೆಂದರೆ ನಾಲ್ಕು ಕೋಟಿ ಜನಸಂಖ್ಯೆ ಒಂದು ಕಡೆ, ಇನ್ನೊಂದು ಕಡೆ ೪ ಲಕ್ಷ ೫೦ ಸಾವಿರ ಅಥವಾ ೬೦ ಸಾವಿರ ನೌಕರರು ಈ ಬಜೆಟ್‌ನ ಶೇಕಡಾ ೫೦ ಕ್ಕಿಂತಲೂ ಹೆಚ್ಚು ಭಾಗ ಇವರಿಗೇ ಹೋಗುತ್ತದೆ, ೧೯೮೩–೮೪ರ ವಿಷಯ ಹೇಳುತ್ತಿದ್ದೇನೆ, ಇದು ಸ್ವಲ್ಪ ಹಳೆಯದು. ೧೯೮೩–೮೪ರಲ್ಲಿ ವೇತನಕ್ಕಾಗಿ ೪೭೪.೫೭ ಕೋಟಿ ರೂಪಾಯಿ ವೆಚ್ಚವಾಗಿದೆ. ೧೯೮೪–೮೫ರಲ್ಲಿ ೪೮೫.೯೧ ಕೋಟಿ ರೂಪಾಯಿಗಳು ವೆಚ್ಚವಾಗಿದೆ ೧೯೮೮–೮೯ರಲ್ಲಿ ೧೨೪೩.೫೧ ಕೋಟಿ ರೂಪಾಯಿಗಳು ವೆಚ್ಚವಾಗಿದೆ. ೧೯೮೯–೯೦ರಲ್ಲಿ ೧೫೫೧ ಕೋಟಿ ರೂಪಾಯಿಗಳು. ಇದಕ್ಕೆ ಇನ್ನೂ ಎಷ್ಟು ಸೇರಿಸಬೇಕೆಂದರೆ ೨೩೦ ಕೋಟಿ ರೂಪಾಯಿ ಪೆನ್‌ಷನ್ ಸೇರಿಸಬೇಕು. ಗ್ರಾಂಟ್–ಇನ್–ಏಡ್ ಟೀಚರ್ಸ್ ಸಂಬಳ ಸೇರಿಸಬೇಕು. ಇದು ೨೫೦ ಕೋಟಿ ರೂಪಾಯಿಗಳಾಗುತ್ತದೆ. ಇದನ್ನೂ ಸಹ ಸೇರಿಸಬೇಕು. ಇದೆಲ್ಲವನ್ನು ಸೇರಿಸಿದರೆ ಶೇಕಡಾ ೫೦ ಕ್ಕಿಂತಲೂ ಹೆಚ್ಚಿನ ಪರ್ಸೆಂಟ್ ಹಣ ಸರ್ಕಾರಿ ನೌಕರರುಗಳಿಗೆ ಹೋಗುತ್ತದೆ. ಸರ್ಕಾರಿ ನೌಕರರಿಗೆ ಹೋಗಬೇಕು. ಸರ್ಕಾರಿ ಯಂತ್ರ ಬೇಕು. ಸರ್ಕಾರಿ ಯಂತ್ರ ಇಲ್ಲದೆ ಕೆಲಸ ಮಾಡುವುದಕ್ಕೆ ಸಾಧ್ಯ ಇಲ್ಲ ಆದರೆ ಎಫಿಷಿಯೆಂಟ್ ಆಗಿ ಕೆಲಸ ಮಾಡುವುದಕ್ಕೆ ಸಾಧ್ಯ ಇದೆ. ಆದಕ್ಕಾಗಿ ಗವರ್ನರ್ಸ್ ಅಡ್ರೆಸ್‌ನಲ್ಲಿ ನಮ್ಮ ಸರ್ಕಾರದ ಆಡಳಿತ ಯಂತ್ರ ಉತ್ತಮಗೊಳ್ಳುತ್ತದೆ ಎಂದು ಹೇಳುತ್ತಾರೆ. ಯಾವ ರೀತಿ ಅದು ಉತ್ತಮಗೊಳ್ಳುತ್ತದೆ ಎಂದು ನೋಡಬೇಕು. ಕರಪ್‌ಷನ್ ಬಹಳಷ್ಟು ಇದೆ. ಅದನ್ನು ತೆಗೆಯ ಬೇಕು. ಇಲ್ಲದಿದ್ದರೆ ಬ್ಯೂರೋಕ್ರಸಿಯಲ್ಲಿ ಅವರನ್ನು ಯಾರೂ ಅಲ್ಲಾಡಿಸುವುದಕ್ಕೆ ಆಗುವುದಿಲ್ಲ. ಅವರ ಹತ್ತಿರ ಪವರ್ ಇದೆ, ದುಡ್ಡು ಇದೆ, ಅವರನ್ನು ಯಾರೂ ಅಲ್ಲಾಡಿಸುವುದಕ್ಕೆ ಸಾಧ್ಯ ಇಲ್ಲ ಎಂದು ಬಿಟ್ಟರೆ ನಾವು ಯಾವ ಕಾರ್ಯವನ್ನೂ ಮಾಡುವುದಕ್ಕೆ ಸಾಧ್ಯ ಆಗುವುದಿಲ್ಲ. ಬಹಳಷ್ಟು ಒಳ್ಳೆಯ ಅಫಿಷಿಯಲ್ಸ್ ಇದ್ದಾರೆ ಅಂತಹವರ ಎಫಿಷಿಯೆನ್ಸಿ ಕಡಿಮೆ ಆಗುತ್ತಿದೆ, ಕರಪ್‌ಷನ್ ಹೆಚ್ಚು ಆಗುತ್ತಿದೆ

ಎಂದು ಹೇಳುತ್ತಾರೆ. ಸರ್ಕಾರಿ ಯಂತ್ರವನ್ನು ಉತ್ತಮಗೊಳಿಸಬೇಕಾಗಿದೆ. ಏಕೆಂದರೆ ಕರ್ನಾಟಕದ ಕೀರ್ತಿಯನ್ನು ಆರ್ಥಿಕ ವಲಯದಲ್ಲಿ ಹೆಚ್ಚು ಮಾಡಬೇಕು. ಆಗ ಮಾತ್ರ ಕರ್ನಾಟಕದ ಕೀರ್ತಿ ದೇಶದಲ್ಲಿ ಹೆಚ್ಚು ಆಗುತ್ತದೆ. ಕರ್ನಾಟಕದ ಕೀರ್ತಿ ಹೆಚ್ಚಾಗಬೇಕಾದರೆ ನಮ್ಮ ಜನರು ಅದರಲ್ಲೂ ಹರಿಜನ ಗಿರಿಜನರು ಉದ್ಧಾರವಾಗಬೇಕು ಸ್ಲಮ್‌ಗಳಲ್ಲಿರತಕ್ಕ ಲಕ್ಷಾಂತರ ಜನರು ಉದ್ಧಾರವಾಗಬೇಕು. ಯಾರೂ ಅಲ್ಪಸಂಖ್ಯಾತರು ಎಂದು ಏನಿದ್ದಾರೆ, ಅವರು ಆರ್ಥಿಕವಾಗಿ ಉದ್ಧಾರವಾಗಬೇಕು. ಅದಕ್ಕಾಗಿ ನಾವು ಒಂದು ಸರಿಯಾದ ಪ್ಲಾನ್ ಮಾಡಿಕೊಂಡು ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವಂತಹ ಕಾರ್ಯನೀತಿಯನ್ನು ಮಾಡಬೇಕಾಗಿದೆ. ಈ ರೀತಿ ಮಾಡಿದರೆ ಮಾತ್ರ ಕರ್ನಾಟಕದ ಅಭಿವೃದ್ಧಿ ಆಗಲಿಕ್ಕೆ ಸಾಧ್ಯವಾಗುತ್ತದೆ. ಈ ಬಜೆಟ್‌ನಲ್ಲಿ ಕಾವೇರಿ ನೀರು ಬೆಂಗಳೂರಿಗೆ ತರುವಂತಹ ಒಂದು ವಿಚಾರವನ್ನು ಸಹ ಹೇಳಿದ್ದಾರೆ. ೧೯೯೧ರಲ್ಲಿ ಕಾವೇರಿ ಥರ್ಡ್ ಸ್ಟೇಜ್ ಮುಗಿಸುತ್ತೇವೆ ಎಂದು ಹೇಳಿದ್ದಾರೆ. ಕಾವೇರಿ ಥರ್ಡ್ ಸ್ಟೇಜ್ ಅಂದರೆ ಇದರಲ್ಲಿ ಟೋಟಲ್ ಔಟ್–ಲೇ ಯಾವುದು ಇದೆ. ಈ ಟೋಟಲ್ ಔಟ್-ಲೇ ಇರುವುದು ೨೪೦ ಕೋಟಿ ರೂಪಾಯಿಗಳು. ಈ ಬಜೆಟ್‌ನಲ್ಲಿ ಇದಕ್ಕಾಗಿ ೮ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಮತ್ತೆ ಇದನ್ನು ೧೯೯೧ರಲ್ಲಿ ಇದನ್ನು ಮುಗಿಸುತ್ತೇವೆಂದು ಸಹ ಹೇಳಿದ್ದಾರೆ.

ಈವರೆಗೆ ೧೦೦ ಕೋಟಿ ರೂಪಾಯಿ ಖರ್ಚಾಗಿದೆ. ಕಾವೇರಿ ಮೂರನೇ ಸ್ಟೇಜಿನ ಪ್ರಕಾರ ಎಷ್ಟು ನೀರು ಸಿಗುತ್ತದೆ ಎಂದು ಹೇಳಿದರೆ ೨೭೦ ಮಿಲಿಯನ್ ಲೀಟರ್ಸ್. ಈಗ ಬೆಂಗಳೂರಿನ ಜನಸಂಖ್ಯೆ ೪೦ ಲಕ್ಷಕ್ಕಿಂತ ಹೆಚ್ಚಾಗಿದೆ. ಯಾವ ಬಡಾವಣೆಗೆ ಹೋದರೂ ಎಲ್ಲಿ ಹೋದರೂ ನೀರಿನ ಕೊರತೆ ಇದೆ, ನೀರಿಗೆ ಬಹಳಷ್ಟು ತೊಂದರೆಯಿದೆ. ಇದರಲ್ಲಿ ಹೇಳಿದ ಹಾಗೆ ೧೦೦ ಕೋಟಿ ರೂಪಾಯಿ ಖರ್ಚಾಗಿದೆ. ಹುಡ್ಕೋದಿಂದ ೩೦ ಕೋಟಿ ರೂಪಾಯಿ ಬರುತ್ತದೆ. ಸರ್ಕಾರದ ಆರ್ಡರ್ ಬೇಕಾಗಿದೆ. ಹುಡ್ಕೋದವರು ೩೦ ಕೋಟಿ ರೂಪಾಯಿಗಳನ್ನು ಕಾವೇರಿ ೩ನೇ ಸ್ಟೇಜಿಗೆ ಕೊಡುತ್ತೇವೆಂದು ಒಪ್ಪಿದ್ದಾರೆ ಈ ೩೦ ಕೋಟಿಗೆ ಸರ್ಕಾರ ಒಂದು ಆದೇಶ ಹೊರಡಿಸಬೇಕಾಗಿದೆ, ಅದನ್ನು ಬೇಗನೆ ಹೊರಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ, ಲೈಫ್ ಇನ್‌ಶ್ಯೂರೆನ್ಸ್, ಡಿಫೆನ್ಸ್, ಬಿ.ಡಿ.ಎ., ಕಾರ್ಪೊರೇಷನ್ ಹೀಗೆ ಎಲ್ಲರೂ ಒಟ್ಟಿಗೆ ಸೇರಿ ಈ ಸ್ಕೀಮನ್ನು ಮುಗಿಸಬೇಕಾಗಿದೆ. ಇದನ್ನು ಮುಗಿಸಿದ ಹಾಗೆಯೇ ಜನರಿಗೆ ನೀರು ಸಿಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಪುನ: ಜನಸಂಖ್ಯೆ ಹೆಚ್ಚು ಹೆಚ್ಚು ಆಗುತ್ತಾ ಇರುತ್ತದೆ, ಅಂತೂ ಈ ಸ್ಕೀಂ ಮುಗಿಯುತ್ತದೆ. ದೊಡ್ಡ ದೊಡ್ಡ ಇಂಡಸ್ಟ್ರೀಗಳಿಗೆ ಅದಷ್ಟೂ ನೀರನ್ನು ಕೊಡಬಾರದು. ಅವರಿಗೆ ನೀರನ್ನು ಕೊಟ್ಟರೆ ಜನರಿಗೆ ನೀರು ಸಿಗುವುದಿಲ್ಲ. ಅದಕ್ಕಾಗಿ ಕಾವೇರಿ ೩ನೇ ಸ್ಟೇಜನ್ನು ೧೯೯೧ರಲ್ಲಿ ಮುಗಿಸಬೇಕು, ಮುಗಿಸಿ ನಾಲ್ಕನೇ ಸ್ಟೇಜಿಗೆ ನಾವು ಹೋಗಬೇಕಾಗಿದೆ. ಕಾವೇರಿ ನಾಲ್ಕನೇ ಸ್ಟೇಜಿಗೆ ಹೋಗಲಿಲ್ಲ ಅಂದರೆ ಖಂಡಿತವಾಗಿ ಪುನ: ಬೆಂಗಳೂರಿಗೆ ಒಂದು ರೀತಿ ಬರಗಾಲ ಬಂದ ಹಾಗೆ ಆಗುತ್ತದೆ. ಈಗ ಬೆಂಗಳೂರಿನಲ್ಲಿ ೪೦ ಲಕ್ಷ ಜನರಿದ್ದಾರೆ. ಅದು ಇನ್ನೂ ಹೆಚ್ಚಾಗಬಹುದು. ಅದಕ್ಕಾಗಿ ನಾಲ್ಕನೇ ಸ್ಟೇಜ್ ಯಾವುದು ಇದೆ, ಅದು ಸಾವಿರ ಕೋಟಿ ರೂಪಾಯಿ ಪ್ಲಾನ್. ಅದನ್ನು ವರ್ಲ್ಡ್ ಬ್ಯಾಂಕ್ ನೆರವಿನಿಂದಲೇ ಮಾಡುವುದಕ್ಕೆ ಸಾಧ್ಯವಿದೆ. ಈಗಲೇ ಅದನ್ನು ಆರಂಭಿಸಬೇಕು. ಈಗಲೇ ಆರಂಭಿಸಿದರೆ ಮೂರನೇ ಸ್ಟೇಜ್ ಆದಮೇಲೆ ಕಾವೇರಿ ನಾಲ್ಕನೇ ಸ್ಟೇಜ್ ಕೆಲಸ ಪ್ರಾರಂಭ ಮಾಡಲಿಕ್ಕೆ ಸಾಧ್ಯವಿದೆ. ಈಗ ಜನರಿಗೆ ನೀರು ಬೇಕು, ಅದರಲ್ಲೂ ಕುಡಿಯುವ ನೀರು ಬಹಳ ಅಗತ್ಯ. ಇಡೀ ಕರ್ನಾಟಕದಲ್ಲಿರುವ ಜನರ ಪೈಕಿ ಹತ್ತು ಪರ್ಸೆಂಟ್ ಜನ ಬೆಂಗಳೂರಿನಲ್ಲೇ ಇದ್ದಾರೆ. ಅವರಲ್ಲಿಯೂ ಹೆಚ್ಚು ಜನ ಪಟ್ಟಣಗಳಲ್ಲಿರುವ ಸ್ಲಮ್‌ನಲ್ಲಿದ್ದಾರೆ. ಅದಕ್ಕಾಗಿ ನೀರು ಬಹಳ ಅಗತ್ಯ. ಆದುದರಿಂದ ನಾಲ್ಕನೇ ಸ್ಟೇಜನ್ನು ಆರಂಭಮಾಡುವ ಎಲ್ಲಾ ಪ್ರಯತ್ನಗಳನ್ನು ನಮ್ಮ ಸರ್ಕಾರ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಅದೇ ರೀತಿ ನಮ್ಮ ಹೈದರಾಬಾದ್ ಕರ್ನಾಟಕಕ್ಕೆ ೪೦ ಕೋಟಿ ಸ್ಪೆಷಲ್ ಗ್ರಾಂಟ್ ಎಂದು ಕೊಟ್ಟಿದ್ದಾರೆ. ಇದು ಬಹಳ ಒಳ್ಳೆಯದು. ಅದು ಇನ್ನೂ ಹೆಚ್ಚು ಆಗಬೇಕು. ಅದಗೆ ಈ ಮಲೆನಾಡಿನ ಜಿಲ್ಲೆಗಳೂ ಸಹ ಬಹಳಷ್ಟು ಹಿಂದುಳಿದಿವೆ. ಮಲೆನಾಡಿನಲ್ಲಿ ವಿಶೇಷವಾಗಿ ತೀವ್ರ ಸಮಸ್ಯೆಗಳಿವೆ. ಮನೆಗಳು ಬಹಳ ದೂರ ದೂರ ಇವೆ, ಮಲೆನಾಡು ಎಂಬುದು ಗುಡ್ಡ ಬೆಟ್ಟದ ಪ್ರದೇಶ. ಆದುದರಿಂದ ಮಲೆನಾಡಿನ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದವರು ವೆಸ್ಟರ್ನ್ ಘಾಟ್ ಸ್ಕೀಂ ಎಂದು ಜಾರಿಗೆ ತಂದರು. ಅದರ ಕೆಲಸ ಶ್ರೀಮತಿ ಇಂದಿರಾಗಾಂಧಿಯವರು ಇರುವಾಗ ಬಹಳಷ್ಟು ಚೆನ್ನಾಗಿ ನಡೆಯಿತು. ಅದು ಈಗ ಏನಾಯಿತು ಎಂದು ಇನ್ನೂ ನಮಗೆ ತಿಳಿದುಬರುತ್ತಾ ಇಲ್ಲ. ಅದಕ್ಕೋಸ್ಕರ ಯಾರು ಹಣ ಕೊಡುತ್ತಾರೆ ಅದಕ್ಕೆ ನಮ್ಮದೂ ಒಂದಷ್ಟು ಹಣ ಹಾಕಿ ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡಬೇಕಾಗಿದೆ. ಇದಕ್ಕೆ ಕೇಂದ್ರ ಸರ್ಕಾರವೇ ಬೇಕಾದಷ್ಟು ಗ್ರಾಂಟನ್ನು ಕೊಡುತ್ತಾ ಇದೆ. ಅದಕ್ಕೆ ನಾವೂ ಸಹ ಹಣ ಕೊಟ್ಟು ಸಮಗ್ರವಾದ ರೀತಿಯಲ್ಲಿ

ಮಲೆನಾಡಿನ ಪ್ರದೇಶದ ಅಭಿವೃದ್ಧಿ ಮಾಡಬೇಕು ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಅದೇ ರೀತಿ ನಮ್ಮಲ್ಲಿ ಈಗ ಎಷ್ಟು ಸ್ಲಂಗಳಿವೆ, ಆ ಸ್ಲಂಗಳಲ್ಲಿ ೧೦ ಲಕ್ಷಕ್ಕಿಂತಲೂ ಹೆಚ್ಚು ಜನರಿದ್ದಾರೆ. ಅವರಿಗೆ ಕೊಟ್ಟಿರತಕ್ಕ ಹಣ ಮೂರು ಕೋಟಿ ರೂಪಾಯಿಗಳು. ಸ್ಲಮ್ಮುಗಳಲ್ಲಿ ೧೦ ಲಕ್ಷಕ್ಕಿಂತ ಹೆಚ್ಚು ಜನ ಇದ್ದಾರೆ. ನಾನು ಮೊದಲು ಗ್ರಾಮೀಣ ಪ್ರದೇಶದಿಂದ ವಿಧಾನ ಸಭೆಗೆ ಆರಿಸಿ ಬರುತ್ತಿದ್ದೆ. ಬಡತನ ಹಳ್ಳಿ ಪಟ್ಟದಲ್ಲಿ ಜಾಸ್ತಿ ಇದೆ ಎಂದು ತಿಳಿದುಕೊಂಡಿದ್ದೆ. ನಾನು ಈ ಸಾರಿ ಬೆಂಗಳೂರಿನಿಂದ ಚುನಾವಣೆಗೆ ನಿಂತಿದ್ದರಿಂದ ನನ್ನ ಕ್ಷೇತ್ರದಲ್ಲಿರುವ ಸ್ಲಂಗಳಿಗೆ ಭೇಟಿ ಕೊಡುವಂಥ ಸಂದರ್ಭ ಬಂತು. ಈ ಸ್ಲಂಗಳಲ್ಲಿ ವಾಸ ಮಾಡುವವರು ಮಾನವರಾಗಿರುವುದಕ್ಕೆ ಸಾಧ್ಯವೇ ಇಲ್ಲ, ಅಂತಹ ಪರಿಸ್ಥಿತಿ ಇದೆ. ಅಲ್ಲಿ ನೀರು ಇಲ್ಲ. ವಸತಿ ಇಲ್ಲ, ಕಕ್ಕಸಿನ ಅನುಕೂಲತೆ ಇಲ್ಲ, ಇಂಥ ಒಂದು ಇಕ್ಕಟ್ಟಿನ ಜಾಗಗಳಲ್ಲಿ ಹೆಂಗಸರು ಮತ್ತು ಮಕ್ಕಳು ವಾಸವಾಗಿದ್ದಾರೆ. ಚುನಾವಣೆ ಕಾಲದಲ್ಲಿ ೩-೪ ಸಾರಿ ನಾನು ಅಲ್ಲಿಗೆ ಹೋಗಿದ್ದೆ. ಚುನಾವಣೆ ನಂತರವೂ ನನ್ನ ಕ್ಷೇತ್ರದಲ್ಲಿರುವ ಸ್ಲಂಗಳಿಗೆ ೪-೫ ಸಲ ಭೇಟಿ ಕೊಟ್ಟಿದ್ದೇನೆ. ಅಲ್ಲಿ ವಾಸ ಮಾಡುವವರನ್ನು ಮನುಷ್ಯರು ಎಂದು ಹೇಳುವುದಕ್ಕೆ ಅನುಮಾನ ಬರುತ್ತೆ. ನನ್ನ ಕ್ಷೇತ್ರದಲ್ಲಿ ಹಳೆ ಬಾಗಲೂರು ಲೇಔಟು ಮತ್ತು ಹೊಸ ಬಾಗಲೂರು ಲೇಔಟು ಎಂದು ಇದೆ. ಅಲ್ಲಿರತಕ್ಕ ಸ್ಲಂ ಇಡೀ ಏಷ್ಯಾದಲ್ಲಿಯೇ ದೊಡ್ಡದು ಎಂದು ಹೇಳುತ್ತಾರೆ. ಅಲ್ಲಿ ೨೫,೦೦೦ ಮತದಾರರಿದ್ದು, ೫೦,೦೦೦ ಜನ ವಾಸ್ತವ್ಯವಾಗಿದ್ದಾರೆ. ಅಲ್ಲಿ ರಸ್ತೆ ಇಲ್ಲ, ಡ್ರೈನೇಜ್ ಇಲ್ಲ. ಅದಕ್ಕಾಗಿ ಹಿಂದೆ ಹೆಚ್. ಯು. ಡಿ.ನವರು ಸ್ಲಂಗಳ ಅಭಿವೃದ್ಧಿಗಾಗಿ ೪೫೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿ ವರ್ಲ್ಡ್ ಬ್ಯಾಂಕಿನಿಂದ ನೆರವು ಪಡೆದು, ಸ್ಲಂಗಳ ಅಭಿವೃದ್ಧಿಗೆ ಪ್ರಯತ್ನ ಮಾಡಿದ್ದರು. ಆದರೆ ಹಿಂದಿನ ಸರ್ಕಾರದವರು ಅದನ್ನು ಮಾಡಲಿಲ್ಲ. ಈಗಿನ ನಮ್ಮ ಸರ್ಕಾರದವರು ಈ ಸ್ಲಂಗಳ ಅಭಿವೃದ್ಧಿಗೆ ಹೆಚ್ಚು ಗಮನ ಕೊಡಬೇಕು. ಯಾರು ಸ್ಲಂಗಳಿಗೆ ಹೋಗಿಲ್ಲ ಅವರು ಒಮ್ಮೆ ಅಲ್ಲಿಗೆ ಭೇಟಿ ನೀಡಿದರೆ ಅಲ್ಲಿನ ಪರಿಸ್ಥಿತಿ ಏನು ಎನ್ನುವುದು ಗೊತ್ತಾಗುತ್ತದೆ. ಸಾಮಾನ್ಯವಾಗಿ ಸ್ಲಂಗಳಲ್ಲಿ ಹರಿಜನ ಗಿರಿಜನರು ಹಾಗೂ ಮುಸ್ಲೀಮರು ಜಾಸ್ತಿ ಇದ್ದಾರೆ. ನನ್ನ ಕ್ಷೇತ್ರದಲ್ಲಿ ದೊಡ್ಡ ದೊಡ್ಡ ಬಡಾವಣೆಗಳಿದ್ದರೂ ಸಹ ಅವುಗಳ ಜೊತೆಗೆ ಸ್ಲಂಗಳೂ ಇವೆ. ಈಗ ಸರ್ಕಾರದವರು ಒದಗಿಸಿರುವ ಮೂರು ಕೋಟಿ ರೂಪಾಯಿಗಳಲ್ಲಿ ತಲಾ ೩೦ ರೂಪಾಯಿ ಬರುತ್ತೆ. ಆಯುವ್ಯಯ ಪತ್ರದಲ್ಲಿ ಸಾಮಾನ್ಯ ಮನುಷ್ಯನಿಗೆ ಅನುಕೂಲ ಮಾಡಿಕೊಡಲಾಗುವುದೆಂದು ಹೇಳಿದ್ದಾರೆ. ಹಾಗೆ ಮಾಡುವುದಾದರೆ, ಮೊದಲು ಸ್ಲಂನಲ್ಲಿರತಕ್ಕವರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ನಾನು ಸ್ಲಂಗಳ ಅಭಿವೃದ್ಧಿಗಾಗಿ ಕೆಲಸ ಮಾಡಬೇಕೆಂದು ಗಟ್ಟಿ ಮನಸ್ಸು ಮಾಡಿದ್ದೇನೆ. ಅವರಿಗೆ ಎಲ್ಲ ರೀತಿಯ ಸಿವಿಕ್ ಎಮಿನಿಟೀಸ್ ಅನ್ನು ಒದಗಿಸಿ ಕೊಡಬೇಕಾಗಿದೆ. ಅದಕ್ಕಾಗಿ ಸರ್ಕಾರದವರು ಕೂಡ ಸ್ಲಂ ಕ್ಲಿಯರೆನ್ಸ್‌ಗೆ ಟಾಪ್ ಪ್ರೈಯಾರಿಟಿ ಕೊಡಬೇಕೆಂದು ಹೇಳುತ್ತೇನೆ. ಹಣಕಾಸಿನ ಸಚಿವರು ಕೂಡ ಹೆಚ್ಚು ಹಣವನ್ನು ಒದಗಿಸಬೇಕು. ಸ್ಲಂಬೋರ್ಡ್ ಎಂದು ಮಾಡಿದ್ದಾರೆ. ಇಲ್ಲಿ ಕೆಲವು ಸ್ಲಂಗಳು ಬೆಂಗಳೂರು ಕಾರ್ಪೊರೇಷನ್‌ಗೆ ಸೇರಿದ್ದು ಎಂದು ಹೇಳುತ್ತಾರೆ. ಮತ್ತೆ ಕೆಲವು ಸ್ಲಂಗಳು ಸ್ಲಂ ಬೋರ್ಡಿಗೆ ಸೇರಿದ್ದು ಎಂದು ಹೇಳುತ್ತಾರೆ. ಹೀಗೆ ಇವರುಗಳಲ್ಲಿಯೇ ಹೊಂದಾಣಿಕೆ ಇಲ್ಲ. ಬಾಗಲೂರು ಸ್ಲಂ ಏನಿದೆ, ಅದು ಕಾರ್ಪೊರೇಷನ್‌ಗೆ ಸೇರಿದೆ. ನನ್ನ ಕ್ಷೇತ್ರದಲ್ಲಿ ಒಟ್ಟು ೭ ಸ್ಲಂಗಳು ಇದ್ದು, ಅದರಲ್ಲಿ ೬ ಸ್ಲಂಗಳು ಕಾರ್ಪೊರೇಷನ್‌ಗೆ ಸೇರಿದ್ದರೆ, ಒಂದು ಸ್ಲಂ ಮಾತ್ರ ಸ್ಲಂ ಬೋರ್ಡಿಗೆ ಸೇರಿದೆ. ಸ್ಲಂಗಳನ್ನು ಗೊತ್ತು ಮಾಡುವಾಗ ವೈಜ್ಞಾನಿಕವಾಗಿ ಗೊತ್ತು ಮಾಡಿಲ್ಲ. ಆರೋಗ್ಯ ಇಲಾಖೆ ಒಂದು ರೀತಿ ಇದೆ. ಮತ್ತು ಎಲೆಕ್ಟ್ರಿಸಿಟಿ ಒದಗಿಸಬೇಕಾದರೆ ಒಂದು ರೀತಿ ಇದೆ, ಇದೆಲ್ಲಾ ಹೋಗಿ ಬಹಳಷ್ಟು ಸುಧಾರಣೆ ಬೆಂಗಳೂರು ಕಾರ್ಪೊರೇಷನ್ ಆಡಳಿತದಲ್ಲಿ ಆಗಬೇಕಾಗಿದೆ. ಮುಖ್ಯವಾಗಿ ಈ ಸ್ಲಂಗಳ ಸುಧಾರಣೆಗೆ ಎಲ್ಲ ರೀತಿಯ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಅದೇ ರೀತಿಯಲ್ಲಿ ಈ ಬಜೆಟ್ ನೋಡಿ ನನಗೆ ಸಂತೋಷವಾಯಿತು. ಏಕೆಂದರೆ, ಕುಮಟಾ ನಗರಕ್ಕೆ ನೀರಿನ ವ್ಯವಸ್ಥೆ ಮಾಡಲಿಕ್ಕೆ ಹಣ ಕೊಟ್ಟಿದ್ದಾರೆ. ಈ ಕುಮುಟ ಮತ್ತು ಹೊನ್ನಾವರ್ ಟ್ವಿನ್ಸ್ ಸಿಟಿಗಳು ಇದ್ದಹಾಗೆ. ನಾನು ಹಿಂದೆ ಮಂತ್ರಿಯಾಗಿದ್ದಾಗ ಈ ಎರಡು ನಗರಗಳಿಗೂ ಸರಿಯಾಗಿ ಕೊಳವೆ ಬಾವಿಗಳನ್ನು ಹಾಕಿಸಿ ನ್ಯಾಯ ಒದಗಿಸಿಕೊಟ್ಟಿದ್ದೆ. ಅದೇ ರೀತಿ ತಾವು ಸಹ ಕುಮುಟ ಮತ್ತು ಹೊನ್ನಾವರಕ್ಕೆ ನೀರಿನ ಸೌಕರ್ಯ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ........

ಶ್ರೀ ಆರ್. ಎನ್. ನಾಯಕ್.—ಹಿಂದೆ ಕುಮುಟ ಹೊನ್ನಾವರ್ ಎಂದು ಕೊಟ್ಟಿದ್ದಾರೆ. ಯೋಜನೆ ಹಾಗೆಯೇ ಇದೆ. ಈಗ ಕುಮುಟ ಎಂದು ಏತಕ್ಕೆ ಮಾಡಿದ್ದಾರೋ ಗೊತ್ತಿಲ್ಲ. ತಾವು ಮೊದಲಿನ ಪ್ರಕಾರವೇ ಒತ್ತಡವನ್ನು ಕೊಡಬೇಕು.

ಶ್ರೀ ಎಸ್.ಎಂ. ಯಾಹ್ಯಾ.—ಈ ಎರಡೂ ಚಿಕ್ಕ, ಚಿಕ್ಕ ನಗರಗಳು. ಹೊನ್ನಾವರ ಅಂದರೆ ೧೮೫೭ರಲ್ಲಿ ಇಡೀ ಕೆನರಾಕ್ಕೆ ಅಂದರೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗೆ ಸೇರಿ ಹೆಡ್ ಕ್ವಾರ್ಟರ್ಸ್ ಆಗಿತ್ತು. ಅಂತಹ ಒಂದು ಪಟ್ಟಣಕ್ಕೆ ನೀರಿನ ವ್ಯವಸ್ಥೆ ಕೊಡಲಿಕ್ಕೆ ಸಾಧ್ಯವಾದರೆ ಒಂದು ಸ್ಕೀಮು ಹಾಕಿಕೊಡಬೇಕು. ಕುಮುಟ ಮತ್ತು ಹೊನ್ನಾವರ್ ಎರಡೂ ಪ್ರದೇಶಗಳಿಗೂ ನೀರಿನ ಸರಬರಾಜು ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇರೀತಿಯಲ್ಲಿ ಮಡಿಕೇರಿಯಲ್ಲಿ ೧೬೦ ಇಂಚಿಗಿಂತಲೂ ಮಳೆ ಬೀಳುತ್ತದೆ. ಆದರೆ ಜನವರಿ ನಂತರ ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ, ಏಕೆಂದರೆ ಅದು ಬಹಳ ಗುಡ್ಡ, ಬೆಟ್ಟ ಇರುವಂಥ ಊರು. ಅಲ್ಲಿ ಹೆಚ್ಚು ಹೆಚ್ಚು ರಿಸರ್‌ವಾಯರ್ ಮಾಡಿದರೆ ಮಾತ್ರ ನೀರು ಇರಲಿಕ್ಕೆ ಸಾಧ್ಯ ಇದೆ. ಅಲ್ಲಿ ನ್ಯಾಚುರಲ್ ಫ್ಲೋ ಇರುವುದರಿಂದ ಅಲ್ಲಿ ನೀರು ಇರಲಿಕ್ಕೆ ಸಾಧ್ಯವಾಗುವುದಿಲ್ಲ. ಆದಕ್ಕಾಗಿ ಒಂದು ವ್ಯವಸ್ಥೆ ಮಾಡ ಬೇಕೆಂದರೆ, ಅಲ್ಲಿಂದ ೧೮ ಕಿಲೋಮೀಟರ್ ದೂರದಲ್ಲಿ ಕಾವೇರಿ ನದಿ ದಾಟುತ್ತದೆ. ಆ ನದಿಯಿಂದ ಅವರಿಗೆ ನೀರನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಅದು ಬತ್ರಿ ಎನ್ನುವ ಸ್ಥಳದಲ್ಲಿ ಕಾವೇರಿ ನದಿ ದಾಟುತ್ತದೆ, ಅದು ೧೮ ಕಿಲೋಮೀಟರ್ ದೂರ ಇದೆ. ಅಲ್ಲಿಂದ ನೀರನ್ನು ಒದಗಿಸಿಕೊಡಬೇಕು. ಕಾವೇರಿ ಹುಟ್ಟುವುದು ಕೊಡಗಿನಲ್ಲಿ. ಆದ್ದರಿಂದ, ಕೊಡಗಿನವರಿಗೆ ಅದರಲ್ಲಿಯೂ ಮುಖ್ಯವಾಗಿ ಮಡಕೇರಿಯವರಿಗೆ ನೀರಿನ ಸೌಕರ್ಯ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ನಮ್ಮ ಕಾಫಿ ಬೆಳೆಗಾರರಿಗೆ ಈ ಸಾರಿ ಬಹಳ ತೊಂದರೆಯಾಗಿದೆ. ಇಡೀ ದೇಶದಲ್ಲಿ ೭೦ ಭಾಗಕ್ಕೂ ಹೆಚ್ಚು ಕಾಫಿ ನಮ್ಮ ಕೊಡಗು, ಹಾಸನ ಮತ್ತು ಚಿಕ್ಕಮಗಳೂರಿನಲ್ಲಿ ಆಗುತ್ತದೆ. ಬೇಕಾದಷ್ಟು ಚಿಕ್ಕ, ಚಿಕ್ಕ ಕಾಫಿ ಗ್ರೋಯರ್ಸ್ ಇದ್ದಾರೆ. ಸೆಕೆಂಡ್ ವರ್ಲ್ಡ್ ವಾರ್‌ನಲ್ಲಿ ಕಾಫಿ ಬೆಳೆಗೆ ಬೆಲೆ ಇಲ್ಲದೆ ಕಾಫಿಯನ್ನು ಕೊಯ್ಯದೆ ನಾಶವಾಗುತ್ತಿತ್ತು. ಪುನಃ ಇಂಟರ್‌ನ್ಯಾಷನಲ್ ಪ್ರೈಸ್ ಸಿಸ್ಟಂ ನೋಡಿದರೆ ಕಾಫಿ ಬೆಳೆಗೆ ಬೆಲೆ ಕುಂದುಹೋಗಿದೆ. ಈಗ ಸಹಾಯ ಮಾಡಲಿಕ್ಕೆ ೧೪–೧೫ ಪರ್ಸೆಂಟ್ ಟ್ಯಾಕ್ಸ್ ಏನು ತೆಗೆದುಕೊಳ್ಳುತ್ತಿದ್ದೀರಿ ಅದನ್ನು ಇಳಿಸಬೇಕು. ೭–೮ ಪರ್‌ಸೆಂಟ್‌ಗೆ ಕಡಿಮೆ ಮಾಡಿದರೆ ಉತ್ತಮ. ಇದು ಲೇಬರ್ ಓರಿಯಂಟೆಡ . ಲಕ್ಷಾಂತರ ಕೂಲಿಕಾರರು ಕೆಲಸ ಮಾಡುತ್ತಿದ್ದಾರೆ. ಬೆಲೆ ಕಡಿಮೆ ಆಯಿತು ಅಂದರೆ ಪ್ಲಾಂಟರ್ಸ್ ಈ ಕೆಲಸವನ್ನು ಕೈಬಿಡುತ್ತಾರೆ. ಅದಕ್ಕಾಗಿಯೇ ಕೇಂದ್ರ ಸರ್ಕಾರದವರು ಮೊನ್ನೆ ಬಡ್ಜೆಟ್‌ನಲ್ಲಿ ೭೮ ರಿಂದ ೧೦೪ ರವರೆಗೆ ಎಕ್ಸೈಜ್ ಡ್ಯೂಟಿ ಏನಿತ್ತು ಅದನ್ನು ಅವರು ೫೦ ರೂಪಾಯಿಗಳಿಗೆ ಇಳಿಸಿದ್ದಾರೆ. ಇವೊತ್ತು ನಮ್ಮಲ್ಲಿ ದೊಡ್ಡ ಕಾಫಿ ಗ್ರೋಯರ್ಸ್ ಏನು ಇದ್ದಾರೆ, ಅದೇರೀತಿ ಚಿಕ್ಕ ಚಿಕ್ಕ ಗ್ರೋಯರ್ಸ್ ಏನು ಇದ್ದಾರೆ. ಅವರಲ್ಲಿ ಲಕ್ಷಾಂತರ ಕೂಲಿಗಾರರು ಕೆಲಸ ಮಾಡುವವರು ಇದ್ದಾರೆ. ಅವರಿಗೆ ಸಹಾಯ ಮಾಡಲಿಕ್ಕೆ ಈ ಪರ್ಚೇಸ್ ಟ್ಯಾಕ್ಸ್ ಆದಷ್ಟು ಕಡಿಮೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಈ ಮಂಡಕ್ಕಿ ಅವರದು ಒಂದು ತೊಂದರೆ ಇದೆ. ಅವರಿಗೆ ಮೊದಲು ಟ್ಯಾಕ್ಸ್ ಇತ್ತು. ೧೯೮೫ರಲ್ಲಿ ಟ್ಯಾಕ್ಸ್ ತೆಗೆದುಹಾಕಲಾಯಿತು. ಈಗ ಬಹಳಷ್ಟು ಅರಿಯರ್ಸ್ ಉಳಿದಿದೆ. ಅವರು ಯಾರು ಯಾರು ಎಲ್ಲೆಲ್ಲಿ ಇದ್ದಾರೋ, ಅವರದು ೨–೩ ಲಕ್ಷ ರೂಪಾಯಿ ಅರಿಯರ್ಸ್ ಇದೆ. ಆ ಹಣವನ್ನು ಒನ್ಸ್ ಫಾರ್ ಆಲ್ ಅದನ್ನು ವೇವ್ ಮಾಡಬೇಕೆಂದು ಮಾನ್ಯ ಮಂತ್ರಿಗಳು ಕೇಳಿಕೊಳ್ಳುತ್ತೇನೆ.

೪–೩೦ ಪಿ.ಎಂ.

ಕಡೆಯದಾಗಿ ನಮ್ಮ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಒಂದು ಉರ್ದು ಚೇರ್ ಆಗಬೇಕೆಂದು ಹೇಳಿದ್ದೆವು. ಅದನ್ನು ಹೇಳಿ ಎರಡು ಮೂರು ವರ್ಷವಾಯಿತು ಅದು ಸರಕಾರದಲ್ಲಿ ಪೆಂಡಿಂಗ್ ಇದೆ. ಸೆನೆಟ್. ಸಿಂಡಿಕೇಟ್, ಯು ಜಿ ಸಿ , ಮತ್ತು ವೈಸ್ ಚಾನ್ಸಲರ್‌ರವರು ಹೀಗೆ ಎಲ್ಲರೂ ಕೂಡ ಒಪ್ಪಿದ್ದಾರೆ. ಈಗ ಅದು ವಿಧಾನಸೌಧಕ್ಕೆ ಬಂದು ಇಲ್ಲಿ ಪೆಂಡಿಂಗ್ ಇದೆ. ಅದು ಏಕೆ ಇಲ್ಲಿ ಬಿದ್ದಿದೆಯೋ ಗೊತ್ತಿಲ್ಲ. ಅದಕ್ಕೆ ಬಹಳ ಖರ್ಚಾಗುತ್ತದೆಯೋ ಏನೋ ಎಂದು ನಾನು ನೋಡಿದೆ. ಆದರೆ ಅದಕ್ಕೆ ಬೇಕಾದುದು ಒಬ್ಬರು ಪ್ರೊಫೆಸರ್, ಒಬ್ಬರು ರೀಡರ್. ಇದರಿಂದ ವರ್ಷಕ್ಕೆ ೩ ಲಕ್ಷಕ್ಕಿಂತ ಹೆಚ್ಚು ರೆಕರಿಂಗ್ ಎಕ್ಸ್‌ಪೆನ್ಸಸ್ ಬರುವುದಿಲ್ಲ, ಉರ್ದು ಎಂದರೆ ಇದೇ ನಮ್ಮ ದೇಶದ ಭಾಷೆಯಾಗಿದೆ. ದೇಶದ ಐಕ್ಯತೆಗಾಗಿ ಹರಡಿರುವಂತಹ ಒಂದು ವೆಪನ್ ಎಂದರೆ ಉರ್ದು ಭಾಷೆ. ಅದಕ್ಕೆ ಯಾವುದೇ ರಾಜ್ಯ ಇಲ್ಲ, ಎಲ್ಲಾ ರಾಜ್ಯದಲ್ಲಿ ಇದು ಇದೆ. ಎಲ್ಲಾ ರಾಜ್ಯದವರೂ ಕೂಡ ಇದಕ್ಕೆ ಎನ್‌ಕರೇಜ್ ಕೊಡಬೇಕು. ಈ ಭಾಷೆ ಬೆಳೆಯಲಿಕ್ಕೆ ಪ್ರತ್ಯೇಕವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಮಾನ್ಯ ಹಣಕಾಸಿನ ಸಚಿವರು ಉರ್ದು ಚೇರ್ ಸ್ಥಾಪನೆ ಮಾಡುತ್ತೇನೆ, ಆಯಿತು ಎಂದು ಅವರು ಬಡ್ಜೆಟ್ ಭಾಷಣಕ್ಕೆ ಉತ್ತರ ಕೊಡುವಾಗ ಹೇಳಬೇಕು. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪನೆ ಮಾಡುತ್ತೇವೆಂಬ ಘೋಷಣೆಯನ್ನು ತಾವು ಮಾಡಬೇಕೆಂದು ಹೇಳುತ್ತಾ ನಾನು ಹೆಚ್ಚು ಹೊತ್ತು

ತೆಗೆದುಕೊಳ್ಳದೆ. ಈ ಬಡ್ಜೆಟ್ಟಿನಿಂದ ನಮ್ಮ ಕರ್ನಾಟಕದ ೪ ಕೋಟಿ ಕನ್ನಡಿಗರಿಗೆ ಅನುಕೂಲವಾಗಲಿ, ಅವರಲ್ಲಿ ಏನು ಹೊಸ ಆಕಾಂಕ್ಷೆಗಳು ಹುಟ್ಟಿತ್ತು, ಅದು ಈಡೇರಲಿ ಎಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕರಿಯಣ್ಣ. (ಹೊಳೆ ಹೊನ್ನೂರು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಮಂತ್ರಿಗಳು ನಿಜವಾಗಿಯೂ ಬಹಳ ಶ್ರಮ ಪಟ್ಟು ಉತ್ತಮವಾದಂತಹ ಒಂದು ಬಡ್ಜೆಟ್ಟನ್ನು ತಯಾರಿಸಿ ನಮ್ಮ ಎದುರಿಗೆ ಇಟ್ಟಿದ್ದಾರೆ. ಇದರಲ್ಲಿ ನಗರ ಪ್ರದೇಶದವರಿಗೆ ಕುಡಿಯುವ ನೀರಿನ ಯೋಜನೆಯಾಗಿ ಬಹಳ ಉತ್ತೇಜನವನ್ನು ಸಹಿತ ನೀಡಿದ್ದಾರೆ. ಆದರೆ ಈಗ ತಾನೆ ಪರಿವರ್ತಿತವಾದಂಥ ಮಂಡಲ ಪಂಚಾಯಿತಿಗಳಿಗೆ ಜಿಲ್ಲಾ ಪರಿಷತ್ತಿನ ಬಡ್ಜೆಟ್‌ನಲ್ಲಿ ಸಮರ್ಪಕವಾಗಿ ಕುಡಿಯುವ ನೀರಿನ ಯೋಜನೆಗಳನ್ನು ಜಾರಿಗೆ ತರಲು ಹಣ ಕೊಡಲು ಸಾಧ್ಯವಾಗುವುದಿಲ್ಲ. ಕಾರಣ ಇವೂ ಸಹ ಪಟ್ಟಣ ಪ್ರದೇಶಗಳಾಗಿವೆ. ಈಗ ಯಾವುದೋ ಒಂದು ನೀತಿಯಿಂದ ಇವೆಲ್ಲವೂ ಮಂಡಲ ಪಂಚಾಯಿತಿಗಳಾಗಿ ಪರಿವರ್ತಿತವಾಗಿವೆ, ಆದ್ದರಿಂದ ಈಗ ನಗರ ಪ್ರದೇಶಗಳ ಅಭಿವೃದ್ಧಿಗಾಗಿ ಹಾಗೂ ನೀರಿನ ವ್ಯವಸ್ಥೆಗಾಗಿ ಏನು ಹಣವನ್ನು ತೆಗೆದು ಇಟ್ಟಿದ್ದೀರಿ, ಅದರಲ್ಲಿ ಸ್ವಲ್ಪ ಭಾಗವನ್ನು ಈಗ ಪರಿವರ್ತಿತವಾಗಿರುವ ಮಂಡಲ ಪಂಚಾಯಿತಿಗಳಿಗೆ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ. ೭-೮ ವರ್ಷಗಳ ಹಿಂದೆ ಗ್ರಾಮಾಂತರ ಪ್ರದೇಶಗಳಲ್ಲಿನ ಬಡವರಿಗೆ ನಿವೇಶನಗಳನ್ನು ಕೊಡಬೇಕೆಂಬ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರು. ಇತ್ತೀಚೆಗೆ ನಿವೇಶನಗಳನ್ನು ಕೊಡತಕ್ಕಂತಹ ಅಧಿಕಾರಗಳನ್ನು ಆಡಳಿತ ಹಸ್ತಾಂತರದಿಂದ ಮಂಡಲ ಪಂಚಾಯುತಿಗಳಿಗೆ ವಹಿಸಿದ್ದೇವೆ. ಈ ಮಂಡಲ ಪಂಚಾಯತಿಯಲ್ಲಿ ಯಾವುದೇ ಹಣಕಾಸು ಇಲ್ಲದೆ ನಿವೇಶನ ಕೊಡಬೇಕೆಂದು ಕೇಳಿದರೆ ಜಿಲ್ಲಾಪರಿಷತ್ತಿನವರು ದುಡ್ಡು ಕಟ್ಟಬೇಕೆಂದು ಹೇಳುತ್ತಾರೆ. ಇದರಿಂದ ಯಾವ ಬಡವನಿಗೂ ಕೂಡ ಈಗ ನಿವೇಶನ ಸಿಗದೇ ಇರತಕ್ಕಂತಹ ಪರಿಸ್ಥಿತಿ ಇದೆ. ಹಿಂದಿನ ನಮ್ಮ ಕಾಂಗ್ರೆಸ್ ಸರಕಾರ ಈ ಬಗ್ಗೆ ಟೈಂ ಬೌಂಡ್ ಪ್ರೋಗ್ರಾಂ ಹಾಕಿಕೊಂಡು, ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿರುವ ಭೂ ರಹಿತರಿಗೆ ಇತರೇ ಬಡವರಿಗೆ ಹಿಂದೆ ಒಂದು ಕಾಲದಲ್ಲಿ ನಿವೇಶನಗಳನ್ನು ಕೊಟ್ಟಿತ್ತು. ಆದರೆ ಈಗ ನಿವೇಶನಗಳನ್ನು ಬಡವರಿಗೆ ಕೊಡುವುದಕ್ಕಾಗಿ ಸರ್ಕಾರದವರು ಬಜೆಟ್‌ನಲ್ಲಿ ಏನೂ ಹಣ ತೆಗೆದಿಟ್ಟಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿರುವ ಬಡವರಿಗೆ ನಿವೇಶನಗಳನ್ನು ಕೊಡಲು ಸ್ವಲ್ಪ ಹಣ ತೆಗೆದಿಡಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಈಗಿನ ಹಣಕಾಸಿನ ಸೌಕರ್ಯದಲ್ಲಿಯೇ ನಮ್ಮ ಆರ್ಥಿಕ ಮಂತ್ರಿಗಳು ಇವತ್ತು ಖಂಡಿತವಾಗಿಯೂ ಒಂದು ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ಏನೆಂದರೆ ಶಾಲೆಗಳಲ್ಲಿ ಪುಸ್ತಕ ಮತ್ತು ಬಟ್ಟೆಗಳನ್ನು ಕೊಡುವುದರ ಬಗ್ಗೆ ಮರು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಏಕೆಂದರೆ, ಪ್ರಜಾಪ್ರಭುತ್ವದ ತತ್ವದಲ್ಲಿ ಯಾರಿಗೆ ಏನು ಇಲ್ಲವೋ ಅಂತಹವರಿಗೆ ಸರ್ಕಾರ ಏನು ಕೊಡಬೇಕು ಎಂಬ ಒಂದು ತತ್ವ ಇಟ್ಟುಕೊಳ್ಳಬೇಕು. ಆ ತತ್ವದ ಆಧಾರದ ಮೇಲೆ ಯಾರಿಗೆ ಬಟ್ಟೆ ಇಲ್ಲವೊ, ಯಾರಿಗೆ ಪುಸ್ತಕ ಕೊಂಡುಕೊಳ್ಳುವುದಕ್ಕೆ ಶಕ್ತಿ ಇಲ್ಲವೋ ಅಂತಹವರಿಗೆ ಈ ಪ್ರಯೋಜನ ಒದಗಿಸುವುದು ಬಹಳ ಉತ್ತಮವಾದುದು. ಅಂತಹ ಒಂದು ಒಳ್ಳೆಯ ಕೆಲಸವನ್ನು ನಮ್ಮ ಆರ್ಥಿಕ ಮಂತ್ರಿಗಳು ಮಾಡಿದ್ದಾರೆ. ಇದರ ಬಗ್ಗೆ ನಮ್ಮ ವಿರೋಧಪಕ್ಷದ ನಾಯಕರಾದ ಮಾನ್ಯ ಚಂದ್ರೇಗೌಡರು ಬಹಳ ಉತ್ತಮವಾದ ಟೀಕೆ ಮಾಡಿದ್ದಾರೆ ಏಕೆಂದರೆ ಅವರು ನಮ್ಮ ಶಿವಮೊಗ್ಗ ಜಿಲ್ಲೆಯ ಮಲೆನಾಡಿನಿಂದ ಬಂದಂಥಹವರು ಹಾಗೂ ಸಮಾಜವಾದಿ ಪಕ್ಷದಿಂದ ಬಂದಂಥವರು. ಆಗ ಅವರ ಭಾಷಣ ಕೇಳಿ ನಮಗೆಲ್ಲಾ ಸಂತೋಷವಾಗುತ್ತಿತ್ತು. ಆಗೆಲ್ಲಾ ಅವರು ಸಮಾಜವಾದಿ ತತ್ವದ ಮೇಲೆ ಬಹಳ ಉದ್ದನೆಯ ಭಾಷಣ ನೀಡುತ್ತಿದ್ದರು. ಆದರೆ ಅವರು ಮೊದಲು ನಮ್ಮ ಕಾಂಗ್ರೆಸ್ ಪಕ್ಷದಲ್ಲಿ ಇದ್ದು ಜನತಾಕ್ಕೆ ಹೋಗಿ, ಅಲ್ಲಿಂದ ಜನತಾ ದಳಕ್ಕೆ ಹೋದ ತಕ್ಷಣ ಈ ಸಮಾಜವಾದದ ತತ್ವವನ್ನು ಮರೆತರು. ಎಲ್ಲರಿಗೂ ಒಂದೇ ರೀತಿಯಲ್ಲಿರಬೇಕು. ಬಡವರಿಗೆ ಬಟ್ಟೆ ಕೊಡಬೇಕು, ಶ್ರೀಮಂತನಿಗೂ ಬಟ್ಟೆ ಕೊಡಬೇಕು, ಬಡವನಿಗೆ ಪುಸ್ತಕ ಕೊಡಬೇಕು, ಶ್ರೀಮಂತನಿಗೂ ಪುಸ್ತಕ ಕೊಡಬೇಕು ಅದರಿಂದ ಬಹಳ ಅನುಕೂಲವಾಗುತ್ತದೆ ಎಂದು ಉದ್ದನೆಯ ಭಾಷಣವನ್ನು ನಮ್ಮ ಅರ್ಥ ಮಂತ್ರಿಗಳ ಮೇಲೆ ಮಾಡಿಬಿಟ್ಟರು. ಆದರೆ ಇದು ಸಮರ್ಪಕವಾದುದಲ್ಲ. ಇದರ ಬಗ್ಗೆ ನಮ್ಮ ಅರ್ಥ ಮಂತ್ರಿಗಳು ಮರು ಪರಿಶೀಲನೆ ಮಾಡುವುದು ಬಹಳ ಉತ್ತಮ, ಯಾರು ಬಡವರಿದ್ದಾರೋ ಯಾರು ಪುಸ್ತಕ ಇಲ್ಲದೆ ಇದ್ದಾರೋ ಅಂತಹವರಿಗೆ ಇದರ ಸವಲತ್ತು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದೂ ಅಲ್ಲದೆ ರೈತನ ಬಗ್ಗೆ ಬಹಳ ಹೆಚ್ಚಿನ ಒತ್ತನ್ನು ಇವರಲ್ಲಿ ಕೊಟ್ಟಿಲ್ಲ. ಈ ಸರ್ಕಾರದಿಂದ ಸಹಾಯ ಆಗಿಲ್ಲ. ಈ ಕಡೆಯ ಕಾಂಗ್ರೆಸ್‌ನವರೆಲ್ಲರೂ ರೈತ ವಿರೋಧಿಗಳೆಂದು ನಮ್ಮ ವಿರೋಧಪಕ್ಷದ ಸ್ನೇಹಿತರು ಮಾತನಾಡಿದರು. ರೈತರ ಬಗ್ಗೆ ಕಾಂಗ್ರೆಸ್ ಸರ್ಕಾರ ಮಾಡಿದತಂಹ ಕಾರ್ಯಕ್ರಮಗಳನ್ನು ಯಾವ ಪಕ್ಷವೂ ಮಾಡಿಲ್ಲವೆಂದು ನಾನು ಧೈರ್ಯವಾಗಿ ಈ ಸಂದರ್ಭದಲ್ಲಿ

ಹೇಳಬೇಕಾಗುತ್ತದೆ. ಏಕೆಂದರೆ ಉಳುವವನೇ ಭೂಮಿಯ ಒಡೆಯನೆಂದು ಮಾಡಿದ್ದು ಕಾಂಗ್ರೆಸ್ ಸರ್ಕಾರ ವಿನ ಬೇರೆಯವರು ಇದನ್ನು ಮಾಡಿಲ್ಲ. ಮಾನ್ಯ ಯಡಿಯೂರಪ್ಪನವರು ರೈತರ ಸಾಲವನ್ನು ಮನ್ನಾ ಮಾಡದೆ ಇರುವುದರಿಂದ ರೈತರ ಜೀವನವನ್ನು ಉತ್ತಮ ಪಡಿಸುವುದಕ್ಕಾಗಿ ಸಾಧ್ಯವಾಗುವುದಿಲ್ಲವೆಂದು ಹೇಳಿದರೆ ವಿನಃ ಈ ಬಜೆಟ್‌ನಲ್ಲಿ ರೈತರಿಗಾಗಿ ಏನಾದರೂ ಇಟ್ಟಿದಾರೆಯೋ ಎನ್ನುವುದರ ಬಗ್ಗೆ ಒಂದು ವಿಚಾರವನ್ನೂ ಸಹ ಕೇಳುವುದಿಲ್ಲ. ರೈತರ ಉದ್ಧಾರ ಆಗಬೇಕಾದರೆ ಕೇವಲ ಮನ್ನಾದಿಂದ ಮಾತ್ರ ಸಾಧ್ಯವಿಲ್ಲ. ರೈತ ವಾಸವಾಗಿರತಕ್ಕ ಗ್ರಾಮಗಳ ಅಭಿವೃದ್ಧಿಯಾಗಬೇಕು. ಅಲ್ಲಿ ಅವರು ಮನೆಗಳನ್ನು ಕಟ್ಟುವುದಕ್ಕೆ ಸಹಾಯ ಮಾಡಬೇಕು. ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ನೀರಾವರಿ ಪ್ರದೇಶ ಇಲ್ಲದಿರುವ ಕಡೆಗಳಲ್ಲಿ ಯಾವುದಾದರೊಂದು ರೂಪದಲ್ಲಿ ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಡಲು ಪ್ರಯತ್ನ ಮಾಡಬೇಕು. ಹೀಗೆ ರೈತರು ಹೆಚ್ಚು ಬೆಳೆಯಲು ಎಲ್ಲಾ ರೀತಿಯ ಪ್ರೋತ್ಸಾಹ ನೀಡಬೇಕು ಹಾಗೂ ಅವನು ಬೆಳೆದ ಮಾಲುಗಳಿಗೆ ಸರಿಯಾದ ಬೆಲೆ ಸಿಕ್ಕಬೇಕು ಈ ರೀತಿಯಾದರೆ ಮಾತ್ರ ರೈತನ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ಅದಕ್ಕಾಗಿ ನಮ್ಮ ಕೇಂದ್ರದ ಕಾಂಗ್ರೆಸ್ ಸರ್ಕಾರ ಜವಾಹರ್ ರೋಜ್‌ಗಾರ್ ಯೋಜನೆಯನ್ನು ಜಾರಿಗೆ ತಂದಿತು. ಈ ಯೋಜನೆಯ ಮೂಲಕ ಪ್ರತಿ ಮಂಡಲ ಪಂಚಾಯಿತಿಗಳಿಗೆ ೨ ೧/೨ ಲಕ್ಷ ರೂಪಾಯಿಗಳಿಂದ ೩ ಲಕ್ಷ ರೂಪಾಯಿಗಳನ್ನು ಕೊಟ್ಟು ರಸ್ತೆ ಮುಂತಾದ ಸೌಲಭ್ಯಗಳನ್ನು ಒದಗಿಸಿದರು. ಹೀಗೆ ಗ್ರಾಮಾಂತರ ಪ್ರದೇಶದವರಿಗೆ ಬಹಳ ಉತ್ತಮವಾದ ಕೆಲಸವನ್ನು ಮಾಡಿದರು. ಇದೂ ಸಹ ರೈತಪಿ ಜನರಿಗೆ ಮಾಡಿದ ಒಳ್ಳೆಯ ಕೆಲಸ. ಆದರೆ ನಾವು ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಿಲ್ಲ. ರೈತರ ಸಾಲ ಮನ್ನಾ ಮಾಡಲಿಲ್ಲ, ಅದಕ್ಕಾಗಿ ನಾವು ರೈತರ ವಿರೋಧಿಗಳೆಂದು ಹೇಳುವುದು ಸರಿಯಲ್ಲವೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಅದೂ ಅಲ್ಲದೆ ನಮ್ಮ ಸಮಾಜ ಕಲ್ಯಾಣ ಇಲಾಖೆಗೆ ಆರ್ಥಿಕ ಸಹಾಯ ಮಾಡುವ ವಿಚಾರದಲ್ಲಿ ನಾನು ನೋಡಿದ್ದೇನೆ. ಇಲ್ಲಿ ಏನಾಗಿದೆ ಎಂದರೆ, ಈ ಸಮಾಜ ಕಲ್ಯಾಣ ಇಲ್ಲಾಖೆಗೆ ಒಬ್ಬ ಮಂತ್ರಿಯನ್ನೂ ಕೂಡ ನೇಮಕ ಮಾಡಿ ಕೊಡಿಸಿದ್ದೀರಿ. ಈ ಇಲಾಖೆ ಬಹಳ ಮುಖ್ಯವಾದುದು. ಆದರೆ ಈ ಇಲಾಖೆಯವರಿಗೆ ಒಂದು ಜಾತಿಯ ಪ್ರಮಾಣ ಪತ್ರವನ್ನೂ ಕೂಡ ಕೊಡುವುದಕ್ಕೆ ಅಧಿಕಾವಿಲ್ಲ. ಒಂದು ಮನೆಗೆ ಬೆಂಕಿ ಬಿದ್ದು ಸಂಪೂರ್ಣವಾಗಿ ಸುಟ್ಟುಹೋದರೂ ಸಹ ಅದರ ಮಾಲೀಕನಿಗೆ ಸಹಾಯ ಮಾಡತಕ್ಕ ಅಧಿಕಾರ ಇವರಿಗಿಲ್ಲ. ಆದ್ದರಿಂದ ನಮ್ಮ ಸಮಾಜ ಕಲ್ಯಾಣ ಇಲಾಖೆಗೆ ಸರ್ಕಾರದವರು ಹೆಚ್ಚಿನ ಅಧಿಕಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ಎಂದರೆ ಜಿಲ್ಲಾ ಪರಿಷತ್ತಿನಲ್ಲಿ ಹರಿಜನ ಗಿರಿಜನರ ಅಭಿವೃದ್ಧಿಗಾಗಿ, ಬಡವರಿಗೋಸ್ಕರ ಅನೇಕ ರೀತಿಯ ಉತ್ತಮ ಯೋಜನೆಗಳನ್ನು ತಯಾರಿಸಿ ಹಣವನ್ನು ತೆಗೆದು ಇಟ್ಟಿದ್ದೀರಿ. ಆದರೆ ಜಿಲ್ಲಾಪರಿಷತ್ತುಗಳ ಈಗಿನ ವ್ಯವಸ್ಥೆಯಲ್ಲಿ ಯಾವ ಯೋಜನೆಯೂ ಕೂಡ ಸಮರ್ಪಕವಾಗಿ ಆ ಬಡವರಿಗೆ ಅಥವಾ ಹರಿಜನ ಗಿರಿಜನರಿಗೆ ಮುಟ್ಟುತ್ತಿಲ್ಲ. ಕಾರಣ ಆ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳು ಈ ಯೋಜನೆಗಳ ಕಾರ್ಯಗತದ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಿರ್ದಿಷ್ಟವಾಗಿ ಜಿಲ್ಲಾ ಪರಿಷತ್ತಿನ ಕಾನೂನಿನಲ್ಲಿ ಇಲ್ಲ. ಇದರಿಂದಾಗಿ ನೀವು ಕೊಟ್ಟಿರತಕ್ಕ ಯೋಜನೆಗಳು ಯಾವುದೂ ಕೂಡ ಹರಿಜನ ಗಿರಿಜನರಿಗೆ ಸರಿಯಾಗಿ ಮುಟ್ಟುತ್ತಿಲ್ಲ. ಈ ಬಗ್ಗೆ ನಾನು ಜಿಲ್ಲಾ ಪರಿಷತ್ತಿನ ಸಭೆಯಲ್ಲಿ ಚರ್ಚೆ ಮಾಡಿದ್ದೇನೆ. ಮಂಡಲ ಪಂಚಾಯಿತಿಯ ಪ್ರಧಾನರು ಹಣವನ್ನು ದುರುಪಯೋಗ ಮಾಡಿದರೆ ಅವರ ಮೇಲೆ ಪೋಲೀಸ್ ಕೇಸನ್ನು ಹಾಕುವಂತಿಲ್ಲ. ಅಂಥ ಕಾನೂನು ಮಾಡಿಟ್ಟಿದ್ದೀರಿ. ಈ ಕಾನೂನಿನಿಂದ ಹರಿಜನ ಗಿರಿಜನರಿಗೆ ಬಹಳ ಅನ್ಯಾಯವಾಗುವುದರಿಂದ, ಇದನ್ನು ಮರು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಗಂಗಾಕಲ್ಯಾಣ ಎಂದು ಒಂದು ಯೋಜನೆಯನ್ನು ಮಾಡಿ ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಕೊಟ್ಟಿದ್ದೀರಿ. ಈ ಯೋಜನೆಗೆ ಶೇಕಡಾ ೭೫ ಭಾಗ ಹಣವನ್ನು ಸರ್ಕಾರದಿಂದ ಪುಕ್ಕಟೆಯಾಗಿ ಮತ್ತು ಉಳಿದ ೨೫ ಭಾಗ ಹಣವನ್ನು ಬ್ಯಾಂಕ್‌ಗಳ ಮೂಲಕ ಸಾಲವಾಗಿ ಕೊಡಬೇಕೆಂದಿದ್ದರೂ ಸಹ ಇತ್ತೀಚೆಗೆ ಕೇಂದ್ರದಲ್ಲಿ ನಮ್ಮ ಸರ್ಕಾರ ಹೋದಮೇಲೆ ಯಾವ ಬ್ಯಾಂಕ್‌ನವರೂ ಕೂಡ ಹಣವನ್ನು ಸಾಲವಾಗಿ ಕೊಡುತ್ತಿಲ್ಲ. ವಿರೋಧ ಪಕ್ಷದ ನಾಯಕರು ಈಗ ಇಲ್ಲಿ ಇಲ್ಲ. ಇದರಿಂದಾಗಿ ನೀವು ಮಾಡಿರತಕ್ಕ ಈ ಗಂಗಾಕಲ್ಯಾಣ ಯೋಜನೆಯ ಸೌಲಭ್ಯ ಯಾವ ಹರಿಜನ ಗಿರಿಜನರಿಗೂ ಸಿಕ್ಕುತ್ತಿಲ್ಲ. ಮಾನ್ಯ ಸದಸ್ಯರಾದ ಸಿಂಧ್ಯರವರು ಇನ್ನೂ ಎಷ್ಟು ವರ್ಷಗಳವರೆಗೆ ಈ ಮೀಸಲಾತಿಯನ್ನು ನಿಮಗೆ ಕೊಡಬೇಕು ಎಂದು ಹೇಳುತ್ತಿರತ್ತಾರೆ ಸ್ವಾಮಿ, ನಾನು ಹೇಳುತ್ತೇನೆ ಸರ್ಕಾರದ ಯಾವ ಯೋಜನೆಗಳೂ ನಮಗೆ ಸಮರ್ಪಕವಾಗಿ ಸಿಕ್ಕದಿದ್ದರೆ, ನೀವು ಎಷ್ಟೇ ವರ್ಷಗಳವರೆಗೆ ನಮಗೆ ಮೀಸಲಾತಿಯನ್ನು ಕೊಟ್ಟರೂ ನಮ್ಮ ಅಭಿವೃದ್ಧಿ ಆಗುವುದಿಲ್ಲ. ಆದ್ದರಿಂದ ಹರಿಜನ ಗಿರಿಜನರ

ಗೋಸ್ಕರ ಏನು ಯೋಜನೆಗಳನ್ನು ತಯಾರಿಸುತ್ತೀರಿ ಅವುಗಳ ಸೌಲಭ್ಯ ಇಂತಿಷ್ಟು ದಿನದೊಳಗೆ ಅವರಿಗೆ ಮುಟ್ಟುವಂತೆ ಒಂದು ಕಡಿವಾಣವನ್ನು ಹಾಕಬೇಕೆಂದು ನಾನು ಹೇಳಬಯಸುತ್ತೇನೆ. ಈಗ ಹೆಂಡದ ಮಾರಾಟವನ್ನು ನಿಲ್ಲಿಸುವ ಬಗೆ ಸರ್ಕಾರ ತೆಗೆದುಕೊಂಡಿರತಕ್ಕ ಒಂದು ದಿಟ್ಟ ನಿಲುವಿಗೆ ನಾನು ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನನಗೆ ತಿಳಿದಮಟ್ಟಿಗೆ ಯಾರೂ ಕೂಡ ಹೆಂಡವನ್ನು ಮರದಿಂದ ಇಳಿಸುತ್ತಿಲ್ಲ. ಏನೇನೋ ಪೌಡರ್‌ಗಳನ್ನು ಮಿಕ್ಸ್ ಮಾಡಿ ಹೆಂಡವನ್ನು ತಯಾರಿಸುತ್ತಿದ್ದರು. ಅದು ವಿಷದಿಂದ ಕೂಡಿರುತ್ತಿತ್ತು. ಹಿಂದಿನ ಸರ್ಕಾರ ಒಂದು ನಿರ್ಧಾರವನ್ನು ಮಾಡಿತ್ತು. ಏನೆಂದರೆ, ಸಾಮಾನ್ಯವಾಗಿ ಹೆಂಡದ ಅಂಗಡಿಗಳನ್ನು ಶಾಲೆಗಳ ಹತ್ತಿರ, ಲಂಬಾಣಿ ತಾಂಡಗಳಲ್ಲಿ, ದೇವಸ್ಥಾನಗಳ ಹತ್ತಿರ, ಚರ್ಚು ಮತ್ತು ಮಸೀದಿಗಳ ಹತ್ತಿರ ಇರಬಾರದು ಎಂದು, ಆದರೂ ಅಂಥ ಜಾಗಗಳಲ್ಲೇ ಈ ಹೆಂಡದ ಅಂಗಡಿಗಳು ಇದ್ದುವು. ಈ ರೀತಿ ಆದರೆ ಹೆಂಡದ ಮಾರಾಟವನ್ನು ಯಾವ ರೀತಿ ಈ ಸರ್ಕಾರದವರು ತಪ್ಪಿಸುವುದಕ್ಕಾಗುತ್ತದೆ? ಆದ್ದರಿಂದ ಇನ್ನು ಮುಂದಾದರೂ ದೇವಸ್ಥಾನಗಳ ಹತ್ತಿರ, ಚರ್ಚ್, ಮಸೀದಿಗಳ ಹತ್ತಿರ, ಸ್ಕೂಲುಗಳ ಹತ್ತಿರ, ಲಂಬಾಣಿ ತಾಂಡಗಳಲ್ಲಿ ಹೆಂಡದ ಅಂಗಡಿಗಳನ್ನು ಇಡಲು ಅವಕಾಶ ಕೊಡದಂತೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಡಾ. ಮಲಕರೆಡ್ಡಿ (ಯಾದ್‌ಗಿರ್).—ಸನ್ಮಾನ್ಯ ಅಧ್ಯಕ್ಷರೇ ೧೯೭೦–೭೧ನೇ ಸಾಲಿನ ಆಯವ್ಯಯದ ಲೆಕ್ಕಪತ್ರವನ್ನು ಮತ್ತು ಸರ್ಕಾರದ ಆರ್ಥಿಕ ನೀತಿಯನ್ನು ಸನ್ಮಾನ್ಯ ಹಣಕಾಸಿನ ಮಂತ್ರಿಗಳು ನಿರೂಪಿಸಿದ್ದಾರೆ. ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡುವ ಕಾಲಕ್ಕೆ ಅರ್ಥಮಂತ್ರಿಗಳ ಜಾಣ್ಮೆಯನ್ನು ಬಹಳವಾಗಿ ಮೆಚ್ಚಿದ್ದಾರೆ. ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಬಹಳ ಆಳವಾಗಿ ಅಧ್ಯಯನ ಮಾಡಿ ಅದನ್ನು ಮೇಲೆ ಎತ್ತಲಿಕ್ಕೆ ಪ್ರಯತ್ನ ಮಾಡಿದ್ದಾರೆಂದು ಹೇಳಿದ್ದಾರೆ. ನಮ್ಮ ವಿರೋಧಪಕ್ಷದ ಮಿತ್ರರು ಇದು ಸಾಧಾರಣವಾದ ಬಜೆಟ್ ಆಗಿದೆ, ರಾಜ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ರಾಜ್ಯದ ಅಭಿವೃದ್ಧಿಯ ಬಗ್ಗೆ ಸಾಕಷ್ಟು ಯೋಚನೆ ಮಾಡಿ ಯೋಜನೆಗಳನ್ನು ನಿರೂಪಿಸಿಲ್ಲ. ಆರ್ಥಿಕ ಅಭಿವೃದ್ಧಿಗೆ ಆದ್ಯತೆಯನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ವ್ಯವಸಾಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಅನೇಕ ಮಾತುಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆಯಾ ಇಲಾಖೆಗಳನ್ನು ವಿಮರ್ಶೆ ಮಾಡುವಾಗ ಇದರ ಬಗ್ಗೆ ನಾನು ವಿವರವಾಗಿ ಮಾತನಾಡುತ್ತೇನೆ. ಸದ್ಯ ಕೇವಲ ಸರ್ಕಾರದ ಆರ್ಥಿಕ ನೀತಿ ಮತ್ತು ಅದರ ವ್ಯವಸ್ಥೆಯ ಬಗ್ಗೆ ಮಾತನಾಡುತ್ತೇನೆ. ೧೯೬೯ರಲ್ಲಿ ಈ ಖಾತೆಯನ್ನು ಮಾನ್ಯ ಅರ್ಥ ಸಚಿವರು ವಹಿಸಿಕೊಂಡಮೇಲೆ ಹಿಂದಿನ ಸರ್ಕಾರದಿಂದ ಪಡೆದ ಬಳುವಳಿ ಏನು ಎನ್ನುವುದನ್ನು ಅವರು ತಿಳಿಸಿದ್ದಾರೆ. ೧೯೬೯–೭೦ರ ಪ್ರಾರಂಭದ ಶಿಲ್ಕು ಬಗ್ಗೆ ಪ್ಯಾರ ನಂಬರ್–೫ ಪುಟ ೨ರಲ್ಲಿ ಕೊಟ್ಟಿದ್ದಾರೆ.

"೧೯೬೯–೭೦ರ ಪ್ರಾರಂಭದ ನೆಗೆಟಿವ್ ಶಿಲ್ಕು ೧೧.೪೬ ಕೋಟಿ ರೂಪಾಯಿಗಳೆಂದು ತಿಳಿಸಿದ್ದಾರೆ. ಆದರೆ ಅಂತಿಮ ಲೆಕ್ಕಗಳ ಪ್ರಕಾರ ಅದು ೧೩.೫೪ ಕೋಟಿ ರೂಪಾಯಿಗಳು ನೆಗೆಟಿವ್ ಬ್ಯಾಲೆನ್ಸ್ ಎಂದು ಅವರು ಕೊಟ್ಟಿರುತ್ತಾರೆ.

ಆಮೇಲೆ ೧೯೬೯–೭೦ನೆಯ ಬಜೆಟ್ ಅಂದಾಜಿನಲ್ಲಿ ೧೨೬.೩೦ ಕೋಟಿ ರೂಪಾಯಿಗಳಷ್ಟು ಪೂರೈಸಲಾಗದ ಕೊರತೆಯನ್ನು ತೋರಿಸಲಾಗಿದೆ. ಇದರ ಜೊತೆಗೆ ಸಂದಾಯವಾಗದ ಬಿಲ್ಲುಗಳು ಮತ್ತು ಭಾರಿ ಪ್ರಮಾಣದ ಸಾರ್ವಜನಿಕ ಠೇವಣಿಗಳು ಈ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಿದುವು" ಎಂದು ಹೇಳಿದ್ದಾರೆ.

ಇಷ್ಟೆಲ್ಲ ದುಸ್ಥಿತಿಯಲ್ಲಿದ್ದಂಥ ಆರ್ಥಿಕ ಪರಿಸ್ಥಿತಿಯನ್ನು ಚೆನ್ನಾಗಿ ವಿಶ್ಲೇಷಣೆ ಮಾಡಿ ಸುಮಾರು ೨೦೪ ಕೋಟಿ ರೂಪಾಯಿಗಳಷ್ಟು ಕೊರತೆ ಬಜೆಟ್‌ನ್ನು ತಯಾರಿಸಿ ಜನರಿಗೆ ಹೆಚ್ಚು ಕಷ್ಟವಾಗದ ರೀತಿಯಲ್ಲಿ ತೆರಿಗೆಗಳನ್ನು ಹಾಕಿ ಸುಮಾರು ೫೬ ಕೋಟಿ ರೂಪಾಯಿಗಳಿಗೆ ಈ ಕೊರತೆಯನ್ನು ಇಳಿಸಿದ್ದಾರೆ. ಇದರಿಂದಾಗಿ ಕೆಲ ವರ್ಗಗಳಿಂದ ಅಲ್ಪಸ್ವಲ್ಪ ಟೀಕೆ ಟಿಪ್ಪಣಿಗಳು ಬಂದಿರಬಹುದು. ಆದರೆ ಸಮಗ್ರವಾಗಿ ವಿಚಾರ ಮಾಡಿದರೆ ತಜ್ಞರಿಂದ ಅಂಥ ತೀವ್ರತರಹದ ಪ್ರತಿಕ್ರಿಯೆ ಈ ಬಜೆಟ್‌ಮೇಲೆ ಬಂದಿಲ್ಲ. ಅದಕ್ಕಾಗಿ ಹೆಚ್ಚು ಭಾರ ಬೀಳದ ರೀತಿಯಲ್ಲಿ ಡಿಫಿಸಿಟ್‌ನ್ನು ೨೦೦ ಕೋಟಿ ರೂಪಾಯಿಗಳಿಂದ ಕೇವಲ ೫೬ ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ. ಆದ್ದರಿಂದ ನಮ್ಮ ಹಣಕಾಸಿನ ಮಂತ್ರಿಗಳನ್ನು ಪ್ರತಿಯೊಬ್ಬರೂ ಮೆಚ್ಚಬೇಕಾಗಿದೆ. ಇದರ ಜೊತೆಗೆ ಏಳನೇ ಪಂಚವಾರ್ಷಿಕ ಯೋಜನೆಯ ವಿಶ್ಲೇಷಣೆಯನ್ನು ನೋಡಿದಾಗ ನಮ್ಮ ಪಂಚವಾರ್ಷಿಕ ಯೋಜನೆಗಳು ಐದು ವರ್ಷಕ್ಕೆ ಒಮ್ಮೆ ರೂಪಿತವಾಗುತ್ತವೆ. ಐದು ವರ್ಷಗಳ ದೀರ್ಘವಾದ ಅವಧಿಯಲ್ಲಿ ನಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಅಭಿವೃದ್ಧಿಗೆ ಎಷ್ಟು ಹಣವನ್ನು ಪ್ರತಿಯೊಂದು ಇಲಾಖೆಗೂ ನಾವು ಹಂಚಿದ್ದೇವೆಯೋ ಅಷ್ಟು ಹಣವನ್ನು ಖರ್ಚು ಮಾಡಿದಾಗ ನಾವು ನಿರೀಕ್ಷಿಸಿದಷ್ಟು ಸಂಪತ್ತು ಈ ದೇಶದಲ್ಲಿ ಉತ್ಪಾದನೆಯಾಗುತ್ತದೆ. ಆದರೆ ಏಳನೇ

ಪಂಚವಾರ್ಷಿಕ ಯೋಜನೆಯ ಪೂರ್ಣ ಅವಧಿಯಲ್ಲಿ ಜನತಾಪಕ್ಷ, ಜನತಾದಳದ ಪಕ್ಷದ ಸರ್ಕಾರವೇ ಅಧಿಕಾರದಲ್ಲಿ ಇತ್ತು.

ಏಳನೇ ಪಂಚವಾರ್ಷಿಕ ಯೋಜನೆ ಸಂಪೂರ್ಣವಾಗಿ ಆರ್ಥಿಕಾಭಿವೃದ್ಧಿ ದೃಷ್ಟಿಯಿಂದ ವಿಫಲವಾಗಿದೆ ಎಂದು ನಾನು ಹೇಳಬೇಕಾಗುತ್ತದೆ. ಏಕೆಂದರೆ ವಾರ್ಷಿಕ ಯೋಜನೆ ೧೧೪೦ ಕೋಟಿ ರೂಪಾಯಿಗಳೆಂದು ಹೋದ ವರ್ಷ ತಯಾರಾಗಿತ್ತು. ಆದರೆ ಅದು ಈಗ ೮೭೦ ಕೋಟಿ ರೂಪಾಯಿಗಳಿಗೆ ಇಳಿಯಿತು. ಇದರಿಂದಾಗಿ ಯಾವ ಯಾವ ಬಾಬತ್ತಿಗೆ ಹಣ ಹಂಚಿದ್ದೀರಿ ಅಷ್ಟು ಹಣ ಖರ್ಚಾಗದೆ ಕಾಮಗಾರಿಗಳು ಕಡಿಮೆಯಾಗಿ ನಮ್ಮ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಯಿತು. ಜನರಲ್ಲಿ ಅಸಂತೋಷ ಉಂಟಾಯಿತು. ಹೀಗಾಗಿ ಸಾಕಷ್ಟು ಅಭಿವೃದ್ಧಿಯಾಗದ ಕಾರಣ ಹೋದ ಚುನಾವಣೆಯಲ್ಲಿ ಜನರು ಕಾಂಗ್ರೆಸ್ ಪಕ್ಷದ ಕಡೆಗೆ ತಿರುಗಿ ಒಲವು ತೋರಿಸಿ ಅಧಿಕಾರದಲ್ಲಿ ಕೂಡಿಸಿದ್ದಾರೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಆರ್ಥಿಕ ಸಚಿವರು ಒಂದು ದಿಟ್ಟ ಹೆಜ್ಜೆ ಇಟ್ಟು ಪ್ರಸಕ್ತ ವರ್ಷದಲ್ಲಿ ಸುಮಾರು ೧೨೨೦ ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಲು ಯೋಜಿಸಿದ್ದಾರೆ. ಈ ಮೊತ್ತ ಹೋದ ವರ್ಷಕ್ಕಿಂತ ಸುಮಾರು ೩೫೦ ಕೋಟಿ ರೂಪಾಯಿಗಳಷ್ಟು ಹೆಚ್ಚಾಗುತ್ತದೆ. ಇಷ್ಟೆಲ್ಲ ಹಣ ರಾಜ್ಯದ ಅಭಿವೃದ್ಧಿಗೆ ಸಿಕ್ಕಿದರೆ ಜನರ ಅಥವಾ ರಾಜ್ಯದ ಪ್ರಗತಿ ಸಾಧಿಸುವುದರಲ್ಲಿ ಯಾವ ಕಷ್ಟವೂ ಬರಲಾರದೆಂದು ನಾವೆಲ್ಲರೂ ನಿರೀಕ್ಷೆ ಮಾಡಬಹುದು. ಮಾನ್ಯ ಅರ್ಥ ಮಂತ್ರಿಗಳು ತಮ್ಮ ಒಂದು ಆರ್ಥಿಕ ನೀತಿಯನ್ನು ನಿರೂಪಣೆ ಮಾಡಿದ್ದಾರೆ ಮೊಟ್ಟಮೊದಲ ಬಾರಿಗೆ ನಿರ್ದಿಷ್ಟವಾದ ಗುರಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಅದನ್ನು ತಮ್ಮ ಭಾಷಣದ ೨೦ನೇ ಪ್ಯಾರಾದಲ್ಲಿ ಸಂಕ್ಷಿಪ್ತವಾಗಿ ಹೇಳಿದ್ದಾರೆ. ರಾಜಸ್ವದ ಕೊರತೆ ಇಲ್ಲದಂತೆ ಮಾಡುವುದು ಸರ್ಕಾರದ ಮೊದಲನೆಯ ಗುರಿ. ಬಂಡವಾಳವನ್ನು ಹೆಚ್ಚಾಗಿ ತೊಡಗಿಸುವುದು ಎರಡನೆಯ ಗುರಿ. ಮೂರನೆಯದು ಲಾಭ-ನಷ್ಟ ಇವೆರಡನ್ನು ತುಲನೆಮಾಡಿ ಕಾಸ್ಟ್ ಎಫೆಕ್ಟಿವ್ ಸ್ಕೀಮ್ಸ್ ಯಾವವು ಇರುತ್ತವೆಯೊ ಅಂಥವನ್ನು ಅಷ್ಟೇ ಕೈಗೆತ್ತಿಕೊಂಡು ಕೆಲಸ ಮಾಡುವುದು ನಾಲ್ಕನೆಯದು, ಯೋಜನೇತರ ವೆಚ್ಚ ಯಾವಾಗಲು ವೃದ್ಧಿಯಾಗುತ್ತದೆ ಅದನ್ನು ಕಠಿಣ ಕ್ರಮ ವಾಗಿ ಕಂಟ್ರೋಲ್ ಮಾಡುವುದು. ಈ ನಾಲ್ಕು ಅಂಶಗಳ ಚೌಕಟ್ಟಿನಲ್ಲಿ ಅರ್ಥವ್ಯವಸ್ಥೆಯನ್ನು ನಿರ್ವಹಣೆ ಮಾಡತಕ್ಕ ದಿಟ್ಟ ಹೆಜ್ಜೆಯನ್ನು ಅರ್ಥಮಂತ್ರಿಗಳು ಇಟ್ಟಿದ್ದಾರೆ. ಅದನ್ನು ಪ್ರತಿಯೊಬ್ಬರೂ ಮೆಚ್ಚಬೇಕು. ನಮ್ಮ ರಾಜ್ಯದ ಹಣಕಾಸಿನ ಸ್ಥಿತಿ ಬಹಳ ಕೆಟ್ಟಿದೆ ಎಂದು ಪ್ರತಿಯೊಬ್ಬರೂ ಹೇಳುತ್ತಾರೆ. ಯಾವ ರೀತಿ, ಯಾವ ಮಟ್ಟದಲ್ಲಿ ಕೆಟ್ಟಿದೆ ಎಂಬುದನ್ನು ಹೋದ ಸಲ ಮಾನ್ಯ ಮುಖ್ಯಮಂತ್ರಿಗಳು ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ಪ್ರಸ್ತಾವಕ್ಕೆ ಉತ್ತರಿಸುವ ಕಾಲದಲ್ಲಿ ಹೇಳಿದರು. ೧೯೮೩ ರಿಂದ ೧೯೮೮-೮೯ರವರೆಗೆ ಯೋಜನೇತರ ವೆಚ್ಚ ೮೫೦ ಕೋಟಿ ರೂಪಾಯಿಗಳಿಂದ ಸುಮಾರು ೨೬೦೦ ಕೋಟಿ ರೂಪಾಯಿಗಳಿಗೆ ಏರಿತ್ತು. ಅಂದರೆ ಮೂರು ಪಟ್ಟು ಹೆಚ್ಚಳ ಹೊಂದಿದೆ. ಆದರೆ ಇದೇ ಅವಧಿಯಲ್ಲಿ ವಿರೋಧ ಪಕ್ಷದ ನಾಯಕರಾದ ಚಂದ್ರೇಗೌಡರು ಹೇಳಿದರು ಮುಖ್ಯಮಂತ್ರಿಗಳು ಕೇವಲ ಯೋಜನೇತರ ವೆಚ್ಚ ಮೂರು ಪಟ್ಟು ಹೆಚ್ಚಾಗಿದೆ ಎಂದು ಹೇಳಿದರೆ ಹೊರತು ಈ ಅವಧಿಯಲ್ಲಿ ರಾಜಸ್ವದಿಂದ ಸರ್ಕಾರಕ್ಕೆ ಬರತಕ್ಕ ಆದಾಯವನ್ನು ಹೇಳಲಿಲ್ಲ ಎಂದು, ಆದರೆ ಅದೂ ಕೂಡ ಹೆಚ್ಚಾಗಿದೆ ಎಂದರು. ಇದೇ ಅವಧಿಯಲ್ಲಿ ಸರ್ಕಾರದ ತೆರಿಗೆ ಮತ್ತು ತೆರಿಗೆಯೇತರ ಆದಾಯ ೧೨೦೦ ಕೋಟಿ ರೂಪಾಯಿಗಳಿಂದ ೨೯೦೦ ಕೋಟಿ ರೂಪಾಯಿಗಳಿಗೆ ಏರಿದೆ, ಅಂದರೆ ಯೋಜನೇತರ ವೆಚ್ಚ ಮೂರು ಪಟ್ಟು ಹೆಚ್ಚಾಯಿತು: ಆದಾಯ ಬರತಕ್ಕದ್ದು ಕೇವಲ ಎರಡು ಪಟ್ಟಿನಷ್ಟು ಜಾಸ್ತಿಯಾಯಿತು. ಅಂದಮೇಲೆ ಈ ರೀತಿ ಯೋಜನೇತರ ಸರ್ಕಾರದ ಖರ್ಚು ಹೆಚ್ಚಾದದ್ದರಿಂದ ನಮ್ಮ ರಾಜ್ಯ ಬಹಳ ಕಷ್ಟಕ್ಕೆ ಗುರಿಯಾಯಿತು. ಅದಕ್ಕಾಗಿ ಇಂಥ ಒಂದು ಕಷ್ಟ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕಾಗಿ ಮಾನ್ಯ ಹಣಕಾಸಿನ ಸಚಿವರು ನಮ್ಮ ಹಣಕಾಸಿನ ಸ್ಥಿತಿಯ ಬಗ್ಗೆ ಒಂದು ಪರಿಶೀಲನಾ ಆಯೋಗವನ್ನು ರಚಿಸಲು ಯೋಚಿಸಿದಾರೆ,

ಇದು ಬಹಳ ಸ್ವಾಗತಾರ್ಹವಾದ ಸಂಗತಿ. ನಾವೆಲ್ಲರೂ ಈ ಬಗ್ಗೆ ಬಹಳ ಕುತೂಹಲದಿಂದ ಕಾದು ನೋಡಬೇಕಾಗಿದೆ. ನಮ್ಮ ರಾಜ್ಯದ ಅಭಿವೃದ್ಧಿಯಾಗಬೇಕಾದರೆ ಸಾಕಷ್ಟು ಸಂಪನ್ಮೂಲಗಳನ್ನು ಕ್ರೋಡೀಕರಿಸಬೇಕೆಂದು ಪ್ರತಿಯೊಬ್ಬರು ಮಾತನಾಡುತ್ತಿದ್ದಾರೆ: ಆದರೆ ಯಾವ ರೀತಿ ಸಂಪನ್ಮೂಲ ಹೆಚ್ಚು ಮಾಡಬೇಕು ? ಹೆಚ್ಚು ಮಾಡಬೇಕಾದರೆ ನಮಗೆ ದೊರಕತಕ್ಕ ಮೂಲಗಳು, ಸಾಧ್ಯತೆಗಳು ಯಾವುವು ಎಂದು ವಿಚಾರ ಮಾಡಿದಾಗ ರಾಜ್ಯಕ್ಕೆ ಹೆಚ್ಚು ಸಂಪನ್ಮೂಲ ಒದಗಿಸುವ ಮೂಲ ಎಂದರೆ ಸೇಲ್ಸ್ ಟ್ಯಾಕ್ಸ್, ಆಮೇಲೆ ಸ್ಟೇಟ್ ಎಕ್ಸೈಜ್ ಡ್ಯೂಟಿ. ಇವೆರಡೂ ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ತಂದುಕೊಡತಕ್ಕ ಮೂಲಗಳು, ಈಗಾಗಲೇ ಸೇಲ್ಸ್ ಟ್ಯಾಕ್ಸನ್ನು ಸಾಕಷ್ಟು ಹೆಚ್ಚು ಮಾಡಿದ್ದೇವೆ. ಇದಕ್ಕಿಂತ ಹೆಚ್ಚು ಮಾಡುವುದಕ್ಕಾಗುವುದಿಲ್ಲ,

ಒಂದು ವೇಳೆ ಹೆಚ್ಚು ಮಾಡುವುದಕ್ಕೆ ಹೋದರೆ ಕರ್ನಾಟಕ ರಾಜ್ಯದಲ್ಲಿ ನಡೆಯಬೇಕಾದ ವ್ಯವಹಾರಗಳೆಲ್ಲಾ ನೆರೆಹೊರೆಯ ರಾಜ್ಯಗಳಲ್ಲಿ ನಡೆಯುತ್ತದೆ. ಉದಾಹರಣೆಗೆ ಹೇಳಬೇಕಾದರೆ ಎಷ್ಟೋ ಜನರು ಕಾರ್ ಖರೀದಿ ಮಾಡುವುದಕ್ಕೆ ಪಾಂಡಿಚೇರಿ ಮತ್ತು ಗೋವಾಕ್ಕೆ ಹೋಗುತ್ತಿದ್ದಾರೆ. ಹೀಗಿರುವುದರಿಂದ ಸೇಲ್ಸ್ ಟ್ಯಾಕ್ಸನ್ನು ಮಿತಿಮೀರಿ ನಾವು ಹೆಚ್ಚು ಮಾಡುವುದಕ್ಕೂ ಸಾಧ್ಯವಿಲ್ಲ. ಅಂದಮೇಲೆ ಹೆಚ್ಚಿನ ಸಂಪನ್ಮೂಲಕ್ಕೆ ನಾವು ಯಾವ ಮೂಲ ಹುಡುಕಬೇಕು ? ಅದಕ್ಕಾಗಿ ಅರ್ಥಮಂತ್ರಿಗಳು ಸೂಕ್ಷ್ಮ ಬುದ್ಧಿಯಿಂದ ವಿದೇಶಿ ಏಜೆನ್ಸಿ ಮೂಲದಿಂದ ಸಹಾಯವನ್ನು ತೆಗೆದುಕೊಳ್ಳಲಿಕ್ಕೆ ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ. ಅದು ೨೩ನೇ ಪುಟದಲ್ಲಿ ಇದ್ದು ೯ ಮೂಲಗಳಿಂದ ಸುಮಾರು ೬೫೦ ಕೋಟಿ ರೂಪಾಯಿಗಳನ್ನು ಈ ವರ್ಷ ದೊರಕಿಸಿಕೊಳ್ಳತಕ್ಕ ಪ್ರಯತ್ನ ಮಾಡಿದ್ದಾರೆ.

ಶ್ರೀ ಪಿ.ಜಿ.ಆರ್ ಸಿಂಧ್ಯ.—ಅದು ಪ್ರಯತ್ನ ಅಷ್ಟೆ.

ಡಾ. ಎಲ್. ಮಲಕರೆಡ್ಡಿ.—ಈ ಎಲ್ಲಾ ಯೋಜನೆಗಳಲ್ಲಿ ತೊಡಗಿಸಲು ಅಂದಾಜು ಮಾಡಲಾಗಿರುವ ಒಟ್ಟು ಮೊಬಲಗು ಸರಿ ಸುಮಾರು ೬೫೦ ಕೋಟಿ ರೂಪಾಯಿಗಳು ಎಂದು ಹೇಳಿದ್ದಾರೆ. ಎರಡನೆಯದಾಗಿ ನಾವು ಸಂಪನ್ಮೂಲಗಳನ್ನು ಹೆಚ್ಚಿಸಬೇಕಾದರೆ ಸರ್ಕಾರದ ನಿಯಂತ್ರಣದಲ್ಲಿರುವ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಏನಿವೆ, ಅವುಗಳನ್ನು ಸರಿಯಾಗಿ ನಿರ್ವಹಣೆ ಮಾಡಿ ದಕ್ಷತೆಯಿಂದ ಕೆಲಸ ಮಾಡತಕ್ಕ ಸಿಬ್ಬಂದಿ ವರ್ಗದವರನ್ನು ಅಲ್ಲಿ ನೇಮಕ ಮಾಡಿದರೆ ತೆರಿಗೆಯೇತರ ಮೂಲಗಳಿಂದ ನಮಗೆ ಬರತಕ್ಕ ಸಂಪನ್ಮೂಲಗಳು ಹೆಚ್ಚಾಗಿ ಅಭಿವೃದ್ಧಿಗೆ ಅನುಕೂಲವಾಗುತ್ತದೆಂದು ನಾನು ಹೇಳುತ್ತೇನೆ. ತೆರಿಗೆಯೇತರ ಮೂಲಗಳ ರಾಜಸ್ವದಿಂದ ನಮಗೆ ದೊರಕತಕ್ಕ ಹಣ ೫೩೪ ಕೋಟಿ ರೂಪಾಯಿಗಳು. ನಷ್ಟದಲ್ಲಿರುವ ಪಬ್ಲಿಕ್ ಅಂಡರ್ ಟೇಕಿಂಗ್‌ಗಳನ್ನು ಚೆನ್ನಾಗಿ ನಿರ್ವಹಣೆ ಮಾಡಿದರೆ ೧ ಸಾವಿರ ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡಬಹುದು ಎರಡು ಅಂಡರ್‌ಟೇಕಿಂಗ್ಸ್ ಬಿಟ್ಟರೆ ಮಿಕ್ಕೆಲ್ಲಾ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ನಷ್ಟದಲ್ಲಿ ನಡೆಯುತ್ತಿವೆ, ಅಂದ ಮೇಲೆ ನಾವು ಸಂಪನ್ಮೂಲ ಕ್ರೋಡಿಕರಿಸುವುದು ಹೇಗೆ ? ಪಬ್ಲಿಕ್ ಬಾರೋಯಿಂಗ್ಸ್‌ನಿಂದ ಬರತಕ್ಕ ಹಣ ಇಲ್ಲಿ ಕೊಟ್ಟ ಪ್ರಕಾರ ೧೪೨ ಕೋಟಿ ರೂಪಾಯಿಗಳು. ಪುಟ ೪೩ರಲ್ಲಿ ಅದನ್ನು ಹೇಳಿದ್ದಾರೆ. ಬಹಿರಂಗ ಮಾರುಕಟ್ಟೆ ಸಾಲ ಇತ್ಯಾದಿಗಳಿಂದ ೧೪೩ ಕೋಟಿ ರೂಪಾಯಿ ಬರುತ್ತದೆಂದು ಹೇಳಿದ್ದಾರೆ. ಇದರಿಂದ ನಮಗೆ ಯಾವ ತರಹದ ಗಣನೀಯವಾದ ರೀತಿಯಲ್ಲಿ ಪ್ರಯೋಜನ ಆಗುವುದಕ್ಕೆ ಸಾಧ್ಯವಿಲ್ಲ.

೫-೦೦ ಪಿ. ಎಂ.

ಅದಕ್ಕಾಗಿ ಮಾನ್ಯ ಅರ್ಥಸಚಿವರಲ್ಲಿ ಹಾಗೂ ಸರ್ಕಾರದಲ್ಲಿ ನನ್ನ ಕಳಕಳಿಯ ವಿನಂತಿ ಏನೆಂದರೆ, ಈ ಸಾರ್ವಜನಿಕ ಉದ್ದಿಮೆಗಳು ಹಣ ಗಳಿಸಿದರೆ ಸರ್ಕಾರದ ಗಳಿಕೆ ಸುಮಾರು ೪ ರಿಂದ ೫ ಕೋಟಿ ರೂಪಾಯಿಗಳು ಆಗಬಹುದು ಎಂದು ನನ್ನ ಅಂದಾಜು ಇವತ್ತು ಟ್ಯಾಕ್ಸ್ ಹೆಚ್ಚು ಹಾಕುವುದರ ಬದಲು ಇವುಗಳಲ್ಲಿ ಲಾಭ ದೊರಕಿಸುವ ಬಗ್ಗೆ ಗಮನಹರಿಸಬೇಕು. ಇವತ್ತು ಅಲ್ಲಿ ಐಎಎಸ್ ಆಫೀಸರ್ಸ್ ಇದ್ದಾರೆ. ತಾವು ಇವುಗಳನ್ನು ಲಾಭದಾಯಕ ಪರಿಸ್ಥಿತಿಗೆ ತರಲು ತಾವು ಯಾವುದೇ ರೀತಿಯ ಬದಲಾವಣೆಯನ್ನು ಬೇಕಾದರೆ ಮಾಡಿ ಅಲ್ಲಿನ ಮೇನೇಜಿಂಗ್ ಡೈರೆಕ್ಟರ್‌ಗಳನ್ನು ನೇಮಕ ಮಾಡುವಾಗ ತಜ್ಞರನ್ನು ಅಪಾಯಿಂಟ್ ಮಾಡಿದರೆ ಹೆಚ್ಚು ಲಾಭ ಸಿಗುತ್ತದೆ. ಈ ಬಗ್ಗೆ ನಿರ್ಧಿಷ್ಟವಾದ ಗುರಿಯನ್ನು ಇಟ್ಟು ಕೆಲಸ ಮಾಡಿ. ಎಂತಹ ಪರಿಸ್ಥಿತಿ ಬಂದರೂ ಅಲ್ಲಿ ಕನಿಷ್ಟ ೧೦ ಪರ್ಸೆಂಟ್ ಲಾಭ ತೋರಿಸಲೇ ಬೇಕೆಂದು ಷರತ್ತು ಹಾಕಿದರೆ ಅಲ್ಲಿ ಲಾಭ ಬರುತ್ತದೆ. ಇವತ್ತು ನಾವು ಹೆಚ್ಚು ಹೆಚ್ಚು ತೆರಿಗೆಯೇತರ ಮೂಲದಿಂದ ಹಣ ಪಡೆಯಬೇಕಾದರೆ ಮಾರ್ಕೆಟ್ ಬಾರೋಯಿಂಗ್ಸ್‌ಗೆ ಹೋಗಬೇಕು. ಈ ವರ್ಷ ಅದನ್ನೂ ಕಡಿಮೆ ಮಾಡಿದ್ದೀರಿ. ಹೋದ ವರ್ಷ ೧೪೩ ಕೋಟಿ ಇದ್ದಿದ್ದು ಈ ವರ್ಷ ೧೨೩ ಕೋಟಿ ರೂಪಾಯಿಗಳನ್ನು ಮಾತ್ರ ನಿರೀಕ್ಷೆ ಮಾಡಿದ್ದೀರಿ. ಇನ್ನು ಮೂರನೆಯ ಮುಖ್ಯ ಸಂಪನ್ಮೂಲ ಎಂದರೆ ಕೇಂದ್ರ ಸರ್ಕಾರದಿಂದ ಒದಗಿ ಬರುವ ಹಣ. ಈಗಾಗಲೇ ೭ನೇ ಹಣಕಾಸು ಆಯೋಗ ನಮ್ಮ ರಾಜ್ಯಕ್ಕೆ ಬರುವ ಪಾಲಿನ ಬಗ್ಗೆ ಹೇಳಿದೆ. ಈ ಹಣಕಾಸು ಆಯೋಗದ ಮುಖ್ಯ ಕೆಲಸಗಳು ಎರಡು. ಒಂದನೆಯದು ನಾನ್ ಪ್ಲಾನ್ ಎಕ್ಸ್‌ಪೆಂಡೀಚರನ್ನು ಕಂಡುಹಿಡಿಯುವುದು, ಎರಡನೆಯದು ಟ್ಯಾಕ್ಸನ್ನು ಆಯಾ ರಾಜ್ಯಗಳಲ್ಲಿ ಯಾವರೀತಿ ವಿತರಣೆ ಮಾಡುವುದು ಎಂದು. ನಾನೇನೂ ಆರ್ಥಿಕ ತಜ್ಞನಲ್ಲ. ಆದರೂ ತಿಳಿದಷ್ಟು ಹೇಳುತ್ತೇನೆ. ತಮ್ಮ ಆರ್ಥಿಕ ನೀತಿಯಲ್ಲಿ ಮಾನ್ಯ ಸಚಿವರು ಒಂದು ಮಾತನ್ನು ಹೇಳಿದ್ದಾರೆ ನಮ್ಮ ಮುಖ್ಯ ಗುರಿ ರೆವಿನ್ಯೂ ಡಿಫಿಸಿಟನ್ನು ನಿವಾರಣೆ ಮಾಡುವುದು ಎಂದಿದ್ದಾರೆ ಆದರೆ ನನ್ನ ವಾದ ಹೀಗೆ ಇದೆ. ಫೈನಾನ್ಸ್ ಕಮಿಷನ್ ಕೆಲಸ ಎಂದರೆ ನಾನ್‌ಪ್ಲಾನ್ ಎಕ್ಸ್‌ಪೆಂಡೀಚರನ್ನು ಕಂಡುಹಿಡಿಯುವುದು. ರೆವಿನ್ಯೂ ಡೆಫಿಸಿಟ್ ಎಲ್ಲಿ ಇದೆ ಅದನ್ನು

ಭರ್ತಿ ಮಾಡತಕ್ಕ ಜವಾಬ್ದಾರಿ ಫೈನಾನ್ಸ್ ಕಮಿಷನ್‌ನ ಜವಾಬ್ದಾರಿ ಎಂದು ನಾನು ತಿಳಿದುಕೊಂಡಿದ್ದೇನೆ. ರೆವಿನ್ಯೂ ಡೆಫಿಸಿಟನ್ನು ನ್ಯಾಯವಾಗಿ ಮಾಡಿದ್ದಾರೋ, ಅಥವಾ ಕೃತಿಮವಾಗಿ ಮಾಡಿದ್ದಾರೋ ಎಂದು ಅವರು ನೋಡುತ್ತಾರೆ. ಕೃತ್ರಿಮವಾಗಿ ಮಾಡಿದ್ದರೂ ಅವರು ನೋಡುತ್ತಾರೆ ನಾನು ಓದಿ ತಿಳಿದುಕೊಂಡ ಪ್ರಕಾರ ನಾನ್ ಪ್ಲಾನ್ ಎಕ್ಸ್‌ಪೆಂಡೀಚರನ್ನು ನಿರ್ಧಾರ ಮಾಡಿ ಆಯಾ ರಾಜ್ಯಗಳಿಗೆ ಹೆಚ್ಚು ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ೯ನೇ ಆರ್ಥಿಕ ಆಯೋಗದವರು ನಮ್ಮ ರಾಜ್ಯಕ್ಕೆ ವಿತರಣೆ ಮಾಡಿರುವ ಮೊತ್ತ ೪೦೬೩ ಕೋಟಿ ರೂಪಾಯಿಗಳು. ೫ ವರ್ಷದಲ್ಲಿ ಅಷ್ಟು ಕೊಡುತ್ತಾರೆ. ಸರಿ ಸುಮಾರು ೧ ಲಕ್ಷ ಕೋಟಿ ರೂಪಾಯಿಯಲ್ಲಿ ನಮ್ಮ ರಾಜ್ಯದ ಪಾಲು ೪ ಸಾವಿರ ಕೋಟಿ ರೂಪಾಯಿಗಳು. ಈ ವಿಷಯದಲ್ಲಿ ನಮ್ಮ ಶಾಸಕಾಂಗ ಪಕ್ಷದ ಪ್ರತಿಯೊಂದು ಪಕ್ಷದ ಧುರೀಣರು, ಆರ್ಥಿಕ ಮಂತ್ರಿಗಳು ಅಲ್ಲದೆ ವಿರೋಧ ಪಕ್ಷದ ಸದಸ್ಯರೆಲ್ಲರೂ ಸೇರಿ ಒಟ್ಟಾರೆ ಪ್ರಯತ್ನಪಟ್ಟು ಈ ಮೊತ್ತವನ್ನು ಹೆಚ್ಚು ಮಾಡಿಸುವುದರ ಬಗ್ಗೆ ಪ್ರಯತ್ನ ಮಾಡಬೇಕು. ದೇಶ ಮಟ್ಟದಲ್ಲಿ ರಾಷ್ಟ್ರೀಯ ರಂಗ ಸರ್ಕಾರ ಆಡಳಿತ ನಡೆಸುತ್ತಿದೆ. ಈ ಬಗ್ಗೆ ಇಲ್ಲಿರುವ ವಿರೋಧ ಪಕ್ಷದ ಧುರೀಣರು ಸರ್ಕಾರದ ಜೊತೆ ಒಮ್ಮತದಿಂದ ಪ್ರಯತ್ನ ಪಟ್ಟರೆ ೯ನೇ ಹಣಕಾಸು ಆಯೋಗ ಏನು ಅವಾರ್ಡ್ ಕೊಟ್ಟಿದೆ, ಅದನ್ನು ಮಾಡಿಫೈ ಮಾಡಿಸಬಹುದು. ಈಗ ಅವರು ಏನು ೩.೮ ಪರ್ಸೆಂಟ್ ಹೆಚ್ಚು ಮಾಡಿದ್ದಾರೆ ಅದನ್ನು ೫ ಪರ್ಸೆಂಟ್ ಎಂದು ಮಾಡಿಸಿದರೆ ನಾನು ಲೆಕ್ಕ ಹಾಕಿದ ಪ್ರಕಾರ ಆಗ ನಮಗೆ ೫ ೫೦೦ ಕೋಟಿ ರೂಪಾಯಿಗಳು ಬರುತ್ತವೆ. ಅವರು ಈ ರೀತಿ ಏರಿಸುತ್ತಾರೋ ಏನೋ ನನಗೆ ಗೊತ್ತಿಲ್ಲ. ೯ನೇ ಆರ್ಥಿಕ ಆಯೋಗದವರು ಮಧ್ಯಂತರ ಅವಾರ್ಡ್ ಕೊಟ್ಟಿದ್ದರು. ಅದು ೪.೨೧ ಎಂದು ನಿಗದಿ ಮಾಡಿದ್ದರು ಅಂತಿಮ ಫೈನಾನ್ಸ್ ಕಮಿಷನ್ ರಿಪೋರ್ಟ್ ಪ್ರಕಾರ ೩.೮ ಎಂದು ಮಾಡಿದ್ದಾರೆ. ಅದರ ಪ್ರಕಾರ ನಮಗೆ ದೊರಕತಕ್ಕ ಪಾಲು ೪೦೬೩ ಕೋಟಿ ರೂಪಾಯಿಗಳು. ಫೈನಾನ್ಸ್ ಕಮಿಷನ್ ರಿಪೋರ್ಟ್ ಪ್ರಕಾರ ೩.೮ ಏನಿದೆ ಅದರ ಪ್ರಕಾರ ೫ ಪರ್ಸೆಂಟ್ ಮತ್ತೆ ಹೆಚ್ಚಾದರೆ ಆ ರಿಪೋರ್ಟನ್ನು ಯಾರೇ ಕೊಡಲಿ, ಅದನ್ನು ಟೋಟಲಿ ಅಕ್ಸೆಪ್ಟ್ ಮಾಡಬೇಕೆಂದೇನೂ ಇಲ್ಲ. ಅದನ್ನು ಮಾಡಿಫೈ ಮಾಡಬಹುದು, ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಜನಸಂಖ್ಯೆ ಮತ್ತು ವಿಸ್ತೀರ್ಣದಲ್ಲಿ ನಮ್ಮ ರಾಜ್ಯ ರ್‍ಯಾಂಕ್‌ನಲ್ಲಿ ೮ನೇ ಸ್ಥಾನದಲ್ಲಿದೆ. ಆದರೆ ಆರ್ಥಿಕ ಅವಾರ್ಡ್‌ನಲ್ಲಿ ೧೧ನೇ ಸ್ಥಾನದಲ್ಲಿದ್ದೇವೆ. ಇನ್ನೊಂದು ಉದಾಹರಣೆ ಹೇಳಬೇಕಾದರೆ, ಮಿಜೋರಾಮ್ ಎಂಬ ಚಿಕ್ಕ ರಾಜ್ಯಕ್ಕೆ ನ್ಯಾಷನಲ್ ಆವರೇಜ್ ಹೇಳುತ್ತಿದ್ದೇನೆ ಪರ್ ಕ್ಯಾಪಿಟಾ ಅಲೋಕೇಷನ್ ಆಫ್ ರಿಸೋರ್ಸಸ್ ಏನಿದೆ ಅದು ೩೪೦೦ ಇದೆ. ಆದರೆ ಕರ್ನಾಟಕ ರಾಜ್ಯದ ಪರ್ ಕ್ಯಾಪಿಟಾ ಅಲೋಕೇಷನ್ ಆಫ್ ರಿಸೋರ್ಸಸ್ ೧೩೪ ಇದೆ. ನ್ಯಾಷನಲ್ ಆವರೇಜ್ ಏನಿದೆ ಅದು ೧೭೨೬ ಇದೆ, ಮಿಜೋರಾಮ್‌ದು ೩೪೦೦, ಆದರೆ ನಮ್ಮ ಕರ್ನಾಟಕದ ಪಾಲು ೧೩೪ ರೂಪಾಯಿ. ಈವೊಂದು ಅವಾರ್ಡ್ ಮಾಡುವ ಸಿಸ್ಟಮ್ ಏನಿದೆ ಇದರಿಂದ ನಮ್ಮ ರಾಜ್ಯಕ್ಕೆ ಆರ್ಥಿಕವಾಗಿ ಪೆಟ್ಟು ಬಿದ್ದಿದೆ ನಮ್ಮ ಹಣಕಾಸಿನ ಮಂತ್ರಿಗಳು ಗಂಭೀರವಾಗಿ ಇದನ್ನು ಯೋಚಿಸಬೇಕು. ಈ ೯ನೇ ಹಣಕಾಸಿನ ಆಯೋಗದಿಂದ ನಮಗೆ ಅನ್ಯಾಯವಾದರೂ ಪರವಾಗಿಲ್ಲ ಕೇಂದ್ರ ಸರ್ಕಾರಕ್ಕೆ ಸಹಾಯ ಮಾಡಲು ಅನೇಕ ಮಾರ್ಗಗಳಿವೆ. ತೆರಿಗೆಯೇತರ ರಿಸೋರ್ಸಸ್ ಏನಿದೆ ಅದನ್ನು ರಾಜ್ಯಾಂಗದ ಅನುಚ್ಛೇದ ೨೭೫ರ ಪ್ರಕಾರ ರಾಜ್ಯಕ್ಕೆ ಸಂಪನ್ಮೂಲಗಳನ್ನು ಒದಗಿಸುವ ಬಗ್ಗೆ ಇದೆ ಅದರ ಪ್ರಕಾರ ೮ನೇ ಪಂಚವಾರ್ಷಿಕ ಯೋಜನೆಯನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಅವರು ಕಾರ್ಯಾಚರಣೆಯಲ್ಲಿ ತಂದದ್ದೆ ಆದರೆ ನಮ್ಮ ರಾಜ್ಯದ ಆರ್ಥಿಕ ಅಭಿವೃದ್ಧಿಯ ಯೋಜನೆಗಳಿಗೆ ಹಣ ಸಿಗುತ್ತದೆಂದು ತಿಳಿದುಕೊಂಡು ನಾನು ಹೇಳುತ್ತೇನೆ. ತಮಿಳುನಾಡಿನಲ್ಲಿ ಸ್ಟೇಟ್ ಪ್ಲಾನಿಂಗ್ ಕಮಿಷನ್ ಎಂದು ಮಾಡಿಕೊಂಡಿದ್ದಾರೆ. ಸರ್ಕಾರಿ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಜೊತೆಗೆ ತಜ್ಞರುಳ್ಳ ಸ್ಟೇಟ್ ಪ್ಲಾನಿಂಗ್ ಕಮಿಷನ್ ಎಂದು ಮಾಡಿದ್ದಾರೆ ನಮ್ಮಲ್ಲಿ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಇದೆ. ಅದು ಅಷ್ಟು ಉತ್ತಮವಾಗಿ ಕೆಲಸ ಮಾಡುವುದಕ್ಕಾಗುತ್ತದೆಯೋ ಏನೋ ಗೊತ್ತಿಲ್ಲ. ಏಕೆಂದರೆ ಅದು ಬ್ಯುರೋಕ್ರಾಟ್ಸ್ ಸಂಸ್ಥೆ. ಈ ಬಗ್ಗೆ ಒಂದು ಕಮಿಟಿ ಮಾಡಿ ಪ್ಲಾನಿಂಗ್ ಸಿಸ್ಟಮ್ ಅನ್ನು ರಿವೈಸ್ ಮಾಡಿ. ಈ ಯೋಜನಾ ಇಲಾಖೆ ಯಾವರೀತಿ ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡು ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಸರ್ಕಾರದವರು ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ತಮಿಳುನಾಡಿನ ಮಾದರಿಯಲ್ಲಿ ಸ್ಟೇಟ್ ಪ್ಲಾನಿಂಗ್ ಕಮಿಷನ್ ಅಪಾಯಿಂಟ್ ಮಾಡಬೇಕೆಂದು ತಮಗೆ ನಾನು ಸಲಹೆ ಕೊಡುತ್ತೇನೆ. ಇನ್ನೊಂದು ಸಲಹೆ ಏನೆಂದರೆ, ಈಗ ನಾವು ಬಜೆಟ್ ಪಾಸ್ ಮಾಡುವುದು ಮಾರ್ಚಿ ತಿಂಗಳಿನಲ್ಲಿ. ತಾವು ಬಜೆಟನ್ನು ಮಂಡಿಸುವುದು ಸಹ ಮಾರ್ಚಿ ತಿಂಗಳಿನಲ್ಲಿಯೇ. ಆದರೆ ಭಾರತ ದೇಶದ ಆರ್ಥಿಕ ಪರಿಸ್ಥಿತಿ ಒಕ್ಕಲುತನದ ಮೇಲೆ ಅವಲಂಬಿಸಿದೆ. ಒಕ್ಕಲುತನದ ಪರಿಸ್ಥಿತಿ ಮಳೆಯ ಮೇಲೆ ಅವಲಂಬಿತವಾಗಿದೆ. ನಮ್ಮ ಆರ್ಥಿಕ

ಪರಿಸ್ಥಿತಿಯು ನೈಜ ಸ್ಥಿತಿ ಗೊತ್ತಿರಲಾರದೆ ನಾವು ಬಜೆಟನ್ನು ಪಾಸ್ ಮಾಡುತ್ತಿದ್ದೇವೆ. ಈ ಒಂದು ಮೂಲಭೂತವಾದ ಸಮಸ್ಯೆಯನ್ನು ಬದಲಾವಣೆ ಮಾಡಲಿಕ್ಕೆ ಏನಾದರೂ ಒಂದು ಸಲಹೆ ಇದ್ದರೆ ಹುಡುಕಬೇಕೆಂದು ಕೇಳಿಕೊಳ್ಳುತ್ತೇನೆ. ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಲ್ಲಿ ಫೈನಾನ್ಸ್ ವರ್ಷ ಬೇರೆ ಬೇರೆ ತಿಂಗಳುಗಳಲ್ಲಿದೆ ಎಂದು ಕೇಳಿದ್ದೇನೆ. ನಮ್ಮಲ್ಲಿಯೂ ಕೂಡ ಫೈನಾನ್ಸಿಯಲ್ ಇಯರ್ ಅನ್ನು ಸೆಪ್ಟೆಂಬರ್‌ದಿಂದ ಅಕ್ಟೋಬರ್ ಮಾಡಿದರೆ ಒಳ್ಳೆಯದು.

ಆಗ ಮುಂಗಾರು ಹಿಂಗಾರು ಮಳೆಯ ಪರಿಣಾಮ ಗೊತ್ತಾಗುತ್ತದೆ. ಎರಡೂ ಬೆಳೆಗಳ ಪರಿಸ್ಥಿತಿ ಗೊತ್ತಾಗುತ್ತದೆ. ಆಗ ನಮ್ಮ ನೈಜಸ್ಥಿತಿಯನ್ನು ಅವಲೋಕಿಸಿ ಬಜೆಟ್‌ನ್ನು ತಯಾರು ಮಾಡಬಹುದು. ಇಲ್ಲದಿದ್ದರೆ ನಾವು ಯಾವ ಯೋಜನೆಯನ್ನು ನಿರೂಪಣೆ ಮಾಡಿರುತ್ತೇವೆ, ಅದರ ಆರ್ಥಿಕ ಸಾಧಕ ಬಾಧಕ ಪರಿಸ್ಥಿತಿ ನಮಗೆ ಗೊತ್ತಾಗುವುದಿಲ್ಲ. ಅದಕ್ಕಾಗಿ ಈ ಪ್ರಸಕ್ತ ವರ್ಷದಲ್ಲಿ ಕೂಡ ವೋಟ್ ಅನ್ ಅಕೌಂಟ್ ತೆಗೆದುಕೊಂಡು ಮತ್ತೆ ಜುಲೈ ತಿಂಗಳಲ್ಲಿ ಸೇರುತ್ತಿದ್ದೇವೆ. ಅದರ ಬದಲಿಗೆ ಮಾರ್ಚ್ ಮತ್ತು ಏಪ್ರಿಲ್ ಹಣಕಾಸಿನವರ್ಷ ಇರುವುದನ್ನು ತೆಗೆದು ಸೆಪ್ಟೆಂಬರ್‌ದಿಂದ ಅಕ್ಟೋಬರ್ ಈ ಪೀರಿಯಡ್‌ನ್ನು ಹಣಕಾಸಿನ ವರ್ಷವೆಂದು ಬದಲಾಯಿಸಿದರೆ ಒಂದು ವಾಸ್ತವಿಕವಾದ ಬಜೆಟ್‌ನ್ನು ನಿರೂಪಿಸಲು ಸಾಧ್ಯವಾಗುತ್ತದೆ ಎಂದು ನಾನು ತಮಗೆ ಒಂದು ಸಲಹೆಯನ್ನು ಕೊಡುತ್ತಿದ್ದೇನೆ. ಕೊನೆಯದಾಗಿ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಸಲುವಾಗಿ ನೀವು ೪೦ ಕೋಟಿ ರೂಪಾಯಿ ಇಟ್ಟಿದ್ದೀರಿ. ಪ್ಲಾನಿಂಗ್ ಕಮಿಷನ್‌ನಿಂದ ಈ ಹಣ ಬಂದದ್ದನ್ನು ಇಲ್ಲಿ ನಮೂದು ಮಾಡಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ೪೦ ಕೋಟಿ ರೂಪಾಯಿ ಪ್ಲಾನಿಂಗ್ ಕಮಿಷನ್‌ನವರು ಕೊಟ್ಟಿದ್ದಾರೆ ಎಂದು ಹೇಳಿದರು. ಬಹಳ ಸಂತೋಷ. ಅದರ ಸಲುವಾಗಿ ೪೦ ಕೋಟಿಯನ್ನು ಹೇಗೆ ಖರ್ಚು ಮಾಡಬೇಕೆಂಬ ಬಗ್ಗೆ ಸಮಗ್ರವಾದ ರೂಪುರೇಷೆಗಳನ್ನು ತಯಾರಿಸಿ ಚುನಾಯಿತ ಪ್ರತಿನಿಧಿಗಳೊಡನೆ ಚರ್ಚೆ ಮಾಡಬೇಕು. ಬಹಳ ಸಂತೋಷದ ವಿಚಾರ ಇದು. ಇದಕ್ಕಾಗಿ ನಾನು ಹೈದರಾಬಾದ್ ಕರ್ನಾಟಕ ಭಾಗದ ಜನರ ಪತಿಯಿಂದ ಸ್ವಾಗತ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಈಗ ಹೊಸ ಸರ್ಕಾರ ಬಂದಿದೆ. ನನ್ನ ದೃಷ್ಟಿಯಿಂದ ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬರಬೇಕಾದರೆ ಮುಖ್ಯವಾಗಿ ತರುಣರ ಪಾತ್ರ ಹೆಚ್ಚಿನದಾಗಿದೆ. ಅವರು ಅತ್ಯಂತ ಉತ್ಸಾಹದಿಂದ, ಆಶೋತ್ತರಗಳನ್ನು ಇಟ್ಟುಕೊಂಡು ನಮ್ಮ ಪಕ್ಷಕ್ಕೆ ಸಹಕಾರ ಕೊಟ್ಟು ಗೆಲ್ಲಿಸಿಕೊಟ್ಟಿದ್ದಾರೆ. ಅದಕ್ಕಾಗಿ ನಮ್ಮ ಜನ ಸಮುದಾಯದಲ್ಲಿರತಕ್ಕಂಥ ನಿರುದ್ಯೋಗದ ಭೂತ ಏನಿದೆ, ಅದನ್ನು ನಿವಾರಣೆ ಮಾಡಬೇಕಾದರೆ ಒಂದು ಸಮಗ್ರವಾದ ಯೋಜನೆಯನ್ನು, ಪ್ರತಿಯೊಂದು ಇಲಾಖೆಯಲ್ಲೂ ಕೂಡ, ಯಾವ್ಯಾವ ಇಲಾಖೆಯಲ್ಲಿ ಏನು ಉದ್ಯೋಗಾವಕಾಶ ಕಲ್ಪಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನೋಡಿ, ಒಂದು ತಜ್ಞರ ಮಂಡಳಿಯನ್ನು ರೂಪಿಸಿ ಅವರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡತಕ್ಕಂಥ ಯೋಜನೆಗಳನ್ನು ಹೆಚ್ಚು ಮಾಡಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಟ್ಟರೆ ತರುಣರಿಗೆ, ಕರ್ನಾಟಕ ರಾಜ್ಯದ ಜನರಿಗೆ ಪ್ರತ್ಯುಪಕಾರವನ್ನು ತೋರಿಸಿದಂತಾಗುತ್ತದೆ ಎಂದು ಹೇಳಿ ಕಾಂಗ್ರೆಸ್ ಸರ್ಕಾರದ ಆಳ್ವಿಕೆಯಲ್ಲಿ, ಅಧಿಕಾರ ನಿರ್ವಹಣೆಯಲ್ಲಿ ಕರ್ನಾಟಕ ರಾಜ್ಯ ಉತ್ತರೋತ್ತರವಾಗಿ ಆರ್ಥಿಕ ಅಭಿವೃದ್ಧಿಯನ್ನು ಹೊಂದಲಿ ಎಂದು ಆಶಿಸಿ ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಡಾ॥ ಎನ್. ಬಿ. ನಂಜಪ್ಪ (ಶ್ರವಣಬೆಳಗೊಳ).— ಮಾನ್ಯ ಅಧ್ಯಕ್ಷರೇ, ಈಗಾಗಲೇ ೧೯೮೦–೮೧ರ ಆಯವ್ಯಯ ಪತ್ರ ಮಂಡನೆಯಾಗಿ, ಅದರ ಮೇಲೆ ಅನೇಕ ಮಾನ್ಯ ಸದಸ್ಯರು ಈ ಸದನದಲ್ಲಿ ತಮ್ಮ ಅಭಿಮತಗಳನ್ನು ಮತ್ತು ಇದರಲ್ಲಿರತಕ್ಕಂಥ ಒಳಿತು ಕೆಡಕುಗಳನ್ನು ತಿಳಿಸಿದ್ದಾರೆ. ನಾನಾದರೂ ಕೂಡ ಈ ಒಂದು ಆಯವ್ಯಯ ಪತ್ರ ನಿಜವಾಗಿಯೂ ಕೂಡ ಬಹಳ ಒಳ್ಳೆಯ ಐತಿಹಾಸಿಕವಾದಂಥ ಆಯವ್ಯಯ ಪತ್ರ ಮತ್ತು ಇದನ್ನು ನಾವೆಲ್ಲರೂ ಕೂಡ ಒಪ್ಪಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದಕ್ಕೆ ಕಾರಣವಾದರೂ ಇಷ್ಟೆ, ಏನು ಕರ್ನಾಟಕ ರಾಜ್ಯದ ಆರ್ಥಿಕವ್ಯವಸ್ಥೆ ಈ ಮೊದಲು ಹದಗೆಟ್ಟು ಸಂಪೂರ್ಣವಾಗಿ ಕೊನೆ ಮುಟ್ಟಿದಂಥ ಸಂದರ್ಭದಲ್ಲಿ ನಮ್ಮ ಅರ್ಥ ಸಚಿವರು ಬಹಳ ಯೋಚನೆ ಮಾಡಿ ಇದನ್ನು ತಯಾರಿಸಿದ್ದಾರೆ ಎಂದು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಬಹಳ ಮುಖ್ಯವಾಗಿ ಹಿಂದೆ, ಅಂದರೆ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ, ಮತ್ತು ಮಾನ್ಯ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದಾಗ ಮಂಡಿಸಿದ ಆಯವ್ಯಯ ಪತ್ರ ಏನಿತ್ತು, ಅದನ್ನೂ ಸಹ ನಾನು ನೋಡಿದ್ದೇನೆ ಆದರೆ, ಇದರ ಬಗ್ಗೆ ಇಲ್ಲಿ ನಮ್ಮ ವಿರೋಧಪಕ್ಷದ ಅನೇಕ ಸದಸ್ಯರು ಮತ್ತು ನಾಯಕರುಗಳು ಮಾತನಾಡತಕ್ಕ ಸಂದರ್ಭದಲ್ಲಿ, ನಾವು

ವಿರೋಧಪಕ್ಷದಲ್ಲಿದ್ದೇವೆ, ಆದ್ದರಿಂದ ನಾವು ವಿರೋಧ ಮಾಡಬೇಕು. ವಿರೋಧವನ್ನು ವ್ಯಕ್ತಪಡಿಸಬೇಕು ಎಂಬ ಒಂದೇ ಒಂದು ದೃಷ್ಟಿಯಿಂದ ಮಾತನಾಡಿರುವುದನ್ನು ಈ ಎರಡು ದಿವಸಗಳಿಂದ ನಾನು ನೋಡಿದೆ. ಆದರೆ ಇದರಲ್ಲಿ ಒಟ್ಟಾರೆ, ಕೃಷಿ, ಗ್ರಾಮೀಣಾಭಿವೃದ್ಧಿ, ವಿದ್ಯುಚ್ಛಕ್ತಿ ಮತ್ತು ನೀರಾವರಿಗೆ ಬಹಳಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿರುವುದು ಪ್ರತಿಯೊಬ್ಬರಿಗೂ ಗೊತ್ತಾಗತಕ್ಕ ವಿಷಯ. ಕರ್ನಾಟಕ ರಾಜ್ಯದಲ್ಲಿ ಈ ವಿದ್ಯುಚ್ಛಕ್ತಿ ಸಮಸ್ಯೆ ಬಹಳ ದೊಡ್ಡ ಸಮಸ್ಯೆಯಾಗಿ ನಮ್ಮ ಮುಂದೆ ನಿಂತಿದೆ. ನನಗೆ ಗೊತ್ತಿರುವ ಹಾಗೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಮುಖ್ಯವಾಗಿ ನಮ್ಮ ತಾಲ್ಲೂಕು ಮತ್ತು ನಮ್ಮ ಜಿಲ್ಲೆಯಲ್ಲಿ ೧೯೮೭ರಿಂದ ರೈತರು ತೋಡಿರತಕ್ಕ ಬೋರ್‌ವೆಲ್‌ಗಳಿಗೆ ಅಳವಡಿಸಿರುವ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಆಗಿಲ್ಲ. ನನ್ನ ತಾಲ್ಲೂಕಿನಲ್ಲಿ ಎರಡೂವರೆ ಸಾವಿರ ಕೊಳವೆ ಬಾವಿಗಳನ್ನು ಕೊರೆದಿದ್ದು, ಇವು ವಿದ್ಯುಚ್ಛಕ್ತಿ ಇಲ್ಲದೇ ಹಾಗೆಯೇ ಉಳಿದಿವೆ. ೧೯೮೭-೮೮ ಮತ್ತು ೧೯೮೮-೧೯೮೯ರಲ್ಲಿ ೧,೧೫೦ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಲ್ಲ. ಈಗಾಗಲೇ ರೈತರು ೨-೩ ಕಂತಿನ ಸಾಲವನ್ನೂ ವಾಪಸ್ ಕೊಟ್ಟಿದ್ದಾರೆ. ಆದರೆ ವಿದ್ಯುಚ್ಛಕ್ತಿ ಸರಬರಾಜು ಮಾತ್ರ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಇರತಕ್ಕ ಎಲ್ಲಾ ಬೋರ್‌ವೆಲ್‌ಗಳ ಲೆಕ್ಕವನ್ನು ತೆಗೆದುಕೊಂಡರೆ, ಎಂತಹ ದೊಡ್ಡ ಸಮಸ್ಯೆಯನ್ನು ಈ ಮೂರು ವರ್ಷಗಳಿಂದ ಬಿಟ್ಟು ಹೋಗಿದ್ದಾರೆ ಎಂಬುದು ನಮಗೆ ಇದರಿಂದಲೇ ವೇದ್ಯವಾಗುತ್ತದೆ. ಆದಕ್ಕಾಗಿ, ಬಹಳ ಮುಖ್ಯವಾಗಿ ನಾನು ಹೇಳುವುದು ಇಷ್ಟೆ, ನನಗೆ ಈ ಆಯುವ್ಯಯವನ್ನು ನೋಡಿದಾಗ, ಈ ಬಾಬಿಗೆ ೨೭೬ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದು ಸಾಕಾಗುತ್ತದೆಯೋ, ಇಲ್ಲವೋ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಕಾರಣ ಇಷ್ಟೆ, ೩-೪ ವರ್ಷಗಳಿಂದ ನಮಗೆ ಗೊತ್ತಿರುವಹಾಗೆ ಸಾಕಷ್ಟು ವಿದ್ಯುಚ್ಛಕ್ತಿ ಉತ್ಪಾದನೆ ಕೂಡ ಆಗಿಲ್ಲ. ತಮಿಳುನಾಡಿಗೆ ಹೋಲಿಸಿದರೆ, ಅಥವಾ ಪಕ್ಕದ ರಾಜ್ಯವಾದ ಆಂಧ್ರಪ್ರದೇಶಕ್ಕೆ ಹೋಲಿಕೆ ಮಾಡಿದರೆ, ನಮ್ಮ ರಾಜ್ಯದಲ್ಲಿ ಇದು ಪೂರ್ತಿಯಾಗಿ ಸ್ಥಗಿತವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಒಂದು ಕಡೆ ವಿದ್ಯುಚ್ಛಕ್ತಿ ಉತ್ಪಾದನೆ ಆಗಬೇಕಾಗಿದೆ, ಇನ್ನೊಂದು ಕಡೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಬೇಕಾದ ಮೆಟೀರಿಯಲ್ಸ್‌ಗೆ ಹಣವನ್ನು ಒದಗಿಸಬೇಕಾಗಿದೆ. ಈಗ ಹಾಲಿ, ಉಳಿಕೆ ಇರತಕ್ಕ ಬಾವಿಗಳಿಗೆ ಜಾಗ್ರತೆ ವಿದ್ಯುತ್ ಕೊಡುವುದಾದರೆ, ಒಂದು ಕಾಂಟ್ರಾಕ್ಟ್ ಮೂಲಕ ಕೊಡಬೇಕು, ಇಲ್ಲವೇ ಪಿ. ಡಬ್ಲ್ಯು. ಡಿ ಮತ್ತು ಇರಿಗೇಷನ್ ಡಿಪಾರ್ಟ್‌ಮೆಂಟ್‌ಗಳಲ್ಲಿ ಮಾಡತಕ್ಕ ರೀತಿಯಲ್ಲಿ, ತ್ವರಿತಗತಿಯಲ್ಲಿ ಕೆಲಸ ನಡೆಸಿದರೆ ಮಾತ್ರ, ಬಾಕಿ ಇರತಕ್ಕ ಬಾವಿಗಳೆಲ್ಲವುಗಳಿಗೆ ವಿದ್ಯುತ್ ಸರಬರಾಜು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಇದನ್ನು ಆ ಡಿಪಾರ್ಟ್‌ಮೆಂಟ್‌ನವರಿಗೇ ವಹಿಸಿದರೆ ಸಾಧ್ಯವಾಗುವುದಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನನಗೆ ಗೊತ್ತಿರುವಹಾಗೆ, ಒಂದು ಸಾವಿರ ಬಾವಿಗಳಿಗೆ, ಮೆಟೀರಿಯಲ್ಸ್ ಕೊಟ್ಟರೂ ಕೂಡ ೮-೯ ಬಾವಿಗಳಿಗೆ ಮಾತ್ರ ಸರ್ವೀಸ್ ಕೊಡುತ್ತಾರೆ. ಈಗ ಹಾಲಿ ಇರತಕ್ಕ ಬಾವಿಗಳಿಗೆ ಡಿಪಾರ್ಟ್‌ಮೆಂಟ್ ಮೂಲಕವೇ ಮೆಟೀರಿಯಲ್ಸ್ ಮತ್ತು ಹಣವನ್ನು ಒದಗಿಸಿ ವಿದ್ಯುತ್ ಕೊಡುವುದಾದರೆ ಇನ್ನು ೫ ವರ್ಷವಾದರೂ ಕೂಡ ಇದನ್ನು ಮಾಡುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಈಗ ಈ ಎಲೆಕ್ಟ್ರಿಸಿಟಿ ಸರಬರಾಜು ಏನು ಆಗುತ್ತಿದೆ, ಆದರಲ್ಲಿ ಬಹಳಷ್ಟು ಕದಿಯುತ್ತಿದ್ದಾರೆ ಎಂಬ ಮಾತನ್ನು ಸಾಮಾನ್ಯ ಜನರೂ ಕೂಡಾ ಮಾತನಾಡತಕ್ಕದ್ದು ಇದೆ. ಫ್ಯಾಕ್ಟರಿಗಳಲ್ಲಿ ಮಿಸ್‌ಯೂಸ್ ಮಾಡುತ್ತಾರೆ, ವಿತರಣೆ ಸರಿಯಾಗಿಲ್ಲವೆಂಬ ಬಗ್ಗೆ ಕೂಡಾ ಸಾಕಷ್ಟು ದೂರುಗಳು ಕೇಳಿ ಬರುತ್ತಿವೆ. ಇದನ್ನೂ ಕೂಡಾ ಮಾನ್ಯ ಅರ್ಥ ಸಚಿವರು ಮತ್ತು ಕನ್‌ಸರ್ನ್ಡ್ ಮಿನಿಸ್ಟರ್‌ರವರು ವಿಚಾರ ಮಾಡುವುದು ಬಹಳ ಒಳ್ಳೆಯದು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ವ್ಯವಸಾಯದಲ್ಲಿ ಬೇಕಾದಷ್ಟು ಪ್ರಗತಿಯನ್ನು ಈ ದೇಶದಲ್ಲಿ ಸಾಧಿಸಿದ್ದೇವೆ ಎಂದರೆ ತಪ್ಪೇನಿಲ್ಲ. ಬಹಳಷ್ಟು ಜನ ಸದಸ್ಯರು ರೈತರ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ, ಅವರ ಸಾಲದ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸುವುದನ್ನು ನಾನು ನೋಡಿದ್ದೇನೆ ಮತ್ತು ಕೇಳಿದ್ದೇನೆ. ನಾನೂ ಕೂಡಾ ರೈತ ಕುಟುಂಬದವನಾದುದರಿಂದ ನಮ್ಮ ದೇಶದಲ್ಲಿ ೧೯೫೦ರಲ್ಲಿ ಇದ್ದ ಸ್ಥಿತಿಗೂ ಇವತ್ತು ಅಂದರೆ ೧೯೯೦ರಲ್ಲಿ ಇರುವ ಸ್ಥಿತಿಯನ್ನೂ ಯೋಚನೆ ಮಾಡಿದರೆ ಬಹಳಷ್ಟು ಸಾಧನೆಯನ್ನು ನಮ್ಮ ದೇಶದಲ್ಲಿ ಮಾಡಿದ್ದೇವೆ. ಇದು ನೆಗ್ಲೆಕ್ಟೆಡ್ ಸೆಕ್ಟರ್ ಅಲ್ಲ ಎಂಬುದು ಪ್ರತಿಯೊಬ್ಬರಿಗೂ ಕೂಡಾ ಗೊತ್ತಿದೆ. ಮೊದಲನೇ ಪಂಚವಾರ್ಷಿಕ ಯೋಜನೆಯಿಂದ ಹಿಡಿದು ಏಳನೇ ಪಂಚವಾರ್ಷಿಕ ಯೋಜನೆಯವರೆಗೆ ಸಾಕಾದಷ್ಟು ಆದ್ಯತೆಯನ್ನು ಈ ಅಗ್ರಿಕಲ್ಚರ್ ಸೆಕ್ಟರ್‌ಗೆ ಸರ್ಕಾರ ಕೊಟ್ಟಿದೆ ಎಂಬುದನ್ನು ಪ್ರತಿಯೊಬ್ಬರೂ ಮರೆಯಬಾರದು. ನಾವು ಇವತ್ತಿಗೂ ಕೂಡಾ ವ್ಯವಸಾಯ ಮಾಡುತ್ತೇವೆ. ಇದರಲ್ಲಿ ಕಷ್ಟನಷ್ಟಗಳು ಇವೆ, ಒಪ್ಪಿಕೊಳ್ಳೋಣ. ಸಾಕಾದಷ್ಟು ಅಭಿವೃದ್ಧಿಯಾಗಿಲ್ಲ, ಸಾಕಾದಷ್ಟು ಹಣ ರೆ ತರಿಗೆ ಬರುತ್ತಿಲ್ಲ, ಮಧ್ಯೆ ಪೋಲಾಗುತ್ತಿದೆ ಎಂಬ ಮಾತನ್ನು ಆಗಾಗ್ಗೆ ಕೇಳುತ್ತಿದ್ದೇವೆ. ಈ ಬಗ್ಗೆ ಮನೆ ಮೊಸಳೆ ಕಣ್ಣೀರು ಸುರಿಸತಕ್ಕ ಸಂದರ್ಭದಲ್ಲಿ ನಿಜಸ್ಥಿತಿಯನ್ನೂ ಸಹ ನಾವು ಅರ್ಥ

ಮಾಡಿಕೊಳ್ಳಬೇಕು. ನಮಗೆ ಬರತಕ್ಕ ಇಂಟರ್ನಲ್ ರಿಸೋರ್ಸಸ್ ಏನು, ನಾವು ಹೇಗೆ ಫೈನಾನ್ಸ್ ಮೊಬಿಲೈಸ್ ಮಾಡಬೇಕು, ಅದನ್ನು ಯಾವರೀತಿ ಖರ್ಚು ಮಾಡಬೇಕು, ಅದು ಯಾವರೀತಿ ಸದುಪಯೋಗವಾಗಬೇಕು ಎಂಬುದರ ಬಗ್ಗೆ ಸಹ ಸದಸ್ಯರು ದೀರ್ಘವಾಗಿ ಆಲೋಚಿಸಿ ನಿಜಸ್ಥಿತಿಯನ್ನು ಅರ್ಥ ಮಾಡಿಕೊಂಡು ಮಾತನಾಡುವುದು ಒಳ್ಳೆಯದು ಎಂದು ನನಗನ್ನಿಸುತ್ತದೆ. ಏತಕ್ಕೆಂದರೆ ರೈತರ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ಎಲ್ಲರೂ ಕೂಡ ರೈತರ ಸಾಲ ಬಿಡಬೇಕು. ಹೀಗೆ ಆಗಬೇಕು ಹಾಗೆ ಆಗುತ್ತದೆ ಎಂಬುದನ್ನು ಹೇಳುತ್ತಾರೆ. ಆದರೆ ನಮ್ಮ ಹತ್ತಿರ ಏನು ಸಂಪನ್ಮೂಲ ಇದೆಯೋ ಅದನ್ನು ಚೆನ್ನಾಗಿ ಬಳಸಿಕೊಳ್ಳಬೇಕೇ ವಿನಹ ಇಲ್ಲದಿದ್ದುದನ್ನು ಎಲ್ಲಿಂದ ತರುವುದು. ಅಗ್ರಿಕಲ್ಚರಲ್ ಸೆಕ್ಟರ್‌ಗೆ ಐದು ಸಾವಿರ ಕೋಟಿ ರೂಪಾಯಿಗಳು ಬೇಕೆಂದರೆ ಎಲ್ಲಿಂದ ಬರುತ್ತದೆ. ೧೫೦ ಕೋಟಿ ರೂಪಾಯಿ ಮಾತ್ರ ನಮಗೆ ಖರ್ಚು ಮಾಡುವುದಕ್ಕೆ ಸಾಧ್ಯತೆ ಇದೆ. ನಮ್ಮ ಆಯವ್ಯಯ ಇನಕ್ಕಿದ್ದು ಎಷ್ಟು ಎಂಬುದು ನಮಗೆಲ್ಲರಿಗೂ ಕೂಡಾ ಗೊತ್ತಿದೆ. ಅದರಲ್ಲಿ ನಾವು ಭಾಗ ಮಾಡಿ ಇಂತಹದಕ್ಕೆ ಮೊದಲ ಆದ್ಯತೆ ಕೊಡಬೇಕೆಂಬುದರ ಬಗ್ಗೆ ಯೋಚನೆ ಮಾಡಿದರೆ ಬಹಳ ಒಳ್ಳೆಯದು. ಬಹಳ ಜನ ಸ್ಟ್ಯಾಟಿಸ್ಟಿಕ್ಸ್ ಕೊಟ್ಟು ಮಾತನಾಡುವುದು ಇಲ್ಲಿ ಬಹಳ ದಿವಸದಿಂದ ನಡೆದಿದೆ. ಅದರ ಬಗ್ಗೆ ನಾನು ಸಹ ಸ್ಟ್ಯಾಟಿಸ್ಟಿಕ್ಸ್ ಕೊಡುತ್ತಾ ಹೆಚ್ಚು ಕಾಲವನ್ನು ಕಳೆಯುವುದಕ್ಕೆ ಇಚ್ಛೆಪಡುವುದಿಲ್ಲ. ನನಗಾದರೂ ಅನ್ನಿಸುತ್ತದೆ ಏನು ಇವತ್ತಿನ ದಿವಸ ಪಟ್ಟಣಗಳಿಗೆ ಅನುಕೂಲಗಳನ್ನು ಕಲ್ಪಿಸಿ ಕೊಡುತ್ತಿದ್ದೇವೆಯೋ ಅದೇ ರೀತಿ ಹಳ್ಳಿಯ ಚಿತ್ರವನ್ನೂ ಬದಲಾಯಿಸುವುದಕ್ಕೆ ನಾವು ಯೋಜನೆಗಳನ್ನು ಹಾಕಿಕೊಳ್ಳಬೇಕು. ಹಳ್ಳಿಗಳಿಗೆ ಬೇಕಾಗಿರತಕ್ಕಂಥಾದ್ದು ಎಂದರೆ ಸ್ಕೂಲ್ಸ್ ಬೇಕು, ಎಲೆಕ್ಟ್ರಿಸಿಟಿ ಬೇಕು, ರೋಡ್ಸ್ ಬೇಕು, ವಾಹನ ಸೌಕರ್ಯ ಬೇಕು, ವ್ಯವಸಾಯಕ್ಕೆ ಬೇಕಾದ ಸಾಮಗ್ರಿಗಳು ಬೇಕು, ಈ ರೀತಿ ಎಲ್ಲವನ್ನೂ ಒದಗಿಸಿ, ಹಳ್ಳಿಯ ಚಿತ್ರವನ್ನು ಬದಲಾಯಿಸತಕ್ಕ ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡಬೇಕೇ ವಿನಹ ರೈತರ ಸಾಲವನ್ನು ಮನ್ನಾ ಮಾಡುವುದಲ್ಲ. ನನಗಾದರೂ ಅನ್ನಿಸುತ್ತದೆ, ಸಾಲ ತೆಗೆದು ಕೊಂಡವರು ಹಳ್ಳಿಗಳಲ್ಲಿ ಎಷ್ಟು ಪರ್ಸೆಂಟೇಜ್ ಇದ್ದಾರೆ ಎಂದು ಲೆಕ್ಕಹಾಕಿದರೆ ೨೦ ಪರ್ಸೆಂಟ್ ಜನ ಸಾಲ ತೆಗೆದುಕೊಂಡಿರಬಹುದು. ನಾನು ಶಾಸಕನಾದಮೇಲೆ ನೋಡಿದರೆ ಒಂದು ಹಳ್ಳಿಯಲ್ಲಿ ಇಬ್ಬರೂ ಕೂಡಾ ಸಿಗುವುದಿಲ್ಲ. ಟ್ರ್ಯಾಕ್ಟರ್ ತೆಗೆದುಕೊಳ್ಳುವುದಕ್ಕೆ ಬೋರ್‌ವೆಲ್ ಹಾಕುವುದಕ್ಕೆ ೫೦-೬೦ ಸಾವಿರ ರೂಪಾಯಿ, ಅಥವಾ ಒಂದು ಲಕ್ಷ ರೂಪಾಯಿವರೆಗೆ ಸಾಲ ತೆಗೆದುಕೊಂಡಿರುವವರು ಸಹ ಇದ್ದಾರೆ. ಫಾರಮ್ ಹೌಸಸ್ ಕಟ್ಟುವುದಕ್ಕೆ ಸಾಲ ತೆಗೆದುಕೊಂಡಿರತಕ್ಕವರು ಇದ್ದಾರೆ. ಇವರಲ್ಲಿ ಎಷ್ಟು ಜನ ಬಡವರು ತೆಗೆದುಕೊಂಡಿದ್ದಾರೆ ಎಂದರೆ ಬಹಳಷ್ಟು ಕಡಿಮೆ. ಕೇವಲ ಹತ್ತು ಸಾವಿರ ಸಾಲ ವಜಾ ಮಾಡುವುದರಿಂದ ರೈತನ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆಯೇ ಮತ್ತು ಅದರಿಂದ ಕರ್ನಾಟಕ ರಾಜ್ಯ ಉದ್ಧಾರವಾಗುತ್ತದೆಯೋ ಎಂಬುದನ್ನು ಯೋಚನೆ ಮಾಡಬೇಕು ಈಗ ಸೆಂಟ್ರಲ್ ಗೌರ್ನಮೆಂಟ್‌ನವರು ಹೇಳಿದಂತೆ ಎಲ್ಲ ರೈತರ ಸಾಲ ಮನ್ನಾ ಮಾಡಿದರೆ ೧೬ ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ. ನಮ್ಮ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ ೩೬೦ ಕೋಟಿ ರೂಪಾಯಿ ಬೇಕಾಗುತ್ತದೆಂದು ನಾವು ಮಾತನಾಡತಕ್ಕ ಸಂದರ್ಭದಲ್ಲಿ ತಿಳಿದು ಬಂತು. ಇದೇ ೩೬೦ ಕೋಟಿ ರೂಪಾಯಿಗಳನ್ನು ಅಭಿವೃದ್ಧಿ ಕೆಲಸಕ್ಕೆ ಉಪಯೋಗ ಮಾಡಿಕೊಂಡರೆ ಅದರಿಂದ ರೈತರ ಉದ್ಧಾರ ಆಗುವುದಕ್ಕೆ ಸಾಧ್ಯವೇ ಹೊರತು ಕೇವಲ ೧೦ ಸಾವಿರ ರೂಪಾಯಿಗಳವರೆಗೆ ಸಾಲ ಮನ್ನಾ ಮಾಡಿದರೆ ಅದರಿಂದ ಅವನ ಆರ್ಥಿಕ ಪರಿಸ್ಥಿತಿ ಸುಧಾರಣೆ ಆಗುವುದಕ್ಕೆ ಸಾಧ್ಯವೇ ಎಂಬುದನ್ನು ದೀರ್ಘವಾಗಿ ನಾವೆಲ್ಲರೂ ಯೋಚನೆ ಮಾಡಬೇಕೆಂದು ನನನಿಸುತ್ತದೆ.

ಈ ಸಂದರ್ಭದಲ್ಲಿ ಹಳ್ಳಿಗಳ ಚಿತ್ರ ಬದಲಾಯಿಸತಕ್ಕಂಥದ್ದಕ್ಕೆ ಸಂಬಂಧಪಟ್ಟ ಹಾಗೆ ಎರಡು ಮಾತು ಗಳನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ನಮ್ಮ ಹಳೆಯ ಮೈಸೂರು ಭಾಗದಲ್ಲಿ ಹಿಂದೆ ಗುಂಡುತೋಪು ಮತ್ತು ಸೊಪ್ಪಿನ ಮಂಡಿಗಳೆಂದು ಇದ್ದವು. ಈ ಜಾಗ ಸರ್ಕಾರದ ಜಾಗವಾಗಿತ್ತು. ಇಲ್ಲಿ ಹಣ್ಣಿನ ಗಿಡಗಳನ್ನು ಬೆಳೆಸುವುದು ವಾಡಿಕೆ ಇತ್ತು. ಅದೇ ರೀತಿ ಸೊಪ್ಪಿನ ಮಂಡಿಗಳಲ್ಲಿ ಪ್ರತಿಯೊಬ್ಬರು ಒಂದೊಂದು ಗುಂಟೆ ಜಾಗದಲ್ಲಿ ತರಕಾರಿ ಬೆಳೆದುಕೊಳ್ಳುತ್ತಿದ್ದರು. ಈ ರೀತಿ ಪ್ರತಿಯೊಂದು ಹಳ್ಳಿಗಳಲ್ಲಿಯೂ ಹಿಂದೆ ನಡೆಯುತ್ತಿತ್ತು. ಆದರೆ ಈಗ ಅದು ಇಲ್ಲ. ಈಗ ಒಂದು ಹಳ್ಳಿಯಲ್ಲಿ ನೂರು ಮನೆಗಳು ಇದ್ದರೆ ೧೦-೨೦ ಜನರಿಗೆ ಮಾತ್ರ ನೀರಾವರಿ ಸೌಲಭ್ಯ ಇರುತ್ತದೆ. ಇಲ್ಲ ತಗ್ಗಾದ ಪ್ರದೇಶಗಳಲ್ಲಿ ಭೂಮಿ ಇರುತ್ತದೆ. ಇನ್ನುಳಿದ ೫೦-೬೦ ಮನೆಗಳವರಿಗೆ ನೀರಿನ ಸೌಕರ್ಯ ಇರುವುದಿಲ್ಲ ಅಂತಹವರು ಇಂತಹ ಜಾಗಗಳಲ್ಲಿ ಹಣ್ಣು ಗಿಡಗಳನ್ನು ಮತ್ತು ತರಕಾರಿಗಳನ್ನು ಬೆಳೆಸಿ ಕೊಳ್ಳುತ್ತಿದ್ದರು. ಇದು ಒಂದು ರೀತಿಯಲ್ಲಿ ನ್ಯೂಟ್ರೀಶನ್ ಇದ್ದ ಹಾಗೆ ಇದರಿಂದ ಹಳ್ಳಿಗಳ ಉದ್ಧಾರವಾಗುವುದಕ್ಕೆ ಸಾಧ್ಯವಿದೆ. ನಾವು ಈಗ ಪ್ರೊಟೆಕ್ಟಿವ್ ಆಕ್ಟಿವಿಟೀಸ್‌ಗೆ ಮತ್ತು ಸಾಮಾಜಿಕ ಅರಣ್ಯ ಬೆಳೆಸಲು ಸಾಕಷ್ಟು ಹಣ ಖರ್ಚು ಮಾಡುತ್ತಿದ್ದೇವೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅದರ ಬದಲಿಗೆ ಹಳ್ಳಿಗಳಲ್ಲಿ ಖಾಲಿ ಉಳಿದಿರತಕ್ಕಂಥ ಜಾಗಗಳಲ್ಲಿ ಈ ಒಂದ

ಯೋಜನೆಯನ್ನು ಜಾರಿ ಮಾಡಿದರೆ ಒಳ್ಳೆಯದಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಎಜುಕೇಶನ್ ಬಗ್ಗೆ ಹೇಳುವುದಾದರೆ ನಮ್ಮೆಲ್ಲರಿಗೂ ಗೊತ್ತಿರುವ ಹಾಗೆ ಒಂದೊಂದು ತಾಲ್ಲೂಕಿನಲ್ಲಿ ಸುಮಾರು ೧೦೦–೧೨೦ ಉಪಾಧ್ಯಾಯರ ಹುದ್ದೆಗಳು ಖಾಲಿ ಇವೆ. ಒಂದು ಹಳ್ಳಿಯಲ್ಲಿ ೩೦೦ ಜನ ಮಕ್ಕಳು ಇದ್ದರೆ ಅಲ್ಲಿ ಒಬ್ಬರೋ ಇಬ್ಬರೋ ಉಪಾಧ್ಯಾಯರು ಮಾತ್ರ ಇರುತ್ತಾರೆ. ಇದು ಕೇವಲ ಒಂದೇ ಹಳ್ಳಿಯ ಪ್ರಶ್ನೆ ಅಲ್ಲ, ಒಂದು ತಾಲ್ಲೂಕಿನ ಪ್ರಶ್ನೆ ಅಲ್ಲ, ಇಡೀ ರಾಜ್ಯದಲ್ಲಿ ಈ ಉಪಾಧ್ಯಾಯರ ಬವಣೆ ಇದೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಮತ್ತು ಉಪಾಧ್ಯಾಯರು ಇರುವಂತಹ ಕಡೆ ಅವರಿಗೆ ವಸತಿ ಸೌಕರ್ಯವನ್ನು ಕಲ್ಪಿಸಿ ಕೊಟ್ಟರೆ ಅವರು ಅಲ್ಲಿ ಇದ್ದುಕೊಂಡು ಸರಿಯಾದ ಶಿಕ್ಷಣವನ್ನು ಮಕ್ಕಳಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆ ಸರ್ಕಾರ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ಇನ್ನು ಪ್ರಾಥಮಿಕ ಶಾಲೆಗಳಿಂದ ಹಿಡಿದು ಜೂನಿಯರ್ ಕಾಲೇಜಿನವರೆಗೂ ಮಕ್ಕಳಿಗೆ ಅಗತ್ಯವಾದ ಶೌಚಾಲಯಗಳು ಇಲ್ಲ. ನಾನು ಹೋದ ಕಡೆಯಲ್ಲೆಲ್ಲಾ ಜನರು ಈ ಬಗ್ಗೆ ಅರ್ಜಿಗಳನ್ನು ಕೊಡುತ್ತಾರೆ. ಈ ರೀತಿ ಸುಮಾರು ನೂರಾರು ಅರ್ಜಿಗಳು ನನಗೆ ಬಂದಿವೆ. ಹೈಸ್ಕೂಲ್‌ಗಳಲ್ಲಿ ಮತ್ತು ಜೂನಿಯರ್ ಕಾಲೇಜ್‌ಗಳಲ್ಲಿ ಶೌಚಾಲಯಗಳು ಇಲ್ಲ, ಯೂರಿನಲ್ಸ್ ಇಲ್ಲ. ವಿದ್ಯಾಭ್ಯಾಸ ಮಾಡತಕ್ಕಂಥ ಜಾಗಗಳಲ್ಲಿ ಈಗಿರತಕ್ಕಂಥ ಚಿತ್ರಣವನ್ನು ನಮ್ಮ ಸರ್ಕಾರ ಮನಗಂಡು ಒಂದು ಯೋಜನೆಯನ್ನು ಹಾಕಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ಇನ್ನು ನಾನು ತೆಂಗು ಬೆಳೆ ಬೆಳೆಯುತಕ್ಕ ಪ್ರದೇಶದಿಂದ ಬಂದಿರುವುದರಿಂದ ಕೆಲವು ವಿಷಯಗಳನ್ನು ಈ ಬಗ್ಗೆ ಪ್ರಸ್ತಾಪ ಮಾಡಬೇಕಾಗುತ್ತದೆ. ಒಂದು ಕ್ವಿಂಟಾಲ್ ಕೊಬ್ಬರಿಗೆ ೧೫೦೦ ರೂಪಾಯಿಗಳ ಬೆಲೆಯನ್ನು ಫಿಕ್ಸ್ ಮಾಡಿದ್ದಾರೆ. ೧೫೦೦ ರೂಪಾಯಿಗಳು ಬಹಳ ಕಡಿಮೆ. ಮಿನಿಮಮ್ ೩೦೦೦ ರೂಪಾಯಿಗಳಾದರೂ ಫಿಕ್ಸ್ ಮಾಡಬೇಕಾಗಿತ್ತು. ತೆಂಗು ಬೆಳೆಗಾರರು ಕೊಬ್ಬರಿ ಮಾಡಬೇಕಾದರೆ ತೆಂಗಿನ ಕಾಯಿಯನ್ನು ಒಂದು ವರ್ಷವಾದರೂ ಇಡಬೇಕಾಗುತ್ತದೆ. ಒಂದು ವರ್ಷವಾದ ಮೇಲೆ ಅದನ್ನು ಮಾರಾಟ ಮಾಡಬೇಕಾಗುತ್ತದೆ. ಒಂದು ವರ್ಷ ಇಟ್ಟು ಬರೀ ೧೫೦೦ ರೂಪಾಯಿಗಳಿಗೆ ಒಂದು ಕ್ವಿಂಟಾಲ್ ಕೊಬ್ಬರಿ ಮಾರಾಟ ಮಾಡಿದರೆ ಹೇಗೆ ಲಾಭ ಬರುತ್ತದೆ? ಬಹಳ ಕಡಿಮೆ ಬೆಲೆ ನಿಗದಿ ಮಾಡಿದ್ದಾರೆ. ಈ ಬೆಲೆ ನಿಗದಿ ಮಾಡುವವರಿಗೆ ಒಂದು ಸೈಂಟಿಫಿಕ್ ಆದ ಜ್ಞಾನ ಇಲ್ಲವೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ೧೫೦೦ ರೂಪಾಯಿಗಳನ್ನು ಒಂದು ಕ್ವಿಂಟಾಲ್‌ಗೆ ಫಿಕ್ಸ್ ಮಾಡಿರುವುದು ಬಹಳ ಕಡಿಮೆ. ನನ್ನ ಒಂದೇ ತಾಲ್ಲೂಕು ಅಲ್ಲ. ಇಡೀ ತೆಂಗು ಬೆಳೆಯುವ ತಾಲ್ಲೂಕಿನವರೆಲ್ಲಾ ಸರ್ಕಾರ ಈ ಬೆಲೆ ಫಿಕ್ಸ್ ಮಾಡಿದಾಗ ಪ್ರತಿಭಟನೆ ಮಾಡಿದರು. ಅನೇಕ ಜನ ದೂರುಗಳನ್ನು ಸಹ ಕೊಟ್ಟರು. ಇದರ ಬಗೆ

೫–೩೦ ಪಿ. ಎಂ.

ಮಾನ್ಯ ಆರ್ಥಿಕ ಸಚಿವರು ಯೋಚನೆ ಮಾಡಿ, ಒಂದು ಸರಿಯಾದ ರೇಟ್ ಫಿಕ್ಸ್ ಮಾಡುವುದಕ್ಕೆ ಆಗದೇ ಇರುವುದರಿಂದ ಸೆಂಟ್ರಲ್‌ಗೆ ಈ ದೂರನ್ನು ಕಳುಹಿಸಿ ಅವರ ಮೂಲಕ ಇದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಅಡಲ್ಟ್ ಎಜುಕೇಷನ್ ಬಗ್ಗೆ ಈಗಾಗಲೆ ಕೆಲವರು ಮಾತನಾಡಿದ್ದಾರೆ. ಇದರಿಂದ ನೂರಾರು ಕೋಟಿ ರೂಪಾಯಿಗಳು ಅನ್ಯಾಯವಾಗಿ ಪೋಲಾಗುತ್ತಿದೆ. ಇದರಿಂದ ವಯಸ್ಕರಿಗೆ ಯಾವುದೇ ರೀತಿಯ ಪ್ರಯೋಜನ ಸಿಗುತ್ತಿಲ್ಲ. ಅಡಲ್ಟ್ ಎಜುಕೇಷನ್ ಬಗ್ಗೆ ಕೊಡುತ್ತಿರುವ ಹಣವನ್ನು ಕಿತ್ತುಹಾಕಿ ಆ ಹಣವನ್ನು ಪ್ರೈಮರಿ ಮತ್ತು ವಿಲೇಜ್ ಸ್ಕೂಲ್‌ಗಳ ಅಭಿವೃದ್ಧಿಗೆ ಉಪಯೋಗಿಸಿದರೆ ಬಹಳ ಒಳ್ಳೆಯದಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಕೆ.ಎಸ್.ಆರ್.ಟಿ.ಸಿ. ಬಗ್ಗೆ ಹೇಳಬೇಕಾದರೆ, ಆಗಲೇ ಮಾತನಾಡಿದ ಮಾನ್ಯ ಸದಸ್ಯರಾದ ಬೈರೇಗೌಡರು ಎಲ್ಲಾ ರೂಟ್ಸ್‌ನ್ನು ಡೀ–ನ್ಯಾಷನಲೈಸ್ ಮಾಡಬೇಕೆಂದು ಹೇಳುತ್ತಿದ್ದರು. ಡೆಮಾಕ್ರಸಿಯಲ್ಲಿ ಕೋ–ಆಪರೇಟಿವ್ ಇನ್‌ಸ್ಟಿಟ್ಯೂಷನ್, ಪಬ್ಲಿಕ್ ಸೆಕ್ಟಾರ್ ಇವೆಲ್ಲಾ, it will go hand in hand with democsacy. ಈ ಪಾಲಿಸೀಸ್ ಪ್ರಕಾರ ಅದರಲ್ಲಿ ಆಗಿರತಕ್ಕಂಥ ತಪ್ಪುಗಳನ್ನು ಸರಿಪಡಿಸಬೇಕೇ ಹೊರತು ಅದನ್ನು ತೆಗೆದುಹಾಕಬೇಕು. ಡೀ–ನ್ಯಾಷನಲೈಸ್ ಮಾಡಬೇಕೆಂದು ಹೇಳುವುದು ಸರಿಯಲ್ಲ. ನಮ್ಮ ರಾಜ್ಯದಲ್ಲಿ ಕೋ–ಆಪರೇಟಿವ್ ಇನ್ಸ್ಟಿಟ್ಯೂಷನ್ಸ್ ಏನಿ ಇವೆಯೋ ಅವುಗಳ ವ್ಯವಸ್ಥೆಯು ಸುಮಾರು ೬–೭ ವರ್ಷಗಳಿಂದ ಹಾಳಾಗಿ ಹೋಗುತ್ತಿದೆ. ಅದರ ಮೂವ್‌ಮೆಂಟ್ಸ್‌ನ್ನು ಸರಿ ಮಾಡಬೇಕು. ನಮ್ಮ ಕೆ.ಎಸ್.ಆರ್.ಟಿ.ಸಿ.ಯೂ ಸಾಕಾದಷ್ಟು ಜನಗಳಿಗೆ ನೆರಳನ್ನು ಕೊಟ್ಟಿದೆ. ಅಲ್ಲಿ ಸಾಕಾದಷ್ಟು ಅಸೆಟ್ಸ್ ಇದೆ. ಈ ಸಂಸ್ಥೆಯಲ್ಲಿ ಅನೇಕ ಲೂಪ್‌ಹೋಲ್ಸ್ ಇವೆ. ಇವುಗಳನ್ನು ಪ್ಲಗ್ ಮಾಡಬೇಕೇ ಹೊರತು ಅದನ್ನು ಸುಮ್ಮನೆ ತೆಗಳಿದರೆ ಆಗುವುದಿಲ್ಲ. ಸಂಬಂಧಪಟ್ಟ ಮಂತ್ರಿಯವರು ಇದರ ಬಗ್ಗೆ ಸರಿಯಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಸಾರಿಗೆ ವ್ಯವಸ್ಥೆಯಲ್ಲಿ

ಲಾಸ್ ಆಗುವುದಕ್ಕೆ ಕಾರಣವೇ ಇಲ್ಲ. ಏತಕ್ಕೆ ಲಾಸ್ ಆಗುತ್ತದೆಂದರೆ, ಇದರಲ್ಲಿ ಎಲ್ಲರೂ ಕೂಡ ಸೇರಿರುತ್ತಾರೆ. ಈ ಲೂಪ್ ಹೋಲ್ಸ್‌ನ್ನು ಪ್ಲಗ್ ಮಾಡಬೇಕು ಹಾಗೂ ಎಲ್ಲೆಲ್ಲಿ ಸರಿಯಾಗಿಲ್ಲವೋ ಅಲ್ಲೆಲ್ಲಾ ಸರಿಪಡಿಸಬೇಕು, ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯನ್ನು ಡಿವಿಷನಲ್‌ಗಳಾಗಿ ವಿಂಗಡಣೆ ಮಾಡಬೇಕು. ಹಾಗೆ ಮಾಡುವುದರಿಂದ ಕಾಂಪಿಟೇಷನ್ ಬಂದು ಲಾಭ ಬರುವುದಕ್ಕೆ ಕಾರಣವಾಗುತ್ತದೆ. ತಮಿಳುನಾಡಿನಲ್ಲೂ ಇದೇ ರೀತಿ ಮಾಡಿದ್ದಾರೆ. ಚೋಳ, ಪಾಂಡ್ಯ, ಚೇರನ್ ಈ ರೀತಿ ವಿಂಗಡಣೆ ಮಾಡಿದ್ದಾರೆ. ಅದನ್ನು ಕಾಪಿ ಮಾಡಿ ಇಲ್ಲೂ ಅದೇ ರೀತಿ ಮಾಡಬಹುದು, ಇದರ ಬಗ್ಗೆ ನಾನು ಒಂದು ಸಾರಿ ಮಾನ್ಯ ಗುಂಡೂರಾಯರು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದಾಗ ಸಲಹೆ ಕೊಟ್ಟಿದ್ದೆ. ದುರಾದೃಷ್ಟವಶಾತ್ ಆಗ ಅದು ಆಗಲಿಲ್ಲ. ಮಾನ್ಯ ಸಿಂಧ್ಯಾರವರು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದಾಗ ಬಹಳ ಎಫಿಶಿಯಂಟ್ ಆಗಿ ಕೆಲಸ ಮಾಡುತ್ತಿದ್ದರು. ಅವರ ಕಾಲದಲ್ಲೂ ಸಹ ಡಿವಿಷನಲ್‌ಗಳನ್ನು ಮಾಡಲಾಗಲಿಲ್ಲ. ಈಗಲಾದರೂ ಇದನ್ನು ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತಿದ್ದೇನೆ. ಆಮೇಲೆ, ಉಚಿತ ಪುಸ್ತಕ ಬಟ್ಟೆ, ಸೀರೆ, ಪಂಚೆ ವಿತರಣೆಯ ಕಾರ್ಯಕ್ರಮಗಳನ್ನು ತೆಗೆದುಹಾಕಿದ್ದಾರೆ. ಇದು ಒಳ್ಳೆಯದೇ ಆಯಿತು. ಇದರಿಂದ ಜನ ಸಾಮಾನ್ಯರಿಗೆ ಯಾವ ರೀತಿಯಿಂದಲೂ ಪ್ರಯೋಜನವಾಗುತ್ತಿರಲಿಲ್ಲ. ಈ ಕಾರ್ಯಕ್ರಮಗಳಿಗೆ ಉಪಯೋಗಿಸುತ್ತಿದ್ದ ಹಣವನ್ನು ಶಾಲೆಗಳನ್ನು ಕಟ್ಟುತ್ತಕ್ಕ ಮತ್ತು ಹೆಚ್ಚು ಉಪಾಧ್ಯಾಯರುಗಳನ್ನು ನೇಮಕ ಮಾಡುವುದಕ್ಕೆ ಖರ್ಚು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಆಮೇಲೆ ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ, ನ್ಯಾಯ ಬೆಲೆ ಅಂಗಡಿಗಳಲ್ಲಿ ಅತ್ಯಾವಶ್ಯಕ ವಸ್ತುಗಳನ್ನು ಮಾರಲಾಗುತ್ತದೆ. ಆದರೆ, ಒಬ್ಬ ಪ್ರೈವೇಟ್ ಪಾರ್ಟಿ ಮೂಲಕ ಈ ಅತ್ಯಾವಶ್ಯಕ ಆಹಾರ ಪದಾರ್ಥಗಳನ್ನು ಮಾರಾಟ ಮಾಡಿಸುವುದು ಪ್ರಪಂಚದ ಯಾವ ಭಾಗದಲ್ಲೂ ನಡೆದಿಲ್ಲವೆಂದು ಕಾಣುತ್ತದೆ. ಬಡವರುಗಳಿಗೆ ಡಿಸ್ಟ್ರಿಬ್ಯೂಷನ್ ಮಾಡುವುದಕ್ಕೆ ಕೊಡುವ ಎಸೆನ್‌ಶಿಯಲ್ ಕಮಾಡಿಟಿಯನ್ನು ಒಬ್ಬ ಪ್ರೈವೇಟ್ ಪಾರ್ಟಿ ವರ್ಕರ್‌ಗೆ ಕೊಟ್ಟರೆ ಅವನು ಏನು ಮಾಡುತ್ತಾನೆ? ಅವನು ಎಲ್ಲವನ್ನೂ ಪಟ್ಟಣದಲ್ಲೇ ಮಾರಿಕೊಂಡು ೮ ಸಾವಿರ ೧೫ ಸಾವಿರ ಲಾಭ ಮಾಡಿಕೊಂಡು ಬರೀ ಖಾಲಿ ಗೋಣಿ ಚೀಲಗಳನ್ನು ಊರಿಗೆ ತೆಗೆದುಕೊಂಡು ಹೋಗುತ್ತಾನೆ. ಈ ಕಾಳಸಂತೆಕೋರರ ವ್ಯಾಪಾರ ವ್ಯವಸ್ಥೆಯು ಮೊದಲು ನಮ್ಮ ಕರ್ನಾಟಕ ರಾಜ್ಯದಲ್ಲಿ ಹೋಗಬೇಕು. ಅದು ಹೋಗದೆ ಇದ್ದರೆ ನಾವು ಮತ್ತು ನಮ್ಮ ಜನಗಳು ಸಂಮ್ಮಾನೆ ಇರುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಆದುದರಿಂದ ಈ ವಸ್ತುಗಳು ಕೋಆಪರೇಟಿವ್ ಸಂಸ್ಥೆಗಳ ಮೂಲಕ ವಿತರಣೆಯಾಗಬೇಕು. ಈ ರೀತಿಯಾಗಿ ನಮ್ಮ ತಾಲ್ಲೂಕ್‌ನಲ್ಲಿ ಸುಮಾರು ೧೬ ಕೋಆಪರೇಟಿವ್ ಸೊಸೈಟಿಗಳಿಗೆ ಕೊಟ್ಟು, ಅವುಗಳ ಮೂಲಕ ಸರಿಯಾಗಿ ವಿತರಣೆ ಮಾಡುತ್ತಾ ಇದ್ದೇವೆ. ಈಗಾಗಲೇ ರಾಜ್ಯದಲ್ಲಿ ಹಸಿರುಕಾರ್ಡ್ ವಿತರಣೆಯಲ್ಲಿ ಮತ್ತು ನ್ಯಾಯಬೆಲೆ ಅಂಗಡಿಗಳ ಮೂಲಕ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಿಕೊಳ್ಳಬೇಕು. ಹಸಿರು ಕಾರ್ಡ್ ವಿತರಣೆಯ ವಿಚಾರದಲ್ಲಿ ರಾಜ್ಯದ ಬಡವರಿಗೆ ಬಹಳ ಅನ್ಯಾಯವಾಗಿದೆ. ತೀರಾ ಕಷ್ಟದಲ್ಲಿರುವವರು, ಬಡ ಕೂಲಿಗಾರರು, ಗುಡ್ಡದ ಮೇಲೆ ಇದ್ದು ಕಲ್ಲು ಒಡೆದು ಜೀವನ ಸಾಗಿಸುವವರೇ ಮುಂತಾಗಿ ದೀನದಲಿತರಿಗೆ ಈ ಕಾರ್ಡ್‌ಗಳ ವಿತರಣೆಯಾಗಿಲ್ಲ. ಹತ್ತಾರು ಎಕರೆಗಳಷ್ಟು ಭೂಮಿಯನ್ನು ಹೊಂದಿದವರಿಗೆ, ಅನುಕೂಲಸ್ಥರಿಗೆ ಈ ಹಸಿರು ಕಾರ್ಡ್‌ಗಳ ವಿತರಣೆಯಾಗಿದೆ. ನಿಜವಾಗಿ ಯಾರಿಗೆ ಕೊಡಬೇಕಾಗಿತ್ತೋ ಅವರಿಗೆ ಕೆಂಪು ಕಾರ್ಡ್‌ಗಳನ್ನು ಕೊಟ್ಟಿದ್ದಾರೆ. ಈ ವಿಚಾರದಲ್ಲಿ ನಮ್ಮ ರಾಜ್ಯದಲ್ಲಿ ವ್ಯಾಪಕವಾಗಿ ಅನ್ಯಾಯವಾಗಿದೆ. ಒಟ್ಟಿನಲ್ಲಿ ಈ ರೀತಿಯಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸಿ, ಸೂಕ್ತ ರೀತಿಯಲ್ಲಿ ಕಾರ್ಡ್‌ಗಳ ಹಂಚಿಕೆಯ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬಡವರಿಗೆ ಸಹಕಾರಿಯಾಗಬೇಕು, ಅವರ ಅಭಿವೃದ್ಧಿಯಾಗಬೇಕೆಂದುಕೊಂಡು ಶ್ರೀಮತಿ ಇಂದಿರಾಗಾಂಧೀಜಿಯವರು ಹಾಕಿಕೊಂಡ ಈ ಕಾರ್ಯಕ್ರಮಗಳು ನಮ್ಮ ರಾಜ್ಯದಲ್ಲಿ ಮುಂದಿನ ಐದು ವರ್ಷಗಳ ಕಾಲ ಸೂಕ್ತ ರೀತಿಯಲ್ಲಿ ಜಾರಿಯಲ್ಲಿದ್ದು, ಅದು ಬಡವರಿಗೆ ನಿಜವಾಗಿಯೂ ತಲುಪುವಂತಾಗಬೇಕು, ತನ್ಮೂಲಕ ಬಡವರ ಉದ್ಧಾರವಾಗಬೇಕು, ಆ ದಿಸೆಯಲ್ಲಿ ಸರಕಾರವು ಸಕಾಲಿಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ತಮ್ಮ ಮೂಲಕ ಪ್ರಾರ್ಥಿಸಿಕೊಂಡು, ನನಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಹದೇವ್ (ನಂಜನಗೂಡು).— ಸನ್ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಅರ್ಥಸಚಿವರು ೧೯೮೦-೮೧ನೇ ಸಾಲಿಗೆ ಮಂಡಿಸಿರತಕ್ಕಂಥ ರಾಜ್ಯದ ಆಯವ್ಯಯ ಪತ್ರವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಕರ್ನಾಟಕ ರಾಜ್ಯದ ಜನತೆ ನಮ್ಮ ಪಕ್ಷದ, ಧ್ಯೇಯಧೋರಣೆಗಳನ್ನು ಹಾಗೂ ನೀತಿನಿಯಮಗಳನ್ನು ಮೆಚ್ಚಿಕೊಂಡು ನಮ್ಮ ಪಕ್ಷದ ಮೇಲೆ ವಿಶ್ವಾಸವನ್ನು ಇಟ್ಟು, ನಮ್ಮ ಪಕ್ಷವನ್ನು ಈ ರಾಜ್ಯದಲ್ಲಿ ಅಧಿಕಾರಕ್ಕೆ ತಂದಿದೆ. ಕರ್ನಾಟಕ ರಾಜ್ಯದ ಜನರು ನಿರೀಕ್ಷೆ ಮಾಡಿದ

ರೀತಿಯಲ್ಲಿ ನಮ್ಮ ಮಾನ್ಯ ಹಣಕಾಸಿನ ಸಚಿವರು ಈ ಆಯವ್ಯಯವನ್ನು ತಯಾರಿಸಿ, ಎಷ್ಟೇ ಸಂಕಷ್ಟದಲ್ಲಿದ್ದರೂ ಸಹ ರಾಜ್ಯದ ಸಮಗ್ರ ಹಿತವನ್ನು ಗಮನದಲ್ಲಿಟ್ಟುಕೊಂಡು ಸ್ವಚ್ಛವಾದ ಶುದ್ಧವಾದ, ಪ್ರಗತಿಪರವಾದಂಥ ಆಯವ್ಯಯವನ್ನು ಮಂಡಿಸಿದ್ದಾರೆ. ಆದ್ದರಿಂದ ಅವರಿಗೆ ನನ್ನ ಅಭಿನಂದನೆಗಳನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತೇನೆ.

ನಮ್ಮ ರಾಜ್ಯದ ಜನತೆಗೆ ಅತ್ಯಾವಶ್ಯಕವಾಗಿ ಬೇಕಾಗಿರತಕ್ಕಂಥಾದ್ದು ನೀರಾವರಿ ಕಾರ್ಯಕ್ರಮಗಳು. ಇದರ ಜೊತೆಗೆ ಕುಡಿಯುವ ನೀರಿನ ಯೋಜನೆ, ವಸತಿ ಸೌಕರ್ಯ, ವಿದ್ಯುಚ್ಛಕ್ತಿ, ರಸ್ತೆಗಳು ಇವೇ ಮುಂತಾದ ಮಹತ್ವದ ವಿಷಯಗಳ ಕಡೆಗೆ ಹೆಚ್ಚಿನ ಗಮನಕೊಟ್ಟು ತುಂಬಾ ಉತ್ತಮವಾದ ಬಜೆಟ್‌ನ್ನು ಮಾನ್ಯ ಅರ್ಥಮಂತ್ರಿಯವರು ತಯಾರಿಸಿದ್ದಾರೆ. ಈ ನೀರಾವರಿ ಯೋಜನೆಗಳ ಪೈಕಿ ಅತಿ ಪ್ರಾಮುಖ್ಯವಾಗಿ ಕೃಷ್ಣ ಮತ್ತು ಕಾವೇರಿ ಕಣಿವೆ ಯೋಜನೆಗಳ ಬಗ್ಗೆ ಇದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಮ್ಮ ರಾಜ್ಯದ ರೈತರು ಸರಕಾರದವರಲ್ಲಿ ಭಿಕ್ಷೆ ಬೇಡುವುದಕ್ಕೆ ಬರುವುದಿಲ್ಲ. ಅವರು ನಿಮ್ಮನ್ನು ಬಟ್ಟೆ ಕೊಡಿ, ಆಹಾರ, ಧನ, ಧಾನ್ಯ ಕೊಡಿ ಎಂದು ನಿಮ್ಮನ್ನು ಕೇಳುವುದಿಲ್ಲ. ಅವರು ಕೇಳುವುದು ರಾಜ್ಯದಲ್ಲಿ ಕೃಷಿ ಮಾಡಲು ನೀರಾವರಿ ವ್ಯವಸ್ಥೆಯನ್ನು ಮಾತ್ರ ಕೇಳುತ್ತಾರೆ. ಈ ಒಂದು ವ್ಯವಸ್ಥೆಯನ್ನು ಮಾಡಿದರೆ ಅವರು ಸ್ವತಂತ್ರರಾಗಿ ಬಾಳಲು ಶಕ್ತರಾಗುತ್ತಾರೆ. ಇಡೀ ರಾಷ್ಟ್ರಕ್ಕೆ ಅನ್ನದಾತರಾಗುತ್ತಾರೆ. ಈ ವಿಚಾರವನ್ನು ನಾವೆಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ನಮ್ಮ ಭಾಗದ ಜನರು ಬಹಳ ವರ್ಷಗಳಿಂದಲೂ ನಿರೀಕ್ಷಣೆ ಮಾಡಿರುವುದು ಒಂದೇ ಒಂದು ಯೋಜನೆ ಅಂದರೆ, ಅದು ಕಬಿನಿ ಎರಡನೇ ಹಂತದ ಯೋಜನೆ. ಆದರೆ ಅದು ಇನ್ನೂ ಪ್ರಾರಂಭವಾಗಿಲ್ಲ. ಅದು ಪ್ರಾರಂಭವಾದರೆ ಸುಮಾರು ಒಂದು ಲಕ್ಷ ಹೆಕ್ಟೇರ್ ಪ್ರದೇಶವು ನೀರಾವರಿ ಯೋಜನೆಗೆ ಒಳಪಡುತ್ತದೆ. ಈ ಯೋಜನೆ ಕಾರ್ಯಗತವಾದರೆ ಆ ಭಾಗದಲ್ಲಿರತಕ್ಕಂಥ ರೈತರ ಪ್ರಗತಿಯಾಗಿ ಅವರು ಈ ದೇಶಕ್ಕೆ ಆಹಾರ ಧಾನ್ಯಗಳನ್ನು ಉತ್ಪಾದನೆ ಮಾಡತಕ್ಕಂಥ ಜನಗಳಾಗುತ್ತಾರೆ. ಈ ಯೋಜನೆಯನ್ನು ಮಾಡುವಂತೆ ಬಹಳ ವರ್ಷಗಳಿಂದ ನಮ್ಮ ಭಾಗದ ಜನರು ಕೇಳಿಕೊಳ್ಳುತ್ತಾ ಬಂದಿದ್ದಾರೆ. ಆದರೆ ಇದುವರೆವಿಗೂ ಅದನ್ನು ಪ್ರಾರಂಭ ಮಾಡುವಲ್ಲಿ ಗಮನಹರಿಸಿಲ್ಲ. ಬಹುಶಃ ನಾವು ಈ ನೀರನ್ನು ಸೂಕ್ತ ಕಾಲದಲ್ಲಿ ಉಪಯೋಗಿಸಿಕೊಳ್ಳದಿದ್ದರೆ, ಅದು ತಮಿಳುನಾಡಿನವರಿಗೆ ಅನುಕೂಲಕರವಾಗಿ ಪರಿಣಮಿಸಬಹುದಾಗಿದೆ. ಈ ಕಬಿನಿ ಯೋಜನೆಯಡಿಯಲ್ಲಿ ಹೆಗ್ಗಡದೇವನಕೋಟೆ, ನಂಜನಗೂಡು, ಟಿ.ನರಸೀಪುರ, ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಗುಂಡ್ಲುಪೇಟೆ. ತಾಲ್ಲೂಕುಗಳು ಬರುತ್ತವೆ. ಒಟ್ಟು ೯೬,೩೧೪ ಹೆಕ್ಟೇರ್‌ನಷ್ಟು ಪ್ರದೇಶಗಳು ನೀರಾವರಿಯಾಗುತ್ತವೆ. ಕಬಿನಿ ಎರಡನೇ ಹಂತದ ಯೋಜನೆಯಿಂದ ಹಾಗೂ ಏತ ನೀರಾವರಿ ಯೋಜನೆಗಳ ಮೂಲಕ, ೮೪,೭೩೦ ಹೆಕ್ಟೇರ್ ಪ್ರದೇಶಗಳು ನೀರಾವರಿಯಾಗುತ್ತವೆ. ಹೀಗೆ ಒಟ್ಟು ೧,೮೧,೦೪೪ ಹೆಕ್ಟೇರ್ ಪ್ರದೇಶಗಳು ಕಬಿನಿ ಎರಡನೇ ಹಂತದ ಯೋಜನೆಯಿಂದಾಗಿ ನೀರಾವರಿಗೆ ಒಳಪಡುತ್ತವೆ ಈ ಯೋಜನೆಯನ್ನು ಜಾರಿ ಮಾಡಲು ಅನೇಕ ವರ್ಷಗಳಿಂದಲೂ ವಿಳಂಬ ಮಾಡಿಕೊಂಡು ಬಂದಿದ್ದಾರೆ. ನಾನು ತಮ್ಮ ಮೂಲಕ ಸರಕಾರವನ್ನು ಕಳಕಳಿಯಿಂದ ಪ್ರಾರ್ಥಿಸುವುದೇನೆಂದರೆ, ಈ ಆಯವ್ಯಯದಲ್ಲಿ ನೀರಾವರಿಗೆ ಹೆಚ್ಚಿನ ಅವಕಾಶವನ್ನು ಕೊಟ್ಟಿರುವುದರಿಂದ, ಈ ನಮ್ಮ ಭಾಗದ ಅತಿ ಪ್ರಾಮುಖ್ಯವಾದಂಥ ಈ ನೀರಾವರಿ ಯೋಜನೆಯನ್ನು ಕೂಡಲೆ ಕೈಗೆತ್ತಿಕೊಳ್ಳಬೇಕು. ಬಹಳ ವರ್ಷಗಳಿಂದಲೂ ಕೇವಲ ಮಳೆಯನ್ನಾಧರಿಸಿ ಬೆಳೆಯನ್ನು ಬೆಳೆಯುತ್ತಿದ್ದ ನಮ್ಮ ಜನರು ಬಹಳಷ್ಟು ಕಷ್ಟನಷ್ಟಗಳಿಗೆ ಗುರಿಯಾಗಿದ್ದಾರೆ. ಈ ಯೋಜನೆಯ ಬಗ್ಗೆ ಸರಕಾರದವರು ಕೇವಲ ಆಶ್ವಾಸನೆಗಳನ್ನು ಕೊಡುತ್ತಾ ಬಂದಿರುವುದರಿಂದ ಇದರ ಕೆಲಸ ಮುಂದಕ್ಕೆ ಹೋಗುತ್ತಾ ಇದೆ ಒಂದು ವೇಳೆ ಇನ್ನಾದರೂ ಈ ಯೋಜನೆಯನ್ನು ಕಾರ್ಯಗತ ಮಾಡದಿದ್ದರೆ ಬಹುಶಃ ಆ ಭಾಗದ ಜನರು ಉಗ್ರ ಹೋರಾಟವನ್ನು ಮಾಡಬೇಕಾಗುತ್ತದೆ. ಹಾಗೂ ತೀವ್ರ ಚಳುವಳಿಯನ್ನು ಮಾಡಬೇಕಾಗುತ್ತದೆಂದು ಸರಕಾರದ ಗಮನವನ್ನು ತಮ್ಮ ಮೂಲಕ ಸೆಳೆಯುತ್ತಾ ಇದ್ದೇನೆ. ಈ ಏಳು ತಲ್ಲೂಕುಗಳ ಜನರು ಕೇವಲ ಮಳೆಯಾಧಾರಿತ ಬೆಳೆಗಳನ್ನು ಬೆಳೆದು ಸಾಕಷ್ಟು ನೊಂದುಬೆಂದಿದ್ದಾರೆ. ಅವರ ತಾಳ್ಮೆಗೂ ಒಂದು ಇತಿಮಿತಿ ಇರುತ್ತದೆ. ೧೯೨೪ ರಲ್ಲಿ ತಮಿಳುನಾಡು ಮತ್ತು ಮೈಸೂರು ಸರಕಾರಕ್ಕೆ ಒಂದು ಒಪ್ಪಂದವಾಗಿತ್ತು. ಅದರ ಪ್ರಕಾರ ನಮ್ಮ ಪಾಲಿನ ನೀರನ್ನು ನಾವು ಉಪಯೋಗಿಸಿಕೊಳ್ಳಬೇಕಾಗುತ್ತದೆ. ಇನ್ನೂ ಹೆಚ್ಚು ಕಾಲ ನಮ್ಮ ಭಾಗದ ರೈತರು ಈ ಯೋಜನೆಗಾಗಿ ಕಾಯುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಈ ಆಯವ್ಯಯದಲ್ಲಿ ಏನಾದರೂ ವ್ಯವಸ್ಥೆಯನ್ನು ಮಾಡಿ ಕಬಿನಿ ಎರಡನೇ ಹಂತದ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಮಂಜೂರಾತಿಯನ್ನು ನೀಡಬೇಕು, ಒಂದು ವೇಳೆ ನೀಡದಿದ್ದರೆ ನಾವಿನ್ನು ಉಗ್ರಚಳುವಳಿ ಮಾಡುವುದಕ್ಕೆ ತಯಾರಾಗಿದ್ದೇವೆಂದು ಮತ್ತೊಮ್ಮೆ ಹೇಳುತ್ತೇನೆ. ಈ ಬಗ್ಗೆ ನಾವು ಯಾವ ಶಕ್ತಿಗೂ ಬಗ್ಗುವುದಿಲ್ಲ ಎಂಬ ಮಾತನ್ನು ಹೇಳಬಯಸುತ್ತೇನೆ.

ಇನ್ನು ರೆವಿನ್ಯೂ ಭೂಮಿಯಲ್ಲಿ ಅನಧಿಕೃತವಾಗಿ ಮನೆಗಳ ನಿರ್ಮಾಣವಾಗಿರುವುದನ್ನು ಸಕ್ರಮಗೊಳಿಸುವುದಕ್ಕೆ ತೆಗೆದುಕೊಂಡ ನಿರ್ಧಾರವು ಸ್ತುತ್ಯಾರ್ಹವಾಗಿದೆ. ಇದೊಂದು ದೊಡ್ಡ ಸಮಸ್ಯೆಯಾಗಿತ್ತು. ಇಂಥ ರೆವಿನ್ಯೂ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿಕೊಂಡವರಲ್ಲಿ ಬಡವರು, ಮಧ್ಯಮ ವರ್ಗದವರು ಹೆಚ್ಚಾಗಿದ್ದಾರೆ. ತಾವು ದುಡಿದು ಗಳಿಸಿದ ಹಣದಲ್ಲಿ ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಅವರಿಗೆ ನೀರು, ರಸ್ತೆ, ವಿದ್ಯುಚ್ಛಕ್ತಿ, ಮುಂತಾಗಿ ಅನೇಕ ಸೌಕರ್ಯಗಳಿಲ್ಲದೆ ಇಲ್ಲಿಯವರೆಗೆ ಬಹಳ ತೊಂದರೆಗೊಳಗಾಗಿದ್ದರು. ಈಗ ಈ ಒಂದು ಸಮಸ್ಯೆಗೆ ಪರಿಹಾರವಾಗಿ ಇಂತಹ ಮನೆಗಳನ್ನು ಸರಕಾರದವರು ಸಕ್ರಮಗೊಳಿಸಲು ನಿರ್ಣಯ ಮಾಡಿದ್ದು ರಾಜ್ಯದ ಬಡಜನತೆಗೆ ಮಹದುಪಕಾರವನ್ನು ಮಾಡಿದಹಾಗೆ ಆಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಪಂಚಾಯತ್ ರಾಜ್ಯ ಮತ್ತು ಜಿಲ್ಲಾಪರಿಷತ್‌ಗಳ ಬಗ್ಗೆ ಹೇಳುವುದಾದರೆ ಇದೊಂದು ಪ್ರಾಯೋಗಿಕವಾಗಿ ಜಾರಿ ಮಾಡಿದಂಥ ಒಂದು ಘೋರ ದುರಂತವಾಗಿದೆ.

ಇದನ್ನು ಮಾಡಬಾರದಾಗಿತ್ತು. ಆಗ ಏನೋ ಒಂದು ದೊಡ್ಡದಾಗಿ ಅಧಿಕಾರ ವಿಕೇಂದ್ರೀಕರಣದ ಅಂಗವಾಗಿ ಜಿಲ್ಲಾ ಪರಿಷತ್ತನ್ನು ರಚನೆ ಮಾಡಿ ಅಧಿಕಾರವನ್ನು ವಿಕೇಂದ್ರಿಕರಣ ಮಾಡಿದರು. ಕಳೆದ ಎರಡು ವರ್ಷಗಳಿಂದಲೂ ನಾವು ಇದರ ಕಾರ್ಯ ವೈಖರಿಯನ್ನು ನೋಡುತ್ತಿದ್ದೇವೆ. ಜೊತೆಗೆ ಮಂಡಲ ಪಂಚಾಯಿತಿಯ ಕಾರ್ಯ ವೈಖರಿಯನ್ನು ನಾವು ನೋಡಿದ್ದೇವೆ. ಈಗಿನ ಪರಿಸ್ಥಿತಿಯನ್ನು ನೋಡಿದ ಮೇಲೆ ಏತಕ್ಕಾದರೂ ಇವರಿಗೆ ಅಧಿಕಾರ ಕೊಟ್ಟಿದ್ದೇವೆ ಎನ್ನುವಂಥ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಅಧಿಕಾರ ವಿಕೇಂದ್ರೀಕರಣ ಮಾಡಿರಬಹುದು. ಆದರೆ ಇದರಿಂದ ನಾವು ನಿರೀಕ್ಷಣೆ ಮಾಡುವಂಥ ಮಟ್ಟದಲ್ಲಿ ಜನಗಳಿಗೆ ಅನುಕೂಲವಾಗಿಲ್ಲ. ಸಾರ್ವಜನಿಕರಿಗೆ ಅನುಕೂಲವಾಗಿಲ್ಲ. ಬಹುಶಃ ನಾನು ತಿಳಿದ ಹಾಗೆ ಅಂದಾಜು ಎಂಭತ್ತು ಕೋಟಿ ರೂಪಾಯಿಗಳನ್ನು ಒಂದು ಜಿಲ್ಲಾ ಪರಿಷತ್ತಿಗೆ ಕೊಡಬಹುದು ಎಂದು ನಾನು ಭಾವಿಸಿಕೊಂಡಿದ್ದೇನೆ. ಈ ಎಂಭತ್ತು ಕೋಟಿ ರೂಪಾಯಿಗಳಲ್ಲಿ ನಲವತ್ತು ಕೋಟಿ ರೂಪಾಯಿ ಅಲ್ಲಿನ ಸಿಬ್ಬಂದಿ ವೆಚ್ಚಕ್ಕೇ ಹೋಗುತ್ತದೆ. ಇನ್ನುಳಿದ ನಲವತ್ತು ಕೋಟಿ ರೂಪಾಯಿಗಳಲ್ಲಿ ಅಲ್ಲಿನ ಅಭಿವೃದ್ಧಿ ಕೆಲಸಗಳು ಆಗಬೇಕು. ಜಿಲ್ಲಾ ಪರಿಷತ್ತಿನಿಂದ ಮಂಡಲ ಪಂಚಾಯಿತಿಗೆ ಹೋಗುತ್ತಾ ಹೋಗುತ್ತಾ ಹಣ ಇನ್ನೂ ಕಡಿಮೆಯಾಗುತ್ತದೆ, ಕೆಲಸ ಮಾತ್ರ ಸರಿಯಾಗಿ ಆಗುತ್ತಿಲ್ಲ. ಬಹುಶಃ ಅಧಿಕಾರ ಬಂಡವಾಳಶಾಹಿಗಳ ಕೈಯಲ್ಲಿ ಸಿಕ್ಕ ಹಾಗೆ ಇಲ್ಲಿನ ಕಾರ್ಯವೈಖರಿ ನಡೆಯುತ್ತಿದೆ. ಈ ಅಧಿಕಾರ ವಿಕೇಂದ್ರೀಕರಣವನ್ನು ಮಾಡಿದ ಮೇಲೆ ಜನಸಾಮಾನ್ಯರ ಅಭಿವೃದ್ಧಿ ಕಾರ್ಯಗಳು ಸರಿಯಾಗಿ ಆಗುತ್ತಿಲ್ಲ. ನಾವು ನಿರೀಕ್ಷಣೆ ಮಾಡುವಂಥ ರೀತಿಯಲ್ಲಿ ಕೆಲಸಗಳು ಆಗುತ್ತಿಲ್ಲ. ಈಗ ನಿರುದ್ಯೋಗದ ಸಮಸ್ಯೆ ಇದೆ ಎಂದು ನಾವು ಏನು ಹೇಳುತ್ತೇವೆ, ಅದನ್ನು ಹೋಗಲಾಡಿಸಲು ಒಂದು ರೀತಿಯಲ್ಲಿ ನಾವು ಈ ವ್ಯವಸ್ಥೆ ಮೂಲಕ ರಾಜಕೀಯ ಉದ್ಯೋಗವನ್ನು ಕೊಟ್ಟಿದ್ದೇವೆ ಈ ಮೊದಲು ಒಂದು ತಾಲ್ಲೂಕಿನಲ್ಲಿ ಒಬ್ಬರು ಶಾಸಕರು ಇಡೀ ತಾಲ್ಲೂಕಿನ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು, ಇವತ್ತು ಜಿಲ್ಲಾ ಪರಿಷತ್ತಿನಲ್ಲಿ ಅಧಿಕಾರಿಗಳು ಕೂಡಾ ಪೇಚಿಗೆ ಸಿಕ್ಕಿಹಾಕಿಕೊಂಡಿದ್ದಾರೆ. ಜಿಲ್ಲಾ ಪರಿಷತ್ತಿನಲ್ಲಿ ಸದಸ್ಯರು ಒಂದು ತಾಲ್ಲೂಕಿನಲ್ಲಿ ಆರು ಜನ ಇರುತ್ತಾರೆ. ಅಲ್ಲಿ ಅವರ ಮಾತನ್ನು ಕೂಡಾ ಈ ಅಧಿಕಾರಿಗಳು ಕೇಳಬೇಕು. ೨೨ ಜನ ಮಂಡಲ ಪ್ರಧಾನರು ಒಂದು ತಾಲ್ಲೂಕಿನಲ್ಲಿ ಇರುತ್ತಾರೆ, ಅವರು ಕೂಡಾ ಅಧಿಕಾರವನ್ನು ಚಲಾಯಿಸುತ್ತಾರೆ. ಆದ್ದರಿಂದ ಅವರ ಮಾತನ್ನು ಸಹ ಆ ಅಧಿಕಾರಿಗಳು ಕೇಳಬೇಕು. ಬಹುಶಃ ಮಂಡಲಪಂಚಾಯಿತಿಗಳ ಸದಸ್ಯರುಗಳು ೪೦೦–೫೦೦ ಇರುತ್ತಾರೆಂದು ಕಾಣುತ್ತದೆ. ಅವರ ಮಾತನ್ನು ಕೂಡಾ ಕೇಳಬೇಕು. ಮತ್ತು ಎಂ.ಎಲ್.ಎ.ಗಳ ಮಾತನ್ನೂ ಕೇಳಬೇಕು. ಈ ಒಂದು ಗೊಂದಲದಲ್ಲಿ ಅಧಿಕಾರಿಗಳು ಸಿಕ್ಕಿ ಹಾಕಿಕೊಂಡು, ಅವರು ಯಾರ ಕೆಲಸವನ್ನೂ ಸಹ ಮಾಡಲಿಕ್ಕೆ ಧೈರ್ಯ ಬರುತ್ತಿಲ್ಲ. ಅವರಿಗೂ ಕೂಡಾ ಮಾರ್ಗದರ್ಶನ ಸಿಗುತ್ತಿಲ್ಲ. ಈ ರೀತಿ ಕಾರ್ಯಕ್ರಮಗಳೆಲ್ಲಾ ಗೊಂದಲದಲ್ಲಿ ಸಿಕ್ಕಿಕೊಂಡು ಯಾವುದೂ ಕೂಡ ಸರಿಯಾಗಿ ನಡೆಯುತ್ತಿಲ್ಲ. ಬಹುಶಃ ಶಾಸಕರಾದ ನಾವು ಈ ಬಗ್ಗೆ ಒಂದು ಮಾತನ್ನು ಈ ಸದನದಲ್ಲಿ ಹೇಳಿದರೆ ತಪ್ಪಾಗಲಿಕಿಲ್ಲ. ಮಂಡಲ ಪಂಚಾಯಿತಿ ಪ್ರಧಾನರು ಶಾಸಕರಮೇಲೆ ಅಧಿಕಾರ ಚಲಾಯಿಸುತ್ತಾರೆ. ಶಾಸಕರುಗಳಾದ ನಾವು ಪಂಚಾಯಿತಿ ಆ್ಯಕ್ಟ್ ಪ್ರಕಾರ ಜನಗಳಿಗೆ ಒಂದು ಸೈಟನ್ನು ಕೊಡಿಸಲಿಕ್ಕೂ ಆಗುತ್ತಿಲ್ಲ. ಬೋರ್‌ವೆಲ್ ಏನಾದರೂ ಕೆಟ್ಟಿದ್ದರೆ ಆ ಬೋರ್‌ವೆಲ್ ಕೆಟ್ಟಿದೆ ರಿಪೇರಿ ಮಾಡಿ ಎಂದು ಹೇಳಲಿಕ್ಕೂ ಕೂಡಾ ಆಗುತ್ತಿಲ್ಲ. ಅಂಥ ಒಂದು ಪರಿಸ್ಥಿತಿಗೆ ನಾವು ಬಂದಿದ್ದೇವೆ. ಈ ಪರಿಸ್ಥಿತಿಯಲ್ಲಿ ಶಾಸಕರುಗಳಿದ್ದೇವೆ. ಎರಡು ತೆಂಗಿನ ಸಸಿಗಳನ್ನು ಕೊಡಲಿಕ್ಕೂ ಕೂಡಾ ಆಗುವುದಿಲ್ಲ. ಬೋರ್‌ವೆಲ್ ಕೊಡಲಿಕ್ಕೂ ಆಗುವುದಿಲ್ಲ. ಎರಡು ತೆಂಗಿನ ಸಸಿಗಳನ್ನು ಬಡವನಿಗೆ ಕೊಡಿ ಎಂದು ಹೇಳುವ ಅಧಿಕಾರ ಕೂಡಾ ಶಾಸಕರಿಗೆ ಇಲ್ಲ ಬಾಂಡೆಡ್ ಲೇಬರ್‌ಗೆ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸುವ ಅಧಿಕಾರ ನಮಗೆ ಇಲ್ಲ. ಈ ಪರಿಸ್ಥಿತಿಯಲ್ಲಿ ಶಾಸಕರುಗಳು ಕೆಲಸ ಮಾಡಬೇಕಾಗಿದೆ. ಮಂಡಲ ಪ್ರಧಾನರುಗಳು ಏನಾಗಿದ್ದಾರೆ ಎಂದರೆ ಒಂದು ರಾಜಕೀಯ ಗೊಂದಲದಲ್ಲಿ ಸಿಕ್ಕಿಹಾಕಿಕೊಂಡು

ಬಿಟ್ಟಿದ್ದಾರೆ. ರೋಜ್‌ಗಾರ್ ಯೋಜನೆ ಎಂದು ಏನು ಇದೆ ಆ ಯೋಜನೆಯಲ್ಲಿ ರಸ್ತೆಗಳಾಗಬೇಕು, ಸ್ಕೂಲ್ ಬಿಲ್ಡಿಂಗ್‌ಗಳಾಗಬೇಕು ಇತರೇ ಅಭಿವೃದ್ಧಿ ಕೆಲಸಗಳಾಗಬೇಕು ಅದನ್ನು ಯಾರು ಮಾಡಬೇಕಾಗಿದೆ ? ಜನಗಳು ಮಾಡಬೇಕು ಎಂದರೆ ಜನಗಳಿಗೂ ಮಾಡಲಿಕ್ಕೆ ಆಗುತ್ತಿಲ್ಲ. ಸದಸ್ಯರುಗಳು ಅಧಿಕಾರಿಗಳ ಹತ್ತಿರ ಹೋಗಿ ಆ ಕೆಲಸವನ್ನು ನನಗೆ ಕೊಡಬೇಕು ಅಥವಾ ಹೀಗೆ ಮಾಡಬೇಕು ಎಂದು ಕೇಳುತ್ತಾರೆ. ಹೀಗೆ ಬಲವಂತವಾಗಿ ಇಂಥ ಬೇಕಾದಷ್ಟು ಕೆಲಸಗಳು ಇವತ್ತು ನಡೆಯುತ್ತಿವೆ. ಬಹುಶಃ ಮಂಡಲ್ ಪಂಚಾಯತ್ ಪ್ರಧಾನರಿಗೆ ಸ್ಯಾಂಕ್ಷನ್ ಮಾಡುವಂತಹ ಅಧಿಕಾರವನ್ನು ಕೊಟ್ಟಿದ್ದಾರೆ. ಮತ್ತೆ ಚೆಕ್ ಸೈನ್ ಮಾಡುವಂತಹ ಅಧಿಕಾರವನ್ನು ಕೊಟ್ಟಿದ್ದಾರೆ. ಇದರಿಂದಾಗಿ ಕೆಲಸ ಮಾಡಿಸಿಕೊಳ್ಳುವುದೂ ಅವರೇ, ಚೆಕ್ ಕೊಡುವುದೂ ಅವರೇ ಎಂಬಂತೆ ಆಗಿದೆ. ಇಂಜಿನಿಯರ್‌ಗಳಿಗೆ ಸಹಿತ ಅವರ ಮೇಲೆ ಜೋರು ಮಾಡುವುದಕ್ಕೆ ಬರುವುದಿಲ್ಲ. ಈ ಒಂದು ಪರಿಸ್ಥಿತಿ ಮಂಡಲ್ ಪಂಚಾಯತ್‌ನಲ್ಲಿ ಇದೆ. ಜಿಲ್ಲಾ ಪರಿಷತ್‌ನಲ್ಲಿ ಕೂಡ ಅಷ್ಟೇ. ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಕೆಲಸ ಮಾಡಬೇಕಾದವರು ಜಿಲ್ಲಾ ಪರಿಷತ್ ಸದಸ್ಯರು ಹೇಳಿದ ಹಾಗೆ ಕೇಳಬೇಕು. ಅವರನ್ನು ಸಮಾಧಾನ ಪಡಿಸಿಕೊಳ್ಳಬೇಕು. ಇಂತಹ ಪರಿಸ್ಥಿತಿ ಜಿಲ್ಲಾ ಪರಿಷತ್‌ನಲ್ಲಿ ಇವೆ. ಮತ್ತು ಎಲ್ಲಿ ಹೋದರೂ ರಾಜಕೀಯದ ಗೊಂದಲ ಇವೆ. ಪಕ್ಷ ಮತ್ತು ಅಧಿಕಾರಕ್ಕೋಸ್ಕರವಾಗಿ ಕಚ್ಚಾಟ ನಡೆದು ಜನಸಾಮಾನ್ಯರಿಗೆ ಅನುಕೂಲ ಆಗುತ್ತಾ ಇಲ್ಲ. ಯಾಕೆ ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ ನಾವು ಏನು ನಿರೀಕ್ಷಣೆಯನ್ನು ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ವಿಷಯದಲ್ಲಿ ಇಟ್ಟುಕೊಂಡಿದ್ದೆವೋ ಅದು ಆಗಲಿಲ್ಲ. ಜಿಲ್ಲಾ ಪರಿಷತ್ ಅಸ್ತಿತ್ವದಿಂದ ಬಹಳ ಪ್ರಗತಿ ಆಗುತ್ತದೆ, ಅಧಿಕಾರ ವಿಕೇಂದ್ರೀಕರಣದ ಜೊತೆಯಲ್ಲಿ ಜನ ಸಾಮಾನ್ಯರು ಮೇಲಕ್ಕೆ ಬರುತ್ತಾರೆ ಎಂದು ನಾವು ತಿಳಿದುಕೊಂಡಿದ್ದೆವು. ಆದರೆ ಈ ವ್ಯವಸ್ಥೆಯಿಂದ ಜನ ಸಾಮಾನ್ಯರಿಗೆ ಬಡವರಿಗೆ ಏನೂ ಅನುಕೂಲ ಆಗಿಲ್ಲ. ಹಣವಂತರಿಗೆ ಮತ್ತು ಪ್ರಭಾವಶಾಲಿಗಳಿಗೆ ಅನುಕೂಲ ಆಗಿದೆಯೇ ಹೊರತು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಂದ ಯಾವುದೇ ಬಡವರಿಗೆ, ಜನಸಾಮಾನ್ಯರಿಗೆ ಅನುಕೂಲ ಆಗಿಲ್ಲ. ಅದರ ಪ್ರಗತಿ ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ. ಆದ್ದರಿಂದ ಮೊದಲು ಜಿಲ್ಲಾ ಪರಿಷತ್ ಅನ್ನು ಕಿತ್ತು ಹಾಕಬೇಕು. ಈ ಒಂದು ವ್ಯವಸ್ಥೆಯನ್ನು ಕಿತ್ತು ಹಾಕಿದರೆ ನಮ್ಮ ರಾಜ್ಯಕ್ಕೆ ಒಳ್ಳೆಯದಾಗುತ್ತದೆ ಮತ್ತು ಇದರಿಂದ ಜನ ಸಾಮಾನ್ಯರಿಗೆ ಒಳ್ಳೆಯದು ಆಗುತ್ತದೆ ಮತ್ತು ನೆಮ್ಮದಿಯಿಂದ ಗ್ರಾಮಾಂತರ ಪ್ರದೇಶದ ಜನರು ಬಾಳಬಹುದು. ಹಿಂದೆ ತಾಲ್ಲೂಕು ಬೋರ್ಡ್ ಎಂದು ಇತ್ತು. ಬಹಳ ಜನ ಹೇಳಬಹುದು ಜಿಲ್ಲಾ ಪರಿಷತ್‌ನಿಂದ ಬೇಕಾದಷ್ಟು ಪ್ರಗತಿಪರ ಕಾರ್ಯಗಳು ಆಗಿವೆ ಎಂದು ಆದರೆ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತ್‌ಗಳಿಗೆ ಕೊಡುವಷ್ಟು ಹಣವನ್ನು ತಾಲ್ಲೂಕು ಬೋರ್ಡ್‌ಗಳಿಗೆ ಕೊಟ್ಟಿದ್ದರೆ ಜಿಲ್ಲಾ ಪರಿಷತ್‌ಗಿಂತ ಹೆಚ್ಚಿಗೆ ಪ್ರಗತಿಯನ್ನು ತಾಲ್ಲೂಕು ಬೋರ್ಡ್‌ಗಳು ಮಾಡಿ ತೋರಿಸುತ್ತಾ ಇದ್ದವು. ಹಿಂದೆ ಸ್ಥಳೀಯ ಸಂಸ್ಥೆಗಳಿಗೆ ಸೀಮಿತವಾದ ಹಣ, ಸೀಮಿತವಾದ ಅಧಿಕಾರವನ್ನು ಕೊಡುತ್ತಿದ್ದರು, ಆದರೂ ಸ್ವಚ್ಛವಾಗಿ ಆಡಳಿತವನ್ನು ತಾಲ್ಲೂಕು ಬೋರ್ಡ್‌ನವರು ನಡೆಸುತ್ತಿದ್ದರು. ಅಲ್ಲಿ ಯಾವುದೇ ರಾಜಕೀಯ ಇರುತ್ತಿರಲಿಲ್ಲ. ಆದರೆ ಆಗ ಜನ ಹೇಳಿಕೊಳ್ಳುವಷ್ಟು ಪ್ರಗತಿಯನ್ನು ತೋರಿಸುವುದಕ್ಕೆ ಆಗುತ್ತಿರಲಿಲ್ಲ. ಈಗ ಹೇರಳವಾದ ಹಣ ಕೊಡುತ್ತಿದ್ದರೂ ಆ ಹೇರಳವಾದ ಹಣ ಸರಿಯಾಗಿ ಸದ್ವಿನಿಯೋಗ ಆಗುತ್ತಿಲ್ಲ, ಜನಸಾಮಾನ್ಯರಿಗೆ ಆ ಹಣದ ಪ್ರತಿಫಲ ತಲುಪುತ್ತಿಲ್ಲ, ಬಡವನ ಮನೆ ಬಾಗಿಲಿಗೆ ಅದು ಹೋಗುತ್ತಿಲ್ಲ. ಇಂತಹ ಪರಿಸ್ಥಿತಿಯಿರುವಾಗ ಈ ವ್ಯವಸ್ಥೆಯಿಂದ ಏನು ಪ್ರಯೋಜನ ಆಗುತ್ತದೆ ? ಆದ್ದರಿಂದ ಮೊದಲು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳನ್ನು ಕಿತ್ತು ಹಾಕಬೇಕೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಒಂದು ವೇಳೆ ಕಿತ್ತು ಹಾಕಲಿಕ್ಕೆ ಆಗುವುದಿಲ್ಲ ಎಂದರೆ ಅದರ ಸ್ವರೂಪವನ್ನಾದರೂ ಬದಲಾವಣೆ ಮಾಡಬೇಕಾಗುತ್ತದೆ. ಹಿಂದೆ ಇದ್ದಂತಹ ತಾಲ್ಲೂಕ್ ಬೋರ್ಡ್ ಮಾದರಿಯಲ್ಲಿ ಇದನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಜಿಲ್ಲಾ ಪರಿಷತ್ತುಗಳಿಗೆ ಸಾಕಷ್ಟು ಅಧಿಕಾರವನ್ನು ಕೊಟ್ಟಿದ್ದೀರಿ, ಉಪಾಧ್ಯಾಯರ ವರ್ಗಾವಣೆ, ಆಹಾರ ವಿತರಣೆ ಪಿ.ಡಬ್ಲ್ಯು.ಡಿ ವರ್ಕ್ಸ್ ಇತ್ಯಾದಿ ಬಹಳಷ್ಟು ಅಧಿಕಾರಗಳನ್ನು ಅವರಿಗೆ ಕೊಟ್ಟಿದ್ದೀರಿ ಶೇಕಡಾ ೮೦ ಭಾಗದಷ್ಟು ಅಧಿಕಾರ ಕೊಟ್ಟಿದ್ದೀರಿ. ಈಗ ಉಪಾಧ್ಯಾಯರ ವರ್ಗಾವಣೆಯಲ್ಲಿರತಕ್ಕ ಹಸ್ತಕ್ಷೇಪದ ಬಗ್ಗೆ ಹೇಳಲಿಕ್ಕೆ ಸಾಧ್ಯವಿಲ್ಲ. ಉಪಾಧ್ಯಾಯನಾಗಿರತಕ್ಕವನು ಮಂತ್ರಿಗಳಿಗೆ ಆಗಲಿ, ಶಾಸಕರಿಗೆ ಆಗಲಿ, ಹೀಗೆ ಎಲ್ಲರಿಗಿಂತ ಹೆಚ್ಚಾಗಿ ಜಿಲ್ಲಾ ಪರಿಷತ್ ಸದಸ್ಯರಿಗೆ ಮತ್ತು ಮಂಡಲ್‌ಪಂಚಾಯತ್ ಪ್ರಧಾನರಿಗೆ ಆತ ವಿಧೇಯನಾಗಿದ್ದ ಅಂದರೆ ಸಾಕು. ಆತನು ಕೇಳಿದಂತಹ ಸ್ಥಳ ಸಿಗುತ್ತದೆ, ಅವನು ಸ್ಕೂಲ್‌ಗೆ ಹೇಗೆಬೇಕಾದರೂ ಹೋಗಲಿ, ಯಾವ ಟೈಮ್‌ನಲ್ಲಿ ಹೋದರೂ ನಡೆಯುತ್ತದೆ. ಇದು ಒಂದು ಕಡೆ ಆದರೆ ಮತ್ತೊಂದು ಕಡೆ ಯಾರಾದರೂ ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಾರೆ ಅಂದರೆ ಅವರನ್ನು ಪ್ರಾಮಾಣಿಕವಾಗಿ ಮಾಡುವುದಕ್ಕೆ ಬಿಡುವುದಿಲ್ಲ. ಇಂತಹ ಪರಿಸ್ಥಿತಿ ಇದೆ. ಉಪಾಧ್ಯಾಯರ ಭಾಗವನ್ನು ಮತ್ತು ವರ್ಗಾವಣೆ ಅಧಿಕಾರವನ್ನು ಏನು ಜಿಲ್ಲಾ ಪರಿಷತ್ತಿಗೆ ಕೊಟ್ಟಿದೆ ಅದನ್ನು ಮೊದಲು ಕಿತ್ತು ಹಾಕಬೇಕು.

ಆಹಾರ ವಿತರಣೆ ಕೆಲಸವನ್ನು ಜಿಲ್ಲಾ ಪರಿಷತ್‌ಗೆ ಕೊಡಲಾಗಿದೆ. ಜಿಲ್ಲಾ ಪರಿಷತ್‌ನಲ್ಲಿ ಆಹಾರ ವಿತರಣೆ ರಾಜಕೀಯ ವ್ಯವಸ್ಥೆ ಆಗುತ್ತಿದೆ. ನಿಜಕ್ಕೂ ಜನಸಾಮಾನ್ಯರಿಗೆ ಪ್ರಯೋಜನ ಆಗುತ್ತಿಲ್ಲ ಮಾನ್ಯ ನಂಜಪ್ಪನವರು ಚೆನ್ನಾಗಿ ಹೇಳಿದ್ದಾರೆ ರಾಜಕೀಯವಾದ ಒಂದು ನ್ಯಾಯ ಬೆಲೆ ಅಂಗಡಿ ಎಂದು ನ್ಯಾಯ ಬೆಲೆ ಅಂಗಡಿಗಳು ಏನು ಇವೆ. ಅದನ್ನು ರಾಜಕಾರಣಿಗಳ ಕೈಗೆ ಕೊಟ್ಟಿದೆ. ಅವನು ರಾಜಕಾರಣ ಮಾಡುವುದಕ್ಕೋಸ್ಕರವಾಗಿ ರಾಜಕೀಯದ ನ್ಯಾಯಬೆಲೆ ಅಂಗಡಿಯನ್ನಾಗಿ ಮಾಡಿಕೊಂಡಿದ್ದಾನೆ. ಅವು ನ್ಯಾಯ ಬೆಲೆ ಅಂಗಡಿಗಳು ಅನ್ಯಾಯ ಬೆಲೆ ಅಂಗಡಿಗಳಾಗಿವೆ, ಅವನು ನ್ಯಾಯವಾಗಿ ಯಾರಿಗೂ ತಲುಪಿಸಬೇಕಾದ್ದನ್ನು ತಲುಪಿಸುತ್ತಿಲ್ಲ, ಬೇಕಾದ್ದನ್ನು ಮಾಡಿಕೊಂಡು ಸಂದರ್ಭ ಬಂದಾಗ ಹೇಗೋ ನಾಲ್ಕು ಜನರನ್ನು ಕಟ್ಟಿಕೊಂಡು ವ್ಯವಹಾರ ಮಾಡಿಕೊಂಡು ಹೋಗುತ್ತಾನೆ. ಇಂತಹ ಒಂದು ಪರಿಸ್ಥಿತಿ ಇದೆ. ನೀವು ಏನೇ ಮಾಡಿ, ಎಸೆನ್ಷಿಯಲ್ ಕಮಾಡಿಟೀಸ್ ಆಕ್ಟ್ ಅಪ್ಲೈ ಮಾಡಿದರೂ ಸಹ ಏನೂ ಆಗುವುದಿಲ್ಲ, ಪಿ.ಡಬ್ಲ್ಯು.ಡಿ ಮೇಜರ್ ವರ್ಕ್ಸ್ ಜಿಲ್ಲಾ ಪರಿಷತ್‌ಗೆ ಕೊಟ್ಟಿದ್ದೀರಿ. ಮೇಜರ್ ವರ್ಕ್ಸ್ ಕೊಟ್ಟಿರುವುದನ್ನು ದಯವಿಟ್ಟು ಕಿತ್ತು ಹಾಕಿ, ನನಗೆ ಅನುಭವ ಇದೆ. ೪೦ ಲಕ್ಷ ೫೦ ಲಕ್ಷ ಒಂದೊಂದು ದೊಡ್ಡದೊಡ್ಡ ಆಸ್ಪತ್ರೆ ಕಟ್ಟಡಗಳ ಜವಾಬ್ದಾರಿ ಅವರಿಗೆ ಕೊಟ್ಟಿದೆ, ಅದು ಇನ್ನೂ ಸರಿಯಾಗಿ ಕಂಪ್ಲೀಟ್ ಆಗಿಲ್ಲ. ಅವರನ್ನು ಕೇಳಿದರೆ ಸರ್ಕಾರದಿಂದ ದುಡ್ಡು ಬಂದಿಲ್ಲ, ಆದ್ದರಿಂದ ಹಾಗೆ ಕೆಲಸ ಮುಗಿಸುವುದಕ್ಕಾಗುತ್ತಿಲ್ಲ ಎಂದು ಹೇಳುತ್ತಾ ಇದ್ದಾರೆ. ಅವರಿಂದ ಇದು ಸಾಧ್ಯವಾಗುವುದಿಲ್ಲ. ಈ ಮೇಜರ್ ವರ್ಕ್ಸ್‌ನ್ನು ಜಿಲ್ಲಾ ಪರಿಷತ್ತಿಗೆ ಏನು ಕೊಟ್ಟಿದ್ದಾರೆ, ಅದನ್ನು ಮೊದಲು ತೆಗೆದುಹಾಕಿ ಎಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನೂ ಕೆಲವು ಮುಖ್ಯವಾದಂಥ ಅಂಗಗಳನ್ನು ಜಿಲ್ಲಾ ಪರಿಷತ್ತಿಗೆ ಏನು ಕೊಟ್ಟಿದೆ, ಅವನ್ನೂ ಕೂಡ ವಾಪಸ್ ತೆಗೆದುಕೊಳ್ಳಬೇಕು ಅಥವಾ ಅದನ್ನು ಮಾಡಿಫೈ ಮಾಡಬೇಕು ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ,

ಇನ್ನು ನೀರು ಸರಬರಾಜು ಬಗ್ಗೆ ಹೇಳುವುದಾದರೆ ಬೋರ್‌ವೆಲ್‌ಗಳಿಗೋಸ್ಕರ ಬಹಳ ಹಣ ಕೊಡುತ್ತೇವೆ. ಕೆಲವು ಬೋರ್‌ವೆಲ್‌ಗಳಿಗೆ ಹಣ ಕೊಡುತ್ತಾರೆ, ಕೆಲವು ಬೋರ್‌ವೆಲ್‌ಗಳಲ್ಲಿ ನೀರು ಬರುವುದಿಲ್ಲ. ಫೇಲ್ಯೂರ್ ಆಗುತ್ತವೆ. ಆದುದರಿಂದ ನಾನು ಸರ್ಕಾರಕ್ಕೆ ಒಂದು ಸಲಹೆ ಮಾಡುತ್ತೇನೆ. ಮಾನ್ಯ ಹಣಕಾಸಿನ ಮಂತ್ರಿಗಳಾದ ರಾಜಶೇಖರ ಮೂರ್ತಿಯವರು ಕುಡಿಯುವ ನೀರಿನ ಬಗ್ಗೆ ಸಾಕಾದಷ್ಟು ಕಾಳಜಿಯನ್ನು ವಹಿಸಿ ಒಂದು ಒಳ್ಳೆಯ ವ್ಯವಸ್ಥೆಯನ್ನು ಮಾಡಿದ್ದಾರೆ. ಏನೆಂದರೆ ನಮ್ಮ ರಾಜ್ಯದಲ್ಲಿ ಯಾವ ಯಾವ ನದಿಗಳಿವೆ ಆ ನದಿಗಳ ಪ್ರದೇಶದಲ್ಲಿರತಕ್ಕ ಹಾಗೂ ನದಿಯ ದಡದಲ್ಲಿರತಕ್ಕ ಪಟ್ಟಣ ಅಥವಾ ಗ್ರಾಮಗಳಿಗೆ ಅಲ್ಲಿಂದ ನೀರಿನ ಸೌಕರ್ಯ ಒದಗಿಸಿಕೊಡುವುದಕ್ಕೆ ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ ಎಂದು ಅವರ ಆಯವ್ಯಯದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒಂದು ಸಲಹೆ ಕೊಡುತ್ತೇನೆ, ಏನೆಂದರೆ ನದಿಯ ಪಕ್ಕದಲ್ಲಿರತಕ್ಕಂಥ ಗ್ರಾಮಗಳಿಗೆ ಅಥವಾ ಪಟ್ಟಣಗಳಿಗೆ ಅಲ್ಲಿಂದ ಕುಡಿಯುವ ನೀರನ್ನು ಒದಗಿಸತಕ್ಕ ಈ ಒಂದು ವ್ಯವಸ್ಥೆಯನ್ನು ಎಷ್ಟು ಖರ್ಚಾದರೂ ಸಹ ಜಾರಿಗೆ ತರಬೇಕು. ಯಾವರೀತಿ ನಾವು ಪಟ್ಟಣ ಪ್ರದೇಶಕ್ಕೆ ಕುಡಿಯುವ ನೀರನ್ನು ಒದಗಿಸಿಕೊಡುತ್ತಾ ಇದ್ದೇವೆ ಅದೇರೀತಿ ಗ್ರಾಮಾಂತರ ಪ್ರದೇಶದ ಜನರಿಗೂ ಕುಡಿಯುವ ನೀರನ್ನು ಒದಗಿಸಿಕೊಡಬೇಕು. ೧೫-೨೦ ಗ್ರಾಮಗಳಿಗೆ ನೀರನ್ನು ಒದಗಿಸಿಕೊಡಬೇಕು ಅಂದರೆ ಫೀಸಿಬಿಲಿಟಿ ಮತ್ತು ಎಕನಾಮಿಕಲ್ಲಾಗಿ ವರ್ಕ್‌ಔಟ್ ಆಗಬೇಕು ಎಂದು ತಜ್ಞರು ಹೇಳುತ್ತಾರೆ ನಾವು ಕಾವೇರಿ ನದಿ ನೀರನ್ನು ಬೆಂಗಳೂರಿಗೆ ಒದಗಿಸಲು ೩೦೦-೪೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೇವೆ. ಆದರೆ ನದಿ ದಡದಲ್ಲಿರತಕ್ಕ ಗ್ರಾಮಗಳಿಗೆ ಕೇವಲ ಒಂದೆರಡು ಮೂರು ಕೋಟಿ ರೂಪಾಯಿಗಳನ್ನಾದರೂ ವ್ಯವಸ್ಥೆ ಮಾಡಿಕೊಟ್ಟು ಸಮೃದ್ಧಿಯಾದ ಮತ್ತು ಶುದ್ಧವಾದಂಥ ಕುಡಿಯುವ ನೀರನ್ನು ಗ್ರಾಮಾಂತರ ಪ್ರದೇಶದ ಜನರಿಗೆ ಒದಗಿಸಿಕೊಟ್ಟರೆ ತುಂಬ ಅನುಕೂಲವಾಗುತ್ತದೆ. ಟೆಕ್ನಿಕಲ್ ಎಕನಾಮಿಕಲಿ ಎಂದು ಹೇಳಿದರೆ ಕೆಲಸ ಹೇಗೆ ಆಗುತ್ತದೆ. ಇದು ಸರಿಯಾದಂಥ ವಿಚಾರ ಅಲ್ಲ. ಈ ಬಗ್ಗೆ ಅಧಿಕಾರಿಗಳು ತಮ್ಮ ಮನೋಭಾವನೆಯನ್ನು ಬದಲಾವಣೆ ಮಾಡಿಕೊಳ್ಳಬೇಕು. ಪಟ್ಟಣ ಪ್ರದೇಶಕ್ಕೆ ನೀರನ್ನು ಒದಗಿಸಲು ೪೦೦-೫೦೦ ಕೋಟಿ ತೆಗೆದುಕೊಂಡು ಹೋಗಿ ಕೊಡುತ್ತಾ ಇದ್ದಾರೆ ಆದರೆ ನದಿ ಪಕ್ಕಗಳಲ್ಲಿರತಕ್ಕ ರೈತರು, ಅತಿ ಸಣ್ಣ ರೈತರು ಬಡವರು ಕುಡಿಯುವ ಶುದ್ಧವಾದ ನೀರನ್ನು ಸಾಮೂಹಿಕವಾಗಿ ತೆಗೆದುಕೊಂಡು ಹೋಗಿ ಕುಡಿಯುತ್ತಾರೆ, ಅದಕ್ಕೆ ಅವಕಾಶಕೊಡಿ. ಈ ಯೋಜನೆಗೆ ಹಣ ಖರ್ಚು ಮಾಡುವುದಕ್ಕೆ ಅಧಿಕಾರಿಗಳು ಫೀಸಿಬಿಲಿಟಿ ಇಲ್ಲ, ಬಹಳ ದುಡ್ಡು ಖರ್ಚಾಗುತ್ತದೆ ಎಂದು ಹೇಳುತ್ತಾರೆ. ಅನಾವಶ್ಯಕವಾಗಿ ಬೋರ್‌ವೆಲ್‌ಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ ಬಹಳಷ್ಟು ಕಡೆ ಬೋರ್‌ವೆಲ್‌ಗಳಿಂದ ನೀರುಬರುವುದೇ ಇಲ್ಲ, ಅಂಥಾದ್ದರಲ್ಲಿ ನದಿಯಲ್ಲಿ ಸಮೃದ್ಧಿಯಾದಂಥ ನೀರನ್ನು ತೆಗೆದುಕೊಂಡುಕುಡಿಯಲು ಉಪಯೋಗಿಸುವುದಕ್ಕೆ ವ್ಯವಸ್ಥೆ ಮಾಡಿಕೊಡಿ ಅಂದರೆ ಅಧಿಕಾರಿಗಳು ಈ ಬಗ್ಗೆ ಹೆಚ್ಚಿನ ಗಮನ ಕೊಡುತ್ತಿಲ್ಲ. ಅಧಿಕಾರಿಗಳ ಈ ವಾದವನ್ನು

ನಾನು ಒಪ್ಪುವುದಿಲ್ಲ. ಗ್ರಾಮಾಂತರ ಪ್ರದೇಶದ ಜನರಿಗೆ ಶುದ್ಧವಾದಂಥ ಕುಡಿಯುವ ನೀರನ್ನು ಕೊಡದೇ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ನದಿ ಪಕ್ಕದಲ್ಲಿರತಕ್ಕ ಗ್ರಾಮಗಳಿಗೆ ಅಥವಾ ಪಟ್ಟಣಗಳಿಗೆ ಎಷ್ಟು ಹಣ ಖರ್ಚಾದರೂ ಕುಡಿಯುವ ನೀರನ್ನು ಒದಗಿಸಿಕೊಡದೇ ಹೋದರೆ ಏನೂ ಪ್ರಯೋಜನವಾಗುವುದಿಲ್ಲ ಎಂಬ ನಮ್ಮ ವಾದವನ್ನು ಮಾನ್ಯ ಹಣಕಾಸಿನ ಸಚಿವರು ಪೂರ್ಣವಾಗಿ ಒಪ್ಪಿ ಕೊಂಡಿದ್ದಾರೆ. ಅದೇ ರೀತಿ ಅವರು ಮಾಡುತ್ತಾರೆಂದು ನಾನು ಭಾವಿಸಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರು ಬೆಲ್ಲನ್ನು ಹೊಡೆಯುತ್ತಾ ಇದ್ದಾರೆ. ನಾನು ಈಗ ನಾಗಾಲೋಟದಲ್ಲಿ ಓಡಬೇಕಾಗುತ್ತದೆ ಇನ್ನು ಆಡಳಿತವನ್ನು ಚುರುಕುಗೊಳಿಸುವ ಬಗ್ಗೆ ಹೇಳಬೇಕೆಂದರೆ

೬-೦೧ ಪಿ. ಎಂ.

ಆಡಳಿತವನ್ನು ಚುರುಕುಗೊಳಿಸುವುದು ಒಂದು ದೊಡ್ಡ ಯಕ್ಷ ಪ್ರಶ್ನೆಯಾಗಿದೆ. ಅದೇ ತಾಳ ಅದೇ ವಾದ್ಯ, ಯಾವುದೇ ಸರ್ಕಾರ ಬರಲಿ, ಅಧಿಕಾರಿಗಳು ಮಾತ್ರ ಅವರೇ ಇರುತ್ತಾರೆ. ಈ ಪ್ರಶ್ನೆ ಮಾತ್ರ ಜೀವಂತವಾಗಿ ಉಳಿದಿದೆ.

ಒಬ್ಬ ಸದಸ್ಯರು.—ಮೌಲ್ಯಾಧಾರಿತ...

ಶ್ರೀ ಎಂ. ಮಹದೇವ್.—ಮೌಲ್ಯಾಧಾರಿತ ಎನ್ನುವುದಕ್ಕೆ ಒಂದು ಅರ್ಥ ಇದೆ. ಈಗ ಶುದ್ಧವಾ ಮೌಲ್ಯದಿಂದ ಕೆಲಸ ಮಾಡೋಣ. ಈ ಅಧಿಕಾರಿಗಳು ಹೇಳುವುದೇನೆಂದರೆ, ಯಾವುದೇ ಪಕ್ಷ ಸರ್ಕಾರ ಅಧಿಕಾರಕ್ಕೆ ಬರಲಿ, ನಾವು ಮಾತ್ರ ೩೦ ವರ್ಷ ಇರುತ್ತೇವೆ. ನಮ್ಮನ್ನು ಯಾರು ಏನೂ ಮಾಡುವುದಕ್ಕಾಗುವುದಿಲ್ಲ; ವರ್ಗ ಮಾಡುವುದನ್ನು ಬಿಟ್ಟರೆ ಏನೂ ಮಾಡುವುದಕ್ಕಾಗುವುದಿಲ್ಲ ಒಂದೆರಡು ತಿಂಗಳು ಸಸ್ಪೆಂಡ್ ಬೇಕಾದರೆ ಇದನ್ನು ಬಿಟ್ಟು ಬೇರೆ ಏನೂ ಮಾಡುವುದಕ್ಕಾಗುತ್ತ ಮಾಡಬಹುದು ಎನ್ನುವ ಭಾವನೆ ಬಹುತೇಕ ಅಧಿಕಾರಿಗಳಲ್ಲಿ ಬೆಳೆದಿದೆ. ಪ್ರಜಾ ಪ್ರಭುತ್ವ ನಂಬಿಕೆ ಇರತಕ್ಕ ಜನ ಹಾಗೂ ಪ್ರಜಾಪ್ರತಿನಿಧಿಗಳು ಈ ಒಂದು ಭಾವನೆಯನ್ನು ಹೋಗಲಾಡಿ ಬೇಕಾದರೆ, ಇದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಜನತಾ ಪ್ರತಿನಿಧಿಗಳಾದ ನಾ ಜನಸಾಮಾನ್ಯರ ಜೊತೆಯಲ್ಲಿದ್ದೇವೆ. ಜನಸಾಮಾನ್ಯರ ಕಷ್ಟಗಳನ್ನು ತಿಳಿದುಕೊಂಡು ಅವ ಹಿತವನ್ನು ಕಾಪಾಡಿ. ಜನಗಳಿಂದ ಒಳ್ಳೆಯ ಪ್ರಶಂಸೆ ಪಡೆಯಬೇಕು, ನಾವು ಒಳ್ಳೆಯ ಆಡಳಿತವನ್ನು ನೀಡಬೇಕೆಂದು ಅಧಿಕಾರಕ್ಕೆ ಸರ್ವ ಶಕ್ತಿಯಿಂದ ಬಂದರೂ ಕೆಲವು ಅಧಿಕಾರಿಗಳ ಅಸಹಕಾರ ಮನೋ ಭಾವನೆಯಿಂದ ಅದನ್ನು ಕಾರ್ಯಗತ ಮಾಡುವುದಕ್ಕಾಗುವುದಿಲ್ಲ, ಜನತಾದಳದ ಸರ್ಕಾರ ಹೋಯಿತ ಕಾಂಗ್ರೆಸ್ ಸರ್ಕಾರ ಬಂತು. ಮಾರ್ಚಿ ಏಪ್ರಿಲ್‌ನಲ್ಲಿ ಈ ಊರಲ್ಲ ಇನ್ನೊಂದು ಊರಿಗೆ ಹೋಗುತ್ತೇ ಎನ್ನುವ ಒಂದು ಲಘುವಾದ ಮನೋಭಾವನೆ ಅಧಿಕಾರಿಗಳಲ್ಲಿ ಇದೆ. ಇಂಥ ಅಧಿಕಾರಿಗಳನ ಗುರುತಿಸಿ, ಅವರಿಗೆ ಸರಿಯಾದ ಒಂದು ಪಾಠವನ್ನು ಕಲಿಸ ಬೇಕಾಗುತ್ತದೆ. ಏಕೆಂದರೆ ಪ್ರಜಾತಂತ್ರದ ಪ್ರಜಾಪ್ರಭುತ್ವದಲ್ಲಿ ಅಧಿಕಾರಿಗಳು ಜನತಾ ಪ್ರತಿನಿಧಿಗಳ ಜೊತೆಯಲ್ಲಿ ಸಹಕರಿಸಬೇಕಾಗುತ್ತದ ಇವತ್ತು ಸರ್ಕಾರಿ ನೌಕರರಿಗೆ ವಸತಿ ಸೌಕರ್ಯ ಇದೆ, ವಾಹನ ಸೌಕರ್ಯ ಇದೆ, ಸಂಬಳ ಸೌಕರ್ಯ ಇದೆ. ಇಂತಹ ಸೌಕರ್ಯಗಳು ಬಡ ಬೋರೇಗೌಡನಿಗೆ ಜನಸಾಮಾನ್ಯರಿಗೆ ಇಲ್ಲ. ಹಳ್ಳಿಯ ಬಡ ಬೋರೇಗೌಡನಿಗೆ ಇಂತಹ ಯಾವ ಅನುಕೂಲವೂ ಇಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಸರ್ಕಾರೀ ಅಧಿಕಾರಿಗಳ ಬಗ್ಗೆ ನಾವು ಎಷ್ಟೇ ಒಳ್ಳೆಯದನ್ನು ಮಾಡಿದರೂ ಸಹ ಎಲ್ಲ ಬಣ್ಣ ಮಸಿ ನುಂಗಿತು ಎಂಬಂತೆ ಅಧಿಕಾರಿಗಳು ಮಾಡುತ್ತಾರೆ. ಈ ಬಗ್ಗೆ ನಿಮ್ಮ ಸಲಹೆ ಸೂಚನೆಗಳನ್ನು ಸರ್ಕಾರಕ್ಕೆ ಕೊಟ್ಟರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಎಂ. ಮಹದೇವ್.—ಅಧಿಕಾರಿಗಳ ಬಗ್ಗೆ ಹೇಳಬೇಕೆಂದರೆ, ಯಾರೂ ಚೆನ್ನಾಗಿ ಕೆಲ ಮಾಡುತ್ತಾರೆ, ಯಾರು ಕರ್ತವ್ಯ ನಿಷ್ಠೆಯಿಂದ ದುಡಿಯುತ್ತಾರೆ, ಯಾರು ಪ್ರಾಮಾಣಿಕತೆಯಿಂದ ಸೇವಾ ಮನೋ ಭಾವನೆಯಿಂದ ಪ್ರಜಾಪ್ರಭುತ್ವಕ್ಕೆ ಹೊಂದಿಕೊಂಡು ಹೋಗುತ್ತಾರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಊರಿಗೆ ಯಾವ ಒಳ್ಳೆಯ ಅಧಿಕಾರಿಗಳು ಬರುತ್ತಾ ತಮ್ಮ ಭಾಗದಲ್ಲಿ ಆನೆಗಳ ಕಾಟ ಜಾಸ್ತಿ ಇದೆ. ಎಂದು ಹೇಳುವಾಗ ಅಲ್ಲಿಗೆ ಯಾವ ಅಧಿಕಾರಿಗಳ ಬರುತ್ತಾರೆ ?

ಶ್ರೀ ಎಂ. ಮಹದೇವ್.—ಒಳ್ಳೆಯ ಅಧಿಕಾರಿಗಳನ್ನು ಗುರುತಿಸಿ, ಜವಾಬ್ದಾರಿ ಸ್ಥಾನಗಳನ್ನು ಅವರಿಗೆ ಕೊಟ್ಟು, ಕೆಲಸ ತೆಗೆದುಕೊಳ್ಳಬೇಕು. ಯಾವ ಒಂದು ಸೇವಾ ಮನೋಭಾವನೆ ಇಲ್ಲದ ಕೇವಲ ಅನುಕೂಲ ಸಿಂಧು ಭಾವನೆಯನ್ನು ಇಟ್ಟುಕೊಂಡು, ತಮ್ಮ ಕರ್ತವ್ಯವನ್ನು ಸರಿಯಾ ನಿರ್ವಹಿಸುವುದಿಲ್ಲವೋ ಅಂಥವರಿಗೆ ಎಕ್ಸಿಕ್ಯೂಟೀವ್ ಲೈನ್ ತಪ್ಪಿಸಿ, ನಾನ್ ಎಕ್ಸಿಕ್ಯೂಟೀವ್ ಪೋಸ

ನೀಡಿ ಅಲ್ಲಿ ಅವರಿಂದ ಕೆಲಸ ತೆಗೆದುಕೊಳ್ಳಬೇಕೆಂದು ಸಲಹೆ ನೀಡುತ್ತೇನೆ, ಆಗ ಅವರು ದಾರಿಗೆ ಬರುತ್ತಾರೆ. ಇನ್ನು ಕೊಳಚೆ ಪ್ರದೇಶಗಳ ಬಗ್ಗೆ ಹೇಳುವುದಾದರೆ. ಕೊಳಚೆ ಪ್ರದೇಶಗಳು ಬೆಂಗಳೂರು ಮೈಸೂರು ನಗರಗಳಲ್ಲಿ ಮಾತ್ರ ಇಲ್ಲ. ತಾಲ್ಲೂಕು ಕೇಂದ್ರಗಳಲ್ಲಿಯೂ ಸಹ ಕೊಳಚೆ ಪ್ರದೇಶಗಳು ಇವೆ, ಪೌರಕಾರ್ಮಿಕ ವಾಸ ಮಾಡುವಂಥ ಜಾಗಗಳೆಲ್ಲಾ ಕೊಳಚೆ ಪ್ರದೇಶ ಗಳಾಗಿಯೇ ಇವೆ. ಅವರ ಸ್ಥಿತಿಯಂತೂ ಹೇಳುವುದಕ್ಕಾಗುವುದಿಲ್ಲ. ಈ ಜನರು ಗುಡಿಸಲಮನೆಗಳಲ್ಲಿ ವಾಸ ಮಾಡುತ್ತಿರುತ್ತಾರೆ. ಬೇಸಿಗೆ ಬಂದರೆ ಅವರ ಮನೆಗಳಿಗೆ ಬೆಂಕಿ ಬಿದ್ದು ಸುಟ್ಟು ಹೋಗುವ ಭಯ, ಮಳೆಗಾಲದಲ್ಲಿ ರಾತ್ರಿಯೆಲ್ಲ ಮನೆಗಳು ಸೋರತಕ್ಕ ಭಯ. ಆದ್ದರಿಂದ ತಾಲ್ಲೂಕ್ ಕೇಂದ್ರಗಳಲ್ಲಿ ರುವ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ಸಹಾಯ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರೇ.—ಇನ್ನು ನಿರುದ್ಯೋಗ ಸಮಸ್ಯೆ ಬಗ್ಗೆ ಹೇಳುವುದಾದರೆ ಈ ನಿರುದ್ಯೋಗಿಗಳಿಗೆ ಸರ್ಕಾರದವರು ಈಗ ಉದ್ಯೋಗ ಅವಕಾಶಗಳನ್ನು ಒದಗಿಸಿಕೊಡುತ್ತೇವೆ ಎಂದು ಹೇಳಿದ್ದಾರೆ. ಈಗ ನಿವೃತ್ತಿ ವಯಸ್ಸನ್ನು ೫೮ ವರ್ಷದಿಂದ ೫೫ ವರ್ಷಕ್ಕೆ ಮಾಡಿರುವುದರ ಬಗ್ಗೆ ಜನರಿಂದ ಮಿಶ್ರ ಪ್ರತಿಕ್ರಿಯೆ ಬಂದಿದೆ. ಈಗ ಬಹುತೇಕ ಯುವಕರು ಸರ್ಕಾರ ಮಾಡಿರತಕ್ಕದ್ದನ್ನು ಸ್ವಾಗತಿಸಿದಾರೆ. ಇನ್ನು ಒಂದೆರಡು ವರ್ಷಗಳಲ್ಲಿ ರಿಟೈರ್ಡ್ ಆಗುವವರು ನಮ್ಮನ್ನು ಶಪಿಸಿದ್ದಾರೆ. ಇವರನ್ನು ನಾವು ಏತಕ್ಕಾದರೂ ಇಲ್ಲಿ ತೆಗೆದುಕೊಂಡು ಬಂದು ಅಧಿಕಾರದಲ್ಲಿ ಕೂರಿಸಿದೆವೋ ನಮಗೆ ಬಹಳ ತೊಂದರೆ ಕೊಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ ಕರ್ನಾಟಕ ರಾಜ್ಯದ ಜನತೆ ೫೮ ವರ್ಷ ನಿವೃತ್ತಿ ವಯಸ್ಸನ್ನು ೫೫ ವರ್ಷ ಮಾಡಿರುವುದರ ಬಗ್ಗೆ ಸ್ವಾಗತಿಸಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ವಿಳಂಬ ಮಾಡದೆ ಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ಭಾವಿಸಿದ್ದೇನೆ. ತಾವು ಆಯವ್ಯಯದ ಮುಖಾಂತರ ಈ ಸದನದಲ್ಲಿ ಏನು ಮಂಡಿಸಿದ್ದೀರಿ ಅದೇ ಪ್ರಕಾರ ೫೫ ವರ್ಷಕ್ಕೆ ರಿಟೈರ್ಡ್ ಮಾಡುವಂತಾದ್ದು ಬೇಗ ಜಾರಿಗೆ ಕೊಡಬೇಕು. ಮುಂದಿನ ತಿಂಗಳು ಅಥವಾ ಇದೇ ತಿಂಗಳು ತಮ್ಮ ಹಣಕಾಸಿಗೆ ಅನುಗುಣವಾಗಿ ಇದನ್ನು ಜಾರಿಗೆ ತರುತ್ತೀರೆಂದು ನಾನು ಭಾವಿಸಿದ್ದೇನೆ. ಅಧ್ಯಕ್ಷರು, ಈಗ ಬೆಲ್ ಭಾರಿಸುತ್ತಿದ್ದಾರೆ. ಆದ್ದರಿಂದ ನಾನು ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ, ಅಧ್ಯಕ್ಷರು, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಸಭೆ ಇನ್ನೂ ಕೂರಬೇಕೆಂದರೆ ನನ್ನ ಅಭ್ಯಂತರವಿಲ್ಲ. ನಾನು ನಿಮ್ಮ ಮಾರ್ಗದರ್ಶನದ ಪ್ರಕಾರ ನಡೆಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೇ ಇನ್ನು ಅರ್ಧ ಗಂಟೆ ಕಾಲ ಕುಳಿತುಕೊಳ್ಳೋಣ. ಇನ್ನೂ ಒಬ್ಬರು ಸದಸ್ಯರು ಮಾತನಾಡಲಿ.

(ಇನ್ನು ಅರ್ಧ ಗಂಟೆ ಕಾಲ ಸಭೆಯನ್ನು ಮುಂದುವರಿಸಲು ಸಭೆಯು ಒಪ್ಪಿಗೆ ನೀಡಿತು)

† ಶ್ರೀ ಬನ್ನಿಕೋಡ್ ಬಸಪ್ಪ ಹನುಮಂತಪ್ಪ (ಹಿರೆಕೆರೂರ್)—ಮಾನ್ಯ ಅಧ್ಯಕ್ಷರೇ ೧೯೮೦-೮೧ನೇ ಸಾಲಿ ಆಯವ್ಯಯದ ಬಗ್ಗೆ ಈಗಾಗಲೇ ಅನೇಕ ಜನ ಮಾನ್ಯ ಸ್ನೇಹಿತರು ಮಾತಾನಾಡಿದ್ದಾರೆ. ಕೊನೆಯದಾಗಿ ಇಂದಿನ ಸರದಿ ನನ್ನದಾಗಿದೆ. ಆದರೂ ಸಹಿತ ತಾವು ನನಗೆ ವಿಶೇಷವಾಗಿ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಈಗ ನಾನು ಅನೇಕ ವಿಷಯಗಳನ್ನು ಹೇಳುವುದರ ಬದಲು ಕೆಲವೊಂದು ವಿಷಯಗಳ ಬಗ್ಗೆ ನನ್ನ ಅನಿಸಿಕೆಗಳನ್ನು ಹಾಗೂ ಸಲಹೆಗಳನ್ನು ಕೊಡಲಿಕ್ಕೆ ಬಯಸುತ್ತೇನೆ. ಈ ಸಲದ ಬಡ್ಜೆಟನ್ನು ಮಾನ್ಯ ಅರ್ಥ ಮಂತ್ರಿಗಳು ಬಹಳ ಉತ್ತಮ ರೀತಿಯಿಂದ ನಿರೂಪಿಸುವ ಒಂದು ವಿಚಾರದಲ್ಲಿ ೩೨ ವರ್ಷಗಳವರೆಗೆ ನಡೆದು ಬಂದ ದಾರಿಯನ್ನು ಹಿಡಿಯದೆ ಕವಲು ದಾರಿಯನ್ನು ಹಿಡಿದಂತಹ ಬಡ್ಜೆಟ್ ಅನ್ನು ತಯಾರು ಮಾಡಿದ್ದಾರೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮಂತ್ರಿಗಳು ಎಲ್ಲ ವಿಚಾರಗಳನ್ನು ಪರಿಪೂರ್ಣ ಮಾಡಲಿಕ್ಕೆ ಹೋಗಿ ಯಾವುದನ್ನೂ ಸರಿಯಾಗಿ ಮಾಡದೆ ನಡು ನೀರಿನಲ್ಲಿ ನಿಂತ ಪರಿಸ್ಥಿತಿಯಂತೆ ಈ ಬಡ್ಜೆಟ್‌ನಿಂದ ಆಗಿದೆ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ಬಡ್ಜೆಟ್ ಯಾವ ಒಂದು ವರ್ಗಕ್ಕೂ ಪರಿಪೂರ್ಣ ಪ್ರತಿಫಲ ಕೊಡತಕ್ಕ ಬಡ್ಜೆಟ್ ಅಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಬೇರೆ ಯೋಜನೆಗಳನ್ನು ಬದಿಗಿಟ್ಟು ನೀರಾವರಿ ಮತ್ತು ವಿದ್ಯುತ್‌ಚ್ಛಕ್ತಿ ಬಗ್ಗೆ ನಾವು ಹೆಚ್ಚು ಗಮನ ಹರಿಸಬೇಕೆಂದು ಹೇಳಿದಾಗ ಬಹಳ ಒಂದು ಆಶಾದಾಯಕ ವಿಚಾರ ಇಲ್ಲಿ ಮೂಡುತ್ತಿತ್ತು. ಆದರೆ ಈ ಒಂದು ಬಡ್ಜೆಟ್‌ನ ಪೂರ್ಣ ಅಂಕಿ ಅಂಶಗಳನ್ನು ನೋಡಿಹಾಗ ಅದು ನಿರಾಶೆಯನ್ನು ಉಂಟುಮಾಡುವಂತಹ ಬಡ್ಜೆಟ್

ಆಗಿದೆ. ನಾವು ನೀರಾವರಿ ಮತ್ತು ವಿದ್ಯುಚ್ಛಕ್ತಿ ಬಹಳ ಅವಶ್ಯ ಎಂದು ಹೇಳಿದಾಗ ಅನೇಕ ಜನಪರ ಯೋಜನೆಗಳನ್ನು ಕೈಬಿಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಆಯಿತು ಜನಪರ ಯೋಜನೆಗಳನ್ನು ಕೈಬಿಟ್ಟು ಈ ಗುರಿಯನ್ನು ಎಷ್ಟರಮಟ್ಟಿಗೆ ಸಾಧಿಸಿದ್ದಾರೆಂದು ಈ ಬಡ್ಜೆಟ್‌ನಲ್ಲಿ ನೋಡಿದರೆ ಇಲ್ಲಿ ನಮಗೆ ಏನು ಗೊತ್ತಾಗುತ್ತದೆ, ಅಂದರೆ ನೀರಾವರಿಗೆ ಬೇಕಾಗಿರುವಂತ ಹಣ ಅವರೇ ಹೇಳಿದ ಪ್ರಕಾರ ಆ ಪ್ರಮಾಣಕ್ಕೂ ಮತ್ತು ಇಲ್ಲಿ ಒದಗಿಸಿರುವ ಪ್ರಮಾಣಕ್ಕೂ ಬಹಳ ವ್ಯತ್ಯಾಸವಾಗಿದೆ, ಇವತ್ತು ದೇಶದಲ್ಲಿ ಭೂಮಿಯಿಂದ ಸಂಪತ್ತನ್ನು ಉತ್ಪಾದನೆ ಮಾಡತಕ್ಕಂತಹ ರೈತರು ಯಾರಿದ್ದಾರೆ ಅವರಿಗೆ ಮುಖ್ಯವಾಗಿ ಬೇಕಾದಂಥಾದ್ದು ನೀರು ಮತ್ತು ವಿದ್ಯುಚ್ಛಕ್ತಿ ಕೊನೇ ಪಕ್ಷ ಇದನ್ನು ಅವರಿಗೆ ಕೊಡಲಿಕ್ಕೆ ಪರಿಪೂರ್ಣವಾದಂತಹ ಪ್ರಯತ್ನ ನಡೆದಿದ್ದರೆ ಈ ಆಯುವ್ಯಯವನ್ನು ಹೃತ್ಪೂರ್ವಕವಾಗಿ ಸ್ವಾಗತಿಸಬಹುದಾಗಿತ್ತು. ಆದರೆ ಎಲ್ಲವನ್ನೂ ಸಾಧಿಸಲಿಕ್ಕೆ ಹೋಗಿ ಕಟ್ಟ ಕಡೆಗೆ ಒಂದನ್ನೂ ಸಾಧಿಸಲಿಕ್ಕೆ ಸಾಧ್ಯವಾಗದೇ ಇರುವಂತಹ ದುಸ್ಥರ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಈ ನೀರಾವರಿ ಯೋಜನೆಗಳಿಗೆ ಬೇಕಾದಂತಹ ಹಣವನ್ನು ಒದಗಿಸಿದ್ದರೆ ಈ ನೀರಾವರಿ ಯೋಜನೆಗಳ ಕೆಲಸ ಫಲಪ್ರದವಾಗಿ ಬೇಗನೆ ಮುಗಿದು ರೈತರ ಭೂಮಿಗೆ ನೀರನ್ನು ಹರಿಸುವಂತಹ ಪ್ರಯತ್ನ ಆಗುತ್ತಿತ್ತು. ಆದರೆ ಅಂತಹ ಪ್ರಯತ್ನ ಇಲ್ಲಿ ಆಗಿಲ್ಲ. ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ನೂರಾರು ಎಕರೆಗಳಿಗೆ ನೀರನ್ನು ಒದಗಿಸುವಂತಹ ಒಂದು ವ್ಯವಸ್ಥೆಯು ಈ ಬಡ್ಜೆಟ್‌ನಲ್ಲಿ ಕಂಡು ಬರುತ್ತಿದೆ. ಆದರೆ ಇಲ್ಲಿ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಲಕ್ಷಾಂತರ ಎಕರೆ ಭೂಮಿಗೆ ನೀರನ್ನು ಹರಿಸುವಂತಹ ಯೋಜನೆಗಳ ಕೆಲಸವನ್ನು ಈ ಬಡ್ಜೆಟ್ಟಿನಲ್ಲಿ ಕೈಗೆತ್ತಿಕೊಳ್ಳಲಾಗಿಲ್ಲ. ಅಪ್ಪರ ತುಂಗಾ ಯೋಜನೆಯಿಂದ ಬಹಳ ಅನುಕೂಲವಾಗುತ್ತದೆ. ಇದಕ್ಕೆ ೩೮ ಕೋಟಿ ರೂಪಾಯಿ ವೆಚ್ಚವಾಗುತ್ತದೆಂಬ ಅಂದಾಜನ್ನು ತಯಾರು ಮಾಡಿದರು. ಇದರಿಂದ ೨,೩೪,೦೦೦ ಎಕರೆ ಭೂಮಿಗೆ ನೀರಾವರಿಯಾಗುತ್ತದೆ ಎಂಬ ಒಂದು ಅಂದಾಜನ್ನು ಹಾಕಿಕೊಂಡಿದ್ದರು. ಆದರೆ ಈ ಯೋಜನೆ ಕೆಲಸ ವಿಳಂಬವಾಗಿದ್ದರಿಂದ ಈಗ ಇದನ್ನು ಕಾರ್ಯಗತ ಮಾಡಬೇಕಾದರೆ ಸುಮಾರು ೨೭೦ ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಈ ಯೋಜನೆಯನ್ನು ೧೯೦೬ನೇ ಇಸವಿಯಲ್ಲಿ ಬ್ರಿಟಿಷರ ಕಾಲಕ್ಕೆ ತೆಗೆದುಕೊಂಡಿದ್ದರು. ಆದರೆ ನಮಗೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಕೂಡ ಇದನ್ನು ಕಾರ್ಯಗತ ಮಾಡಲಿಕ್ಕೆ ಆಗಲಿಲ್ಲ ಇಂದಿನ ಬಡ್ಜೆಟ್‌ನಲ್ಲಿ ಕೂಡಾ ಸಾಕಷ್ಟು ಹಣನ್ನು ಇದಕ್ಕೆ ಇಟ್ಟಿಲ್ಲ. ಈ ಯೋಜನೆಯಿಂದಾಗಿ ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಯ ೬ ತಾಲ್ಲೂಕ್‌ಗಳಲ್ಲಿನ ೨,೩೪,೦೦೦ ಎಕರೆಗೆ ನೀರು ದೊರೆಯುತ್ತದೆ. ಅಲ್ಲಿನ ಜನರಿಗೆ ನೀರನ್ನು ಕೊಡುವಂತಹ ಈ ಕೆಲಸವನ್ನು ಮೊದಲೇ ಕೈಗೆತ್ತಿಕೊಂಡಿದ್ದರೆ ಅಂದರೆ ಶಾಶ್ವತ ಪರಿಹಾರವನ್ನು ಅಲ್ಲಿನ ಜನರಿಗೆ ಒದಗಿಸಿಕೊಡಬೇಕೆಂಬ ದೃಷ್ಟಿಯಿಂದ ಇದನ್ನು ಮೊದಲೇ ಕೈಗೆತ್ತಿಕೊಂಡಿದ್ದರೆ ಸ್ವಲ್ಪ ಹಣದಿಂದಲೇ ಹೆಚ್ಚು ಭಾಗಕ್ಕೆ ನೀರಾವರಿಯಾಗುತ್ತಿತ್ತು. ನೀರಿನ ಬಳಕೆಯನ್ನು ಸರಿಯಾಗಿ ಒದಗಿಸತಕ್ಕಂತಹ ವಿಚಾರ ಮಾಡಬೇಕಾಗಿದ್ದರೆ

ಇಂತಹ ಸುಲಭವಾದ ಯೋಜನೆಗಳನ್ನು ಕೈಗೆತ್ತಿಕೊಳ್ಳಬಹುದಾಗಿತ್ತು. ಆದರೆ ಇಂತಹ ಯಾವ ಸುಲಭವಾದ ಯೋಜನೆಯೂ ಸಹ ಬಡ್ಜೆಟ್‌ನಲ್ಲಿ ಕಂಡು ಬರುತ್ತಿಲ್ಲ. ಇನ್ನೂ ಏತ ನೀರಾವರಿ ಯೋಜನೆಗಳ ಬಗ್ಗೆ ರೈತರು ಕೊಡಬೇಕಾದಂತಹ ವಂತಿಗೆ ಪ್ರತಿ ಶತ ೧೫ ರಷ್ಟು ಎಂದು ಏನು ಮೊದಲು ಇತ್ತು ಅದನ್ನು ಕಡಿಮೆ ಮಾಡುತ್ತೇವೆಂಬ ಬಗ್ಗೆ ವಿಚಾರ ಮಾಡುತ್ತೇವೆಂದು ಹೇಳಿದ್ದಾರೆಯೇ ವಿನಃ ಅದನ್ನು ಕಡಿಮೆ ಮಾಡಿದ್ದೇವೆಂಬ ಬಗ್ಗೆ ಯಾವ ನಿರ್ಧಾರವೂ ಇಲ್ಲಿ ಇಲ್ಲ ಸರಕಾರ ಈ ಯೋಜನೆಯನ್ನು ದಯವಿಟ್ಟು ಕೈ ಬಿಡಬೇಕು. ರೈತರಿಗೆ ಇಲ್ಲಿಯವರೆಗೆ ಆಗಿರತಕ್ಕಂತಹ ಶೋಷಣೆ, ರೈತರಿಗೆ ಆಗಿರುವ ಅನ್ಯಾಯ ಏನಿದೇ ಇದು ನಮಗೆ ಸ್ವಾತಂತ್ರ್ಯ ಬಂದು ೪೨ ವರ್ಷಗಳಾದ ಮೇಲೂ ನಡೆಯುತ್ತದೆ. ಈ ರೀತಿ ಮಾಡಿದ್ದರಿಂದಾಗಿ ರೈತರನ್ನು ಇವೊತ್ತು ಸಂಪೂರ್ಣವಾಗಿ ಆರ್ಥಿಕ ದಿವಾಳಿ ಅಂಚಿಗೆ ತಂದಂತೆ ಆಗಿದೆ ಈ ಕಾರಣದಿಂದಾಗಿ ಏತ ನೀರಾವರಿ ಯೋಜನೆಗೆ ರೈತರು ಪ್ರತಿ ಶತ ೧೫ರಷ್ಟು ವಂತಿಗೆಯನ್ನು ಕೊಡಬೇಕೆಂದು ಏನು ನಿಯಮವಿದೆ, ಅದನ್ನು ನಿಲ್ಲಿಸಲಿಕ್ಕೆ ಸರ್ಕಾರ ಯೋಚನೆ ಮಾಡಬೇಕು. ಇನ್ನು ವಿದ್ಯುಚ್ಛಕ್ತಿ ವಿಚಾರದಲ್ಲಿ ಅನೇಕ ಸ್ನೇಹಿತರು ಹೇಳಿದ್ದಾರೆ. ರೈತರಿಗೆ ಅನುಕೂಲವಾದ ನೀರಾವರಿ ಯೋಜನೆಗಳನ್ನು ಮಾಡಿಕೊಡಲಿಕ್ಕೆ ಸರ್ಕಾರಕ್ಕೆ ಸಾಧ್ಯವಾಗದಿದ್ದರೂ ಕೂಡ ರೈತ ತಾನಾಗಿ ೪೦-೫೦ ಸಾವಿರ ರೂಪಾಯಿ ಖರ್ಚು ಮಾಡಿ ಕೊಳವೆ ಬಾವಿ ಕೊರೆಸಿ ವಿದ್ಯುಚ್ಛಕ್ತಿಗೋಸ್ಕರ ವರ್ಷಗಟ್ಟಲೆ ಕಾಯಬೇಕಾಗಿದೆ. ೨-೩ ತಿಂಗಳಲ್ಲಿಯೇ ಸರ್ಕಾರ ಅವರಿಗೆ ವಿದ್ಯುತ್ತನ್ನು ದೊರಕಿಸಿಕೊಡಬೇಕು. ಈ ಬಗ್ಗೆ ಕೂಡ ಸರಿಯಾದ ಯೋಜನೆ ಇಲ್ಲಿ ಇಲ್ಲ. ಇಲ್ಲಿ ಇದಕ್ಕೆ ಕೊಟ್ಟಿರುವ ಹಣ ನೋಡಿದರೆ ಬಹಳ ಕಡಿಮೆ ಇದೆ. ಈಗಾಗಲೇ ರೈತರು ಒಂದೊಂದು ತಾಲ್ಲೂಕಿನಲ್ಲಿ ೫೦೦ಕ್ಕಿಂತ ಹೆಚ್ಚು ಕೊಳವೆ ಬಾವಿಗಳನ್ನು ತೆಗೆಸಿ ಸುಮಾರು ೨-೩ ವರ್ಷಗಳಿಂದ ವಿದ್ಯುತ್ ಸಂಪರ್ಕಕ್ಕಾಗಿ ಕಾಯುತ್ತಿದ್ದಾರೆ, ಅವರು ಸಾಲ ತೆಗೆದುಕೊಂಡು ಕೊಳವೆ ಬಾವಿಗಳನ್ನು ತೆಗೆಸಿದ್ದಾರೆ ಅವರು ಸಾಲದ ಹಣಕ್ಕೆ ಬಡ್ಡಿ ಕಟ್ಟಬೇಕಾಗಿದೆ, ಆದರೆ ಇನ್ನೂ ಉತ್ಪಾದನೆ ಪ್ರಾರಂಭವಾಗಿಲ್ಲ. ಆತನಿಗೆ ಕರೆಂಟ್

ಸಿಕ್ಕಿಲ್ಲ. ಇದನ್ನು ಪರಿಹಾರ ಮಾಡಲಿಕ್ಕೆ ಯಾವುದೇ ಪ್ರಾಮಾಣಿಕ ಪ್ರಯತ್ನ ಸರ್ಕಾರದಿಂದ ನಡೆದಿಲ್ಲ ಎಂದು ವಿಷಾದದಿಂದ ಹೇಳುತ್ತಿದ್ದೇನೆ.

ಈ ಬಜೆಟ್‌ನಲ್ಲಿ ತೋರಿಸಿರುವ ಕೊರತೆಯನ್ನು ತುಂಬಲು ಸ್ಟ್ಯಾಂಪ್ ಡ್ಯೂಟಿಯನ್ನು ಹೆಚ್ಚು ಮಾಡಿದ್ದೀರಿ. ಈ ದೇಶದಲ್ಲಿ ಜನಸಾಮಾನ್ಯರ ಬಾಗಿಲಿಗೆ ನಾವು ನ್ಯಾಯವನ್ನು ಕೊಂಡೊಯ್ಯುತ್ತಿರುವ ಸಂದರ್ಭದಲ್ಲಿ ಸ್ಟ್ಯಾಂಪ್ ಡ್ಯೂಟಿಯನ್ನು ಈ ರೀತಿ ಹೆಚ್ಚಿಸುವುದು ಸರಿಯಲ್ಲ. ಇದನ್ನು ಹೆಚ್ಚಿಸ ಕೂಡದು. ೧೯೭೮ರಲ್ಲಿ ಸ್ಟ್ಯಾಂಪ್ ಡ್ಯೂಟಿ ಏನಿತ್ತು, ಅದು ಇವತ್ತು ನಾಲ್ಕು ಪಟ್ಟು ಹೆಚ್ಚಾಗಿದೆ. ೫ ರೂಪಾಯಿಯ ಸ್ಟ್ಯಾಂಪ್ ಡ್ಯೂಟಿ ಇದ್ದ ಕಡೆ ಇವತ್ತು ೨೦ ರೂಪಾಯಿಗೆ ಹೆಚ್ಚು ಮಾಡಿರುವುದರಿಂದ ಬಡವರು ನ್ಯಾಯಾಲಯಗಳಿಗೆ ಹೋಗಿ ನ್ಯಾಯವನ್ನು ದೊರಕಿಸಿಕೊಳ್ಳಲು ಸಾಧ್ಯವಾಗದಂತಹ ಸ್ಥಿತಿ ಬರುತ್ತದೆ. ಆದ್ದರಿಂದ ಇದನ್ನು ಕೈಬಿಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ.—ಇಲ್ಲಿಯವರೆಗೆ ಒಬ್ಬರೇ ಮಂತ್ರಿಯವರು ಕುಳಿತಿದ್ದರು. ಈಗ ಅವರೂ ಸಹ ಫೈಲ್ ನೋಡುವುದರಲ್ಲಿ ಮಗ್ನರಾಗಿದ್ದಾರೆ.

ಶ್ರೀ ಬಿ. ಎಂ. ಇದಿನಬ್ಬ:—ಮಾನ್ಯ ಹಣಕಾಸಿನ ಮಂತ್ರಿಗಳು ಸಭೆಯಲ್ಲಿ ಇದ್ದಾರೆ. ಅವರು ಬೆಳಿಗ್ಗೆಯಿಂದ ಸಂಜೆಯವರೆಗೆ ಇಲ್ಲೇ ಇದ್ದಾರೆ, ಒಂದು ನಿಮಿಷ ಕೂಡ ಅವರು ಅಲುಗಾಡಲಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ.—ಇಲ್ಲವೆಂದು ನಾನು ಹೇಳಿಲ್ಲ. ಸದಸ್ಯರು ಬಡ್ಜೆಟ್ ಮೇಲೆ ಚರ್ಚೆ ಮಾಡುತ್ತಿದ್ದಾರೆ. ದಯವಿಟ್ಟು ಅದರ ಕಡೆ ಗಮನಕೊಡಬೇಕೆಂದು ನಾನು ಹೇಳುತ್ತಿದ್ದೇನೆ. ಅವರು ಬೇರೆ ಕೆಲಸ ಮಾಡಿದರೆ ತಪ್ಪಲ್ಲ. ಆದರೆ ಸದನದಲ್ಲಿ ನಡೆಯುತ್ತಿರುವುದನ್ನು ಅವರು ತಿಳಿದುಕೊಂಡರೆ ನಾಳೆ ಉತ್ತರ ಕೊಡಲಿಕ್ಕೆ ಅವರಿಗೆ ಅನುಕೂಲವಾಗುತ್ತದೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ಕಣ್ಣು ಈ ಕಡೆ ಇದ್ದರೂ ಕಿವಿ ಆ ಕಡೆ ಇದೆ. ಅವರು ಸ್ಟ್ಯಾಂಪ್ ಡ್ಯೂಟಿ ಜಾಸ್ತಿ ಆಗಿದೆ ಎಂದು ಮಾತನಾಡುತ್ತಿದ್ದಾರೆ,

ಅಧ್ಯಕ್ಷರು.—ಅವರ ಕಿವಿಗಳು ಬಹಳ ಚುರುಕಾಗಿವೆ. ಆದ್ದರಿಂದ ಕಾಳಜಿಬೇಡ.

ಶ್ರೀ ಬನ್ನಿಕೋಡ್ ಬಸಪ್ಪ ಹನುಮಂತಪ್ಪ.—ಮಾನ್ಯ ಅಧ್ಯಕ್ಷರೆ, ಅರ್ಥ ಮಂತ್ರಿಗಳು ಬಹಳ ಕಾಲದಿಂದ ಮೇಲೆ ಏಳದಂತೆ ಇಲ್ಲಿ ಕುಳಿತು ಈ ಒಂದು ಸಭೆಯ ಕಲಾಪವನ್ನು ವೀಕ್ಷಣೆ ಮಾಡುತ್ತಿದ್ದಾರೆ ಬೇರೆಯವರೆಲ್ಲ ಎದ್ದು ಹೋದರೂ ಅವರು ಎದ್ದು ಹೋಗಿಲ್ಲ, ಮಾನ್ಯ ಸದಸ್ಯರು ಹೇಳಿದ ಪ್ರಕಾರ ಸ್ವಲ್ಪ ಹೆಚ್ಚು ಈ ಕಡೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಭಾಷಣ ಮಾಡುವುದಕ್ಕಿಂತ ಹೆಚ್ಚಾಗಿ ಕೆಲವೊಂದು ಸೂಚನೆಗಳನ್ನು ಕೊಡುವುದಕ್ಕೆ ಇಚ್ಛಿಸುತ್ತೇನೆ. ಮುಖ್ಯವಾಗಿ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯಾಗಿಲ್ಲ, ಗ್ರಾಮಗಳಲ್ಲಿ ರಸ್ತೆಗಳಿಲ್ಲ, ಕುಡಿಯುವ ನೀರಿಲ್ಲ, ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಕರಿಲ್ಲ. ಈ ರೀತಿ ಇರತಕ್ಕ ನ್ಯೂನತೆಗಳನ್ನು ಹೋಗಲಾಡಿಸಲು ಗ್ರಾಮೀಣಾಭಿವೃದ್ಧಿಗಾಗಿ ನಾವು ಬಹಳ ಪ್ರಯತ್ನ ಮಾಡುತ್ತೇವೆನ್ನುವ ಮಾತನ್ನು ಇಲ್ಲಿ ಹೇಳಿದ್ದಾರೆ ಹಾಗೂ ಈ ಆಯವ್ಯಯ ಪತ್ರದ ಮೊದಲನೆಯ ಪುಟದಲ್ಲಿ ಇಂತಹ ಆಶಾದಾಯಕವಾದ ವಿಚಾರಗಳು ಕಂಡುಬಂದರೂ ಸಹಿತ, ನಗರ ಪ್ರದೇಶಗಳಿಗೆ ಇಲ್ಲಿಯವರೆಗೆ ಕುಡಿಯುವ ನೀರು ಸರಬರಾಜು ಮಾಡಲಿಕ್ಕೆ ಈ ರಾಜ್ಯದಲ್ಲಿ ಖರ್ಚು ಮಾಡಿದಂತಹ ಹಣ ಹಾಗೂ ಈ ಸಲಹೆ ಬಜೆಟ್‌ನಲ್ಲಿರತಕ್ಕ ಹಣವನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಏತಕ್ಕೆಂದರೆ ನಗರಗಳ ನೀರು ಸರಬರಾಜಿಗೆ ಖರ್ಚು ಮಾಡತಕ್ಕ ಹಣಕ್ಕೆ ಗ್ರಾಮೀಣ ಜನತೆಯ ಸಲುವಾಗಿ ಕುಡಿಯುವ ನೀರಿಗಾಗಿ ಖರ್ಚು ಮಾಡತಕ್ಕ ಹಣವನ್ನು ಹೋಲಿಸಿದರೆ ಬಹಳ ವ್ಯತ್ಯಾಸವಿರುವುದು ಕಂಡುಬರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ೧೦೦ಕ್ಕೆ ೮೦ರಷ್ಟು ಜನರು ವಾಸವಾಗಿದ್ದಾರೆ. ಆದರೆ ಅಲ್ಲಿ ಇದಕ್ಕಾಗಿ ವೆಚ್ಚ ಮಾಡತಕ್ಕ ಹಣ ಅತ್ಯಲ್ಪವೆಂಬುದನ್ನು ಇಲ್ಲಿ ನಾವು ಕಾಣಬಹುದು. ೪೨ ವರ್ಷಗಳ ಹಿಂದೆ ಅಂದರೆ ನಮಗೆ ಸ್ವಾತಂತ್ರ್ಯ ಬಂದ ನಂತರ ಈ ದೇಶದಲ್ಲಿ ಗ್ರಾಮೀಣ ಜನತೆಗೆ ಕುಡಿಯುವ ನೀರನ್ನು ಒದಗಿಸುವಲ್ಲಿ ಅಲ್ಲಿನ ಮಕ್ಕಳಿಗೆ ಶಾಲಾ ಪುಸ್ತಕಗಳನ್ನು ಒದಗಿಸುವಲ್ಲಿ, ಪ್ರಾಥಮಿಕ ಶಿಕ್ಷಕರನ್ನು ನೇಮಕ ಮಾಡುವಲ್ಲಿ ಹಾಗೂ ಗ್ರಾಮೀಣ ರಸ್ತೆಗಳನ್ನು ಒದಗಿಸಿ ಕೊಡುವ ವಿಚಾರದಲ್ಲಿ ಹೆಚ್ಚು ಪರಿಣಾಮಕಾರಿಯಾದ ಪ್ರಯತ್ನ ನಡೆದಿಲ್ಲ. ಇದಕ್ಕೆ ಕಾರಣಯಾರೆಂಬುದಕ್ಕೆ ಕೈಯಲ್ಲಿರುವ ಹುಣ್ಣಿಗೆ ಕನ್ನಡಿ ಹಿಡಿಯಬೇಕಾಗಿಲ್ಲ. ಈ ದೇಶದಲ್ಲಿ ಇಲ್ಲಿಯವರೆಗೆ ಆಡಳಿತ ನಿರ್ವಹಿಸಿದಂತಹ ಜನ ಇದಕ್ಕೆ ಕಾರಣಭೂತರಾಗಿದ್ದಾರೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಈಗಲಾದರೂ ಗ್ರಾಮೀಣಾಭಿವೃದ್ಧಿಗಾಗಿ ಒಂದು ಸಂಪೂರ್ಣವಾದಂತಹ ಕಾರ್ಯಕ್ರಮವನ್ನು ಈ ಸಲದ ಬಜೆಟ್‌ನಲ್ಲಿ ತಯಾರಿಸಿಲ್ಲ ಆದ್ದರಿಂದ ಈ ಬಡ್ಜೆಟ್ ಪರಿಪೂರ್ಣವಾಗಿಲ್ಲ. ಸಮರ್ಪಕವಾಗಿಲ್ಲವೆನ್ನುವ ಮಾತನ್ನು ನಾನು ವಿಷಾದದಿಂದ ಹೇಳಲಿಕ್ಕೆ ಇಚ್ಛಿಸುತ್ತೇನೆ.

ಇನ್ನು ಸಂಘಟಿತ ವರ್ಗವಾದ ನಗರ ಪ್ರದೇಶಗಳ ಜನರಿಗೆ ಸಾಕಷ್ಟು ಸೌಕರ್ಯಗಳನ್ನು ಮಾಡಿಕೊಟ್ಟಿದ್ದೀರಿ, ನಗರ ಪ್ರದೇಶಗಳನ್ನು ಬಹಳ ಸುಂದರವಾಗಿ ಮಾಡಿದ್ದೀರಿ. ಆದರೆ ನಮ್ಮ ಹಳ್ಳಿಗಳು ಸ್ಮಶಾನ ರೀತಿಯಲ್ಲಿದ್ದರೂ ಕೂಡ ಹಳ್ಳಿಯ ಪರ ಸುಧಾರಣೆ ಬಗ್ಗೆ ತಾವು ಗಮನವನ್ನು ಹರಿಸುತ್ತಿಲ್ಲ, ಇದಕ್ಕಾಗಿ ನಾನು ವಿಷಾದಿಸುತ್ತೇನೆ. ಇನ್ನು ಮುಂದಾದರೂ ಹಳ್ಳಿಗಳಲ್ಲಿ ಕುಡಿಯುವ ನೀರಿಗೆ, ಸಂಪರ್ಕ ರಸ್ತೆಗಳಿಗೆ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡಲು ಹೆಚ್ಚಿನ ಹಣವನ್ನು ಸರ್ಕಾರದವರು ಮುಂಡುಪಾಗಿ ಇಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ಗ್ರಾಮೀಣ ನಿರುದ್ಯೋಗ ಸಮಸ್ಯೆ ವಿಚಾರದಲ್ಲಿ ಹೇಳುವುದಾದರೆ, ಹಳ್ಳಿಗಳಲ್ಲಿ ವಿದ್ಯೆಯನ್ನು ಕಲಿತಂಥ ಲಕ್ಷಾಂತರ ಮಂದಿ ಮಾಡಲು ಯಾವುದೇ ಉದ್ಯೋಗವಿಲ್ಲದೆ ನಿರುದ್ಯೋಗಿಗಳಾಗಿ ಅಲೆಯುತ್ತಿದ್ದಾರೆ. ಇದು ನಿಜಕ್ಕೂ ಶೋಚನೀಯ ಸಂಗತಿ. ಗ್ರಾಮೀಣ ಪ್ರದೇಶದಲ್ಲಿ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಸಿಕ್ಕದೇ ಇರುವುದರಿಂದ ಆ ಮಕ್ಕಳು ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅವರು ನಗರಪ್ರದೇಶದ ಮಕ್ಕಳ ಜೊತೆ ಪೈಪೋಟಿ ಮಾಡಲು ಸಾಧ್ಯವಿಲ್ಲ. ಈ ಕಾರಣದಿಂದಾಗಿ ಅವರಿಗೆ ಎಲ್ಲಿಯೂ ಉದ್ಯೋಗ ಲಭಿಸುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಗ್ರಾಮೀಣ ಭಾಗದಿಂದ ಬರತಕ್ಕ ಮಕ್ಕಳಿಗೋಸ್ಕರ ಸರ್ಕಾರಿ ಹುದ್ದೆಗಳಲ್ಲಿ ಹೆಚ್ಚಿನ ಒಂದು ಅವಕಾಶವನ್ನು ಕಡ್ಡಾಯವಾಗಿ ಕೊಡಲೇಬೇಕು. ಗ್ರಾಮೀಣ ಪ್ರದೇಶದಿಂದ ಬಂದ ಮಕ್ಕಳು ಸಂದರ್ಶನಗಳಲ್ಲಿ ಏನು ಅಂಕಗಳನ್ನು ಪಡೆಯುತ್ತಾರೆ, ಆ ಅಂಕಗಳ ಜೊತೆಗೆ ಕನಿಷ್ಟ ೨೦ ಅಂಕಗಳನ್ನಾದರೂ ಸೇರಿಸಿ ಅವರಿಗೂ ನೌಕರಿ ಸಿಕ್ಕುವಂತೆ ಅನುಕೂಲ ಮಾಡಿಕೊಡಬೇಕೆಂದು ಸಲಹೆ ಮಾಡಬಯಸುತ್ತೇನೆ.

ಇದೇರೀತಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶ ಸಿಕ್ಕುವುದು ಬಹಳ ದುಸ್ತರವಾಗಿದೆ. ಆದ್ದರಿಂದ ಗ್ರಾಮೀಣ ಭಾಗದಿಂದ ಬರತಕ್ಕ ವಿದ್ಯಾರ್ಥಿಗಳಿಗೂ ಕೂಡ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಶೇಕಡ ೨೫ರಷ್ಟು ಸೀಟುಗಳನ್ನು ಮೀಸಲಿಟ್ಟು ಪ್ರತ್ಯೇಕವಾದ ಆಯ್ಕೆ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟೇ ಅಲ್ಲದೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾವಂತ ನಿರುದ್ಯೋಗಿಗಳು ಯಾರು ಇರುತ್ತಾರೆ ಅವರು ಸ್ವಂತವಾಗಿ ರೇಷ್ಮೆ ಉದ್ಯೋಗವನ್ನಾಗಲಿ, ಹಾಲು ಉತ್ಪಾದನೆ ಮಾಡುವುದನ್ನಾಗಲಿ ಅಥವಾ ಇನ್ನಾವುದೇ ಉದ್ಯೋಗದಲ್ಲಿ ತೊಡಗುವುದಾದರೆ ಅವರಿಗೆ ಸರ್ಕಾರದವರು ಕನಿಷ್ಟ ೫೦ ಪರ್ಸೆಂಟ್ ಆದರೂ ಸಹಾಯಧನವನ್ನು ನೀಡುವ ನೀತಿಯನ್ನು ಜಾರಿಗೆ ತರಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಸಲಹೆ ಮಾಡಬಯಸುತ್ತೇನೆ.

ಇನ್ನು ಸಾಮಾಜಿಕ ಅರಣ್ಯ ಎಂಬ ಅಂಶದ ಬಗ್ಗೆ ನಾನು ಕೆಲವು ಮಾತುಗಳನ್ನಾಡಬೇಕೆಂದು ಬಯಸುತ್ತೇನೆ. ಈ ಸಾಮಾಜಿಕ ಅರಣ್ಯದ ವಿಷಯ ಬಹಳ ಮಹತ್ವದ ವಿಷಯವಾಗಿದೆ. ನಮಗೆ ಪ್ರಜಾಪ್ರಭುತ್ವ ಬಂದಾಗಿನಿಂದಲೂ ಸಮಾಜವಾದ, ಸಾಮಾಜಿಕ ನ್ಯಾಯ, ಇನ್ನೂ ಮುಂತಾದ ಪದಗಳನ್ನು ಹೇಳುತ್ತಲೇ ಬಂದಿದ್ದೇವೆ. ಅದೇರೀತಿ ಸಾಮಾಜಿಕ ಅರಣ್ಯವನ್ನು ಬೆಳೆಸುವ ಬಗ್ಗೆಯೂ ಮಾತನಾಡುತ್ತಾ ಬಂದಿದ್ದೇವೆ. ಆದರೆ ಇಲ್ಲಿ ಏನಾಗಿದೆ ಎಂದರೆ ಹರಿಹರ ಪಾಲಿಫೈಬರ್ಸ್‌ನವರಿಗೆ, ಬಿರ್ಲಾರವರಿಗೆ ನೀಲಗಿರಿ ಮರಗಳನ್ನು ಬೆಳೆಸುವುದಕ್ಕೆ ೭೫ ಸಾವಿರ ಎಕರೆ ಜಮೀನನ್ನು ೯೯ ವರ್ಷಗಳ ವರೆಗೆ ಗುತ್ತಿಗೆಗೆ ಕೊಟ್ಟಿದ್ದೀರಿ. ಇದು ನಿಜವಾಗಿಯೂ ನೀವು ಬಡವರಿಗೆ ಮಾಡಿರತಕ್ಕ ಮಹಾ ಅನ್ಯಾಯ. ಇದು ಖಂಡನಾರ್ಹ. ಇವತ್ತು ಅವರು ಈ ನೀಲಗಿರಿಯಿಂದ ಅತ್ಯಂತ ಉದ್ದವಾದ ನೂಲಿನ ಎಳೆಯನ್ನು ತೆಗೆದು ಅದನ್ನು ಬಟ್ಟೆ ತಯಾರಿಕೆಗೆ ಉಪಯೋಗಿಸುತ್ತಿದ್ದಾರೆ. ಇದರಿಂದಾಗಿ ಹತ್ತಿಯಿಂದ ನೂಲು ತೆಗೆಯುವವರಿಗೂ ಒಂದುರೀತಿಯ ಭಾರೀ ಪೆಟ್ಟು ಬಿದ್ದಂತಾಗಿದೆ.

ಆದ್ದರಿಂದ ನಾನು ತಮಗೆ ಹೇಳುತ್ತೇನೆ, ೯೯ ವರ್ಷಗಳವರೆಗೆ ಬಿರ್ಲಾರವರಿಗೆ ನೀಲಗಿರಿ ಮರಗಳನ್ನು ಬೆಳೆಸುವುದಕ್ಕೆ ೭೫ ಸಾವಿರ ಎಕರೆ ಭೂಮಿಯನ್ನು ಗುತ್ತಿಗೆಗೆ ಏನು ಕೊಟ್ಟಿದ್ದೀರಿ ಅದನ್ನು ವಾಪಸ್ಸು ತೆಗೆದುಕೊಳ್ಳುವ ಕ್ರಮ ಕೈಗೊಳ್ಳಬೇಕು. ಇದೇ ಜಮೀನನ್ನು ಹರಿಜನಗಿರಿಜನರಿಗೆ ಕೊಟ್ಟು ಅದರ ಮಾಲೀಕತ್ವವನ್ನಾದರೂ ಅವರಿಗೆ ಕೊಡಿ, ಇಲ್ಲವೇ ಗುತ್ತಿಗೆಗಾದರೂ ಕೊಡಿ. ಇದರಿಂದ ಹರಿಜನ ಗಿರಿಜನರಿಗೆ ನೀವು ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಇದರಿಂದ ಅವರು ಜೀವನ ಮಾಡಲು ಸಹಾಯ ಮಾಡಿದಂತಾಗುತ್ತದೆ. ಬಿರ್ಲಾರವರು ನೂರಕ್ಕೆ ೧೨ ಪರ್ಸೆಂಟ್ ಪ್ರತಿಫಲವನ್ನು ಸರ್ಕಾರಕ್ಕೆ ಏನು ಕೊಡುತ್ತಾರೆ, ಅದು ನಮಗೆ ಬೇಡ. ಅದೇ ಜಮೀನನ್ನು ಬಡ ಜನರಿಗೆ ಕೊಟ್ಟರೆ ನೂರಕ್ಕೆ ೨೦ ಪರ್ಸೆಂಟ್ ಪ್ರತಿಫಲವನ್ನು ಕೊಡುತ್ತಾರೆ. ಆದ್ದರಿಂದ ಇದರ ಬಗ್ಗೆ ದಯವಿಟ್ಟು ಸೂಕ್ತ ಕ್ರಮ

ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇದನ್ನು ಹೊರತುಪಡಿಸಿದರೂ ಕೂಡ ೧೦೦ಕ್ಕೆ ೨೦ರಷ್ಟು ಉತ್ಪನ್ನ ಈ ಭೂಮಿಯಿಂದ ಆ ಬಡ ಜನರಿಗೆ ಬರತಕ್ಕಂಥದ್ದು ಇದೆ. ಮತ್ತು ಅರಣ್ಯ ಉತ್ಪಾದನೆಯೂ ಕೂಡ ಇದರಲ್ಲಿ ಅಡಕವಾಗಿದೆ. ಆದ್ದರಿಂದ ಈ ಕಾರ್ಯವನ್ನು ಕೂಡಲೇ ಮಾಡಬೇಕು. ೭೫ಸಾವಿರ ಎಕರೆಗಳಷ್ಟು ಅರಣ್ಯಭೂಮಿಯನ್ನು ಬಿರ್ಲಾರವರಿಗೆ ಏನು ಕೊಟ್ಟಿರುತ್ತೀರಿ, ಅದು ಕಾನೂನುಬಾಹಿರ ವಾದುದಾಗಿರುತ್ತದೆ. ೧೯೭೦ನೇ ಇಸವಿಯಲ್ಲಿ ಭಾರತ ಸರ್ಕಾರವು ಈ ಸಿ ಅಂಡ್. ಡಿ. ಕ್ಲಾಸ್ ಅರಣ್ಯ ಭೂಮಿಯನ್ನು ಈ ಜಾಯಿಂಟ್ ಸೆಕ್ಟಾರ್‌ಗೆ ಅನುಕೂಲವಾಗುವಂತೆ ಕೊಡಬಾರದೆಂದು ಕಾನೂನು ಮಾಡಿದ್ದರೂ ಸಹಿತ ಕಾನೂನುಬಾಹಿರವಾಗಿ ಅನಧಿಕೃತವಾಗಿ ಗುತ್ತಿಗೆಗೆ ಕೊಟ್ಟಿರುತ್ತಾರೆ. ಆದ್ದರಿಂದ ಇದನ್ನು ಕೂಡಲೇ ರದ್ದು ಮಾಡಬೇಕೆಂದು ನಾನು ಇಲ್ಲಿ ಸೂಚಿಸಬಯಸುತ್ತೇನೆ.

ಇನ್ನು ಒಂದು ವಿಚಾರ ರೈತರ ಬಗ್ಗೆ ಹೇಳುವುದಾದರೆ, ರೈತರು ಬೆಳೆದ ಮಾಲಿಗೆ ಯೋಗ್ಯಬೆಲೆಯನ್ನು ಕೊಡುವುದನ್ನಾದರೂ ಸಹಿತ ಸರ್ಕಾರದವರು ವಿಚಾರ ಮಾಡಬೇಕು. ಈಗಾಗಲೇ ಅನೇಕ ಕಡೆ ಇದರ ಬಗ್ಗೆ ಚರ್ಚೆಯಾಗಿದೆ. ರೈತರು ಸಾಲಗಾರರಾಗಬೇಕಾದರೆ ಅದು ಸರ್ಕಾರದ ಒಂದು ತಪ್ಪು ನೀತಿಯಿಂದ ಆಗಿರತಕ್ಕಂಥದ್ದು. ಅವರು ಬೆಳೆದಂತಹ ಬೆಳೆಗೆ ವೈಜ್ಞಾನಿಕವಾದ ಬೆಲೆ ಸಿಗುತ್ತಿಲ್ಲ. ಮಳೆಬಾರದೆ ಬೆಳೆ ಹಾನಿಯಾಗಿದ್ದರೂ, ಅತಿವೃಷ್ಟಿ ಅನಾವೃಷ್ಟಿಯಿಂದ ಬೆಳೆ ಬೆಳೆಯದಿದ್ದರೂ ಸರ್ಕಾರದ ಈ ಒಂದು ತಪ್ಪು ನೀತಿಯಿಂದ ಇವತ್ತು ರೈತ ಸಾಲಗಾರನಾಗಿದ್ದಾನೆ. ಕೇಂದ್ರ ಸರ್ಕಾರ ವಾಣಿಜ್ಯ ಬ್ಯಾಂಕ್‌ಗಳ ಮೂಲಕ ಹತ್ತು ಸಾವಿರ ಮತ್ತು ಅದಕ್ಕೂ ಕಡಿಮೆ ಸಾಲ ಪಡೆದಿರತಕ್ಕಂಥ ರೈತರ ಸಾಲವನ್ನು ಮನ್ನಾ ಮಾಡುವುದಕ್ಕೆ ಒಪ್ಪಿಕೊಂಡಿದ್ದರೂ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇನ್ನೂ ಅದರ ಬಗ್ಗೆ ವಿಚಾರ ಸಹ ಮಾಡಿಲ್ಲ. ಈ ಹೊರೆಯನ್ನು ಕೇಂದ್ರ ಸರ್ಕಾರದಮೇಲೆ ಹಾಕುವುದು ಸರಿಯಲ್ಲ. ಇದು ರಾಜ್ಯ ಸರ್ಕಾರಕ್ಕೆ ನೇರವಾಗಿ ಸಂಬಂಧಪಟ್ಟಿರುವುದರಿಂದ ತನ್ನ ಪಾಲಿನ ಹಣವನ್ನು ತುಂಬಿ ಸಹಾಯ ಮಾಡಲು ಸರ್ಕಾರ ಮುಂದೆ ಬಂದಿಲ್ಲ. ಸಹಕಾರಿ ಕ್ಷೇತ್ರದಿಂದ ಪಡೆದ ಸಾಲವನ್ನು ಸರ್ಕಾರ ಮನ್ನಾ ಮಾಡುವ ತೀರ್ಮಾನವನ್ನು ಮಾಡಿರುವುದರ ಮೂಲಕ ಎಲ್ಲ ರೈತರ ಸಾಲವನ್ನು ಮನ್ನಾ ಮಾಡಲಿಕ್ಕೆ ಯೋಚನೆ ಮಾಡಬೇಕು ಹಾಗೂ ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ರೈತರು ಬೆಳೆದಂಥ ಮಾಲಿಗೆ ವೈಜ್ಞಾನಿಕವಾದ ಬೆಲೆಯನ್ನು ಕೊಡುವ ವಿಚಾರದ ಬಗ್ಗೆ ಬಜೆಟ್‌ನಲ್ಲಿ ಎಲ್ಲೂ ನಿರೂಪಿಸಿಲ್ಲ, ಸಹಕಾರಿ ಸಂಘಗಳು ಇವತ್ತು ಆರ್ಥಿಕವಾಗಿ ಕುಂಠಿತವಾಗಿರತಕ್ಕಂಥ ಸಂದರ್ಭದಲ್ಲಿ ಅದನ್ನು ಸರಿಪಡಿಸುವುದಕ್ಕೆ ಅವುಗಳಿಗೆ ಯಾವುದೇ ರೀತಿಯ ನೆರವನ್ನು ಕೊಡುವುದಕ್ಕೆ ಈ ಒಂದು ಬಜೆಟ್‌ನಲ್ಲಿ ಚಕಾರಶಬ್ದವನ್ನು ಎತ್ತಿಲ್ಲ. ಹಳ್ಳಿಗಳಲ್ಲಿ ಸಹಕಾರಿ ಆಂದೋಳನವಾಗಬೇಕು, ಈ ಆಂದೋಳನದ ಮೂಲಕ ರೈತರಿಗೆ ಒಳ್ಳೆಯ ಬೆಲೆ ಸಿಗುತ್ತದೆ ಎನ್ನುವ ಮಾತನ್ನು ಹೇಳುವಾಗ ಈ ಬಜೆಟ್‌ನಲ್ಲಿ ಅದರ ಬಗ್ಗೆ ಒಂದು ಮಾತನ್ನು ಕೂಡ ಹೇಳಿಲ್ಲ. ರೈತರಿಗೆ ಅವರು ಬೆಳೆದ ಮಾಲಿಗೆ ಯೋಗ್ಯ ಬೆಲೆ ಸಿಗಬೇಕಾದರೆ ಅದನ್ನು ಕೇವಲ ಒಂದು ವರ್ಷದಲ್ಲಿ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಈ ದಿಶೆಯಲ್ಲಿ ಹಳ್ಳಿಯಿಂದ ಡೆಲ್ಲಿಯವರೆಗೆ ಪರಿಪೂರ್ಣವಾದ ಒಂದು ಯೋಜನೆಯನ್ನು ತಯಾರು ಮಾಡಬೇಕಾಗಿದೆ. ರೈತರು ಬೆಳೆದಂಥ ಮಾಲನ್ನು ದಾಸ್ತಾನು ಇಟ್ಟು ಯೋಗ್ಯ ಬೆಲೆಬಂದಾಗ ಅದನ್ನು ಮಿಲ್‌ಗಳಿಗೆ ಸೂಕ್ತಕಾಲದಲ್ಲಿ ಕೊಡುವುದರಿಂದ ರೈತರಿಗೆ ಯೋಗ್ಯ ಬೆಲೆ ಸಿಕ್ಕುವಂಥ ವ್ಯವಸ್ಥೆಯಾಗುತ್ತದೆ. ಈ ದಿಸೆಯಲ್ಲಿ ಪ್ರಥಮ ಹೆಜ್ಜೆಯನ್ನು ಸಹಿತ ಈ ಬಜೆಟ್‌ನಲ್ಲಿ ಇಟ್ಟಿಲ್ಲದಿರುವುದು ಬಹಳ ವಿಷಾದನೀಯ ಸಂಗತಿ ಆಗಿದೆ. ಹಿಂದಿನ ಸರ್ಕಾರದವರು ಕನಿಷ್ಟಪಕ್ಷ ಕಡಿಮೆ ಬಡ್ಡಿದರದಲ್ಲಿ ಸಾಲವನ್ನಾದರೂ ರೈತರಿಗೆ ಒದಗಿಸುತ್ತಿದ್ದರು. ಈ ಘನಸರ್ಕಾರದವರು ಅದನ್ನಾದರೂ ರೈತರಿಗೆ ಕೊಡಲು ಇನ್ನೂ ಯೋಚನೆ ಮಾಡಿಲ್ಲದಿರುವುದನ್ನು ನೋಡಿದರೆ ಮತ್ತು ಹಳ್ಳಿಗಳಲ್ಲಿರತಕ್ಕಂಥ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಡಲಿಕ್ಕೆ ಯೋಚನೆ ಮಾಡದಿರುವುದನ್ನು ನೋಡಿದರೆ, ಇದು ಇನ್ನೂ ಯೋಚನೆಯಾಗಿಯೇ ಉಳಿದಿದೆ ಎಂದು ನಾನಾದರೂ ಭಾವಿಸುತ್ತೇನೆ. ಸಣ್ಣ ಮತ್ತು ಅತಿ ಸಣ್ಣ ರೈತರೆಂದು ವಿಂಗಡಣೆಮಾಡಿ, ದೊಡ್ಡ ರೈತರು ಬೆಳೆದಂಥ ಬೆಳೆಗೆ ಯೋಗ್ಯ ಬೆಲೆಯನ್ನು ಕೊಡದಿರುವುದು ಸರಿಯಾದುದಲ್ಲ. ಮುಖ್ಯವಾಗಿ ರಾಜ್ಯದ ಎಲ್ಲ ರೈತರಿಗೂ ಒಂದೇರೀತಿಯಲ್ಲಿ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಜಾರಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಕೊನೆಯದಾಗಿ ಒಂದು ವಿಚಾರ ಹೇಳಬೇಕೆಂದರೆ. ಮಹಾತ್ಮಾಗಾಂಧೀಜಿಯವರು ಹೇಳಿದಂತೆ ನಮ್ಮ ಭಾರತದೇಶ ಹಳ್ಳಿಗಳ ದೇಶ. ಆದ್ದರಿಂದ ಹಳ್ಳಿಗಳಲ್ಲಿರತಕ್ಕಂಥ ರೈತರು ಮತ್ತು ಕೂಲಿಕಾರರು ಎಲ್ಲಿಯವರೆಗೆ ಉದ್ಧಾರವಾಗುವುದಿಲ್ಲವೋ ಅಲ್ಲಿಯವರೆಗೂ ಈ ದೇಶ ಉದ್ಧಾರವಾಗುವುದಿಲ್ಲ. ಹಾಗೂ ಅಲ್ಲಿಯವರೆಗೆ ಈ ದೇಶ ಸುಸ್ಥಿತಿಗೆ ಬರುವುದಿಲ್ಲ. ಆದ್ದರಿಂದ ದಯವಿಟ್ಟು ಹಳ್ಳಿಗಳ ಅಭಿವೃದ್ಧಿಗೆ ಹಾಗೂ ಗ್ರಾಮಗಳ ಅಭಿವೃದ್ಧಿಗೆ ನೀವು ಈಗ ಹಾಕಿಕೊಂಡಿರತಕ್ಕಂಥ ಯೋಜನೆಗಳನ್ನು

ಬದಲಾವಣೆ ಮಾಡಿಕೊಳ್ಳಲು ಮಾನ್ಯ ಅರ್ಥಸಚಿವರು ಯೋಚನೆ ಮಾಡಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಕಾಲಾವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಠರಾವು

ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ಮಾಡುವ ಸಮಿತಿಗೆ ಸದಸ್ಯರನ್ನು ನಾಮಕರಣ ಮಾಡಲು ಅಧ್ಯಕ್ಷರಿಗೆ ಅಧಿಕಾರ ನೀಡುವಿಕೆ

SRI M. S. PATIL.—Sir, I beg to move the following motion in the House today.

That a Committee consisting of Seven Members with Hon'ble Speaker Legislative Assembly as Chairman be constituted to consider and suggest suitable amendments to the Rules of Procedure and Conduct of Business in the Karnatake Legislative Assembly and the Speaker be authorised to nominate the Members of the Committee;

ಅಧ್ಯಕ್ಷರು.—ಈಗ ನಾನು ಠರಾವನ್ನು ಮತಕ್ಕೆ ಹಾಕುತ್ತಿದ್ದೇನೆ. ''

ಠರಾವು ಸರ್ವಾನುಮತದಿಂದ ಅಂಗೀಕಾರವಾಯಿತು

ಅಧ್ಯಕ್ಷರು.—ಈಗ ಸಭೆ ಮುಂದುವರಿದು ನಾಳೆ ಬೆಳಿಗ್ಗೆ ೧೧ ಗಂಟೆಗೆ ಮತ್ತೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ ೬ ಗಂಟೆ ೩೨ ನಿಮಿಷಕ್ಕೆ ಮುಕ್ತಾಯವಾಗಿ ಪುನಃ ೨೨ನೇ ಮಾರ್ಚಿ ೧೯೯೦ರಂದು ಗುರುವಾರ ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಲಾಯಿತು.

W. D. 9368